ಮಂಗಳವಾರ, ಏಪ್ರಿಲ್ 11, 2023 | ಬೆಂಗಳೂರು | ₹ 6.00 | ಸಂಪುಟ 76 | ಸಂಚಿಕೆ 100 | ಪುಟ 14

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಆಳ-ಅಗಲ
ನಂದಿನಿಗೆ ಅಮೂಲ್ ಮಾರಕವೇ...?

ರಾಜ್ಯದಲ್ಲಿ ತಾಪಮಾನ ಏರಿಕೆ 10

214 ಕ್ಷೇತ್ರಗಳಲ್ಲಿ ಕಾಂಗ್ರೆಸ್‌ಗೆ ಬೆಂಬಲ: ಸಿಪಿಐ ಘೋಷಣೆ 6

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
59,846 ▲	17,624 ▲	₹61,820 (ಬೆಂಗಳೂರು)	₹75,900 (ಬೆಂಗಳೂರು)	81.99 ▲

ಕುಟುಂಬದವರಿಗೆ ಟಿಕೆಟ್ ನೀಡಲು ಮೋದಿ ವಿರೋಧ • ಮೊದಲ ಪಟ್ಟಿ ಪ್ರಕಟ ಇನ್ನಷ್ಟು ವಿಳಂಬ

ಬಿಎಸ್‌ವೈ ಹೊರಗಿಟ್ಟು ಶಾ, ನಡ್ಡಾ ಸಭೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದ ವಿಧಾನಸಭಾ ಚುನಾವಣೆಗೆ ಬಿಜೆಪಿ ಅಭ್ಯರ್ಥಿಗಳ ಪಟ್ಟಿ ಅಖೈರುಗೊಳಿಸಲು ಬಿಜೆಪಿ ಅಧ್ಯಕ್ಷ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಬಿ.ಎಸ್. ಯಡಿಯೂರಪ್ಪ ಅವರನ್ನು ಹೊರಗಿಟ್ಟು ರಾಜ್ಯ ನಾಯಕರ ಜತೆ ಸೋಮವಾರ ಸಭೆ ನಡೆಸಿರುವುದು ಪಕ್ಷದಲ್ಲಿ ಚರ್ಚೆಗೆ ಗ್ರಾಸವಾಗಿದೆ.

ಕರ್ನಾಟಕದ ಒಳಹೊರಗನ್ನು ಬಲ್ಲ, ಅನೇಕ ಚುನಾವಣೆಗಳನ್ನು ಮುನ್ನಡೆಸಿದ ಅನುಭವ ಇರುವ ಕೇಂದ್ರ ಸಂಸದೀಯ ಮಂಡಳಿ ಸದಸ್ಯರೂ ಆಗಿರುವ ಯಡಿಯೂರಪ್ಪ ಅವರನ್ನೇ ಬಿಟ್ಟು ಸಭೆ ನಡೆಸಲಾಗಿದೆ. ಹೀಗಾಗಿ ಯಾರೊಬ್ಬರೂ ಊಹೆ ಮಾಡದ ರೀತಿಯಲ್ಲಿ ಅಭ್ಯರ್ಥಿಗಳ ಆಯ್ಕೆ ನಡೆಯಲಿದೆ ಎಂಬ ಕುತೂಹಲ ಗರಿಗೆದರಿದೆ.

‘ವಿಧಾನಸಭಾ ಚುನಾವಣೆಯಲ್ಲಿ ಹಾಲಿ ಶಾಸಕರು ಹಾಗೂ ಸಂಸದರ ಮಕ್ಕಳಿಗೆ ಟಿಕೆಟ್ ನೀಡಲು ನರೇಂದ್ರ ಮೋದಿ ಅವರು ಅಸಮ್ಮತಿ ವ್ಯಕ್ತಪಡಿಸಿದ್ದಾರೆ. ಅದರ ಬದಲು ಪಕ್ಷದ ಕಾರ್ಯಕರ್ತರು ಹಾಗೂ ಹೊಸ ಮುಖಗಳನ್ನು ಕಣಕ್ಕೆ ಇಳಿಸಬೇಕು ಎಂದೂ ಹೇಳಿದ್ದಾರೆ. ಇದರಿಂದಾಗಿ, ಟಿಕೆಟ್ ಹಂಚಿಕೆ, ಬಿಕ್ಕಟ್ಟಿನ ಹಂತ ತಲುಪಿದಂತಾಗಿದೆ. ಮೊದಲ ಪಟ್ಟಿಯ ಬಿಡುಗಡೆ ಒಂದೆರಡು ದಿನ ವಿಳಂಬವಾಗುವ ಸಾಧ್ಯತೆ ಇದೆ’ ಎಂದು ಪಕ್ಷದ ಮೂಲಗಳು ಹೇಳಿವೆ.

ಪ್ರಧಾನಿ ನರೇಂದ್ರ ಮೋದಿ ಹಾಗೂ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ನೇತೃತ್ವದಲ್ಲಿ ಕೇಂದ್ರ ಚುನಾವಣಾ ಸಮಿತಿ (ಸಿಇಸಿ) ಭಾನುವಾರ ರಾತ್ರಿ ಸಭೆ ಸೇರಿ ಮೊದಲ ಪಟ್ಟಿಗೆ ಅಂತಿಮ ರೂಪ ನೀಡಿತ್ತು. ಬಿ.ಎಸ್.ಯಡಿಯೂರಪ್ಪ, ಕೇಂದ್ರ ರಕ್ಷಣಾ ಸಚಿವ ರಾಜನಾಥ ಸಿಂಗ್, ಕೇಂದ್ರ ಸಚಿವ ಸರ್ವಾನಂದ ಸೋನೋವಾಲ್ ಅವರು ಸಭೆಯಿಂದ ಬೇಗನೇ ನಿರ್ಗಮಿಸಿದ್ದರು.

6ನೇ ಪುಟ ನೋಡಿ

ನಾನೆಲ್ಲೂ ಬೇಸರಗೊಂಡಿಲ್ಲ: ಬಿಎಸ್‌ವೈ

‘ಟಿಕೆಟ್ ಹಂಚಿಕೆಯ ವಿಷಯಕ್ಕೆ ಸಂಬಂಧಿಸಿದಂತೆ ನಾನೆಲ್ಲೂ ಬೇಸರಗೊಂಡಿಲ್ಲ. ಖುಷಿಯಾಗಿದ್ದೇನೆ’ ಎಂದು ಬಿ.ಎಸ್.ಯಡಿಯೂರಪ್ಪ ಪ್ರತಿಕ್ರಿಯಿಸಿದರು.

ಸೋಮವಾರ ಇಲ್ಲಿ ಸುದ್ದಿಗಾರರ ಜತೆಗೆ ಮಾತನಾಡಿ, ‘ಚುನಾವಣೆಗೆ ಕೆಲವೊಂದು ತಂತ್ರಗಳನ್ನು ಹೆಣೆಯಲು ನಮ್ಮ ರಾಷ್ಟ್ರೀಯ ನಾಯಕರು ಪ್ರತ್ಯೇಕವಾಗಿ ಸಭೆ ಕರೆದಿದ್ದರು. ಹೀಗಾಗಿ, ನಮ್ಮ ರಾಜ್ಯ ನಾಯಕರು ಹೋಗಿದ್ದರು’ ಎಂದರು.

‘ಕೇಂದ್ರ ಚುನಾವಣಾ ಸಮಿತಿಯ ಸಭೆಯಲ್ಲಿ ಎಲ್ಲ ಕ್ಷೇತ್ರಗಳ ಕುರಿತು ಚರ್ಚೆ ನಡೆದಿತ್ತು. ಆದರೆ, ಕೆಲವೊಂದು ಕ್ಷೇತ್ರಗಳ ಕುರಿತು ಗೊಂದಲ ಉಂಟಾಗಿತ್ತು. ಅವುಗಳ ಬಗ್ಗೆ ಅಧ್ಯಕ್ಷರು ವಿವರ ಕೇಳಿದ್ದರು. ಈ ಸಂಬಂಧ ವಿವರ ನೀಡಿದ್ದೇನೆ. ಮೊದಲ ಪಟ್ಟಿ ಮಂಗಳವಾರ ಬಿಡುಗಡೆಯಾಗಲಿದೆ’ ಎಂದರು.

ಹೊಸ ಪ್ರಯೋಗ: ಸಿ.ಎಂ ಸುಳಿವು

ಟಿಕೆಟ್ ಹಂಚಿಕೆಯ ವಿಷಯದಲ್ಲಿ ಬಿಜೆಪಿಯಲ್ಲಿ ಕೆಲವು ಮಾನದಂಡಗಳಿವೆ. ಹೀಗಾಗಿ, ಹೊಸ ಪ್ರಯೋಗಗಳು ನಡೆಯಲಿವೆ. ಕೆಲವು ಕ್ಷೇತ್ರಗಳ ಕುರಿತು ಹೈಕಮಾಂಡ್ ನಿರ್ಣಯ ತೆಗೆದುಕೊಳ್ಳಲಿದೆ. ಅಚ್ಚರಿ ಅಭ್ಯರ್ಥಿಗಳ ಹೆಸರು ಪಟ್ಟಿಯಲ್ಲಿ ಇರಲಿದೆ ಎಂದು ಬಸವರಾಜ ಬೊಮ್ಮಾಯಿ ತಿಳಿಸಿದರು.

ಭ್ರಷ್ಟಾಚಾರ ಆರೋಪ ಹಾಗೂ ಅಶ್ಲೀಲ ಚಿತ್ರಗಳನ್ನು ವೀಕ್ಷಿಸಿದವರಿಗೆ ಟಿಕೆಟ್ ನೀಡುವ ವಿಷಯಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿದ ಅವರು, ‘ಅಂತಹ ಬಹುತೇಕರಿಗೆ ಅವಕಾಶ ಸಿಗುವುದು ಅನುಮಾನ. ನಮ್ಮ ಮಾನದಂಡ ಸಹ ಅದೇ ರೀತಿ ಇದೆ’ ಎಂದರು.

ಕಾಂಗ್ರೆಸ್‌ನತ್ತ ಲಕ್ಷ್ಮಣ ಸವದಿ?

ಬೆಳಗಾವಿ: ವಿಧಾನ ಪರಿಷತ್ ಸದಸ್ಯ ಲಕ್ಷ್ಮಣ ಸವದಿ ಅವರು ಬಿಜೆಪಿ ತೊರೆದು, ಕಾಂಗ್ರೆಸ್ ಸೇರಲಿದ್ದಾರೆ ಎಂಬ ಸಂಗತಿ ಅವರ ಆಪ್ತ ಮೂಲಗಳಿಂದ ಗೊತ್ತಾಗಿದೆ.

ಸವದಿ ಅವರು ಸೋಮವಾರ ಇದ್ದಕ್ಕಿದ್ದಂತೆ ವಿಮಾನದ ಮೂಲಕ ದೆಹಲಿಗೆ ತೆರಳಿದ್ದಾರೆ. ಕಲ್ಯಾಣ ಕರ್ನಾಟಕ ಹಾಗೂ ಕಿತ್ತೂರು ಕರ್ನಾಟಕ ಭಾಗದ ಕೆಲವು ಕಾಂಗ್ರೆಸ್ ಶಾಸಕರೂ ಚುನಾವಣಾ ಪ್ರಚಾರವನ್ನು ಅರ್ಧಕ್ಕೆ ನಿಲ್ಲಿಸಿ ದೆಹಲಿಗೆ ಹಾರಿದ್ದಾರೆ. ಈ ಎಲ್ಲ ಶಾಸಕರು, ವಿಧಾನಸಭಾ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಅವರ ಆಪ್ತ ವಲಯದಲ್ಲಿ ಗುರುತಿಸಿಕೊಂಡವರು. ಸವದಿ ಅವರನ್ನು ಕಾಂಗ್ರೆಸ್‌ಗೆ ಕರೆತರುವ ಜವಾಬ್ದಾರಿಯನ್ನು ಸಿದ್ದರಾಮಯ್ಯ ಅವರು ಈ ಶಾಸಕರಿಗೆ ವಹಿಸಿದ್ದರು ಎನ್ನಲಾಗಿದೆ. ಸೋಮವಾರ ಹೈಕಮಾಂಡ್‌ನಿಂದ ಕರೆಬಂದ ಕೂಡಲೇ ಶಾಸಕರು ಹೊರಟರು ಎಂದು ಮೂಲಗಳು ಖಚಿತಪಡಿಸಿವೆ.

ಸವದಿ ಅವರ ಮೊಬೈಲ್ ಕರೆ ಸ್ವೀಕರಿಸಿ ‘ಪ್ರಜಾವಾಣಿ’ಗೆ ಪ್ರತಿಕ್ರಿಯೆ ನೀಡಿದ ಅವರ ಆಪ್ತರೊಬ್ಬರು, ‘ಈ ಬಗ್ಗೆ ಏನೂ ಹೇಳುವುದಿಲ್ಲ. ಸಾಹೇಬರು ಬಹಳ ಬ್ಯುಜಿ ಇದ್ದಾರೆ. ಈಗ ಮಾತನಾಡಲು ಆಗುವುದಿಲ್ಲ’ ಎಂದರು.

2004, 2008 ಹಾಗೂ 2013ರಲ್ಲಿ ಬಿಜೆಪಿ ಶಾಸಕರಾಗಿ ಆಯ್ಕೆಯಾದ ಸವದಿ 2018ರ ಚುನಾವಣೆಯಲ್ಲಿ ಕಾಂಗ್ರೆಸ್‌ನ ಮಹೇಶ ಕುಮಠಳ್ಳಿ ವಿರುದ್ಧ ಸೋತಿದ್ದರು.

6ನೇ ಪುಟ ನೋಡಿ

ಮಕ್ಕಳಿಗೆ ಟಿಕೆಟ್ ಕೇಳಿರುವ ಪ್ರಮುಖರು

- ಬಿ.ಎಸ್.ಯಡಿಯೂರಪ್ಪ (ಮಗ ಬಿ.ವೈ.ವಿಜಯೇಂದ್ರ)
- ವಸತಿ ಸಚಿವ ವಿ.ಸೋಮಣ್ಣ (ಪುತ್ರ ಅರುಣ್ ಸೋಮಣ್ಣ)
- ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ (ಮಗ ಗೋಪಾಲ ಕಾರಜೋಳ)
- ಶಾಸಕ ಕೆ.ಎಸ್.ಈಶ್ವರಪ್ಪ (ಪುತ್ರ ಕೆ.ಇ.ಕಾಂತೇಶ್)
- ತುಮಕೂರು ಸಂಸದ ಜಿ.ಎಸ್.ಬಸವರಾಜು (ಪುತ್ರ ಜ್ಯೋತಿ ಗಣೇಶ್– ತುಮಕೂರಿನ ಹಾಲಿ ಶಾಸಕ)



ಪರಿಶೀಲನೆ ಜಮ್ಮು ಮತ್ತು ಕಾಶ್ಮೀರದ ಗಾಂದರ್‌ಬಲ್ ಜಿಲ್ಲೆಯ ಬಾಲ್‌ಟಾಲ್ ಪ್ರದೇಶದಲ್ಲಿ ನಿರ್ಮಿಸುತ್ತಿರುವ ಝೋಜಿಲಾ ಸುರಂಗ ಮಾರ್ಗದ ಕಾಮಗಾರಿಯನ್ನು ಕೇಂದ್ರ ಭೂಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಮತ್ತು ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಅವರು ಸೋಮವಾರ ಪರಿಶೀಲಿಸಿದರು –ಪಿಟಿಐ ಚಿತ್ರ

ಮಸೂದೆಗಳಿಗೆ ಅನುಮೋದನೆ ರಾಜ್ಯಪಾಲರಿಗೆ ಕಾಲಮಿತಿ ನೀಡಿ

ತಮಿಳುನಾಡು ವಿಧಾನಸಭೆಯಲ್ಲಿ ನಿರ್ಣಯ ಅಂಗೀಕಾರ

ಚೆನ್ನೈ (ಪಿಟಿಐ): ವಿಧಾನ ಮಂಡಲದಲ್ಲಿ ಅಂಗೀಕರಿಸಿದ ಮಸೂದೆಗಳಿಗೆ ರಾಜ್ಯಪಾಲರು ಅನುಮೋದನೆ ನೀಡುವುದಕ್ಕೆ ಕಾಲಮಿತಿ ನಿಗದಿ ಮಾಡುವಂತೆ ಕೇಂದ್ರ ಸರ್ಕಾರ ಹಾಗೂ ರಾಷ್ಟ್ರಪತಿ ಅವರನ್ನು ಒತ್ತಾಯಿಸುವ ನಿರ್ಣಯವನ್ನು ತಮಿಳುನಾಡು ವಿಧಾನಸಭೆ ಸೋಮವಾರ ಅಂಗೀಕರಿಸಿದೆ. ಈ ಮೂಲಕ ಡಿಎಂಕೆ ಸರ್ಕಾರ ಹಾಗೂ ರಾಜ್ಯಪಾಲ ಆರ್.ಎನ್. ರವಿ ಅವರ ನಡುವಿನ ಸಂಘರ್ಷವು ಮತ್ತೊಮ್ಮೆ ಮುನ್ನೆಲೆಗೆ ಬಂದಿದೆ.

ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರು ವಿಧಾನಸಭೆಯಲ್ಲಿ ಈ ನಿರ್ಣಯವನ್ನು ಮಂಡಿಸಿದರು. ಈ ವೇಳೆ ರಾಜ್ಯಪಾಲರ ವಿರುದ್ಧ ಅವರು ಟೀಕಾಪ್ರಹಾರ ನಡೆಸಿದರು.

> ರಾಜ್ಯಪಾಲರ ವಿರುದ್ಧ ಈ ವರ್ಷದಲ್ಲಿ ಎರಡನೇ ಬಾರಿಗೆ ನಿರ್ಣಯ ಕೈಗೊಳ್ಳುವಂತೆ ಸ್ವತಃ ಅವರು ನನ್ನನ್ನು ಬಲವಂತಪಡಿಸಿದ್ದಾರೆ
> **ಎಂ.ಕೆ. ಸ್ಟಾಲಿನ್,** ಮುಖ್ಯಮಂತ್ರಿ

‘ಭಾರತದ ಸಂವಿಧಾನಕ್ಕಿಂತ ಬಿಜೆಪಿ ನಾಯಕರಿಗೇ ರಾಜ್ಯಪಾಲರು ಹೆಚ್ಚು ನಿಷ್ಠಾವಂತರಾಗಿದ್ದಾರೆ. ಅವರಿಗೆ ಸಂವಿಧಾನ ಗೊತ್ತಿಲ್ಲದೇ ಇಲ್ಲ. ಆದರೆ, ಸಂವಿಧಾನದ ಪರ ಇರಬೇಕಾದ ಅವರ ನಿಷ್ಠೆಯನ್ನು ಅವರ ರಾಜಕೀಯ ನಿಷ್ಠೆಯು ತಿಂದು ಹಾಕಿದೆ. ನಮ್ಮ ಸರ್ಕಾರವನ್ನು ಇದೇ ರೀತಿಯಲ್ಲಿ ಗುರಿ ಮಾಡುತ್ತಿದ್ದರೆ, ನಾನು ಸುಮ್ಮನೆ ಕೂರುವ ವ್ಯಕ್ತಿಯಲ್ಲ’ ಎಂದು ಗುಡುಗಿದರು.

‘ಜನಪ್ರತಿನಿಧಿಗಳು ಅಂಗೀಕರಿಸಿದ ಮಸೂದೆಗಳಿಗೆ ‘ನೇಮಕಗೊಂಡ ರಾಜ್ಯಪಾಲರು’ ಅನುಮೋದನೆ ನೀಡುವುದು ಪ್ರಜಾಪ್ರಭುತ್ವಕ್ಕೆ ಸರಿಹೊಂದುವುದಿಲ್ಲ. ಆದ್ದರಿಂದ ರಾಜ್ಯಪಾಲರಿಗೆ ಇರುವ ಈ ಅಧಿಕಾರವನ್ನು ಹಿಂಪಡೆಯಲು ಸಂವಿಧಾನಕ್ಕೆ ತಿದ್ದುಪಡಿ ತರಬೇಕು’ ಎಂದು ಒತ್ತಾಯಿಸಿದರು.

11ನೇ ಪುಟ ನೋಡಿ

‘ಯುಪಿಎಸ್‌ಸಿ ಮೂಲಕ ನೇಮಕವಾಗುವ ಅಧಿಕಾರಿಗಳು ದರೋಡೆಕೋರರು!’

ಬಾಲೇಶ್ವರ (ಒಡಿಶಾ), (ಪಿಟಿಐ): ‘ಕೇಂದ್ರ ಲೋಕಸೇವಾ ಆಯೋಗದ (ಯುಪಿಎಸ್‌ಸಿ) ಮೂಲಕ ನೇಮಕವಾಗುವ ಬಹುತೇಕ ಅಧಿಕಾರಿಗಳು ದರೋಡೆಕೋರರು’ ಎಂದು ಕೇಂದ್ರ ಬುಡಕಟ್ಟು ವ್ಯವಹಾರಗಳು ಮತ್ತು ಜಲಶಕ್ತಿ ಸಚಿವಾಲಯದ ರಾಜ್ಯ ಸಚಿವ ಬಿಶ್ವೇಶ್ವರ ಟುಡು ಹೇಳಿದ್ದು, ಸಚಿವರ ಈ ಹೇಳಿಕೆಗೆ ಅಧಿಕಾರಿಗಳ ವಲಯದಿಂದ ತೀವ್ರ ವಿರೋಧ ವ್ಯಕ್ತವಾಗಿದೆ.

ಸರ್ಕಾರಿ ಶಾಲೆಯೊಂದರ ಸುವರ್ಣ ಮಹೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಸಚಿವರು, ಯುಪಿಎಸ್‌ಸಿ ಮೂಲಕ ನೇಮಕವಾಗುವ ಅಧಿಕಾರಿಗಳ ಕಾರ್ಯವೈಖರಿಯ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಟುಡು ಅವರ ಹೇಳಿಕೆಯನ್ನು ತೀವ್ರವಾಗಿ ವಿರೋಧಿಸಿರುವ ಒಡಿಶಾ ಸರ್ಕಾರದ ಮಾಜಿ ಮುಖ್ಯ ಕಾರ್ಯದರ್ಶಿ ಸಹದೇವ ಸಾಹು, ‘ಸಚಿವರ ಹೇಳಿಕೆಯು ಅಧಿಕಾರಿಗಳ ಗೌರವಕ್ಕೆ ಚ್ಯುತಿ ತರುವಂಥದ್ದಾಗಿದೆ. ಇಂತಹ ಕ್ಷುಲ್ಲಕ ಹೇಳಿಕೆ ನೀಡಿದ ವ್ಯಕ್ತಿಯ ಮಾನಸಿಕ ಸ್ಥಿತಿಯನ್ನು ಒಮ್ಮೆ ತಪಾಸಣೆಗೆ ಒಳಪಡಿಸುವುದು ಸೂಕ್ತ‘ ಎಂದು ಕಿಡಿಕಾರಿದ್ದಾರೆ.

‘ಯುಪಿಎಸ್‌ಸಿಗೆ ಸದಸ್ಯರನ್ನು ನೇಮಕ ಮಾಡುವುದು ರಾಜಕಾರಣಿಗಳು. ಅಭ್ಯರ್ಥಿಗಳನ್ನು ಆಯ್ಕೆ ಮಾಡುವುದು ಯುಪಿಎಸ್‌ಸಿ ಸದಸ್ಯರು. ಹೀಗಾಗಿ ಇಂದಿನ ಸ್ಥಿತಿಗೆ ಸದಸ್ಯರನ್ನು ನೇಮಿಸಿದ ರಾಜಕಾರಣಿಗಳನ್ನೇ ದೂರಬೇಕು‘ ಎಂದೂ ಅವರು ಹೇಳಿದ್ದಾರೆ.

11ನೇ ಪುಟ ನೋಡಿ

‘ಈ ಬಾರಿ ವಾಡಿಕೆಗಿಂತ ಕಡಿಮೆ ಮಳೆ’



ನವದೆಹಲಿ (ಪಿಟಿಐ): ‘ಈ ವರ್ಷದ ಮುಂಗಾರು ಹಂಗಾಮಿನಲ್ಲಿ ದೇಶದೆಲ್ಲೆಡೆ ವಾಡಿಕೆಗಿಂತಲೂ ಕಡಿಮೆ ಮಳೆಯಾಗಲಿದೆ. ಲಾ ನಿನಾ (ಸಾಗರ ಮತ್ತು ವಾತಾವರಣದ ವಿದ್ಯಮಾನ) ಪರಿಸ್ಥಿತಿ ಕೊನೆಗೊಂಡಿರುವುದರಿಂದ ಬರಗಾಲ ಆವರಿಸುವ ಸಾಧ್ಯತೆ ಶೇ 20ರಷ್ಟಿದೆ’ ಎಂದು ಖಾಸಗಿ ಹವಾಮಾನ ಸಂಸ್ಥೆಯಾಗಿರುವ ಸ್ಕೈಮೆಟ್ ಸೋಮವಾರ ಹೇಳಿದೆ.

ಸತತ ನಾಲ್ಕು ವರ್ಷಗಳಿಂದ ಮುಂಗಾರು ಹಂಗಾಮಿನಲ್ಲಿ ವಾಡಿಕೆಯಷ್ಟು ಹಾಗೂ ವಾಡಿಕೆಗಿಂತ ತುಸು ಹೆಚ್ಚು ಮಳೆ ಸುರಿದಿದೆ. ಆದರೆ ಸ್ಕೈಮೆಟ್ ಸಂಸ್ಥೆ ಬಿಡುಗಡೆಗೊಳಿಸಿರುವ ಸದ್ಯದ ವರದಿಯು ಮುಂಗಾರು ಮಳೆಯನ್ನೇ ಅವಲಂಬಿಸಿರುವ ಕೃಷಿಕರನ್ನು ಆತಂಕಕ್ಕೆ ದೂಡಿದೆ.

ಮುಂಗಾರು ಕ್ಷೀಣಿಸಿದರೆ ದೇಶದಲ್ಲಿ ಆಹಾರ ಧಾನ್ಯಗಳ ಉತ್ಪಾದನೆ ಕುಂಠಿತಗೊಳ್ಳಲಿದ್ದು, ಇದು ಹಣದುಬ್ಬರ ಹೆಚ್ಚಳಕ್ಕೆ ದಾರಿ ಮಾಡಿಕೊಡಬಹುದು. ಇದರಿಂದ ಆರ್ಥಿಕ ಬೆಳವಣಿಗೆಗೆ ದೊಡ್ಡ ಪೆಟ್ಟು ಬೀಳಬಹುದು.

‘ಈ ಬಾರಿಯ ಮಳೆಯ ದೀರ್ಘಾವಧಿ ಸರಾಸರಿಯು (ಎಲ್‌ಪಿಎ) ಸುಮಾರು ಶೇ 94ರಷ್ಟು ಇರಲಿದ್ದು, ಜೂನ್‌ನಿಂದ ಸೆಪ್ಟೆಂಬರ್ ಅವಧಿಯಲ್ಲಿ 868.6 ಮಿಲಿ ಮೀಟರ್ ಮಳೆ ಸುರಿಯುವ ನಿರೀಕ್ಷೆ ಇದೆ’ ಎಂದು ಸ್ಕೈಮೆಟ್ ತಿಳಿಸಿದೆ.

‘ದೇಶದ ಉತ್ತರ ಹಾಗೂ ಮಧ್ಯ ಭಾಗದ ರಾಜ್ಯಗಳಲ್ಲಿ ಮಳೆ ಕೊರತೆಯಾಗುವ ಸಾಧ್ಯತೆ ಇದೆ. ಜುಲೈ ಹಾಗೂ ಆಗಸ್ಟ್‌ನಲ್ಲಿ ಗುಜರಾತ್, ಮಧ್ಯಪ್ರದೇಶ ಮತ್ತು ಮಹಾರಾಷ್ಟ್ರದಲ್ಲಿ ಅಸಮರ್ಪಕ ಮಳೆ ಸುರಿಯುವ ನಿರೀಕ್ಷೆ ಇದೆ. ಉತ್ತರ ಭಾರತದ ಕೃಷಿ ಕಣಜಗಳೆನಿಸಿರುವ ಪಂಜಾಬ್, ಹರಿಯಾಣ, ರಾಜಸ್ಥಾನ ಮತ್ತು ಉತ್ತರ ಪ್ರದೇಶದಲ್ಲಿ ಮಳೆಗಾಲದ ಎರಡನೇ ಅವಧಿಯಲ್ಲಿ ವಾಡಿಕೆಗಿಂತಲೂ ಕಡಿಮೆ ಮಳೆಯಾಗುವ ಸಂಭವವಿದೆ’ ಎಂದು ಮಾಹಿತಿ ನೀಡಿದೆ.

‘ಈ ಬಾರಿ ಅಧಿಕ ಮಳೆಯಾಗುವ ಸಾಧ್ಯತೆಯೇ ಇಲ್ಲ. ವಾಡಿಕೆಗಿಂತಲೂ ತುಸು ಹೆಚ್ಚು ಮಳೆ ಸುರಿಯುವ ಸಂಭವ ಶೇ 15ರಷ್ಟಿದೆ. ಸಾಧಾರಣ ಮಳೆಯಾಗುವ ಸಾಧ್ಯತೆ ಶೇ 25 ಹಾಗೂ ವಾಡಿಕೆಗಿಂತಲೂ ಕಡಿಮೆ ಮಳೆಯಾಗುವ ಸಾಧ್ಯತೆ ಶೇ 40ರಷ್ಟಿದೆ’ ಎಂದು ಸ್ಕೈಮೆಟ್ ಪ್ರಕಟಣೆ ತಿಳಿಸಿದೆ.

ಭಾರತೀಯ ಹವಾಮಾನ ಇಲಾಖೆಯು (ಐಎಂಡಿ) ಈ ಕುರಿತ ವರದಿಯನ್ನು ಇನ್ನೂ ಬಿಡುಗಡೆಗೊಳಿಸಿಲ್ಲ. ಆದರೆ ಏಪ್ರಿಲ್‌ನಿಂದ ಜೂನ್‌ವರೆಗೂ ದೇಶದ ಹಲವೆಡೆ ಬಿಸಿಗಾಳಿ ಬೀಸಬಹುದು ಎಂದು ತಿಳಿಸಿದೆ.

‘ಎಲ್ ನಿನೊ ವಿದ್ಯಮಾನವು ಮರುಕಳಿಸುವುದರಿಂದ ಈ ಬಾರಿ ಮುಂಗಾರು ಕ್ಷೀಣಿಸಬಹುದು ಎಂದು ಊಹಿಸಲಾಗಿದೆ’ ಎಂದು ಸ್ಕೈಮೆಟ್ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಜತಿನ್ ಸಿಂಗ್ ಹೇಳಿದ್ದಾರೆ.

ವರದಕ್ಷಿಣೆ ಕಿರುಕುಳ: ಐಎಎಸ್ ಅಧಿಕಾರಿ ವಿರುದ್ಧ ಪತ್ನಿ ದೂರು

ಬೆಂಗಳೂರು: ವರದಕ್ಷಿಣೆ ತರುವಂತೆ ಪೀಡಿಸಿ ಪತ್ನಿಗೆ ದೈಹಿಕ ಕಿರುಕುಳ ನೀಡಿರುವ ಆರೋಪದಡಿ ಕೊಡಗು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ (ಸಿಇಒ) ಡಾ. ಆಕಾಶ್ ವಿರುದ್ಧ ನಗರದ ಪೂರ್ವ ವಿಭಾಗ ಮಹಿಳಾ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

‘ಡಾ. ವಂದನಾ ಅವರು ಇತ್ತೀಚೆಗೆ ದೂರು ನೀಡಿದ್ದಾರೆ. ಐಎಎಸ್ ಅಧಿಕಾರಿ ಆಕಾಶ್, ಅವರ ತಂದೆ–ತಾಯಿ ಹಾಗೂ ಸಹೋದರನ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ನಿವೃತ್ತ ಡಿಐಜಿ ಟಿ.ಎಸ್. ಸುರೇಶ್ ಪುತ್ರಿಯಾದ ವಂದನಾ ಹಾಗೂ ಆಕಾಶ್, 2022ರಲ್ಲಿ ಮದುವೆಯಾಗಿದ್ದಾರೆ. ಐಎಎಸ್ ಅಧಿಕಾರಿ ಎಂಬುದಾಗಿ ಹೇಳುವ ಆಕಾಶ್, ಹೆಚ್ಚು ವರದಕ್ಷಿಣೆ ತರುವಂತೆ ಪತ್ನಿಗೆ ಪೀಡಿಸುತ್ತಿದ್ದಾರೆ. ಅದಕ್ಕೆ ಒಪ್ಪದಿದ್ದಕ್ಕೆ ಪತ್ನಿ ಮೇಲೆ ಹಲ್ಲೆ ಮಾಡಿರುವ ಆರೋಪವಿದೆ’ ಎಂದು ಮೂಲಗಳು ತಿಳಿಸಿವೆ.

ಸೀರೆ ಹಂಚಿಕೆ: ಮುನಿರತ್ನ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮತದಾರರಿಗೆ ಸೀರೆ ಹಂಚಿಕೆ ಮಾಡುತ್ತಿದ್ದ ಆರೋಪದಡಿ ಸಚಿವ ಮುನಿರತ್ನ ಹಾಗೂ ಇತರರ ವಿರುದ್ಧ ರಾಜರಾಜೇಶ್ವರಿನಗರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

‘ರಾಜರಾಜೇಶ್ವರಿನಗರ ವಿಧಾನ ಸಭಾ ಕ್ಷೇತ್ರದ ಜಾಗೃತ ದಳದ ಅಧಿಕಾರಿ ಮನೋಜ್‌ಕುಮಾರ್ ಅವರು ಐದು ಸೀರೆಗಳ ಸಮೇತ ದೂರು ನೀಡಿದ್ದಾರೆ. ಮತದಾರರಿಗೆ ಆಮಿಷವೊಡ್ಡುತ್ತಿದ್ದ ಆರೋಪದಡಿ ಮುನಿರತ್ನ ಹಾಗೂ ಬಿಜೆಪಿ ಮುಖಂಡ ವಿ.ಸಿ. ಚಂದ್ರು ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಆರೋಪಿಗಳಿಗೆ ನೋಟಿಸ್ ನೀಡಿ ವಿಚಾರಣೆ ನಡೆಸಲಾಗುವುದು’ ಎಂದು ಪೊಲೀಸರು ಹೇಳಿದರು.

‘ವಾರ್ಡ್ ನಂಬರ್ 160 ವ್ಯಾಪ್ತಿಯ ಬಂಗಾರಪ್ಪ ನಗರದ ಗ್ಲೋಬಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಬಳಿ ಸೀರೆ ಹಂಚುತ್ತಿದ್ದ ಬಗ್ಗೆ ಜಾಗೃತ ದಳಕ್ಕೆ ಮಾಹಿತಿ ಬಂದಿತ್ತು. ಅಧಿಕಾರಿ ಮನೋಜ್‌ಕುಮಾರ್ ನೇತೃತ್ವದ ತಂಡ ಸ್ಥಳಕ್ಕೆ ಹೋಗಿ ಪರಿಶೀಲಿಸಿದಾಗ, ರಸ್ತೆ ಬದಿಯಲ್ಲಿ ಸೀರೆಗಳು ಬಿದ್ದಿದ್ದವು’ ಎಂದು ತಿಳಿಸಿದರು.

‘ಸೀರೆ ಮೇಲೆ ಪ್ಲಾಸ್ಟಿಕ್ ಹೊದಿಕೆ ಇತ್ತು. ಅದರ ಮೇಲೆ ‘ರಾಜರಾಜೇಶ್ವರಿ ನಗರ ವಿಧಾನಸಭಾ ಕ್ಷೇತ್ರ, ಬಿಜೆಪಿಯೇ ಭರವಸೆ’ ಎಂಬುದಾಗಿ ಬರೆಯಲಾಗಿತ್ತು. ಸಚಿವ ಮುನಿರತ್ನ ಹಾಗೂ ಮುಖಂಡ ವಿ.ಸಿ. ಚಂದ್ರು ಭಾವಚಿತ್ರಗಳೂ ಹೊದಿಕೆ ಮೇಲಿದ್ದವು. ಐದು ಸೀರೆಗಳನ್ನು ಜಪ್ತಿ ಮಾಡಿದ್ದ ಅಧಿಕಾರಿಗಳು ಠಾಣೆಗೆ ಒಪ್ಪಿಸಿದ್ದಾರೆ. ರೇಷ್ಮೆ ಸೀರೆಗಳು ಎಂಬುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ’ ಎಂದರು.

‘ಮುನಿರತ್ನ ಬೆಂಬಲಿಗರು ಸೀರೆ ಹಂಚಿಕೆ ಮಾಡುತ್ತಿದ್ದ ಬಗ್ಗೆ ಸ್ಥಳೀಯರು ಮಾಹಿತಿ ನೀಡಿದ್ದಾರೆ. ಜಾಗೃತ ದಳದ ಅಧಿಕಾರಿಗಳು ಬರುವ ಸುದ್ದಿ ತಿಳಿದು, ಸೀರೆಗಳನ್ನು ರಸ್ತೆಯಲ್ಲಿ ಬಿಸಾಕಿ ಬೆಂಬಲಿಗರು ಓಡಿಹೋಗಿದ್ದಾರೆ. ಈ ಬಗ್ಗೆ ಸ್ಥಳೀಯರ ಹೇಳಿಕೆ ದಾಖಲಿಸಿಕೊಳ್ಳಲಾಗಿದೆ’ ಎಂದು ಹೇಳಿದರು.



ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಬಂಗಾರಪ್ಪ ನಗರದ ರಸ್ತೆ ಬದಿಯಲ್ಲಿ ಎಸೆದಿದ್ದ ಸೀರೆಗಳು

ಬಂಧನಕ್ಕೆ ಡಿ. ಕೆಂಪಣ್ಣ ಆಗ್ರಹ

‘ಕ್ರೈಸ್ತ ಧರ್ಮೀಯರ ಮೇಲೆ ಹಲ್ಲೆ ನಡೆಸುವಂತೆ ತನ್ನ ಬೆಂಬಲಿಗರಿಗೆ ಪ್ರಚೋದನೆ ನೀಡಿರುವ ಸಚಿವ ಮುನಿರತ್ನ ಅವರನ್ನು ತಕ್ಷಣ ಬಂಧಿಸಬೇಕು ’ ಎಂದು ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಡಿ. ಕೆಂಪಣ್ಣ ನಗರ ಪೊಲೀಸ್ ಕಮಿಷನರ್ ಪ್ರತಾಪ್ ರೆಡ್ಡಿ ಅವರನ್ನು ಆಗ್ರಹಿಸಿದ್ದಾರೆ.

ಕಮಿಷನರ್ ಅವರಿಗೆ ಸೋಮವಾರ ಪತ್ರ ಬರೆದಿರುವ ಅವರು, ‘ಸಚಿವ ಸ್ಥಾನದಲ್ಲಿದ್ದುಕೊಂಡು ಬೆದರಿಕೆ ಹಾಕಿರುವ ವ್ಯಕ್ತಿಯನ್ನು ಬಂಧಿಸಲೇಬೇಕು. ತಪ್ಪಿದರೆ ಠಾಣಾಧಿಕಾರಿ ಮತ್ತು ಪೊಲೀಸ್ ಕಮಿಷನರ್ ವಿರುದ್ಧ ಸುಪ್ರೀಂ ಕೋರ್ಟ್‌ನಲ್ಲಿ ನ್ಯಾಯಾಂಗ ನಿಂದನೆ ಮೊಕದ್ದಮೆ ಹೂಡಲಾಗುವುದು’ ಎಂದು ತಿಳಿಸಿದ್ದಾರೆ.

ಪ್ರಜಾ ಮತ
ಜನತಂತ್ರದ ಹಬ್ಬ

‘ಅತಿಥಿ’ಗಳಿಗೆ ಸಿಗದ ಸೇವಾ ಭದ್ರತೆ 7

ಟಿಕೆಟ್‌ಗಾಗಿ ಸಿದ್ದರಾಮಯ್ಯ ಬೆನ್ನುಬಿದ್ದ ಅಖಂಡ 7

ಕೆಂಪೇಗೌಡ ಬಡಾವಣೆ ನಿರ್ಮಾಣ ಕಾಮಗಾರಿ

ಗುತ್ತಿಗೆ ಕಂಪನಿಗೆ ₹ 40 ಕೋಟಿ ಅಧಿಕ ಪಾವತಿ

• ನವೀನ್ ಮಿನೇಜಸ್

ಮುಖ್ಯಾಂಶಗಳು

- ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆಂತರಿಕ ಲೆಕ್ಕ ಪರಿಶೋಧನೆಯಲ್ಲಿ ಪತ್ತೆ
- ಯೋಜನಾ ನಿರ್ವಹಣಾ ಸಲಹೆಗಾರ ಹಾಗೂ ಗುತ್ತಿಗೆದಾರರಿಗೆ ನೋಟಿಸ್

ಬೆಂಗಳೂರು: ನಾಡಪ್ರಭು ಕೆಂಪೇಗೌಡ ಬಡಾವಣೆಯ ನಿರ್ಮಾಣ ಕಾಮಗಾರಿ ಗುತ್ತಿಗೆ ಪಡೆದ ಎರಡು ಕಂಪನಿಗಳಿಗೆ ಹೆಚ್ಚುವರಿಯಾಗಿ ₹ 40 ಕೋಟಿ ಬಿಡುಗಡೆ ಮಾಡಿರುವುದು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆಂತರಿಕ ಲೆಕ್ಕ ಪರಿಶೋಧನೆಯಲ್ಲಿ ಪತ್ತೆಯಾಗಿದೆ.

ನಿವೇಶನಗಳ ರಚನೆ, ರಸ್ತೆಗಳು, ಚರಂಡಿಗಳ ನಿರ್ಮಾಣದಲ್ಲಿ ಕಳಪೆ ಕಾಮಗಾರಿ ನಡೆದಿವೆ ಎಂಬ ದೂರುಗಳ ಹಿನ್ನೆಲೆಯಲ್ಲಿ ಲೇಔಟ್‌ನಲ್ಲಿ ಕೈಗೊಂಡ ಕಾಮಗಾರಿಗಳ ಗುಣಮಟ್ಟ ಹಾಗೂ ಲೆಕ್ಕಪರಿಶೋಧನೆಯ ಜವಾಬ್ದಾರಿಯನ್ನು ಬೆಂಗಳೂರು ಮೂಲದ ಖಾಸಗಿ ಸಂಸ್ಥೆಯೊಂದಕ್ಕೆ (ಥರ್ಡ್ ಪಾರ್ಟಿ) ನೀಡಲಾಗಿತ್ತು. ‘ಅಲ್ಕಾನ್ ಕನ್ಸಲ್ಟಿಂಗ್’ ಎಂಜಿನಿಯರ್‌ಗಳನ್ನು ಈ ಕಾರ್ಯಕ್ಕೆ ಬಳಸಿಕೊಳ್ಳಲಾಗಿತ್ತು. ನಿರ್ಮಾಣ ಕಾಮಗಾರಿಗಳಿಗೆ ಮಾಡುವ ವೆಚ್ಚ ಹಾಗೂ ಪಾವತಿಗಳಲ್ಲಿನ ದೋಷಪೂರಿತ ವ್ಯವಸ್ಥೆಯನ್ನು ಸಂಸ್ಥೆ ಪತ್ತೆ ಮಾಡಿದ್ದು, ಇಂತಹ ಲೋಪಗಳಿಂದಾಗಿ ಲೇಔಟ್ ನಿರ್ಮಾಣ ಕಾರ್ಯಗಳ ವೇಗ ಹಾಗೂ ಕಾಮಗಾರಿಗಳ ಪೂರ್ಣಗೊಳಿಸುವಿಕೆ ಮೇಲೆ ಪ್ರತಿಕೂಲ ಪರಿಣಾಮ ಬೀರಬಹುದು ಎಂದು ಆತಂಕ ವ್ಯಕ್ತಪಡಿಸಿದೆ.

26 ಸಾವಿರ ನಿವೇಶನಗಳನ್ನು ಒಳಗೊಂಡ ಅಂದಾಜು ₹1,300 ಕೋಟಿ ವೆಚ್ಚದ ಬಡಾವಣೆ ನಿರ್ಮಿಸಲು ‘ರಾಮಲಿಂಗಂ ಕನ್‌ಸ್ಟ್ರಕ್ಷನ್ ಕಂಪನಿ’ (ಆರ್‌ಸಿಸಿ) ಹಾಗೂ ‘ಕೆಎಂಸಿ ಕನ್‌ಸ್ಟ್ರಕ್ಷನ್’ ಕಂಪನಿಗಳಿಗೆ 2014ರಲ್ಲಿ ಗುತ್ತಿಗೆ ನೀಡಲಾಗಿತ್ತು. ಐದು ವರ್ಷಗಳ ಒಳಗೆ ಕಾಮಗಾರಿ ಪೂರ್ಣಗೊಳಿಸುವ ಷರತ್ತು ವಿಧಿಸಲಾಗಿತ್ತು. ನಿಗದಿತ ಗಡುವಿನ ಒಳಗೆ ಕಾಮಗಾರಿ ಪೂರ್ಣಗೊಳಿಸಲು ಆಸಕ್ತಿ ತೋರಿಲ್ಲ. 9 ವರ್ಷಗಳ ಸುದೀರ್ಘ ಅವಧಿಯಲ್ಲಿ ಶೇ 60ರಷ್ಟು ಕಾಮಗಾರಿಗಳು ಮಾತ್ರ ಮುಗಿದಿವೆ. ಆದರೂ, ಎರಡು ವರ್ಷಗಳಿಂದ ಸಂಸ್ಥೆಗಳಿಗೆ ಹೆಚ್ಚುವರಿ ಹಣ ಪಾವತಿ ಮಾಡಲಾಗಿದೆ.


ನಿರ್ದಿಷ್ಟ ಕಾಮಗಾರಿಗಳು ಪೂರ್ಣಗೊಳ್ಳುವ ಮೊದಲೇ ಹೆಚ್ಚುವರಿ ಹಣವನ್ನು ಸಂಸ್ಥೆಗಳು ಪಡೆದಿರುವ ಕಾರಣ, ಒಪ್ಪಂದದಂತೆ ನಿಗದಿತ ಅವಧಿಯ ಒಳಗೆ ಕಾಮಗಾರಿಗಳನ್ನು ಪೂರ್ಣಗೊಳಿಸಲು ಸಂಸ್ಥೆಗಳು ಬದ್ಧತೆ ತೋರುತ್ತಿಲ್ಲ ಎಂಬ ಆರೋಪಗಳೂ ಕೇಳಿಬಂದಿವೆ.

‘ಗುತ್ತಿಗೆದಾರರಿಗೆ ಹೆಚ್ಚುವರಿ ಮೊತ್ತ ಪಾವತಿಯಾಗಿರುವುದನ್ನು ಖಚಿತಪಡಿಸಿಕೊಳ್ಳಲಾಗಿದೆ. ಯೋಜನಾ ನಿರ್ವಹಣಾ ಸಲಹೆಗಾರ ಹಾಗೂ ಗುತ್ತಿಗೆದಾರರಿಗೆ ವಿವರಣೆ ನೀಡುವಂತೆ ನೋಟಿಸ್ ನೀಡಲಾಗಿದೆ. ಮುಂದಿನ ಪಾವತಿಗಳಲ್ಲಿ ವ್ಯತ್ಯಾಸ ಸರಿದೂಗಿಸಲು ಕ್ರಮ ಕೈಗೊಳ್ಳಲಾಗುವುದು’ ಎಂದು ಬಿಡಿಎ ಎಂಜಿನಿಯರಿಂಗ್ ಸದಸ್ಯ ಎಚ್. ಆರ್. ಶಾಂತರಾಜಣ್ಣ ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದರು.

‘ಇಂತಹ ಪ್ರಕರಣಗಳಿಂದಾಗಿ ಬಡಾವಣೆಯ ಕಾಮಗಾರಿ ಮತ್ತಷ್ಟು ವಿಳಂಬವಾಗಬಹುದು. ಕೆಲ ತಿಂಗಳಿನಿಂದ ನಿರ್ಮಾಣ ಚಟುವಟಿಕೆಗಳು ಸ್ಥಗಿತವಾಗಿವೆ. ನೀರು ಪೂರೈಕೆ, ಯುಜಿಡಿ, ಚರಂಡಿ ಕಾಮಗಾರಿಗಳು ನಿಧಾನಗತಿಯಲ್ಲಿ ನಡೆಯುತ್ತಿವೆ. ಬಿಡಿಎ ಲೇಔಟ್ ನಿರ್ಮಾಣ ಪೂರ್ಣಗೊಳಿಸಲು ಹೆಚ್ಚು ಗಮನಹರಿಸಬೇಕು’ ಎಂದು ಒತ್ತಾಯಿಸುತ್ತಾರೆ ನಾಡಪ್ರಭು ಕೆಂಪೇಗೌಡ ಬಡಾವಣೆ ಮುಕ್ತ ವೇದಿಕೆಯ ಜಂಟಿ ಕಾರ್ಯದರ್ಶಿ ಸೂರ್ಯ ಕಿರಣ್.

ಚಿನಕುರಳಿ

ಪ್ರಕಾಶ್ ಶೆಟ್ಟಿ



ಪ್ರತಿಕೃತಿ ದಹಿಸಿ ಆಕ್ರೋಶ, ಕರವೇ ಕಾರ್ಯಕರ್ತರ ಬಂಧನ– ಬಿಡುಗಡೆ

ಅಮೂಲ್ ಉತ್ಪನ್ನ ಎಸೆದು ಪ್ರತಿಭಟನೆ

ಪ್ರಜಾವಾಣಿ ವಾರ್ತೆ



ನಗರದಲ್ಲಿ ಸೋಮವಾರ ಕರ್ನಾಟಕ ರಕ್ಷಣಾ ವೇದಿಕೆ (ನಾರಾಯಣಗೌಡ ಬಣ) ಕಾರ್ಯಕರ್ತರು ಅಮೂಲ್ ಉತ್ಪನ್ನಗಳನ್ನು ರಸ್ತೆಗೆ ಎಸೆದು ಪ್ರತಿಭಟಿಸಿದರು – ಪ್ರಜಾವಾಣಿ ಚಿತ್ರ

ಬೆಂಗಳೂರು: ರಾಜ್ಯದಲ್ಲಿ ಅಮೂಲ್ ಹಾಲು, ಮೊಸರು ಮಾರಾಟ ವಿರೋಧಿಸಿ, ಕರ್ನಾಟಕ ರಕ್ಷಣಾ ವೇದಿಕೆ (ಟಿ.ಎ.ನಾರಾಯಣಗೌಡ ಬಣ) ಕಾರ್ಯಕರ್ತರು ಮೈಸೂರು ಬ್ಯಾಂಕ್ ವೃತ್ತದಲ್ಲಿ ಅಮೂಲ್ ಉತ್ಪನ್ನಗಳನ್ನು ಎಸೆದು ಸೋಮವಾರ ಪ್ರತಿಭಟನೆ ನಡೆಸಿದರು.

ಅಮೂಲ್ ಬ್ರ್ಯಾಂಡ್‌ನ ಹಾಲು, ಮೊಸರು, ತುಪ್ಪ, ಬೆಣ್ಣೆ ಉತ್ಪನ್ನಗಳನ್ನು ರಸ್ತೆಗೆ ಎಸೆದ ಪ್ರತಿಭಟನಕಾರರು ಯಾವುದೇ ಕಾರಣಕ್ಕೂ ಅಮೂಲ್ ಹಾಲು-ಮೊಸರು ವ್ಯಾಪಾರಕ್ಕೆ ಅವಕಾಶ ನೀಡುವುದಿಲ್ಲ ಎಂದು ಎಚ್ಚರಿಸಿದರು.

ಕೇಂದ್ರ ಸರ್ಕಾರ ಹಾಗೂ ಅಮೂಲ್ ವಿರುದ್ಧ ಕಾರ್ಯಕರ್ತರು ಘೋಷಣೆ ಕೂಗಿದರು. ಅಮೂಲ್ ವ್ಯವಸ್ಥಾಪಕ ನಿರ್ದೇಶಕರ ಪ್ರತಿಕೃತಿಗೆ ಬೆಂಕಿ ಆಕ್ರೋಶ ಹೊರಹಾಕಿದರು. ಬಳಿಕ ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದು ಬಿಡುಗಡೆ ಮಾಡಿದರು.

'ಅಮೂಲ್ ಸಂಸ್ಥೆ ಕನ್ನಡಿಗರ ಭಾವನೆಗಳ ಜತೆಗೆ ಚೆಲ್ಲಾಟವಾಡುತ್ತಿದೆ. ಕನ್ನಡಿಗರು ಕಟ್ಟಿದ ಹೆಮ್ಮೆಯ ಸಂಸ್ಥೆ ಕೆಎಂಎಫ್ (ನಂದಿನಿ) ಅನ್ನು ಅಮೂಲ್ ನಾಶ ಮಾಡಲು ಮುಂದಾಗಿದೆ. ಇದಕ್ಕೆ ರಾಜ್ಯದ ಜನರು ಅವಕಾಶ ನೀಡುವುದಿಲ್ಲ. ಕೇಂದ್ರ ಸರ್ಕಾರವು ನಂದಿನಿಯನ್ನು ಅಮೂಲ್ ಜತೆಗೆ ವಿಲೀನಗೊಳಿಸಲು ಯತ್ನಿಸುತ್ತಿದೆ. ಈ ಪ್ರಯತ್ನ ಇಲ್ಲಿಗೆ ನಿಲ್ಲಬೇಕು. ಇಲ್ಲದಿದ್ದರೆ ರಾಜ್ಯದ ಜನರು ದಂಗೆ ಏಳುತ್ತಾರೆ' ಎಂದು ವೇದಿಕೆ ರಾಜ್ಯ ಉಪಾಧ್ಯಕ್ಷ ದಾ.ಪಿ.ಆಂಜನಪ್ಪ ಎಚ್ಚರಿಸಿದರು.

ಯುವ ಘಟಕದ ರಾಜ್ಯ ಅಧ್ಯಕ್ಷ ಟಿ.ಎ.ಧರ್ಮರಾಜ್ ಗೌಡ ಅವರು, ಅಮೂಲ್ ಹಠಮಾರಿತನದೊಂದಿಗೆ ಹಾಲು-ಮೊಸರು ವ್ಯಾಪಾರ ಮುಂದುವರಿದರೆ ಕರ್ನಾಟಕದಲ್ಲಿ ಅಮೂಲ್‌ನ ಎಲ್ಲ ಉತ್ಪನ್ನಗಳಿಗೂ ಬಹಿಷ್ಕಾರ ಹಾಕಬೇಕಾಗುತ್ತದೆ ಎಂದು ಎಚ್ಚರಿಸಿದರು.

ಸರ್ಕಾರವು ಪೊಲೀಸರನ್ನು ಮುಂದೆ ಬಿಟ್ಟು ಬಂಧಿಸಿದೆ. ದೌರ್ಜನ್ಯವನ್ನು ಸವಾಲಾಗಿ ಸ್ವೀಕರಿಸಲಿದ್ದೇವೆ. ರಾಜ್ಯದ ಮೂಲೆಮೂಲೆಗಳಲ್ಲೂ ಹೋರಾಟ ಮೊಳಗಲಿದೆ ಎಂದು ವೇದಿಕೆ ರಾಜ್ಯ ಪ್ರಧಾನ ಕಾರ್ಯದರ್ಶಿ ಬಿ.ಸಣ್ಣೀರಪ್ಪ ಹೇಳಿದರು.

ಶ್ವೇತಾ ಮೋಹನ್, ಗೋಮೂರ್ತಿ ಯಾದವ್, ವೀರಭದ್ರ, ಕುಮಾರ್ (ಆಟೋ ಘಟಕ), ಕೆ.ಪಿ.ನರಸಿಂಹ, ಕಾರ್ತಿಕ್, ಲಕ್ಷ್ಮಿ ಇದ್ದರು.

'ನಂದಿನಿಗೆ ಮೊದಲ ಆದ್ಯತೆ'

ಬೆಂಗಳೂರು: 'ನಂದಿನಿ ಹಾಲು ಮತ್ತು ಅದರ ಉತ್ಪನ್ನಗಳಿಗೆ ಬೃಹತ್ ಬೆಂಗಳೂರು ಹೋಟೆಲುಗಳ ಸಂಘ ಮೊದಲ ಆದ್ಯತೆ ನೀಡಲಿದೆ' ಎಂದು ಸಂಘದ ಅಧ್ಯಕ್ಷ ಪಿ.ಸಿ. ರಾವ್ ಹೇಳಿದ್ದಾರೆ.

'ನಂದಿನಿ ಹಾಲು ಕರ್ನಾಟಕದ ಹೆಮ್ಮೆ. ನಮ್ಮ ರೈತರು ಉತ್ಪಾದಿಸುವ ನಂದಿನಿ ಹಾಲನ್ನು ನಾವೆಲ್ಲರೂ ಸಂಪೂರ್ಣವಾಗಿ ಪ್ರೋತ್ಸಾಹಿಸಬೇಕು. ನಗರದಲ್ಲಿ ದೊರೆಯುವ ಶುಚಿ ರುಚಿಯಾದ ಕಾಫಿ ಮತ್ತು ತಿಂಡಿಗಳಿಗೆ ನಂದಿನಿಯ ಉತ್ಪನ್ನಗಳೇ ಕಾರಣ. ಆದರೆ, ರಾಜ್ಯದ ಮಾರುಕಟ್ಟೆಗೆ ಗುಜರಾತ್‌ನ ಅಮೂಲ್ ಹಾಲು ಲಗ್ಗೆ ಇಡುತ್ತಿದೆ. ಆದರೆ, ನಾವೆಲ್ಲರೂ ನಂದಿನಿ ಹಾಲನ್ನು ಉಪಯೋಗಿಸಬೇಕು' ಎಂದು ಕರೆ ನೀಡಿದರು.

'ಬೆಂಗಳೂರು ನಗರದ ಹೋಟೆಲ್‌ಗಳಿಗೆ ಕೆಎಂಎಫ್ ಪ್ರತಿನಿತ್ಯ ಸುಮಾರು 4–5 ಲಕ್ಷ ಲೀಟರ್ ಹಾಲು ಮತ್ತು ಮೊಸರನ್ನು ಪೂರೈಕೆ ಮಾಡುತ್ತಿದೆ. ಕೆಲ ದಿನಗಳ ಹಿಂದೆ ನಗರದಲ್ಲಿ ಹಾಲಿನ ಕೊರತೆಯಾಗಿತ್ತು. ಆದರೆ ಪೂರೈಕೆಯಲ್ಲಿ ಯಾವುದೇ ರೀತಿ ವ್ಯತ್ಯಯವಾಗಿರಲಿಲ್ಲ. ಸದ್ಯ ತುಪ್ಪದ ಕೊರತೆ ಇದ್ದು, ಮುಂದಿನ ದಿನಗಳಲ್ಲಿ ಅದನ್ನು ಸರಿಯಾಗಿ ಪೂರೈಕೆ ಮಾಡುವ ಭರವಸೆ ಇದೆ' ಎಂದು ಹೇಳಿದರು.

'ಅಮೂಲ್ ಹಾಲು ದೇಶದಲ್ಲಿ ಮೊದಲ ಸ್ಥಾನ ಪಡೆದಿದೆ. ನಂದಿನಿ ಎರಡನೇ ಸ್ಥಾನದಲ್ಲಿದ್ದು, ಅದನ್ನು ಮೊದಲ ಸ್ಥಾನ ಪಡೆಯುವಂತೆ ಮಾಡಲು ನಾವೆಲ್ಲರು ಬೆಂಬಲ ನೀಡಬೇಕು. ನಮ್ಮ ರಾಜ್ಯದ ಉತ್ಪನ್ನವನ್ನು ಬೆಳೆಸುವ ಕೆಲಸವಾಗಬೇಕು. ಅಮೂಲ್ ಒಂದು ಲೀಟರ್ ಹಾಲಿನ ಬೆಲೆ ₹54 ಇದೆ. ನಂದಿನಿ ಒಂದು ಲೀಟರ್ ಹಾಲಿನ ಬೆಲೆ ₹43 ಇದೆ. ನಂದಿನಿ ಖರೀದಿಸಿದರೆ ₹11 ಉಳಿತಾಯವಾಗುತ್ತದೆ. ಅಮೂಲ್ ವಿವಾದವಾಗುವುದಕ್ಕಿಂತ ಮುಂಚಿತವಾಗಿ ನಾವು ನಂದಿನಿ ಹಾಲನ್ನೇ ಬಳಸುತ್ತಿದ್ದೇವೆ' ಎಂದು 'ಪ್ರಜಾವಾಣಿ'ಗೆ ತಿಳಿಸಿದರು.

ಸುದ್ದಿ 2 ನಿಮಿಷ

ಅಂತರರಾಷ್ಟ್ರೀಯ ಸಮ್ಮೇಳನ ನಾಳೆಯಿಂದ

ಬೆಂಗಳೂರು: ಗ್ರಾಮ ಸಂಸ್ಥೆಯು ಏಪ್ರಿಲ್ 12 ಮತ್ತು 13ರಂದು 'ಪ್ರಜಾಪ್ರಭುತ್ವದಲ್ಲಿ ಜನಸೇವೆ'ಯ (ಡೆಲಿವರಿಂಗ್ ಡೆಮೋಕ್ರಸಿ) ಕುರಿತು ಅಂತರರಾಷ್ಟ್ರೀಯ ಸಮ್ಮೇಳವನ್ನು ಆರ್ಟ್ ಆಫ್ ಲಿವಿಂಗ್ ಆವರಣದಲ್ಲಿ ಹಮ್ಮಿಕೊಂಡಿದೆ.

'ಏ.12ರಂದು ಯುವ ಜನತೆ ಮತ್ತು ಪ್ರಜಾಪ್ರಭುತ್ವ, ನಾಗರಿಕ ಸಹಭಾಗಿತ್ವ ಮತ್ತು ಪ್ರಜಾಪ್ರಭುತ್ವದ ದುಂಡು ಮೇಜಿನ ಸಭೆ, ಏ.13ರಂದು ಪ್ರಜಾಪ್ರಭುತ್ವವನ್ನು ಬಲ ಪಡಿಸುವುದು ಹಾಗೂ ಪ್ರಚುರಪಡಿಸುವುದು, ಜವಾಬ್ದಾರಿಯುತ ನಾಗರಿಕತೆ ಮತ್ತು ಸ್ಪಂದನೀಯ ಆಡಳಿತ ಎಂಬ ವಿಷಯಗಳ ಕುರಿತು ತಜ್ಞರು ಚರ್ಚಿಸಲಿದ್ದಾರೆ' ಎಂದು ಗ್ರಾಮ ಸಂಸ್ಥೆಯ ನಿರ್ದೇಶಕ ಬಸವರಾಜು ಆರ್. ಶ್ರೇಷ್ಠಾ ಸೋಮವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಈ ಸಮ್ಮೇಳವನ್ನು ಆರ್ಟ್ ಆಫ್ ಲಿವಿಂಗ್‌ನ ಸಂಸ್ಥಾಪಕರಾದ ಶ್ರೀಶ್ರೀ ರವಿಶಂಕರ್ ಗುರೂಜಿ ಉದ್ಘಾಟಿಸಲಿದ್ದು, ಕೇಂದ್ರ ಸಚಿವ ಧರ್ಮೇಂದ್ರ ಪ್ರಧಾನ್, ಸರ್ಕಾರದ ಹೆಚ್ಚುವರಿ ಮುಖ್ಯಕಾರ್ಯದರ್ಶಿ ಶಾಲಿನಿ ರಜನೀಶ್, ಉತ್ತರಾಖಂಡದ ವಿಧಾನಸಭಾಧ್ಯಕ್ಷೆ ರಿತು ಖಂಡೂರಿ ಭೂಷಣ್, ಆರ್. ಬಾಲಸುಬ್ರಮಣ್ಯಂ ಭಾಗವಹಿಸಲಿದ್ದಾರೆ ಎಂದರು.

ನಾಳೆಯಿಂದ 'ಕಾಯ' ನಾಟಕ ಪ್ರದರ್ಶನ



ಬೆಂಗಳೂರು: ನಗರದ ರಂಗಶಂಕರದಲ್ಲಿ ಏಪ್ರಿಲ್ 12 ಮತ್ತು 13ರಂದು ಸಂಜೆ 7.30ಕ್ಕೆ 'ಕಾಯ' ನಾಟಕ ಪ್ರದರ್ಶನಗೊಳ್ಳಲಿದೆ.

ಕ್ರಿಯೇಟಿವ್ ಥಿಯೇಟರ್‌ನ ಹೊಸ ಪ್ರಯೋಗ 'ಕಾಯ. ಅಕ್ಕಮಹಾದೇವಿಯ ವಚನಗಳಿಂದ ಸ್ಫೂರ್ತಿಗೊಂಡಿದ್ದು, ರಂಗಭೂಮಿಗೆ ಹೊಸ ಆಯಾಮ ನೀಡುವ ವಿಶಿಷ್ಟ ಪ್ರಯತ್ನ ಇದಾಗಿದೆ. ಗಾಯನ, ಚಲನೆ ಮೂಲಕ ಅಕ್ಕಮಹಾದೇವಿಯ ವಚನಗಳ ಅರ್ಥವನ್ನು ಶೋಧಿಸುತ್ತಲೇ ಅವಳ ಅಧ್ಯಾತ್ಮಿಕ ಪಯಣವನ್ನು ದೃಶ್ಯೀಕರಿಸುವ ಪ್ರಯೋಗ ಮಾಡಲಾಗಿದೆ. ವೀಣಾ ಬಸವರಾಜಯ್ಯ ಅವರ ನಿರ್ದೇಶನ, ಮುರಳಿ ಮನೋಹರಗೌಡರ ಸಂಗೀತ, ಲಕ್ಷ್ಮೀ ಚಂದ್ರಶೇಖರ್ ಅವರ ಸಹ ಸಂಯೋಜನೆಯಿದೆ. ದೀಪ್ತಿ ನಾಗೇಂದ್ರ, ಪ್ರಿಯಾಂಕ ಚಂದ್ರಶೇಖರ್, ಅನಘಾ ಕಶ್ಯಪ್ ಹಾಗೂ ಶ್ರೀಪ್ರಿಯಾ ಅಭಿನಯಿಸಿದ್ದಾರೆ.

ಪ್ರೇಕ್ಷಕರು ತಮ್ಮ ಟಿಕೆಟ್‌ನಲ್ಲಿರುವ ಕ್ಯೂಆರ್ ಕೋಡ್ ಅನ್ನು ಸ್ಕ್ಯಾನ್ ಮಾಡಿ, ನಾಟಕದಲ್ಲಿ ಬಳಸಿರುವ ವಚನಗಳನ್ನು ಕನ್ನಡ ಹಾಗೂ ಇಂಗ್ಲಿಷ್‌ನಲ್ಲಿ ಓದಿಕೊಳ್ಳಬಹುದು. ತಂಡದ ವಿನೂತನ ಪ್ರಯತ್ನ ಎಂದು ಲಕ್ಷ್ಮಿ ಚಂದ್ರಶೇಖರ್ ತಿಳಿಸಿದ್ದಾರೆ.

ನಕಲಿ ಪಾಸ್‌ಪೋರ್ಟ್: ಇಬ್ಬರ ಬಂಧನ

ದೇವನಹಳ್ಳಿ: ನಕಲಿ ಹೆಸರಿನಲ್ಲಿ ಭಾರತೀಯ ಪಾಸ್‌ಪೋರ್ಟ್ ಮಾಡಿ ಕೊಂಡು ಬಾಂಗ್ಲಾದೇಶದಿಂದ ಬೆಂಗಳೂರಿಗೆ ಬಂದಿದ್ದ ಇಬ್ಬರು ಬಾಂಗ್ಲಾ ದೇಶದ ಪ್ರಜೆಗಳನ್ನು ಇಲ್ಲಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಬಂಧಿಸಲಾಗಿದೆ.

ಲಿಯಾಕತ್ ಆಲಿ ಮತ್ತು ರಿಜಾಉಲ್ ಶೇಖ್ ಬಂಧಿತರು. ಆರೋಪಿಗಳು ಏ.2 ರಂದು ಸಿಂಗಪುರದಿಂದ ಬೆಂಗಳೂರಿಗೆ ಇಂಡಿಗೊ ವಿಮಾನದಲ್ಲಿ ಬಂದಿದ್ದರು. ಈ ಮಾಹಿತಿ ಮೇರೆಗೆ ಇಬ್ಬರನ್ನು ವಿಮಾನ ನಿಲ್ದಾಣದ ಭದ್ರತಾ ಸಿಬ್ಬಂದಿ ಬಂಧಿಸಿ, ಪೊಲೀಸರಿಗೆ ಒಪ್ಪಿಸಿದ್ದಾರೆ.

ಪ್ರಗತಿಪರ ಸಂಘಟನೆಗಳ ಚಿಂತನಾಗೋಷ್ಠಿ

'ಸೌಹಾರ್ದತೆ ಮೇಲಿನ ದಾಳಿ ಹಿಮ್ಮೆಟ್ಟಿಸಿ'

ಪ್ರಜಾವಾಣಿ ವಾರ್ತೆ



ಗೋಷ್ಠಿಯಲ್ಲಿ ರಂಗಕರ್ಮಿ ಪ್ರಸನ್ನ, ಪತ್ರಕರ್ತ ಬಿ.ಎಂ. ಹನೀಫ್, ಸಾಹಿತಿಗಳಾದ ಕೆ. ಮರುಳಸಿದ್ಧಪ್ಪ, ಬಂಜಗೆರೆ ಜಯಪ್ರಕಾಶ್ ಹಾಗೂ ಕೆ.ಶರೀಫಾ ಭಾಗವಹಿಸಿದ್ದರು

ಬೆಂಗಳೂರು: 'ಸೌಹಾರ್ದ ಪರಂಪರೆಯ ಮೇಲಿನ ದಾಳಿಯನ್ನು ಹಿಮ್ಮೆಟ್ಟಿಸಿ ಪ್ರಜಾಪ್ರಭುತ್ವ ಉಳಿಸಲು ಬಿಜೆಪಿ ಸೋಲಿಸಬೇಕು' ಎಂಬ ಸಂಕಲ್ಪವನ್ನು ಸೌಹಾರ್ದ ಕರ್ನಾಟಕ ಹಾಗೂ ಪ್ರಗತಿಪರ ಸಂಘಟನೆಗಳು ಕೈಗೊಂಡವು.

ಸಾಹಿತಿ ಕೆ.ಮರುಳಸಿದ್ಧಪ್ಪ ಅವರ ಅಧ್ಯಕ್ಷತೆಯಲ್ಲಿ ನಗರದಲ್ಲಿ ಸೋಮವಾರ ನಡೆದ 'ಸಾರ್ವತ್ರಿಕ ಚುನಾವಣೆ, ಸಾರ್ವಜನಿಕರ ಹೊಣೆ' ಕುರಿತ ರಾಜ್ಯಮಟ್ಟದ ಚಿಂತನಾಗೋಷ್ಠಿಯಲ್ಲಿ ಈ ಕುರಿತ ಚರ್ಚೆಗಳು ನಡೆದವು.

'ಐದು ವರ್ಷಗಳ ಅವಧಿಯಲ್ಲಿ ನಿರುದ್ಯೋಗ, ಬಡತನ, ಹಸಿವು, ದುಬಾರಿ ಶಿಕ್ಷಣ, ವಲಸೆ, ಜಾತೀಯತೆ, ಭ್ರಷ್ಟಾಚಾರ, ಅನೈತಿಕ ಹಗರಣಗಳು, ಆರ್ಥಿಕ ಕೊರತೆ ರಾಜ್ಯವನ್ನು ಬಹುವಾಗಿ ಕಾಡಿವೆ. ದುಡಿಯುವ ಜನರ ಮೇಲಿನ ದಬ್ಬಾಳಿಕೆಗಳು, ಮಹಿಳೆ, ಧಾರ್ಮಿಕ ಅಲ್ಪಸಂಖ್ಯಾತರ ಮೇಲಿನ ಆಕ್ರಮಣಗಳು ಹೊಸ ಸ್ವರೂಪ ಪಡೆದವು. ಶಾಂತಿ, ಸಾಮರಸ್ಯ, ಸೌಹಾರ್ದದ ನಾಡು ಮತೀಯ ದ್ವೇಷದ ಕಿಚ್ಚಿನಿಂದ ದಹಿಸಲ್ಪಟ್ಟಿತು. ಅದನ್ನು ಮತ್ತಷ್ಟು ವಿಸ್ತರಿಸುವ ತೀವ್ರ ಪ್ರಯತ್ನ ಗಳಿವೆ. ಅದನ್ನು ತಡೆಯಬೇಕಿದೆ' ಎಂದು ಗೋಷ್ಠಿಯಲ್ಲಿ ಒಮ್ಮತದ ಅಭಿಪ್ರಾಯಗಳು ವ್ಯಕ್ತವಾದವು.

ಮುಖ್ಯಾಂಶಗಳು

- ಸಾರ್ವತ್ರಿಕ ಚುನಾವಣೆ, ಸಾರ್ವಜನಿಕರ ಹೊಣೆ ಕುರಿತು ಚರ್ಚೆ
- 'ಜಾತಿ –ಜಾತಿಗಳ ನಡುವೆ ದ್ವೇಷ ಮೂಡಿಸಲು ಮೀಸಲಾತಿ ವರ್ಗೀಕರಣ'

ಚಿಂತಕ ಬಂಜಗೆರೆ ಜಯಪ್ರಕಾಶ್ ಮಾತನಾಡಿ, 'ಸಾಮಾಜಿಕ ನ್ಯಾಯದ ಆಶಯಗಳನ್ನು ಬಹಿರಂಗವಾಗಿಯೇ ಪ್ರಶ್ನಿಸಲಾಗುತ್ತಿದೆ. ಜಾತಿ– ಜಾತಿಗಳ ನಡುವೆ ಜಗಳ ಮತ್ತು ದ್ವೇಷಗಳನ್ನು ಹೊತ್ತಿಸಲು ಮೀಸಲಾತಿ ವರ್ಗೀಕರಣ ಮತ್ತು ಒಳ ಮೀಸಲಾತಿ ಪ್ರಸ್ತಾಪಿಸಲಾಗಿದೆ. ಬ್ರಾಹ್ಮಣ್ಯದ ಹಿಂದೂ ಸರ್ವಾಧಿಕಾರತ್ವ ಸ್ಥಾಪನೆಗೆ ಬಿಜೆಪಿ ಮುಂದಾಗಿದೆ. ಮೀಸಲಾತಿಯ ಆಶಯಗಳನ್ನೇ ಬುಡಮೇಲು ಮಾಡಲಾಗಿದೆ. ಸಮಸಮಾಜದ ನಿರ್ಮಾಣಕ್ಕಾಗಿ ಬಿಜೆಪಿಯನ್ನು ಹಿಮ್ಮೆಟ್ಟಿಸಬೇಕು' ಎಂದರು.

ಸಾಹಿತಿ ಮರುಳಸಿದ್ಧಪ್ಪ ಮಾತನಾಡಿ, 'ಎಲ್ಲಾ ಜನಪರ ಶಕ್ತಿಗಳು ಒಂದಾಗಿ ಕೋಮುವಾದಿಗಳನ್ನು ಅಧಿಕಾರದಿಂದ ದೂರ ಇಡಬೇಕು. ಬಿಜೆಪಿಯಿಂದ ಪ್ರಜಾಪ್ರಭುತ್ವಕ್ಕೆ ಒದಗಿರುವ ಅಪಾಯವನ್ನು ಜನರಿಗೆ ತಿಳಿಯಪಡಿಸಬೇಕು' ಎಂದರು.

ರಂಗಕರ್ಮಿ ಪ್ರಸನ್ನ ಮಾತನಾಡಿ, 'ಸಾಮರಸ್ಯದ ಪರಂಪರೆಯನ್ನು ಹಾಳುಗೆಡವಿ ಪುರೋಹಿತಶಾಹಿ ವ್ಯವಸ್ಥೆಯನ್ನು ಮತ್ತೆ ತರುಲು ಹೊರಟಿರುವ ಸರ್ಕಾರವನ್ನು ಕಿತ್ತೊಗೆಯಬೇಕು' ಎಂದರು.

ಕೋವಿಡ್: ನಗರದಲ್ಲಿ 120 ಹೊಸ ಪ್ರಕರಣ ಪತ್ತೆ

ಬೆಂಗಳೂರು: ನಗರದಲ್ಲಿ ಸೋಮವಾರ 120 ಹೊಸ ಕೋವಿಡ್–19 ಪ್ರಕರಣಗಳು ಪತ್ತೆಯಾಗಿವೆ. ಸಕ್ರಿಯ ಪ್ರಕರಣಗಳ ಸಂಖ್ಯೆ 971ಕ್ಕೆ ಏರಿಕೆಯಾಗಿದೆ. 223 ಮಂದಿ ಆಸ್ಪತ್ರೆಯಿಂದ ಬಿಡುಗಡೆಯಾಗಿದ್ದಾರೆ.

ಮೂರು ತಿಂಗಳ ಬಳಿಕ ನಗರದಲ್ಲಿ ಮತ್ತೆ ಕೋವಿಡ್ ಪ್ರಕರಣಗಳು ಏರಿಕೆ ಕಾಣಿಸುತ್ತಿದ್ದು, ಸೋಮವಾರ ಒಂದೇ ದಿನ ರಾಜ್ಯದಲ್ಲಿ 191 ಪ್ರಕರಣಗಳು ವರದಿಯಾಗಿವೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ಚಿಕ್ಕಮಗಳೂರಿನಲ್ಲಿ 15, ದಾವಣಗೆರೆಯಲ್ಲಿ 15, ಕಲಬುರಗಿಯಲ್ಲಿ 15, ಶಿವಮೊಗ್ಗದಲ್ಲಿ 9 ಮಂದಿಗೆ ಕೋವಿಡ್ ದೃಢಪಟ್ಟಿದೆ.

ಕೋವಿಡ್ ಸಕ್ರಿಯ ಪ್ರಕರಣ ಏರಿಕೆ: ಸಿದ್ಧತಾ ತಾಲೀಮು

ಪ್ರಜಾವಾಣಿ ವಾರ್ತೆ



ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಸಕ್ರಿಯ ಪ್ರಕರಣಗಳು ಮತ್ತೆ ಏರಿಕೆ ಕಂಡಿದ್ದು ಎಲ್ಲ ಸರ್ಕಾರಿ ಆಸ್ಪತ್ರೆ ಹಾಗೂ ಖಾಸಗಿ ಹೆಲ್ತ್‌ಕೇರ್ ಸೆಂಟರ್‌ಗಳಲ್ಲಿ ಸೋಮವಾರ ಕೋವಿಡ್ ಚಿಕಿತ್ಸೆಗೆ ಸಂಬಂಧಿಸಿದಂತೆ ಸಿದ್ಧತಾ ತಾಲೀಮು ನಡೆಸಲಾಯಿತು. ಮಂಗಳವಾರವೂ ಈ ತಾಲೀಮು ನಡೆಯಲಿದೆ.

ಕೇಂದ್ರ ಸರ್ಕಾರದ ಸೂಚನೆಯಂತೆ ರಾಜ್ಯದ ಆಸ್ಪತ್ರೆಗಳಲ್ಲಿನ ವ್ಯವಸ್ಥೆಗಳ ಬಗ್ಗೆ ಆರೋಗ್ಯ ಇಲಾಖೆ ಅಧಿಕಾರಿಗಳು ಪರಿಶೀಲನೆ ನಡೆಸಿದರು.

ಆಮ್ಲಜನಕ ಘಟಕಗಳ ಕಾರ್ಯ ನಿರ್ವಹಣೆ, ಹಾಸಿಗೆಗಳ ವ್ಯವಸ್ಥೆ, ವೈದ್ಯಕೀಯ ಸಿಬ್ಬಂದಿ ಲಭ್ಯತೆ ಸೇರಿ ಆಸ್ಪತ್ರೆಯಲ್ಲಿನ ವ್ಯವಸ್ಥೆಯ ಬಗ್ಗೆ ಪರಿಶೀಲಿಸಲಾಯಿತು.

ಚಿಕಿತ್ಸೆ, ಆರೈಕೆಯ ಬಗ್ಗೆ ವೈದ್ಯರು, ಶುಶ್ರೂಷಕರು ಹಾಗೂ ಸಿಬ್ಬಂದಿಯಲ್ಲಿ ಅರಿವು ಮೂಡಿಸಲಾಯಿತು. ಕೋವಿಡ್ ಚಿಕಿತ್ಸೆಗೆ ಮೀಸಲಿಟ್ಟ ಆಸ್ಪತ್ರೆಗಳಲ್ಲಿ ಆಂಬುಲೆನ್ಸ್ ವ್ಯವಸ್ಥೆ, ಪರೀಕ್ಷಾ ಸಾಮರ್ಥ್ಯ (ಆರ್‌ಟಿಪಿಸಿಆರ್ ಹಾಗೂ ರ‍್ಯಾಟ್ ಪರೀಕ್ಷೆ) ಔಷಧಿ, ಎನ್–95 ಮಾಸ್ಕ್, ಪಿಪಿಇ ಕಿಟ್, ಆಕ್ಸಿಜನ್ ಸಿಲಿಂಡರ್ ವ್ಯವಸ್ಥೆ ಪರಿಶೀಲನೆ ನಡೆಸಲಾಯಿತು.

ಬಿಜೆಪಿ ಪಟ್ಟಿಗೆ ಕಾಂಗ್ರೆಸ್ ಕುತೂಹಲ

ಬೆಂಗಳೂರು: ಎರಡು ಹಂತಗಳಲ್ಲಿ ಟಿಕೆಟ್ ಘೋಷಿಸಿದ 166 ವಿಧಾನಸಭಾ ಕ್ಷೇತ್ರಗಳ ಪೈಕಿ, ಕೆಲವು ಕ್ಷೇತ್ರಗಳಲ್ಲಿ ಬಂಡಾಯ ಶಮನಗೊಳಿಸುವುದೇ ಕಾಂಗ್ರೆಸ್‌ಗೆ ದೊಡ್ಡ ಸವಾಲಾಗಿದೆ. ಈ ಮಧ್ಯೆ, ಬಿಜೆಪಿಯಿಂದ ಟಿಕೆಟ್ ಸಿಗದ ಪ್ರಭಾವಿಗಳನ್ನು ಸೆಳೆಯಲು ರಾಜ್ಯ ಕಾಂಗ್ರೆಸ್ ನಾಯಕರು ಮುಂದಾಗಿದ್ದು, ಕಮಲಪಡೆ ಪಟ್ಟಿ ಹೊರಬೀಳುವ ನಿರೀಕ್ಷೆಯಲ್ಲಿದ್ದಾರೆ.

166 ಕ್ಷೇತ್ರಗಳಿಗೆ ಟಿಕೆಟ್ ಘೋಷಿಸಿರುವ ಕಾಂಗ್ರೆಸ್ ನಾಯಕರು, ಮೂರನೇ ಪಟ್ಟಿಯನ್ನೂ ಸಿದ್ಧಪಡಿಸಿದ್ದಾರೆ. ಈ ಪಟ್ಟಿ ಘೋಷಣೆಗೂ ಮೊದಲು ಅಂತಿಮ ಹಂತದ ಮಾತುಕತೆಗಾಗಿ ತುರ್ತು ಬರುವಂತೆ ಹೈಕಮಾಂಡ್ ಸೂಚನೆ ನೀಡಿದ ಬೆನ್ನಲ್ಲೇ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮತ್ತು ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ಸೋಮವಾರ ಮಧ್ಯಾಹ್ನ ದೆಹಲಿಗೆ ತೆರಳಿದರು.

ಪಕ್ಷದ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್, ರಾಜ್ಯ ಉಸ್ತುವಾರಿ ರಣದೀಪ್‌ಸಿಂಗ್ ಸುರ್ಜೇವಾಲಾ ಅವರ ಜತೆ ಈ ನಾಯಕರು ದೆಹಲಿಯಲ್ಲಿ ಸಭೆ ನಡೆಸಿದರು. ಇದಾದ ಬಳಿಕ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಈ ಎಲ್ಲ ಪ್ರಮುಖರು ಸಮಾಲೋಚನೆ ನಡೆಸಿದರು.

ಕಾಂಗ್ರೆಸ್ ಈಗಾಗಲೇ ಟಿಕೆಟ್ ಘೋಷಿಸಿರುವ ಚಿತ್ರದುರ್ಗ, ಕಲಘಟಗಿ, ಕಡೂರು, ಸುಳ್ಯ, ತುಮಕೂರು ಸೇರಿದಂತೆ ಕೆಲವು ಕ್ಷೇತ್ರಗಳಲ್ಲಿ ಅಭ್ಯರ್ಥಿಗಳ ವಿರುದ್ಧ ಬಂಡಾಯದ ಕಹಳೆ ಮೊಳಗಿದೆ. ಟಿಕೆಟ್ ಸಿಗಲಿಲ್ಲವೆಂದು ಮುನಿಸಿಕೊಂಡು ಪಕ್ಷೇತರರಾಗಿ ಕಣಕ್ಕಿಳಿಯಲು ನಿರ್ಧರಿಸಿರುವವರನ್ನು ಮತ್ತು ಪಕ್ಷಾಂತರದ ಎಚ್ಚರಿಕೆ ನೀಡಿರುವವರನ್ನು ಸಮಾಧಾನಪಡಿಸಲು 'ಕೈ' ನಾಯಕರು ಹರಸಾಹಸ ಪಡುತ್ತಿದ್ದಾರೆ.

124 ಅಭ್ಯರ್ಥಿಗಳ ಮೊದಲ ಪಟ್ಟಿಗೆ ದೊಡ್ಡಮಟ್ಟದ ವಿರೋಧ ವ್ಯಕ್ತವಾಗಿಲ್ಲ. ಆದರೆ, 42 ಅಭ್ಯರ್ಥಿಗಳ ಎರಡನೇ ಪಟ್ಟಿ ಕಾಂಗ್ರೆಸ್ ನಾಯಕರಿಗೆ ತಲೆನೋವು ತಂದಿಟ್ಟಿದೆ. ಎರಡನೇ ಪಟ್ಟಿಯ ಬಗ್ಗೆ ರಾಜ್ಯದ ಕೆಲವು ನಾಯಕರಿಗೂ ತೃಪ್ತಿ ತಂದಿಲ್ಲವೆನ್ನಲಾಗಿದೆ.

ಈ ಬೆಳವಣಿಗೆಗಳ ಮಧ್ಯೆ, ಕಲಘಟಗಿ ಕ್ಷೇತ್ರದ ಟಿಕೆಟ್ 'ಕೈ' ತಪ್ಪಿದ ನಾಗರಾಜ್ ಛಬ್ಬಿ ಬಿಜೆಪಿ ಸೇರಿದ್ದಾರೆ. ಟಿಕೆಟ್ ಸಿಗದ ಕಾರಣ ಸ್ವತಂತ್ರ ಅಭ್ಯರ್ಥಿಯಾಗಿ ಕಣಕ್ಕಿಳಿಯುವುದಾಗಿ ಕಡೂರು ಟಿಕೆಟ್ ಆಕಾಂಕ್ಷಿ ವೈ.ಎಸ್.ವಿ. ದತ್ತ ಘೋಷಿಸಿದ್ದಾರೆ. ಚಿತ್ರದುರ್ಗದಲ್ಲಿ ರಘು ಆಚಾರ್ ಅವರು ಜೆಡಿಎಸ್ ಸೇರಲು ಮುಂದಾಗಿದ್ದಾರೆ. ಇಲ್ಲಿ ಎಸ್.ಕೆ. ಬಸವರಾಜನ್ ದಂಪತಿಯಿಂದಲೂ ಕಾಂಗ್ರೆಸ್ ಬಂಡಾಯದ ಆತಂಕ ಎದುರಿಸುತ್ತಿದೆ.

ಈ ನಡುವೆ, ಬಿಜೆಪಿ ಟಿಕೆಟ್ ಘೋಷಣೆಯ ಬಳಿಕ ಬಂಡಾಯವೇಳುವವರ ಮೇಲೆ ಕಾಂಗ್ರೆಸ್ ನಾಯಕರ ಕಣ್ಣು ಬಿದ್ದಿದೆ. ಕೆಲವು ಹಾಲಿ ಶಾಸಕರಿಗೆ ಬಿಜೆಪಿಯಿಂದ ಟಿಕೆಟ್ ಕೈತಪ್ಪುವ ಸಾಧ್ಯತೆಯಿದೆ. ಹೀಗಾಗಿ, ಬಿಜೆಪಿ ಟಿಕೆಟ್ ಘೋಷಣೆಯ ಬಳಿಕ, ಟಿಕೆಟ್ ಸಿಗದ ಆ ಪಕ್ಷದ ಹಾಲಿ ಶಾಸಕರನ್ನು ಪಕ್ಷಕ್ಕೆ ಕರೆತರಲು ಕಾಂಗ್ರೆಸ್ ನಾಯಕರು ತೆರೆಮರೆಯಲ್ಲಿ ತಂತ್ರ ರೂಪಿಸುತ್ತಿದ್ದಾರೆ.

ಮೂಡಿಗೆರೆ ಶಾಸಕ ಎಂ.ಪಿ. ಕುಮಾರಸ್ವಾಮಿ, ಚಿತ್ರದುರ್ಗದಿಂದ ತಿಪ್ಪಾರೆಡ್ಡಿ ಸೇರಿದಂತೆ ಹಲವು ಶಾಸಕರಿಗೆ ಬಿಜೆಪಿ ಟಿಕೆಟ್ ಅನುಮಾನ ಎಂದು ಹೇಳಲಾಗುತ್ತಿದೆ. ಅಥಣಿ ಕ್ಷೇತ್ರದಿಂದ ಲಕ್ಷ್ಮಣ ಸವದಿ ಟಿಕೆಟ್ ಬಯಸಿದ್ದರೂ ಮಹೇಶ್ ಕುಮಟಳ್ಳಿ ಪರ ರಮೇಶ ಜಾರಕಿಹೊಳಿ ಲಾಬಿ ನಡೆಸಿದ್ದಾರೆ. ಈ ರೀತಿಯಲ್ಲಿ ಟಿಕೆಟ್ ಸಿಗದೇ ಇರುವವರನ್ನು ಸೆಳೆಯಲು ಕಾಂಗ್ರೆಸ್ ಮುಂದಾಗಿದೆ.

ಚಿತ್ರಾವಳಿ



ನಗರದ ಕೋಟೆ ಪ್ರೌಢಶಾಲೆಯ ಆವರಣದಲ್ಲಿ ಶ್ರೀರಾಮಸೇವಾ ಮಂಡಳಿ, ರಾಮನವಮಿ ಸೆಲಬ್ರೇಷನ್ಸ್ ಟ್ರಸ್ಟ್ ಆಯೋಜಿಸಿರುವ ಶ್ರೀರಾಮನವಮಿ ಸಂಗೀತೋತ್ಸವದಲ್ಲಿ ಸೋಮವಾರ ಬೆಂಗಳೂರು ಎಸ್. ಶಂಕರ್ ಮತ್ತು ತಂಡದವರು ಸಂಗೀತ ಕಛೇರಿ ಪ್ರಸ್ತುತಪಡಿಸಿದರು.



ಬೆಂಗಳೂರಿನಲ್ಲಿ ನಡೆದ 'ಭರತ ನಾಟ್ಯ ರಂಗಪ್ರವೇಶ' ಕಾರ್ಯಕ್ರಮದಲ್ಲಿ ಕಲಬುರಗಿ ಕರುಣೇಶ್ವರ ನಗರದ ಲಾವಣ್ಯ ಜಮಖಂಡಿ ಅವರು ಭರತನಾಟ್ಯ ಪ್ರದರ್ಶಿಸಿದರು.

ನಗರದಲ್ಲಿ ಇಂದು

ರಾಮೋತ್ಸವ ವಿಶೇಷ
30ನೇ ಶ್ರೀರಾಮನವಮಿ ಸಂಗೀತೋತ್ಸವ: ಭರತನಾಟ್ಯ ಪ್ರದರ್ಶನ: ಹರ್ಷಿತಾ ರಾಘವೇಂದ್ರ, 'ಕೃಷ್ಣ ಸಂಧಾನ' ಯಕ್ಷಗಾನ ತಾಳಮದ್ದಳೆ: ಹಿಮ್ಮೇಳ: ಪ್ರಶಾಂತ ರೈ ಮುಂಡಾಲುಗುತ್ತು, ಅಕ್ಷಯ ರಾವ್ ವಿಟ್ಲ, ಅಮೋಘ ಕುಂಟಿನಿ, ಮುಮ್ಮೇಳ: ಉಮಾಕಾಂತ್ ಭಟ್ ಕೆರೆಕೈ, ಉಜಿರೆ ಅಶೋಕ್ ಭಟ್, ಅಜಿತ ಕಾರಂತ, ಶಶಾಂಕ ಅರ್ನಾಡಿ, ಆಯೋಜನೆ ಹಾಗೂ ಸ್ಥಳ: ಶ್ರೀ ವಾಣಿ ಕಲಾ ಕೇಂದ್ರ, ಬಸವೇಶ್ವರ ನಗರ, ಸಂಜೆ 5.15ರಿಂದ

ಶ್ರೀರಾಮನವಮಿ ಸಂಗೀತೋತ್ಸವ: ಗಾಯನ: ಸಿಕ್ಕಿಲ್ ಗುರುಚರಣ್, ಪಿಟೀಲು: ಬಿ.ಕೆ. ರಘು, ಮೃದಂಗ: ರಂಜನಿ ವೆಂಕಟೇಶ್, ಖಂಜೀರಾ: ಗುರುಪ್ರಸನ್ನ, ಆಯೋಜನೆ: ಶೇಷಾದ್ರಿಪುರ ರಾಮಸೇವಾ ಸಮಿತಿ, ಸ್ಥಳ: ರಾಷ್ಟ್ರಕವಿ ಕುವೆಂಪು ರಂಗಮಂದಿರ, ಶೇಷಾದ್ರಿಪುರ ಕಾಲೇಜಿನ ಆವರಣ, ಶೇಷಾದ್ರಿಪುರ, ಸಂಜೆ 6.30

ಶ್ರೀರಾಮ ನವಮಿ ಸಂಗೀತೋತ್ಸವ: ಸಂಗೀತ ಕಛೇರಿ: ದಿಲ್ಲಿ ಶ್ರೀಧರ್ ಮತ್ತು ತಂಡ, ಸಂಗೀತ ಕಛೇರಿ: ಬಾಲು ಮಾಸ್ತಿ, ಅದಿತಿ ಕೃಷ್ಣಪ್ರಕಾಶ್, ಅನಿರುದ್ಧ ಭಟ್, ಸುಕನ್ಯ ರಾಂಗೋಪಾಲ್, ಆಯೋಜನೆ: ಶ್ರೀರಾಮಸೇವಾ ಮಂಡಳಿ, ರಾಮನವಮಿ ಸೆಲಬ್ರೇಷನ್ಸ್ ಟ್ರಸ್ಟ್, ಸ್ಥಳ: ಕೋಟೆ ಪ್ರೌಢಶಾಲಾ ಆವರಣ, ಚಾಮರಾಜಪೇಟೆ, ಸಂಜೆ 4.30ರಿಂದ



ಬಾಲು ಮಾಸ್ತಿ

ಮುತ್ಯಾಲಮ್ಮ ದೇವಿಯ ಹೂವಿನ ಕರಗ ಶಕ್ತ್ಯೋತ್ಸವ ಮತ್ತು ಪಾಲಕೋತ್ಸವ: ಬೆಳಿಗ್ಗೆ 11ಕ್ಕೆ ಈಶಾನ್ಯಕ್ಕೆ ಗಂಗಾಪೂಜೆ, ಮಧ್ಯರಾತ್ರಿ 1ಕ್ಕೆ ಹೂವಿನ ಕರಗ ಶಕ್ತ್ಯೋತ್ಸವ, ಆಯೋಜನೆ: ಮುತ್ಯಾಲಮ್ಮ ದೇವಿ, ಮಹೇಶ್ವರಮ್ಮ ದೇವಿ, ಕಾಟೇರಮ್ಮ ದೇವಿ ದೇವಸ್ಥಾನಗಳ ಅಭಿವೃದ್ಧಿ ಮಂಡಳಿ, ಸ್ಥಳ: ದೂಪನಹಳ್ಳಿ ಎಚ್.ಎ.ಎಲ್ 2ನೇ ಹಂತ, ಇಂದಿರಾನಗರ

ಪ್ರವಚನ ವಾಹಿನಿ: 'ಸಮಾಜಕ್ಕೆ ಬಸವೇಶ್ವರರ ಸಂದೇಶಗಳು' ಕುರಿತು ಪ್ರವಚನ: ಲಕ್ಷ್ಮೀನಾರಾಯಣ ಕೆ., ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್‌ನ ಸಾಂಸ್ಕೃತಿಕ ಮಂದಿರ, ಜಯನಗರ, ಸಂಜೆ 6.30

ಮುತ್ಯಾಲಮ್ಮ ದೇವಿಯ ರಥೋತ್ಸವ: ಪಲ್ಲಕ್ಕಿ ಉತ್ಸವ, ಆಯೋಜನೆ ಮತ್ತು ಸ್ಥಳ: ಮುತ್ಯಾಲಮ್ಮ ದೇವಿ ಟೆಂಪಲ್ ಟ್ರಸ್ಟ್, ಕೆ ಸ್ಟ್ರೀಟ್ ಸಪ್ಪಿಂಗ್ ರಸ್ತೆ, ಶಿವಾಜಿನಗರ, ಸಂಜೆ 7

ಮಾದರಿ ಕ್ಷೇತ್ರ

ಮುಂದಿನ ಶಾಸಕರಿಂದ ಜನರ ನಿರೀಕ್ಷೆಗಳೇನು?

ಮುಂದೆ ಆಯ್ಕೆಯಾಗುವ ಶಾಸಕರಿಂದ ಮತದಾರರು ಏನನ್ನು ನಿರೀಕ್ಷಿಸುತ್ತೀರಿ?
ನಿಮ್ಮ ಕ್ಷೇತ್ರ ಮಾದರಿಯಾಗಬೇಕಾದರೆ ಏನಾಗಬೇಕು? 50 ಪದದಲ್ಲಿ ಬರೆದು ಕಳುಹಿಸಿ.
ಕ್ಷೇತ್ರಗಳು: • ಹೆಬ್ಬಾಳ • ಸರ್ವಜ್ಞನಗರ ನಗರ • ರಾಜಾಜಿನಗರ
96060 38256



ಕೆ.ಆರ್.ಪುರ

ಕೆ.ಆರ್. ಪುರ ವಿಧಾನಸಭೆ ಕ್ಷೇತ್ರದಲ್ಲಿ ಬಿಬಿಎಂಪಿಗೆ ಹೊಸದಾಗಿ ಸೇರಿದ ಹಳ್ಳಿಗಳಲ್ಲಿ ಸಮಸ್ಯೆಗಳು ಹೆಚ್ಚಿವೆ. ಕಾವೇರಿ ನೀರು ರಸ್ತೆ, ಚರಂಡಿ ನಿರ್ಮಾಣದಂತಹ ಕಾರ್ಯಗಳು ಆಗಬೇಕು. ಆಟದ ಮೈದಾನದ ಉದ್ಯಾನಗಳ ಕೊರತೆ ಇದೆ ಎನ್ನುತ್ತಾರೆ ಜನರು.

ಸ್ವಾವಲಂಬಿ ಜೀವನಕ್ಕೆ ಅನುವು ಮಾಡಿಕೊಡಲಿ



ಹೊರವಲಯದಲ್ಲಿ ವ್ಯಾಪಿಸಿರುವ ಕ್ಷೇತ್ರಗಳಲ್ಲಿ ಒಂದಾದ ಕೆ.ಆರ್.ಪುರ ಕ್ಷೇತ್ರದಲ್ಲಿ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಮಹಿಳೆಯರಿಗಾಗಿ ಮಹಿಳಾ ಕಾಲೇಜು ಆರಂಭಿಸಬೇಕು. ಕೌಶಲ ತರಬೇತಿ ಟೈಲರಿಂಗ್, ಬ್ಯೂಟಿಶಿಯನ್ ತರಬೇತಿಗಳಿಗೆ ಆದ್ಯತೆ ನೀಡಿ ಸ್ವಾವಲಂಬಿ ಜೀವನ ನಡೆಸಲು ಅವಕಾಶ ನೀಡಬೇಕು. ಕೂಲಿ ಕಾರ್ಮಿಕರ ಮಕ್ಕಳಿಗೆ ಬಯಲು ಶಾಲೆ, ಟೆಂಟ್ ಶಾಲೆ ನಿರ್ಮಾಣ ಮಾಡಬೇಕು. ಕುಡಿಯುವ ನೀರು, ಶೌಚಾಲಯ, ರಸ್ತೆ ಚರಂಡಿ ನಿರ್ಮಾಣದಂತಹ ಕೆಲಸಗಳು ಆಗಬೇಕು. ಗಾರ್ಮೆಂಟ್ ಉದ್ದಿಮೆಗೆ ಅನುವು ನೀಡಿದರೆ ಮಹಿಳೆಯರಿಗೆ ಅನುಕೂಲ.

ಜ್ಯೋತಿ ಎನ್. ಮಂಜುನಾಥ್, ಕಲ್ಕೆರೆ

ಗುಣಮಟ್ಟದ ಶಿಕ್ಷಣಕ್ಕೆ ಸೌಲಭ್ಯ ಆದ್ಯತೆಯಾಗಲಿ



ಹೊರ ರಾಜ್ಯದ ಆಂಧ್ರ, ತಮಿಳುನಾಡು ಹೆಚ್ಚಿನ ಪ್ರಮಾಣದಲ್ಲಿರುವುದರಿಂದ ಜನರಿಗೆ ಸಂಚಾರ ಮಾಡಲು ಸ್ಯಾಟಲೈಟ್ ಬಸ್ ತುಂಬಾ ಅವಶ್ಯವಿದೆ. ಮೆಟ್ರೊ ವಿಸ್ತರಣೆ ಮಾಡಬೇಕಿದೆ. ರಾಜಕಾಲುವೆಗಳ ಶಾಶ್ವತ ಪರಿಹಾರ ಕಂಡುಕೊಳ್ಳುವ ವ್ಯವಸ್ಥೆ ಮಾಡಬೇಕು. ಸರ್ಕಾರಿ ಆಸ್ಪತ್ರೆಗೆ ಹೆಚ್ಚಿನ ಆದ್ಯತೆ ನೀಡಬೇಕು. ಕಿರಿದಾದ ರಸ್ತೆಗಳನ್ನು ವಿಸ್ತರಣೆ ಮಾಡಬೇಕು. ಸರ್ಕಾರಿ ಶಾಲೆಗಳಿಗೆ ಹೈಟೆಕ್ ಸ್ಪರ್ಶ ನೀಡಿ ಗುಣಮಟ್ಟದ ಶಿಕ್ಷಣಕ್ಕೆ ಒತ್ತು ನೀಡಬೇಕು. ಅಪರಾಧ ಚಟುವಟಿಕೆಗಳಿಗೆ ಕಡಿವಾಣ ಹಾಕಲು ಸಿ.ಸಿ.ಟಿ.ವಿ ಕ್ಯಾಮೆರಾ ಅಳವಡಿಸಬೇಕು.

ಕೆ.ಚನ್ನಬಸವ ಮರ್ಚಟ್ಹಾಳ್, ಕೆ.ಚನ್ನಸಂದ್ರ

ಕಿರಿದಾದ ರಸ್ತೆಗಳಿಗೆ ಶಾಶ್ವತ ಯೋಜನೆ ಅಗತ್ಯ



ಕೆ.ಆರ್.ಪುರ ಕ್ಷೇತ್ರದಲ್ಲಿ ಅಯ್ಯಪ್ಪನಗರ ಮೂಲಕ ಹೂಡಿ ಕಡೆಯ ಮಾರ್ಗ ತೀರ ಕಿರಿದಾಗಿದ್ದು ನಿತ್ಯ ಸಂಚಾರ ನರಕವೆನಿಸಿದೆ. ನಿತ್ಯ ಸಾವಿರಾರು ವಾಹನಗಳು ಸಾಗುತ್ತವೆ. ಐಟಿಪಿಎಲ್ ಕೈಗಾರಿಕಾ ಕ್ಷೇತ್ರವೂ ಇಲ್ಲಿದೆ. ಈ ರಸ್ತೆಯಲ್ಲಿ ತಾಸುಗಟ್ಟಲೆ ನಿಲ್ಲಬೇಕಿದೆ. ಅಯ್ಯಪ್ಪನಗರದವರೆಗೆ ಕೆ.ಆರ್.ಪುರ ಕ್ಷೇತ್ರವಿದ್ದು ಇನ್ನುಳಿದ್ದು ಮಹದೇವಪುರ ಕ್ಷೇತ್ರದ ವ್ಯಾಪ್ತಿ. ಬೆಳಿಗ್ಗೆ ಸಂಜೆ ವೇಳೆಯಲ್ಲಿ ಸಂಚರಿಸಲು ಈ ರಸ್ತೆಗೆ ತೆರಳಿದರೆ ಎರಡರಿಂದ ಮೂರು ಗಂಟೆಗಳ ಕಾಲ ಟ್ರಾಫಿಕ್ ನಲ್ಲಿ ಸಿಕ್ಕಿ ಹಾಕಿಕೊಳ್ಳಬೇಕಿದೆ. ಸುಗಮ ಸಂಚಾರಕ್ಕೆ ಶಾಶ್ವತ ಯೋಜನೆ ಅಗತ್ಯ.

ಗಂಗನಬೀಡು ವೆಂಕಟಸ್ವಾಮಿ, ಕೆ.ಆರ್.ಪುರ



ಬೆಂಗಳೂರು ದಕ್ಷಿಣ

ಅತಿಹೆಚ್ಚು ಮತದಾರರಿರುವ ಕ್ಷೇತ್ರ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಬೆಂಗಳೂರು ದಕ್ಷಿಣ ವಿಧಾನಸಭೆ ಕ್ಷೇತ್ರದಲ್ಲಿ ಸಮಸ್ಯೆಗಳಿಗೂ ಕೊರತೆ ಇಲ್ಲ. ಗ್ರಾಮ ಪಂಚಾಯಿತಿಗಳನ್ನೂ ಒಳಗೊಂಡಿರುವ ಕ್ಷೇತ್ರದಲ್ಲಿ ಮೂಲಸೌಕರ್ಯದ್ದೇ ಕೊರತೆ ಎನ್ನುತ್ತಾರೆ ಜನರು.

ದೊಡ್ಡ ಕ್ಷೇತ್ರದಲ್ಲಿ ಸಮಸ್ಯೆ ಅಧಿಕ



ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ ಅತಿ ಹೆಚ್ಚಿನ ಮತದಾರರಿದ್ದಾರೆ. ಉದ್ಯೋಗ ಅರಸಿ ಬಂದಿರುವ ಮಧ್ಯಮ ವರ್ಗದ ಜನಸಂಖ್ಯೆಯುಳ್ಳ ವಿಧಾನಸಭಾ ಕ್ಷೇತ್ರದಲ್ಲಿ ಮೊದಲನೆಯದ್ದಾಗಿದೆ. ಇಂತಹ ದೊಡ್ಡ ಕ್ಷೇತ್ರದಲ್ಲಿ ಉತ್ತಮವಾದ ವೈದ್ಯಕೀಯ ವ್ಯವಸ್ಥೆಯುಳ್ಳ ಸುಸಜ್ಜಿತವಾದ ಸರ್ಕಾರದ ಆಸ್ಪತ್ರೆಗಳು ಬೇಕಿದೆ. ವ್ಯಾಯಾಮದ ಉಪಕರಣಗಳಿರುವ ಆಟದ ಮೈದಾನಗಳ ಅಗತ್ಯವಿದೆ. ಉತ್ತಮವಾದ ಸರ್ಕಾರಿ ಉನ್ನತ ಶಿಕ್ಷಣ ಕಾಲೇಜುಗಳನ್ನು ನಿರ್ಮಿಸಬೇಕು. ಇಲ್ಲಿ ಮುಖ್ಯವಾಗಿ ಕುಡಿಯುವ ನೀರಿನ ಸಮಸ್ಯೆ ಹೆಚ್ಚಿದೆ.

ಈಶ್ವರ್ ಕೆ., ಉತ್ತರಹಳ್ಳಿ

ಎಲ್ಲ ಭಾಗಗಳಿಗೂ ಸೌಲಭ್ಯ ಬೇಕು



ಕ್ಷೇತ್ರದಲ್ಲಿ ಜಾತಿಯ ಆಧಾರದಲ್ಲಿ ಸೌಕರ್ಯಗ-ಳನ್ನು ಒದಗಿಸುವ ಅನಿಷ್ಟ ಪದ್ಧತಿ ತೊಲಗಬೇಕು. ಬೆಂಗಳೂರು ದಕ್ಷಿಣ ವಿಧಾನಸಭೆ ಕ್ಷೇತ್ರದಲ್ಲಿ ವಾರ್ಡ್ ಕಚೇರಿಗಳನ್ನು ಸಾರ್ವಜನಿಕರ ಅನುಕೂಲಕ್ಕೆ ಮೀಸಲಿಡಬೇಕು. ಗ್ರಂಥಾಲಯ, ಕನಿಷ್ಠ ಸಂಖ್ಯೆಯ ಹಾಸಿಗೆಗಳುಳ್ಳ ಆಸ್ಪತ್ರೆ, ಸಮುದಾಯ ಭವನಗಳನ್ನು ನಿರ್ಮಿಸಬೇಕು. ಕೆಲವು ವಾರ್ಡ್‌ಗಳಲ್ಲಿ ಈ ಕೆಲವು ಸೌಲಭ್ಯಗಳಿವೆ. ಆದರೆ ಯಲಚೇನಹಳ್ಳಿಯಲ್ಲಿ ಇಂತಹ ವ್ಯವಸ್ಥೆಗ-ಳನ್ನು ಕಲ್ಪಿಸಲಾಗಿಲ್ಲ. ಎಲ್ಲವರನ್ನೂ ಒಳಗೊಳ್ಳುವ, ಎಲ್ಲರಿಗೂ ಬೇಕಿರುವ ಕೆಲಸ ಎಲ್ಲ ಭಾಗಗಳಲ್ಲೂ ಆಗಬೇಕಿದೆ.

ಮಧು ಬಿಲ್ಲಿನಕೋಟೆ, ಯಲಚೇನಹಳ್ಳಿ

ಸಾಮರಸ್ಯ ಮೂಡಿಸುವ ಕೆಲಸವಾಗಲಿ



ಬೆಂಗಳೂರು ದಕ್ಷಿಣ ಕ್ಷೇತ್ರದಲ್ಲಿ ಸಾಮರಸ್ಯ ಮೂಡಬೇಕಿದೆ. ಅಧಿಕ ಜನಸಂಖ್ಯೆ ಇರುವ ಕ್ಷೇತ್ರದಲ್ಲಿ ಎಲ್ಲ ಧರ್ಮ ಹಾಗೂ ಜಾತಿಯ ಜನರಿದ್ದಾರೆ. ಈ ಎಲ್ಲ ವರ್ಗಗಳಲ್ಲೂ ವಸತಿರಹಿತರಿದ್ದಾರೆ. ಒಂದು ಸಮುದಾಯಕ್ಕೆ ವಸತಿ ಒದಗಿಸುವ ಬದಲು ಎಲ್ಲರಿಗೂ ಸೂರು ಸಿಗುವಂತೆ ಜಾತಿಧರ್ಮದ ಬಣ್ಣವಿಲ್ಲದೆ ಕೆಲಸ ಮಾಡುವ ಶಾಸಕರು ಬೇಕು. ಖಾಸಗಿಯವರಿಗೆ ಮಾತ್ರ ಎಲ್ಲ ಸೌಕರ್ಯ ನೀಡದೆ ಶೈಕ್ಷಣಿಕವಾಗಿ ಸರ್ಕಾರಿ ಶಾಲೆಗಳಲ್ಲಿ ಎಲ್ಲರಿಗೂ ಸೌಲಭ್ಯ ಒದಗಿಸಲು ಅತ್ಯಾಧುನಿಕ ಶಾಲೆಗಳನ್ನು ನಿರ್ಮಿಸಬೇಕು.


ಎಂ.ಕೆ. ಉಮೇಶ್, ಮಾರುತಿನಗರ, ಗುಬ್ಬಲಾಳ



ಗಾಂಧಿನಗರ

ಗಾಂಧಿನಗರ ವಿಧಾನಸಭೆ ಕ್ಷೇತ್ರದಲ್ಲಿ ಅಭಿವೃದ್ಧಿ ಕಾರ್ಯಗಳು ಕೆಲವು ಭಾಗಗಳಿಗೆ ಸೀಮಿತ. ಗುಣಮಟ್ಟದ ಶಿಕ್ಷಣ ನೀಡಲು ಅತ್ಯಾಧುನಿಕ ಸೌಕರ್ಯಗಳನ್ನು ಕಲ್ಪಿಸಬೇಕು. ನಾಗರಿಕರ ಸುರಕ್ಷತೆ ಬಗ್ಗೆ ಭವಿಷ್ಯದ ಶಾಸಕ ಹೆಚ್ಚು ಒತ್ತು ನೀಡಬೇಕು ಎಂಬುದು ನಾಗರಿಕರ ಆಶಯ.

ಎಲ್ಲರಿಗೂ ಮೂಲಸೌಕರ್ಯ ತಲುಪಲಿ



ಗಾಂಧಿನಗರ ವಿಧಾನಸಭೆ ಕ್ಷೇತ್ರದಲ್ಲಿ ಎಲ್ಲ ರೀತಿಯ ಮೂಲ ಸೌಕರ್ಯ ಎಲ್ಲ ವರ್ಗದ ಜನರಿಗೆ ತಲುಪಬೇಕಿದೆ. ಒಂದು ಭಾಗದಲ್ಲಿ ಅಭಿವೃದ್ಧಿಯಾಗಿ ಮತ್ತೊಂದು ಭಾಗದಲ್ಲಿ ಯಾವುದೇ ರೀತಿಯ ಸೌಲಭ್ಯಗಳು ಸಿಗದಂತಾಗಿದೆ. ಸೌಕರ್ಯಗಳು ಎಲ್ಲ ವರ್ಗದ ಜನರ ಕೈಗೆಟಕುವಂತೆ ಮಾಡಬೇಕಿದೆ. ಕೆಲವು ಭಾಗಗಳಲ್ಲಿ ಅಭಿವೃದ್ಧಿಗಳು ಹೈಟೆಕ್ ಜನರಿಗೆ ಮಾತ್ರ ಮಾಡಿದಂತಿದೆ. ಇನ್ನು ಹಲವು ಭಾಗದಲ್ಲಿ ಬೇಕಿರುವ ಮೂಲ ಸೌಕರ್ಯಗಳೆಂದರೆ ನೀರು, ಚರಂಡಿ, ರಸ್ತೆ ಅವರನ್ನು ತಲುಪುತ್ತಲೇ ಇಲ್ಲ. ಇವುಗಳಿಗೆ ಶಾಶ್ವತ ಪರಿಹಾರ ಕಲ್ಪಿಸುವ ಪ್ರತಿನಿಧಿ ಬೇಕು.

ಜಿ. ಸುಭಾಷ್ ಬಾಬು, ಶೇಷಾದ್ರಿಪುರ

ನಿರೀಕ್ಷೆ ಬದ್ಧವಾಗಿರುವ ಶಾಸಕ ಬೇಕು



ಶೇಷಾದ್ರಿಪುರದಲ್ಲಿ ಹಳೆಯ ಮರಗಳನ್ನು ಅಂದರೆ ಒಣಗಿರುವ ರೆಂಬೆ–ಕೊಂಬೆಗಳನ್ನು ಪ್ರತಿ ತಿಂಗಳೂ ಕತ್ತರಿಸಬೇಕು. ಈ ಬಗ್ಗೆ ಹಲವು ಮನವಿ ಮಾಡಿದ್ದರೂ, ಒಂದು ಬಾರಿ ಸ್ಪಂದನೆಗೆ ಮುಗಿದುಹೋಗುತ್ತದೆ. ನಂತರ ಅದೇ ಅವಘಡ. ಗಿಡ–ಮರಗಳನ್ನು ರಕ್ಷಿಸಬೇಕು. ಅದೇ ಸಮಯದಲ್ಲಿ ನಾಗರಿಕರ ರಕ್ಷಣೆಯನ್ನೂ ನೋಡಿಕೊಳ್ಳಬೇಕಿದೆ. ನಮ್ಮ ನಿರೀಕ್ಷೆಯನ್ನು ಪೂರೈಸುವ ನಿಟ್ಟಿನಲ್ಲಿ ಅದಕ್ಕೆ ಬದ್ಧವಾಗಿರುವ ಶಾಸಕನನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಹಿರಿಯ ನಾಗರಿಕರ ವೇದಿಕೆ ಮತ್ತು ಸಾರ್ವಜನಿಕ ಗ್ರಂಥಾಲಯ ನಿರ್ಮಿಸಬೇಕು.

ಎಸ್.ಆರ್. ಚಂದ್ರಶೇಖರ್, ಗಾಂಧಿನಗರ

ಗುಣಮಟ್ಟದ ಶಿಕ್ಷಣಕ್ಕೆ ಒತ್ತು ನೀಡಲಿ



ಗಾಂಧಿನಗರ ವಿಧಾನಸಭೆ ಕ್ಷೇತ್ರದ ಪ್ರತಿ ವಾರ್ಡ್‌ನಲ್ಲಿ ಸುಸಜ್ಜಿತ ಪ್ರೌಢ ಶಾಲೆಗಳನ್ನು ನಿರ್ಮಿಸಬೇಕು. ಅತ್ಯಾಧುನಿಕ ಸೌಲಭ್ಯಗಳನ್ನು ಕಲ್ಪಿಸಿ, ಗುಣಮಟ್ಟದೊಂ-ದಿಗೆ ಉಚಿತ ಶಿಕ್ಷಣ ನೀಡಬೇಕು. ಸರ್ಕಾರಿ ಶಾಲೆಗಳಲ್ಲಿ ಉತ್ತಮ ಸ್ವಚ್ಛತೆ ಕಾಪಾಡಿ ಒಳ್ಳೆಯ ವಾತಾವರಣ ನಿರ್ಮಿಸಿದರೆ ವಿಧ್ಯಾರ್ಥಿಗ-ಳಿಗೆ ಓದುವುದಕ್ಕೆ ಹೆಚ್ಚು ಆಸಕ್ತಿ ಬರುತ್ತದೆ. ಶೇಷಾದ್ರಿಪುರ ಬಳಿಯ ನಟರಾಜ್ ಟಾಕೀಸ್ ಬಳಿ ಬೆಳಿಗ್ಗೆ ಸಮಯದಲ್ಲಿ ಶಾಲೆ ಹೋಗುವ ಮಕ್ಕಳು ರಸ್ತೆ ದಾಟಲು ಪರದಾಡುತ್ತಾರೆ. ಇಲ್ಲಿ ಪೊಲೀಸ್ ವ್ಯವಸ್ಥೆ ಹೆಚ್ಚಿಸಬೇಕು. ಸಿಗ್ನಲ್‌ಗಳ ಸೌಲಭ್ಯ ಒದಗಿಸಬೇಕಿದೆ.

ಜಿ.ಟಿ. ಬಾಲಾಜಿ, ಗಾಂಧಿನಗರ



ಸೆಲೆಬ್ರಿಟಿ ಮಾತು

ಶೇ 100 ಮತದಾನವೇ ಪ್ರಜಾಪ್ರಭುತ್ವದ ಮೊದಲ ಗೆಲುವು

ವಿ.ನಾಗೇಂದ್ರ ಪ್ರಸಾದ್, ಚಿತ್ರ ಸಾಹಿತಿ

ಒಳ್ಳೆಯ ಆಡಳಿತ ಪಕ್ಷ ಮತ್ತು ವಿರೋಧ ಪಕ್ಷಗಳು, ಸದೃಢ ರಾಷ್ಟ್ರ ಮತ್ತು ರಾಜ್ಯ ನಿರ್ಮಾಣಕ್ಕೆ ಅತ್ಯವಶ್ಯ. ಸದೃಢ ಸಮಾಜಕ್ಕೆ ನಮ್ಮ ಮತ ಅತ್ಯಮೂಲ್ಯ. ಒಂದು ವ್ಯವಸ್ಥೆ ಸರಿಯಾಗಿ ನಡೆಯಬೇಕಿದ್ದರೆ ಪರ ಮತ್ತು ವಿರೋಧ ಎರಡೂ ಇರಬೇಕು. ಸೋಲು ಮತ್ತು ಗೆಲುವು ಎರಡೂ ಸಾಮಾನ್ಯ. ನಾವು ಮತ ಹಾಕಿದರೂ, ಹಾಕದಿದ್ದರೂ ಯಾರೋ ಒಬ್ಬರು ಆಯ್ಕೆಯಾಗುತ್ತಾರೆ ಎಂಬ ತಾತ್ಸಾರ ಬೇಡ. ಶೇ 100 ಮತದಾನವೇ ಪ್ರಜಾಪ್ರಭುತ್ವದ ಮೊದಲ ಗೆಲುವು. ಆ ನಿಟ್ಟಿನಲ್ಲಿ ಮೇ 10ರಂದು ಎಲ್ಲರೂ ಮತ ಚಲಾಯಿಸಬೇಕು. ಸಂಪೂರ್ಣ ಮತದಾನವೇ ನಮ್ಮ ಗುರಿಯಾಬೇಕು. ಒಂದು ದಿನ ರಜೆ ಸಿಕ್ಕಿದೆಯೆಂದು ಮತ ಚಲಾಯಿಸದೆ ಕೂರಬೇಡಿ. ಪ್ರವಾಸ ಹಾಗೂ ನೆಂಟರ ಮನೆಗೆ ಹೋಗದೇ ಮತಗಟ್ಟೆಗೆ ತೆರಳಿ ಹಕ್ಕು ಚಲಾಯಿಸಿ. ಮತದಾನ ನಮ್ಮ ಕರ್ತವ್ಯವೆಂಬುದನ್ನು ಮರೆಯಬಾರದು.



ಟಿಕೆಟ್ ಹಂಚಿಕೆಯಲ್ಲಿ ಭೋವಿ ಸಮುದಾಯವನ್ನು ಕಾಂಗ್ರೆಸ್ ಕಡೆಗಣಿಸಿದೆ ಎಂದು ಆರೋಪಿಸಿ ಭೋವಿ ಸಮಾಜದಿಂದ ಪಂಜಿನ ಮೆರವಣಿಗೆ ನಡೆಸಲಾಯಿತು.

‘ಕಾಂಗ್ರೆಸ್‌ನಿಂದ ಭೋವಿ ಸಮಾಜ ಕಡೆಗಣನೆ’

ಪ್ರಜಾವಾಣಿ ವಾರ್ತೆ

ನೆಲಮಂಗಲ: ಕಾಂಗ್ರೆಸ್ ಭೋವಿ ಸಮುದಾಯಕ್ಕೆ ಕೇವಲ ಎರಡೇ ಟಿಕೆಟ್ ನೀಡಿದೆ. ಕಾಂಗ್ರೆಸ್‌ಗೆ ಬೆನ್ನುಲುಬಾಗಿ ನಿಂತಿರುವ ಭೋವಿ ಸಮುದಾಯವನ್ನು ಕಡೆಗಣಿಸಿದೆ ಎಂದು ಭೋವಿ ಸಮಾಜದ ರಾಷ್ಟ್ರೀಯ ಅಧ್ಯಕ್ಷ ಮಾಕಳಿ ಎಚ್.ರವಿ ಬೇಸರ ವ್ಯಕ್ತಪಡಿಸಿದರು.

ಭೋವಿ ಸಮಾಜದ ವತಿಯಿಂದ ನಡೆದ ಪಂಜಿನ ಮೆರವಣಿಗೆಯಲ್ಲಿ ಅವರು ಮಾತನಾಡಿದರು.

ನೆಲಮಂಗಲ ವಿಧಾನಸಭಾ ಕ್ಷೇತ್ರಕ್ಕೆ ಭೋವಿ ಸಮುದಾಯದ ಉಮಾದೇವಿ ಅವರಿಗೆ ಟಿಕೆಟ್ ನೀಡದೇ ದ್ರೋಹ ಎಸಗಿದೆ. ಹಿಂದಿನ ಚುನಾವಣೆಗಳಲ್ಲಿ ಕಾಂಗ್ರೆಸ್ 6 ಕ್ಷೇತ್ರಗಳಲ್ಲಿ ಭೋವಿ ಸಮುದಾಯಕ್ಕೆ ಟಿಕೆಟ್ ನೀಡುತ್ತಿತ್ತು. ಅದರಂತೆ ಟಿಕೆಟ್ ನೀಡಬೇಕು ಎಂದು ಒತ್ತಾಯಿಸಿದರು.

ರಾಜ್ಯ ಭೋವಿ ಸಂಘದ ಜಂಟಿ ಕಾರ್ಯದರ್ಶಿ ವಿ.ರಾಜಣ್ಣ ಮಾತನಾಡಿ, ಪುಲಿಕೇಶಿನಗರದ ಹಾಲಿ ಶಾಸಕ ಅಖಂಡ ಶ್ರೀನಿವಾಸಮೂರ್ತಿ ಅವರಿಗೆ ಇನ್ನೂ ಟಿಕೆಟ್ ಘೋಷಣೆ ಮಾಡದೇ ನಮ್ಮನ್ನು ಆತಂಕಕ್ಕೆ ದೂಡಿದೆ. ಒಂದು ವೇಳೆ ಟಿಕೆಟ್ ಸಿಗದಿದ್ದರೆ 20ರಿಂದ 30 ಕ್ಷೇತ್ರಗಳಲ್ಲಿ ನಿರ್ಣಾಯಕವಾಗಿರುವ ಭೋವಿ ಸಮಾಜ ಕಾಂಗ್ರೆಸ್ ವಿರುದ್ಧ ಕೆಲಸ ಮಾಡಲಿದೆ ಎಂದರು.

ಪ್ರವಾಸಿ ಮಂದಿರದಿಂದ ತಾಲ್ಲೂಕು ಕಚೇರಿವರೆಗೆ ಪಂಜಿನ ಮೆರವಣಿಗೆ ಮಾಡಲಾಯಿತು. ಕಾಂಗ್ರೆಸ್ ಯುವ ಮುಖಂಡ ವಿ.ಗೋವರ್ಧನ್ (ಗೋಪಿ), ಸಾಹಿತಿ ಚೌಡಯ್ಯ, ತಾಲ್ಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ಎಚ್.ಜಯಶಂಕರ್, ಮುಖಂಡರಾದ ಪೆದ್ದಣ್ಣ, ನಾಗೇಶ್, ಪ್ರಶಾಂತ್, ಕುಮಾರಯ್ಯ, ವೆಂಕಟರಾಜು, ನಾಗರಾಜು, ಮುನಿವೆಂಕಟಪ್ಪ ಇದ್ದರು.



ಮಹಾಲಕ್ಷ್ಮಿ ಲೇಔಟ್ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ನಂದಿನಿ ಲೇಔಟ್ ಶ್ರೀನಿವಾಸ್ ನಗರದಲ್ಲಿ ಸಚಿವ ಕೆ.ಗೋಪಾಲಯ್ಯ ಸೋಮವಾರ ಬೂತ್ ಮಟ್ಟದ ಸಭೆ ನಡೆಸಿದರು

ಹಾಲಿ ಶಾಸಕರಿಗೆ ಹೊಸ ಕ್ಷೇತ್ರ: ವರಿಷ್ಠರ ಲೆಕ್ಕಾಚಾರ

ಬಿಜೆಪಿಗೆ ಕಗ್ಗಂಟಾದ ಪ್ರಬಲ ಕ್ಷೇತ್ರ

• ಆರ್. ಮಂಜುನಾಥ್

ಮುಖ್ಯಾಂಶಗಳು

- ಕಾಂಗ್ರೆಸ್ ನಾಯಕರ ವಿರುದ್ಧ ಹಾಲಿ ಶಾಸಕರನ್ನೇ ಸ್ಪರ್ಧೆಗೆ ಇಳಿಸುವ ಆಲೋಚನೆ
- ಪದ್ಮನಾಭನಗರ: ಯುವ ಮುಖಂಡರಿಗೆ ಟಿಕೆಟ್
- ಜಯನಗರದಲ್ಲಿ ರವಿ ಸುಬ್ರಮಣ್ಯ ಕಣಕ್ಕಿಳಿಯುವ ಸಾಧ್ಯತೆ

ಬೆಂಗಳೂರು: ರಾಜಧಾನಿ ಬೆಂಗಳೂರಿನಲ್ಲಿ ಈಗ ಪ್ರತಿನಿಧಿಸು-ತ್ತಿರುವ 16 ಕ್ಷೇತ್ರಗಳ ಜತೆ ಮತ್ತಷ್ಟು ಕ್ಷೇತ್ರಗಳಲ್ಲಿ ಗೆಲುವು ಸಾಧಿಸಬೇಕೆಂಬ ತಂತ್ರಗಾರಿಕೆ ಹೆಣೆಯುತ್ತಿರುವ ಬಿಜೆಪಿಗೆ, ಪ್ರಬಲ ಕ್ಷೇತ್ರಗಳಲ್ಲಿ ಅಭ್ಯರ್ಥಿಗಳನ್ನು ಅಂತಿಮಗೊಳಿಸುವುದೇ ಕಗ್ಗಂಟಾಗಿದೆ.

ಕಾಂಗ್ರೆಸ್‌ನ ಪ್ರಮುಖ ನಾಯಕರಾದ ರಾಮಲಿಂಗಾರೆಡ್ಡಿ, ಕೃಷ್ಣ ಬೈರೇಗೌಡ, ದಿನೇಶ್ ಗುಂಡೂರಾವ್, ಕೆ.ಜೆ. ಜಾರ್ಜ್ ಅವರ ವಿರುದ್ಧ ಪ್ರಬಲ ಅಭ್ಯರ್ಥಿಗಳನ್ನು ಕಣಕ್ಕಿಳಿಸಬೇಕು ಎಂದು ದೆಹಲಿ ವರಿಷ್ಠರಿಗೆ ಇಲ್ಲಿನ ಬಿಜೆಪಿ ನಾಯಕರೇ ಸಲಹೆ ನೀಡಿದ್ದರು. ಅದರಂತೆಯೇ ಯೋಜನೆಯನ್ನೂ ರೂಪಿಸಲಾಗಿತ್ತು.

ಆದರೆ, ಅಭ್ಯರ್ಥಿಗಳನ್ನು ಅಂತಿಮಗೊಳಿಸುವ ಸಂದರ್ಭದಲ್ಲಿ ಹಲವಾರು ಲೆಕ್ಕಾಚಾರಗಳು, ಕ್ಷೇತ್ರ ಚಿತ್ರಣ ವರಿಷ್ಠರ ಗಮನಕ್ಕೆ ಬಂದಿದೆ. ಮೂರ್ನಾಲ್ಕು ಬಾರಿ ಒಂದೇ ಕ್ಷೇತ್ರದಲ್ಲಿ ಗೆದ್ದವರು ಹಾಗೂ ಬಿಜೆಪಿಯಿಂದ ಕ್ಷೇತ್ರ ಕೈತಪ್ಪುವುದಿಲ್ಲ ಎಂಬ ಖಾತರಿ ಇರುವ ಕ್ಷೇತ್ರದ ಹಾಲಿ ಶಾಸಕರನ್ನೇ ಕಾಂಗ್ರೆಸ್ ಪ್ರಮುಖ ನಾಯಕರ ವಿರುದ್ಧ ಸ್ಪರ್ಧೆಗೆ ಇಳಿಸುವ ಆಲೋಚನೆಗಳೂ ವರಿಷ್ಠರಲ್ಲಿ ಮೂಡಿದೆ.

ಹೀಗಾಗಿ, ಪದ್ಮನಾಭನಗರ ಬಿಜೆಪಿಯ ಸದೃಢ ತಾಣವಾಗಿದ್ದು, ಇಲ್ಲಿ ಯುವ ಮುಖಂಡರಿಗೆ ಟಿಕೆಟ್ ನೀಡಲು ಯೋಚಿಸಲಾಗಿದೆ. ಪ್ರಬಲ ನಾಯಕರಾದ ಆರ್. ಅಶೋಕ ಅವರನ್ನು ಬಿಟಿಎಂ ಲೇಔಟ್‌ನಲ್ಲಿ ರಾಮಲಿಂಗಾರೆಡ್ಡಿ ಅಥವಾ ಬ್ಯಾಟರಾಯನಪುರದಲ್ಲಿ ಕೃಷ್ಣ ಬೈರೇಗೌಡರ ವಿರುದ್ಧ ಕಣಕ್ಕಿಳಿಸುವ ಚರ್ಚೆಗಳಾಗಿವೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

ಬಸವನಗುಡಿ ವಿಧಾನಸಭೆ ಕ್ಷೇತ್ರವೂ ಬಿಜೆಪಿಯ ನೆಲೆಯಾಗಿದ್ದು, ರವಿ ಸುಬ್ರಮಣ್ಯ ಅವರನ್ನು ಜಯನಗರದಲ್ಲಿ ಕಣಕ್ಕಿಳಿಸಬಹುದು. ಬೊಮ್ಮನಹಳ್ಳಿಯ ಸತೀಶ್ ರೆಡ್ಡಿ ಅವರನ್ನು ಬಿಟಿಎಂ ಲೇಔಟ್ ಅಥವಾ ಸರ್ವಜ್ಞನಗರದಲ್ಲಿ ಸ್ಪರ್ಧಿಸುವಂತೆ ಮಾಡಬಹುದು. ಗಾಂಧಿನಗರದಲ್ಲಿ ದಿನೇಶ್ ಗುಂಡೂರಾವ್ ವಿರುದ್ಧ ಪ್ರಬಲರೇ ಇರಬೇಕು ಎಂಬ ಬಗ್ಗೆ ಹಿರಿಯರು ಚರ್ಚೆ ಮಾಡಿದ್ದಾರೆ ಎನ್ನಲಾಗಿದೆ.

ಬಿಜೆಪಿ ಪ್ರಬಲವಾಗಿರುವ ಕ್ಷೇತ್ರಗಳಿಂದ ಅಲ್ಲಿನ ಶಾಸಕರನ್ನು ಅಕ್ಕಪಕ್ಕದ ಕ್ಷೇತ್ರಗಳಲ್ಲಿ ಸ್ಪರ್ಧಿಸುವಂತೆ ಮಾಡಿ ಹೆಚ್ಚಿನ ಸ್ಥಾನಗಳನ್ನು ಗಳಿಸುವ ಗುರಿ ಬಿಜೆಪಿ ನಾಯಕರದ್ದಾಗಿದೆ. ಹೀಗಾಗಿಯೇ ಹಾಲಿ ಶಾಸಕರಿಗೆ ಹೊಸ ಕ್ಷೇತ್ರಗಳಲ್ಲಿ ಕಾಂಗ್ರೆಸ್‌ನ ಪ್ರಬಲ ನಾಯಕರ ವಿರುದ್ಧ ಕಣಕ್ಕಿಳಿಸಲು ಲೆಕ್ಕಾಚಾರ ನಡೆಯುತ್ತಿದೆ. ಕೆಲವು ಹಾಲಿ ಶಾಸಕರಿಗೆ ಹೊಸ ಕ್ಷೇತ್ರಗಳ ನೀಡಬೇಕಾಗಿರುವುದರಿಂದ ಹೆಚ್ಚಿನ ಸಮಯ ಹಿಡಿಯುತ್ತಿದೆ ಎಂದು ಹೇಳಲಾಗಿದೆ.

ಇನ್ನು, ಚಾಮರಾಜಪೇಟೆ, ಶಿವಾಜಿನಗರ, ಶಾಂತಿನಗರ, ಪುಲಕೇಶಿನಗರ, ವಿಜಯನಗರ ವಿಧಾನಸಭೆ ಕ್ಷೇತ್ರಗಳಲ್ಲಿ ಯುವ ಮುಖಂಡರಿಗೆ ಆದ್ಯತೆ ನೀಡಿ, ಪಕ್ಷ ಹಾಗೂ ನಗರದ ಹಿರಿಯ ನಾಯಕರ ಮುಖಂಡತ್ವದಲ್ಲಿ ಪ್ರಬಲ ಹೋರಾಟ ನೀಡಲು ಆಲೋಚಿಸಲಾಗಿದೆ ಎಂದು ಪಕ್ಷದ ಮುಖಂಡರು ತಿಳಿಸಿದರು.

‘ವಲಯವಾರು, ಜಿಲ್ಲಾವಾರು ಪ್ರಣಾಳಿಕೆ’

ಪ್ರಜಾವಾಣಿ ವಾರ್ತೆ



ಡಾ.ಕೆ. ಸುಧಾಕರ್

ಬೆಂಗಳೂರು: ಗ್ರೇಟರ್ ಬೆಂಗಳೂರು, ಕರಾವಳಿ ಪ್ರದೇಶ, ಕಿತ್ತೂರು ಕರ್ನಾಟಕ, ಕಲ್ಯಾಣ ಕರ್ನಾಟಕ, ಹಳೆ ಮೈಸೂರು ಹೀಗೆ ವಲಯವಾರು, ಜಿಲ್ಲಾವಾರು ಪ್ರಣಾಳಿಕೆ ಮಾಡಲು ಅವಕಾಶವಿದೆ ಎಂದು ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ತಿಳಿಸಿದರು.

ಪಕ್ಷದ ಕಚೇರಿಯಲ್ಲಿ ಸೋಮವಾರ ಪ್ರಣಾಳಿಕೆ ಅಭಿಯಾನ ಸಲಹಾ ಸಮಿತಿ ಸಭೆಯ ಬಳಿಕ ಅವರು ಸುದ್ದಿಗಾರರ ಜತೆ ಮಾತನಾಡಿದರು.

‘ರಾಜ್ಯದ ಮುಂದಿನ ಐದು ವರ್ಷಗಳ ಅಭಿವೃದ್ಧಿಯ ನೀಲ ನಕಾಶೆಯೇ ಪಕ್ಷದ ಪ್ರಣಾಳಿಕೆಯಾಗಿರ-ಲಿದ್ದು, ಏಳು ದಿನಗಳ ಒಳಗೆ ಬಿಡುಗಡೆ ಮಾಡಲಾಗುವುದು. ನಮ್ಮ ಪ್ರಣಾಳಿಕೆ ಹುಸಿ ಘೋಷಣೆಗಳಿಗೆ ಸೀಮಿತವಾಗಿರು-ವುದಿಲ್ಲ. ಯಾವುದು ಜಾರಿ ಮಾಡಲು ಸಾಧ್ಯವೋ ಅವುಗಳನ್ನು ಮಾತ್ರ ಪ್ರಕಟಿ-ಸುತ್ತೇವೆ’ ಎಂದರು.

‘ಪ್ರಣಾಳಿಕೆ ಸಮಿತಿಯಲ್ಲಿ ವಿಷಯವಾರು ತಜ್ಞರು ಸೇರಿ ಒಟ್ಟು 32 ಪರಿಣಿತರು ಇದ್ದಾರೆ. ಇವರು ಜೊತೆ ಸಮಾಲೋಚನೆ ನಡೆಸಿ, ಕರ್ನಾಟಕದ ಪ್ರಣಾಳಿಕೆ ಇಡೀ ದೇಶಕ್ಕೇ ಮಾದರಿ ಮತ್ತು ಸಮಗ್ರವಾಗಿ ರೂಪಿಸಲಾಗುವುದು. ಹೊಸತನ ಮತ್ತು ಬದುಕು ಕಟ್ಟಿಕೊಡುವ ನೈಜತೆಯಿಂದ ಕೂಡಿರುವ ಪ್ರಣಾಳಿಕೆ ಇದಾಗಿರಲಿದೆ’ ಎಂದರು. ಪ್ರಣಾಳಿ-ಕೆಯಲ್ಲಿ ರಾಮರಾಜ್ಯದ ಪರಿಕಲ್ಪನೆ ಇರಲಿದ್ದು, ರಾಜ್ಯದ ಆರ್ಥಿಕ ಸ್ಥಿತಿ ಮತ್ತು ಶಕ್ತಿಯನ್ನು ಆಧರಿಸಿ ಅಭಿವೃದ್ಧಿಗೆ ಪೂರಕವಾಗಿರಲಿದೆ. ಪ್ರತಿ ಜಿಲ್ಲೆ, ತಾಲ್ಲೂಕುಗಳಲ್ಲಿ ಸಲಹಾ ಪೆಟ್ಟಿಗೆಗ-ಳನ್ನು ಇಡಲಾಗಿತ್ತು. ಅವೆಲ್ಲವನ್ನೂ ತರಿಸಿಕೊಂಡು ತಾಲ್ಲೂಕುವಾರು, ಜಿಲ್ಲಾವಾರು ಸಲಹೆಗಳನ್ನು ತೆಗೆದುಕೊಂಡು ಡಿಜಿಟಲೀಕರಣ ಮಾಡಲಾಗಿದೆ. ಪ್ರತಿಯೊಂದು ವರ್ಗದ ಜನರ ಅಭಿವೃದ್ಧಿಗೆ ಏನು ಮಾಡಬಹುದು ಅನ್ನುವುದನ್ನು ಚರ್ಚಿಸಿಯೇ ಪ್ರಣಾಳಿಕೆ ಸಿದ್ಧಪಡಿ-ಸಲಾಗುತ್ತಿದೆ ಎಂದರು.

ಐಎಂಪಿ: 50 ಅಭ್ಯರ್ಥಿಗಳ ಘೋಷಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭಾ ಚುನಾವಣೆಯ 50 ಕ್ಷೇತ್ರಗಳಿಗೆ ಅಭ್ಯರ್ಥಿಗಳ ಹೆಸರನ್ನು ಇಂಡಿಯನ್ ಮೂವ್‌ಮೆಂಟ್ ಪಾರ್ಟಿ (ಐಎಂಪಿ) ಸೋಮವಾರ ಬಿಡುಗಡೆ ಮಾಡಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಐಎಂಪಿ ಪಕ್ಷದ ರಾಷ್ಟ್ರೀಯ ಕಾರ್ಯಾಧ್ಯಕ್ಷೆ ಬಿ.ಟಿ. ಲಲಿತಾ ನಾಯಕ್, ‘ಮುಂದಿನ ದಿನಗಳಲ್ಲಿ ಉಳಿದ ವಿಧಾನಸಭೆ ಕ್ಷೇತ್ರಗಳ ಅಭ್ಯ-ರ್ಥಿಗಳನ್ನು ಪಟ್ಟಿಯನ್ನು ಬಿಡುಗಡೆ ಮಾಡಲಾಗುವುದು. ರಾಜ್ಯದಲ್ಲಿ ಭ್ರಷ್ಟಾಚಾರ ಮುಕ್ತ ಆಡಳಿತ ನೀಡುವುದಕ್ಕಾಗಿ ಐಎಂಪಿ ಅಭ್ಯರ್ಥಿ-ಗಳಿಗೆ ಮತದಾರರು ಆಶೀರ್ವಾದ ಮಾಡಬೇಕು’ ಎಂದು ಮನವಿ ಮಾಡಿದರು.

ಐಎಂಪಿ ಪಕ್ಷದ ರಾಷ್ಟ್ರೀಯ ಉಪಾಧ್ಯಕ್ಷ ಪ್ರದೀಪ್ ಹೆಗಡೆ, ಸದಸ್ಯರಾದ ಶಿವಕುಮಾರ್, ಗೋಪಿ ಬಳ್ಳಾರಿ, ಉದಯಶಂಕರ್ ಜಿ. ಇದ್ದರು.



ದುಬಾರಿಯಾದ ಪಶು ಆಹಾರ, ಮೇವು: ಹಸುಗಳಿಗೆ ಆಗಾಗ ಕಾಡುವ ರೋಗ

ಡೇರಿಗೆ ಹಾಲು; ರೈತರಿಗೆ ಗೋಳು

• ವಿಜಯಕುಮಾರ್ ಎಸ್.ಕೆ.

ಬೆಂಗಳೂರು: ಮೇವು-ಪಶು ಆಹಾರದ ಬೆಲೆ ದುಪ್ಪಟ್ಟು, ಹೆಚ್ಚಳವೇ ಆಗದ ಹಾಲಿನ ದರ, ಹಸುಗಳಿಗೆ ಆಗಾಗ ಕಾಡುವ ರೋಗ... ಇದರ ಜತೆಗೆ ಏರುಗತಿಯಲ್ಲೇ ಇರುವ ನಿರ್ವಹಣಾ ವೆಚ್ಚದಿಂದಾಗಿ ಹೈನುಗಾರಿಕೆ ಮಾಡುವ ರೈತರಿಗೆ ಕೊನೆಯಲ್ಲಿ ಉಳಿಯುವುದು ಹಸುಗಳ ಸಗಣಿ ಮಾತ್ರ...!

ಹೌದು, ಕೆಎಂಎಫ್ ಅಡಿಯಲ್ಲಿರುವ ಹಾಲು ಒಕ್ಕೂಟಗಳನ್ನು ನಂಬಿ ಹೈನುಗಾರಿಕೆಯಲ್ಲಿ ತೊಡಗಿರುವ ರೈತರು ಅಕ್ಷರಶಃ ಹೈರಾಣಾಗಿದ್ದಾರೆ. ಹೈನುಗಾರಿಕೆಯಿಂದ ನಿಧಾನವಾಗಿ ವಿಮುಖವಾಗುತ್ತಿದ್ದು, ಕೆಎಂಎಫ್‌ಗೆ ಬರುತ್ತಿರುವ ಹಾಲಿನ ಪ್ರಮಾಣವೂ ಕಡಿಮೆಯಾಗುತ್ತಿದೆ.

ಪಶು ಆಹಾರದ (ನಂದಿನಿ ಗೋಲ್ಡ್ ಟೈಪ್-1) ದರ ಕೋವಿಡ್ ಪೂರ್ವದಲ್ಲಿ 50 ಕೆ.ಜಿ ತೂಕದ ಚೀಲಕ್ಕೆ ₹650 ಇತ್ತು. ಈಗ ₹1,190ಕ್ಕೆ ಏರಿಕೆಯಾಗಿದೆ. ಬೈಪಾಸ್ ಪಶು ಆಹಾರದ ಬೆಲೆ 50 ಕೆ.ಜಿ ತೂಕದ ಚೀಲಕ್ಕೆ ₹1,240 ಇದೆ. ಹಾಲಿನ ಇಳುವರಿ ಬಯಸುವ ರೈತರು ಈ ಎರಡು ಪಶು ಆಹಾರಗಳನ್ನೇ ಹೆಚ್ಚಾಗಿ ಬಳಕೆ ಮಾಡುತ್ತಾರೆ. ಇದರ ಜತೆಗೆ ಖನಿಜ ಮಿಶ್ರಣ, ಯೂರಿಯಾ ಕಾಕಂಬಿ ನೆಕ್ಕುಬಿಲ್ಲೆಯನ್ನೂ ಅಲ್ಪ ಪ್ರಮಾಣದಲ್ಲಿ ಬಳಸುತ್ತಾರೆ.

ಬೇಸಿಗೆಯಲ್ಲಿ ಮೇವಿನ ಕೊರತೆಯೂ ರೈತರನ್ನು ಕಾಡುತ್ತದೆ. ತೆನೆ ಮಿಶ್ರಿತ ಜೋಳದ ಮೇವು ಟನ್‌ಗೆ ₹3 ಸಾವಿರಕ್ಕೂ ಹೆಚ್ಚಿದೆ. ಇವೆಲ್ಲವನ್ನೂ ಖರೀದಿ ಮಾಡಿ ಹಸುಗಳನ್ನು ಸಲಹಿ ಹಾಲು ಕರೆಯುವಷ್ಟರಲ್ಲಿ ರೈತ ರೋಸಿ ಹೋಗುತ್ತಾನೆ. ಎರಡಕ್ಕೂ ಹೆಚ್ಚು ಹಸುಗಳನ್ನು ಸಾಕಿದರೆ ಬೇರಾವ ಕೆಲಸ ಮಾಡದೆ ಇವುಗಳ ನಿರ್ವಹಣೆಯಲ್ಲೇ ಮುಳುಗಬೇಕು.

ಹಾಲು ಕರೆದು ಡೇರಿಗೆ ತಲುಪಿಸಿ ಸುಸ್ತಾಗುವ ರೈತನಿಗೆ ಹದಿನೈದು ದಿನಕ್ಕೊಮ್ಮೆಯೋ, ತಿಂಗಳಿಗೊಮ್ಮೆಯೋ ಹಣ ಸಂದಾಯವಾಗುತ್ತದೆ. ಲೀಟರ್‌ಗೆ ₹31ರಿಂದ ₹34ರವರೆಗೆ ದರ ಇದೆ. ಕೆಲವು ಒಕ್ಕೂಟಗಳು ₹29 ದರ ನೀಡುತ್ತಿವೆ. ಸರ್ಕಾರದಿಂದ ₹5 ಪ್ರೋತ್ಸಾಹಧನ ದೊರೆಯುತ್ತಿದೆ. ಮಾಡಿರುವ ಖರ್ಚಿಗೆ ತಾಳೆ ಮಾಡಿದರೆ ಬಿಡಿಗಾಸು ಉಳಿಯುತ್ತಿಲ್ಲ ಎಂಬುದು ರೈತರ ಅಳಲು.

‘ನಾಲ್ಕು ಹಸುಗಳನ್ನು ಸಾಕಿದ್ದೇವೆ. ಗಂಡ-ಹೆಂಡತಿ ಇಬ್ಬರೂ ಇದೇ ಕೆಲಸದಲ್ಲಿ ಮುಳುಗಿದ್ದೇವೆ. ಪಶು ಆಹಾರದ ಬೆಲೆ ಎರಡು ಪಟ್ಟು ಹೆಚ್ಚಾಗಿದೆ, 50 ಕೆ.ಜಿ ತೂಕದ ಚೀಲ ನಾಲ್ಕೇ ದಿನಕ್ಕೆ ಖಾಲಿಯಾಗುತ್ತದೆ. ಇದರೊಂದಿಗೆ ನಮ್ಮದೇ ಜಮೀನಿನಲ್ಲಿ ಬೆಳೆದ ಮೇವು, ಖರೀದಿ ಮಾಡಿ ತರುವ ಮೇವು ಎಲ್ಲವನ್ನೂ ಲೆಕ್ಕಾಚಾರ ಮಾಡಿದರೆ ವರ್ಷದ ಕೊನೆಯಲ್ಲಿ ನಮಗೆ ಉಳಿಯುವುದು ಸಗಣಿ ಮಾತ್ರ’ ಎಂದು ಮಂಡ್ಯ ಜಿಲ್ಲೆಯ ಬಸವನಹಳ್ಳಿ ಗ್ರಾಮದ ಪುಟ್ಟಮ್ಮ ಹೇಳುತ್ತಾರೆ.

‘ಸಗಣಿ ನಮ್ಮ ಜಮೀನಿಗೆ ಗೊಬ್ಬರವಾಗಿ ಉಳಿಯುತ್ತದೆ ಎಂಬ ಒಂದೇ ಕಾರಣಕ್ಕೆ ಹೈನುಗಾರಿಕೆ ಮಾಡುತ್ತಿದ್ದೇವೆ. ಸರ್ಕಾರದಿಂದ ಕೊಡುವ ₹5 ಪ್ರೋತ್ಸಾಹಧನ ಮೂರು ತಿಂಗಳಿಗೋ, ಆರು ತಿಂಗಳಿಗೋ ಒಮ್ಮೆ ಬ್ಯಾಂಕ್ ಖಾತೆಗೆ ಬರುತ್ತಿದೆ. ಅದನ್ನು ನಂಬಿಕೊಂಡು ಸಾಲ ಮಾಡಿದರೆ ಬಡ್ಡಿಗೂ ಸಾಕಾಗುವುದಿಲ್ಲ’ ಎಂದು ಅವರು ವಿವರಿಸುತ್ತಾರೆ.

‘ಹಾಲು ಕರೆಯುವ ದಿನಗಳಲ್ಲಿ ಮಾತ್ರವಲ್ಲ, ವರ್ಷವಿಡೀ ಮೇವು ಒದಗಿಸಿ ಸಾಕಾಣಿಕೆ ಮಾಡಬೇಕು. ರೋಗ ಬಾಧೆಯೂ ಇನ್ನಿಲ್ಲದೆ ಕಾಡುತ್ತದೆ. ಕೆಚ್ಚಲಬಾವು, ಚರ್ಮಗಂಟು ರೋಗವು ರೈತರನ್ನು ನಲುಗುವಂತೆ ಮಾಡಿದೆ. ಪಶುವೈದ್ಯ ಆಸ್ಪತ್ರೆಗಳ ಸಂಖ್ಯೆ ಕಡಿಮೆ ಇದೆ. ಖಾಸಗಿ ವೈದ್ಯರನ್ನು ಕರೆತಂದರೆ ಚಿಕಿತ್ಸೆಗೆ ಕನಿಷ್ಠ ₹2 ಸಾವಿರ ಬೇಕು, ಸರಿಯಾದ ಸಮಯಕ್ಕೆ ಚಿಕಿತ್ಸೆ ದೊರೆಯದಿದ್ದರೆ ಹಸುಗಳು ಬದುಕುಳಿಯುವುದಿಲ್ಲ. ₹70 ಸಾವಿರಕ್ಕೆ ಖರೀದಿ ಮಾಡಿದ್ದ ಜರ್ಸಿ ಹಸು ಕಳೆದ ತಿಂಗಳಷ್ಟೇ ರೋಗಕ್ಕೆ ತುತ್ತಾಯಿತು. ಈ ನಷ್ಟವನ್ನು ಯಾರ ಬಳಿ ಕೇಳಬೇಕು’ ಎಂದು ರೈತ ವಾಸುದೇವ ಪ್ರಶ್ನಿಸುತ್ತಾರೆ.

ಅಮೂಲ್ ರೈತರಿಗೆ ಲಾಭಾಂಶದಲ್ಲೂ ಪಾಲು

ಗುಜರಾತ್‌ನಲ್ಲಿ ಅಮೂಲ್‌ಗೆ ಹಾಲು ಪೂರೈಸುವ ರೈತರಿಗೆ ಲೀಟರ್‌ಗೆ ₹40ರಿಂದ ₹45 ನೀಡಲಾಗುತ್ತಿದೆ. ಇದಲ್ಲದೇ ಲಾಭಾಂಶವನ್ನು ರೈತರಿಗೇ ಪ್ರೋತ್ಸಾಹಧನದ ರೂಪದಲ್ಲಿ ಹಂಚಲಾಗುತ್ತಿದೆ.

‘ಅಮೂಲ್ ಸ್ವಾಯತ್ತ ಸಂಸ್ಥೆಯಾಗಿದ್ದು, ಹಾಲಿನ ದರ ಏರಿಕೆ ಮತ್ತು ಇಳಿಕೆ ಮಾಡುವ ಅಧಿಕಾರವನ್ನು ಹೊಂದಿದೆ. ಕಾಲಕಾಲಕ್ಕೆ ದರ ಏರಿಕೆ ಮಾಡಿ ರೈತರ ಹಿತವನ್ನು ಅಮೂಲ್ ಕಾಯ್ದುಕೊಂಡಿದೆ. ಆದ್ದರಿಂದಲೇ ಅಮೂಲ್‌ಗೆ ಬರುವ ಹಾಲಿನ ಪ್ರಮಾಣ ಏರುಮುಖವಾಗಿಯೇ ಇದೆ’ ಎಂದು ಬಮೂಲ್(ಬೆಂಗಳೂರು ಸಹಕಾರ ಹಾಲು ಒಕ್ಕೂಟ) ನಿರ್ದೇಶಕ ಪಿ.ನಾಗರಾಜ್ ಹೇಳುತ್ತಾರೆ.

‘ಹಾಲಿನ ದರ ಪರಿಷ್ಕರಣೆ ಅಧಿಕಾರ ಕೆಎಂಎಫ್‌ಗೆ ಇಲ್ಲ, ಎಲ್ಲದಕ್ಕೂ ಸರ್ಕಾರದ ಮುಂದೆ ಹೋಗಬೇಕು. ದರ ಏರಿಕೆ ಪ್ರಸ್ತಾಪವನ್ನು ಸರ್ಕಾರ ತಿರಸ್ಕರಿಸುತ್ತಲೇ ಬಂದಿದ್ದು, ಇದರಿಂದ ರೈತರಿಗೆ ಅನ್ಯಾಯವಾಗುತ್ತಿದೆ. ರೈತರಿಂದ ಖರೀದಿ ಮಾಡುವ ಹಾಲಿನ ದರವನ್ನು ಕನಿಷ್ಠ ₹5 ಹೆಚ್ಚಳ ಮಾಡಬೇಕು’ ಎಂದು ಒತ್ತಾಯಿಸಿದರು.

‘ಅಮೂಲ್‌ನಲ್ಲಿ ಶೇ 70ರಷ್ಟು ಹಾಲನ್ನು ಇತರೆ ಉತ್ಪನ್ನಗಳ ತಯಾರಿಕೆಗೆ ಬಳಸಲಾಗುತ್ತಿದೆ. ಆದ್ದರಿಂದ ಲಾಭದಲ್ಲಿದೆ, ಕೆಎಂಎಫ್ ಈ ವಿಷಯದಲ್ಲಿ ಇನ್ನೂ ಕೂಸು. ಕಲಿಯುವುದು ಸಾಕಷ್ಟಿದೆ’ ಎಂದರು.

ನಂದಿನಿ ಮುಳುಗಿಸಲು ಬಿಲ– ಡಿ.ಕೆ. ಸುರೇಶ್

ಬೆಂಗಳೂರು: ‘ಕನ್ನಡಿಗರು ಕಟ್ಟಿ ಬೆಳೆಸಿದ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಕೆನರಾ ಬ್ಯಾಂಕ್, ಸಿಂಡಿಕೇಟ್ ಬ್ಯಾಂಕ್ ಮುಳುಗಿಸಿರುವ ಬಿಜೆಪಿ, ಈಗ ಕನ್ನಡಿಗರ ಹೆಮ್ಮೆಯ ನಂದಿನಿ ಸಂಸ್ಥೆಯನ್ನು ಮುಳುಗಿಸಲು ಬಿಲ ತೋಡುತ್ತಿದೆ’ ಎಂದು ಸಂಸದ ಡಿ.ಕೆ. ಸುರೇಶ್ ವಾಗ್ದಾಳಿ ನಡೆಸಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಅವರು, ‘ಕರ್ನಾಟಕದ ಮೇಲೆ ಕೆಲವರು ಕಣ್ಣು ಹಾಕಿದ್ದು, ಚುನಾವಣೆ ಸಮಯದಲ್ಲಿ ಕರ್ನಾಟಕದೊಳಗೆ ನುಸುಳಲು ಬಿಲ ಹುಡುಕುವ ಕೆಲಸ ಮಾಡುತ್ತಿದ್ದಾರೆ. ಅದನ್ನು ಅಮೂಲ್ ಎಂಬ ಸಹಕಾರಿ ಸಂಸ್ಥೆ ಮೂಲಕ ಮಾಡುತ್ತಿದ್ದಾರೆ. ಗುಜರಾತಿಗಳು ಹಾಗೂ ಸಹಕಾರ ಕ್ಷೇತ್ರಕ್ಕೆ ಕನ್ನಡಿಗರು, ಕೆಎಂಎಫ್ ಯಾವ ಅನ್ಯಾಯ ಮಾಡಿದೆ ಎಂದು ಈ ರೀತಿ ಷಡ್ಯಂತ್ರ ರೂಪಿಸುತ್ತಿದ್ದಾರೆ ತಿಳಿಯುತ್ತಿಲ್ಲ’ ಎಂದರು.

‘ಕೇಂದ್ರ ನಾಯಕರನ್ನು ಓಲೈಸಲು ಬಿಜೆಪಿ ಸರ್ಕಾರ, ನಮ್ಮ ಸಂಸ್ಥೆಯನ್ನು ಮುಳುಗಿಸಿ, ರಾಜ್ಯದ ಮಾರುಕಟ್ಟೆ ಪ್ರವೇಶಿಸಲು ಬೇರೆಯವರಿಗೆ ಅನುಮತಿ ನೀಡಿದೆ. ಆ ಮೂಲಕ, ಕನ್ನಡಿಗರ ಸ್ವಾಭಿಮಾನಕ್ಕೆ ಧಕ್ಕೆ ತಂದು ರೈತರನ್ನು ಬಲಿ ಕೊಡುವ ಪ್ರಯತ್ನ ಮಾಡುತ್ತಿದೆ’ ಎಂದರು.

‘ಸರ್ಕಾರ ಅಮೂಲ್ ಜೊತೆ ಕೆಎಂಎಫ್ ಅನ್ನು ವಿಲೀನಗೊಳಿಸಲು ಮುಂದಾದರೆ ಕರ್ನಾಟಕ ರಾಜ್ಯ ರೈತ ಸಂಘ ಚುನಾವಣೆ ಬಳಿಕ ಬೀದಿಗಳಿದು ಹೋರಾಟ ನಡೆಸಲಿದೆ.

ಬಡಗಲಪುರ ನಾಗೇಂದ್ರ, ಅಧ್ಯಕ್ಷ, ಕರ್ನಾಟಕ ರಾಜ್ಯ ರೈತ ಸಂಘ

2017ರಲ್ಲಿ ಅಮೂಲ್ ನಡೆಸಿದ 43ನೇ ಸರ್ವ ಸದಸ್ಯರ ಸಭೆಯಲ್ಲಿ ಉತ್ತರ ಕರ್ನಾಟಕದ ಭಾಗಕ್ಕೆ ಅಮೂಲ್ ಹಾಲು ಪೂರೈಕೆ ಮಾಡುವ ನಿರ್ಧಾರ ತೆಗೆದುಕೊಂಡಿತ್ತು. ಆಗ ರಾಜ್ಯದಲ್ಲಿ ಸಿಎಂ ಯಾರಾಗಿದ್ದರು?

ಅಣ್ಣಾಮಲೈ, ಬಿಜೆಪಿ ರಾಜ್ಯ ಚುನಾವಣಾ ಸಹ ಉಸ್ತುವಾರಿ

ಅಂಕಿ ಅಂಶ

₹30ರಿಂದ ₹34
(+₹5 ಪ್ರೋತ್ಸಾಹಧನ)
ನಂದಿನಿ ಹಾಲು ಖರೀದಿ ದರ(ಲೀಟರ್‌ಗೆ)

₹40ರಿಂದ ₹45
(+ಲಾಭಾಂಶದಲ್ಲಿ ಪಾಲು)
ಅಮೂಲ್ ಹಾಲು ಖರೀದಿ ದರ(ಲೀಟರ್‌ಗೆ)

₹40ರಿಂದ ₹44(ಲೀಟರ್‌ಗೆ)
ರಾಜ್ಯದಲ್ಲಿ ಖಾಸಗಿ ಸಂಸ್ಥೆಗಳು ರೈತರಿಂದ ಖರೀದಿಸುವ ಹಾಲಿನ ದರ

₹1,190
ನಂದಿನಿ ಗೋಲ್ಡ್ ಟೈಪ್-1 ಪಶು ಆಹಾರ(50 ಕೆ.ಜಿ)

₹1,240
ಬೈಪಾಸ್ ಪಶು ಆಹಾರ(50 ಕೆ.ಜಿ)

ಕೆಎಸ್‌ಒಯು: 15ರಿಂದ ಉದ್ಯೋಗ ಮೇಳ

ಮೈಸೂರು: ‘ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯವು (ಕೆಎಸ್‌ಒಯು) ಪ್ರೊಫೈಲ್ ಇನ್ ಕಂಪನಿ ಸಹಯೋಗದಲ್ಲಿ ಏ.15ರಿಂದ 30ರವರೆಗೆ ಆನ್‌ಲೈನ್ ಉದ್ಯೋಗ ಮೇಳ ಆಯೋಜಿಸಿದೆ’ ಎಂದು ಕುಲಪತಿ ಪ್ರೊ.ಶರಣಪ್ಪ ವಿ. ಹಲಸೆ ತಿಳಿಸಿದರು.

‘10ಕ್ಕೂ ಹೆಚ್ಚು ಕಂಪನಿಗಳಿಂದ 2 ಸಾವಿರಕ್ಕೂ ಹೆಚ್ಚು ಉದ್ಯೋಗದ ಅವಕಾಶವಿದೆ. ವಾರ್ಷಿಕ ₹3 ಲಕ್ಷದಿಂದ ₹6 ಲಕ್ಷದವರೆಗೆ ವೇತನದ ಪ್ಯಾಕೇಜ್ ದೊರೆಯುವ ನಿರೀಕ್ಷೆ ಇದೆ. ಎಂ.ಕಾಂ., ಬಿ.ಕಾಂ., ಎಂಬಿಎ ವಿದ್ಯಾರ್ಥಿಗಳು ಭಾಗವಹಿಸಬಹುದು’ ಎಂದು ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಪ್ರೊಫೈಲ್ ಇನ್‌ನ ವೆಂಕಟೇಶ್ ಮಾತನಾಡಿ, ‘ಉದ್ಯೋಗಾಕಾಂಕ್ಷಿಗಳು ಮೊಬೈಲ್‌ನಲ್ಲಿ ಪ್ರೊಫೈಲ್ ಇನ್ ಆ್ಯಪ್ ಡೌನ್‌ಲೋಡ್ ಮಾಡಿಕೊಳ್ಳಿ. ಇದರಲ್ಲಿ ಉದ್ಯೋಗದ ಮಾಹಿತಿ ನೀಡಲಾಗುವುದು. ದಾಖಲೆ ಪರಿಶೀಲಿಸಿ ಅರ್ಹರಿಗೆ ಸಂದರ್ಶನ ನಡೆಸಲಾಗುವುದು ಎಂದರು.

ಮಾಹಿತಿಗೆ: 95133 73737 ಸಂಪರ್ಕಿಸಬಹುದು.

ನಂದಿನಿ ಹಿಂದಿಕ್ಕಿ ಅಮೂಲ್‌ಗೆ ಪ್ರೋತ್ಸಾಹ ಸರಿಯಲ್ಲ: ಡಿಕೆಶಿ

ಪ್ರಜಾವಾಣಿ ವಾರ್ತೆ

ಹಾಸನ: ‘ಗುಜರಾತ್‌ನ ಅಮೂಲ್ ಕೂಡ ರೈತರದ್ದೇ. ಆದರೆ, ‘ನಂದಿನಿ’ಯನ್ನು ಹಿಂದಿಕ್ಕಿ ಅಮೂಲ್‌ಗೆ ಸರ್ಕಾರ ಪ್ರೋತ್ಸಾಹ ನೀಡುವುದು ಸರಿಯಲ್ಲ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಇಲ್ಲಿನ ಹೇಮಾವತಿ ಪ್ರತಿಮೆ ಬಳಿ ‘ನಂದಿನಿ’ ಹಾಲಿನ ಕೇಂದ್ರದಲ್ಲಿ ಸೋಮವಾರ ₹ 2,500 ಮೌಲ್ಯದ ಉತ್ಪನ್ನಗಳನ್ನು ಖರೀದಿಸಿ ನಂತರ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

‘ನಂದಿನಿ ರಾಜ್ಯದ 70 ಲಕ್ಷ ರೈತರ ಬದುಕಿನ ಪ್ರಶ್ನೆಯಾಗಿದೆ. ರಾಜ್ಯದ ರೈತರು, ಹೆಣ್ಣು ಮಕ್ಕಳು ಬದುಕಬೇಕು ಎಂದು ರಾಜ್‌ಕುಮಾರ್, ಪುನೀತ್ ರಾಜ್‌ಕುಮಾರ್ ಅವರಂತಹ ದೊಡ್ಡ ನಟರು ರಾಯಭಾರಿಯಾಗಿ ಕೆಲಸ ಮಾಡಿದ್ದಾರೆ’ ಎಂದು ಅವರು ತಿಳಿಸಿದರು.



ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಹಾಸನದ ಹೇಮಾವತಿ ಪ್ರತಿಮೆ ಬಳಿಯ ‘ನಂದಿನಿ’ ಹಾಲಿನ ಕೇಂದ್ರದಲ್ಲಿ ಹಾಲಿನ ಉತ್ಪನ್ನಗಳನ್ನು ಖರೀದಿಸಿದರು



‘ನಂದಿನಿ’ಯನ್ನು ‘ಅಮೂಲ್’ನೊಂದಿಗೆ ವಿಲೀನಗೊಳಿಸಬಾರದೆಂದು ಆಗ್ರಹಿಸಿ ಹಿರೇಬಾಗೇವಾಡಿಯ ರೈತರು ಸೋಮವಾರ ಹಸುವಿನೊಂದಿಗೆ ಬಂದು, ಉಪತಹಶೀಲ್ದಾರ್ ಕಚೇರಿ ಸಿಬ್ಬಂದಿ ಮೂಲಕ ಮುಖ್ಯಮಂತ್ರಿಗೆ ಮನವಿ ಸಲ್ಲಿಸಿದರು

ಹಸುವಿನೊಂದಿಗೆ ತಹಶೀಲ್ದಾರ್ ಕಚೇರಿಗೆ ಬಂದ ರೈತರು

ಪ್ರಜಾವಾಣಿ ವಾರ್ತೆ

ಹಿರೇಬಾಗೇವಾಡಿ (ಬೆಳಗಾವಿ): ನಂದಿನಿಯನ್ನು ಅಮೂಲ್‌ನೊಂದಿಗೆ ವಿಲೀನಗೊಳಿಸಬಾರದೆಂದು ಆಗ್ರಹಿಸಿ ಸ್ಥಳೀಯ ರೈತರು ಸೋಮವಾರ ಇಲ್ಲಿನ ಉಪತಹಶೀಲ್ದಾರ್ ಕಚೇರಿಗೆ ತಮ್ಮ ಜತೆ ಹಸುವನ್ನು ಕರೆದುಕೊಂಡು ಬಂದು ಮುಖ್ಯಮಂತ್ರಿಗೆ ಮನವಿ ಸಲ್ಲಿಸಿದರು.

ರೈತ ಮುಖಂಡ ಬಿ.ಎಸ್.ಗಾಣಗಿ ಮಾತನಾಡಿ, ‘ರಾಜ್ಯದ ರೈತರ ಹೆಮ್ಮೆಯ ಬ್ರ್ಯಾಂಡ್ ಆದ ಕೆಎಂಎಫ್ ನಂದಿನಿ ಮೇಲೆ ರಾಜ್ಯದ ಲಕ್ಷಾಂತರ ರೈತರು ಮತ್ತು ಅವರ ಕುಟುಂಬಸ್ಥರು ಅವಲಂಬಿತರಾಗಿದ್ದಾರೆ. ಅಮೂಲ್‌ನೊಂದಿಗೆ ವಿಲೀನ ಮಾಡುವುದರಿಂದ ಲಕ್ಷಾಂತರ ಜನರು ಬೀದಿ ಪಾಲಾಗುತ್ತಾರೆ. ಮುಖ್ಯಮಂತ್ರಿ ಅವರು ಯಾವುದೇ ಕಾರಣಕ್ಕೂ ವಿಲೀನ ಮಾಡದೇ ಕರ್ನಾಟಕದ ರೈತರನ್ನು ಉಳಿಸಬೇಕು’ ಎಂದು ಒತ್ತಾಯಿಸಿದರು.

‘ಕೆಎಂಎಫ್ ಆಪೋಷನಕ್ಕೆ 2008ರಿಂದಲೇ ಬಿಜೆಪಿ ಸಂಚು’

ಬೆಂಗಳೂರು: ‘2008ರಲ್ಲಿ ಆಡಳಿತ ನಡೆಸುತ್ತಿದ್ದ ಬಿಜೆಪಿ ಸರ್ಕಾರ ರಾಜ್ಯದಲ್ಲಿ ಅಮೂಲ್ ಮಾರುಕಟ್ಟೆ ವಿಸ್ತರಣೆಗೆ ಬೆಂಬಲ ನೀಡಿತ್ತು. ಆ ಮೂಲಕ ಆಗಿನಿಂದಲೇ ರಾಜ್ಯದ ಕೆಎಂಎಫ್ ಅನ್ನು ಆಪೋಷನ ತೆಗೆದುಕೊಳ್ಳಲು ಬಿಜೆಪಿ ಹೊರಟಿತ್ತು’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಆರೋಪಿಸಿದ್ದಾರೆ.

ಈ ಕುರಿತು ಟ್ವಿಟರ್‌ನಲ್ಲಿ ಸೋಮವಾರ ವಾಗ್ದಾಳಿ ನಡೆಸಿರುವ ಅವರು, ‘ಸಫಾರಿ ಮತ್ತು ಸುಪಾರಿ ವರಸೆಯನ್ನು ಬಿಜೆಪಿ ಪ್ರದರ್ಶಿಸುತ್ತಿದೆ. ಚುನಾವಣೆ ಹೊತ್ತಿನಲ್ಲಿ ಪ್ರಧಾನಿ ನರೇಂದ್ರ ಮೋದಿಯವರು ಸಫಾರಿ ಮಾಡಿಹೋಗಿದ್ದಾರೆ. ಅವರೇ ಗುಜರಾತ್ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಕನ್ನಡಿಗರ ಮೇಲೆ ಅಮೂಲ್ ಅನ್ನು ಹೇರಿ ನಂದಿನಿಯ ಕತ್ತು ಹಿಸುಕುವ ಸುಪಾರಿ ಕೊಡಲಾಗಿತ್ತು’ ಎಂದಿದ್ದಾರೆ.

2008ರಲ್ಲಿ ಜ್ಞಾನಭಾರತಿಯ ಬೆಂಗಳೂರು ವಿಶ್ವವಿದ್ಯಾಲಯದ ಆವರಣದಲ್ಲಿ ಅಮೂಲ್ ಮಳಿಗೆ ಆರಂಭಿಸಲು ಆಗಿನ ಬಿಜೆಪಿ ಸರ್ಕಾರ ಹೊರಟಿತ್ತು. ಅಮೂಲ್ ಅನ್ನು ಉದ್ಧಾರ ಮಾಡಲು ನಂದಿನಿಯ ಕತ್ತು ಹಿಸುಕಲು ಬಿಜೆಪಿ 15 ವರ್ಷಗಳ ಹಿಂದೆಯೇ ಹೊರಟಿತ್ತು ಎಂದು ಅವರು ಹೇಳಿದ್ದಾರೆ.

ಕರ್ನಾಟಕವನ್ನು ಗುಜರಾತಿನ ವಸಾಹತು ಮಾಡುವ ಪ್ರಯತ್ನ ಇಂದು ನಿನ್ನೆಯದೇನೂ ಅಲ್ಲ. ಬಿಜೆಪಿಯ ಈ ಧೂರ್ತ ನಡೆ ಚುನಾವಣಾ ಹೊತ್ತಿನಲ್ಲೇ ಮತ್ತೆ ಬಹಿರಂಗವಾಗಿದೆ. ಹಿಂದೆಯೂ ಆಗಿನ ಮುಖ್ಯಮಂತ್ರಿ ಸೇರಿದಂತೆ ಬಿಜೆಪಿಯ ಹಲವರು ಅಮೂಲ್ ಪರ ನಿಂತಿದ್ದರು. ಈಗ ಪಾತ್ರಗಳು ಮಾತ್ರ ಬದಲಾಗಿವೆ ಎಂದಿದ್ದಾರೆ.

ಪುನರ್ ನವೀಕರಣ ಕಾಮಗಾರಿಗೆ ಪರಿಸರ ಪ್ರೇಮಿಗಳ ಆಕ್ರೋಶ

ಕಬ್ಬನ್ ಉದ್ಯಾನದಲ್ಲಿ ಅಕ್ರಮ ಕಟ್ಟಡ

● ಖಲೀಲಅಹ್ಮದ ಶೇಖ



ಕಬ್ಬನ್ ಉದ್ಯಾನದಲ್ಲಿರುವ ಸೆಂಚುರಿ ಕ್ಲಬ್‌ನಲ್ಲಿ ನೀರಿನ ಸಂಸ್ಕರಣಾ ಘಟಕದ ಕಾಮಗಾರಿ ಕೈಗೆತ್ತಿಕೊಂಡಿರುವುದು

ಬೆಂಗಳೂರು: ಹಚ್ಚ ಹಸಿರು ಹೊದ್ದಿರುವ ಕಬ್ಬನ್ ಉದ್ಯಾನವು ಕಾಂಕ್ರೀಟ್ ಕಾಡಾಗಿ ಬದಲಾಗುತ್ತಿದೆ. ಇದಕ್ಕೆ ವಾಯುವಿಹಾರಿಗಳು ಹಾಗೂ ಪರಿಸರ ಪ್ರೇಮಿಗಳು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಅಭಿವೃದ್ಧಿ ಹೆಸರಿನಲ್ಲಿ ಉದ್ಯಾನದಲ್ಲಿ ಇತ್ತೀಚೆಗೆ ಕಟ್ಟಡಗಳನ್ನು ಎಗ್ಗಿಲ್ಲದಂತೆ ನಿರ್ಮಿಸಲಾಗುತ್ತಿರುವುದು ಉದ್ಯಾನದ ಸೌಂದರ್ಯಕ್ಕೆ ಧಕ್ಕೆ ತರುತ್ತಿದೆ.

'ಕಬ್ಬನ್ ಉದ್ಯಾನದಲ್ಲಿ ಯಾವುದೇ ನೂತನ ಕಟ್ಟಡಗಳನ್ನು ಕಟ್ಟುವಂತಿಲ್ಲ. ಇಲ್ಲಿ ಯಾವುದೇ ಕಟ್ಟಡ ನಿರ್ಮಿಸಬೇಕಾದರೆ ಹೈಕೋರ್ಟ್‌ನಿಂದ ನಿರಾಕ್ಷೇಪಣಾ ಪತ್ರ ಪಡೆದುಕೊಳ್ಳಬೇಕು. ಇದೆಲ್ಲವನ್ನು ಧಿಕ್ಕರಿಸಿ ಇಲ್ಲಿನ ಸೆಂಚುರಿ ಕ್ಲಬ್ ತೋಟಗಾರಿಕೆ ಇಲಾಖೆಯ ಅನುಮತಿ ಪಡೆದುಕೊಳ್ಳದೇ ಚುನಾವಣೆ ಸಂದರ್ಭದಲ್ಲಿ ನೀರಿನ ಸಂಸ್ಕರಣಾ ಘಟಕ ಮತ್ತು ಶೇಖರಣಾ ಟ್ಯಾಂಕ್ ನಿರ್ಮಿಸಲು ಮುಂದಾಗಿದೆ. ತೋಟಗಾರಿಕೆ ಇಲಾಖೆ ಈ ಕ್ಲಬ್ ಮೇಲೆ ಕ್ರಿಮಿನಲ್ ಪ್ರಕರಣ ದಾಖಲಿಸಬೇಕು. ಉದ್ಯಾನದಲ್ಲಿ ಯಾವುದೇ ರೀತಿಯ ಕಟ್ಟಡಗಳ ನಿರ್ಮಾಣಕ್ಕೆ ಅವಕಾಶ ಕಲ್ಪಿಸಬಾರದು' ಎಂದು ನಡಿಗೆದಾರರ ಸಂಘದ ಎಸ್. ಉಮೇಶ್ ಒತ್ತಾಯಿಸಿದರು.

'ಸ್ಮಾರ್ಟ್‌ಸಿಟಿ ಯೋಜನೆ ಅಡಿಯಲ್ಲಿ ಕಬ್ಬನ್ ಉದ್ಯಾನವನ್ನು ಸಾಕಷ್ಟು ಅಭಿವೃದ್ಧಿ ಮಾಡಲಾಗಿದೆ. ಇದರಿಂದ ಉದ್ಯಾನದಲ್ಲಿ ಸಾಕಷ್ಟು ಮರಗಳಿಗೆ ಹಾನಿಯಾಗಿದೆ' ಎಂದು ಹೇಳಿದರು.

'ಶಾರ್ಟ್ ಸರ್ಕ್ಯೂಟ್‌ನಿಂದ ಒಂದಷ್ಟು ಭಾಗ ಸುಟ್ಟಿದೆ ಎಂಬ ಕಾರಣಕ್ಕೆ ಅಕ್ವೇರಿಯಂ ಕಟ್ಟಡ, ಎನ್.ಜಿ.ಒ ಕ್ಲಬ್ ಮತ್ತು ಟೆನಿಸ್ ಕ್ಲಬ್‌ಗಳನ್ನು ಸ್ಟಾರ್ ಹೋಟೆಲ್ ರೀತಿಯಲ್ಲಿ ಪುನರ್ ನಿರ್ಮಿಸಲಾಗುತ್ತಿದೆ. ಲೋಕೋಪಯೋಗಿ ಇಲಾಖೆ, ಪೊಲೀಸ್ ಕಚೇರಿ, ಸೆಂಚುರಿ ಕ್ಲಬ್, ಬಾಲಭವನ ಹೀಗೆ ಕಬ್ಬನ್ ಉದ್ಯಾನದಲ್ಲಿರುವ ಬಹುತೇಕ ಎಲ್ಲ ಕಟ್ಟಡಗಳನ್ನು ನವೀಕರಿಸಲಾಗುತ್ತಿದೆ. ಇದನ್ನು ತೋಟಗಾರಿಕೆ ಇಲಾಖೆ ಅಧಿಕಾರಿಗಳು ಪ್ರಶ್ನಿಸುತ್ತಿಲ್ಲ. ಇದರಿಂದ ಉದ್ಯಾನದ ಪರಿಸರ ಹಾಳಾಗುತ್ತಿದೆ' ಎಂದು ಕಬ್ಬನ್ ಉದ್ಯಾನ ನಡಿಗೆದಾರರ ಸಂಘ ಕಳವಳ ವ್ಯಕ್ತಪಡಿಸಿದೆ.

'ತೋಟಗಾರಿಕೆ ಇಲಾಖೆಯ ಅಧಿಕಾರಿಗಳ ನಿರ್ಲಕ್ಷ್ಯದಿಂದ ಉದ್ಯಾನ ಈಗಾಗಲೇ ಸಂಪೂರ್ಣ ಕಾಂಕ್ರೀಟ್ ಕಾಡಾಗಿ ಪರಿವರ್ತಿಸಲಾಗುತ್ತಿದೆ. ಸರ್ಕಾರ ಕೂಡಲೇ ಕಬ್ಬನ್ ಉದ್ಯಾನದ ರಕ್ಷಣೆಗೆ ಮುಂದಾಗಬೇಕು' ಎಂದು ಕಬ್ಬನ್ ಉದ್ಯಾನದ ನಡಿಗೆದಾರರಾದ ಸೌಮ್ಯ ಸತೀಶ್ ಮನವಿ ಮಾಡಿದರು.

'ಅನುಮತಿ ಪಡೆಯದೇ ನಿರ್ಮಾಣ'

'ಉದ್ಯಾನದಲ್ಲಿ ಯಾವುದೇ ಕಟ್ಟಡ ನಿರ್ಮಿಸಬೇಕಾದರೂ ಹೈಕೋರ್ಟ್ ಅನುಮತಿ ಪಡೆದುಕೊಳ್ಳಬೇಕು. ಆದರೆ, ಸೆಂಚುರಿ ಕ್ಲಬ್‌ನವರು ಹೈಕೋರ್ಟ್‌ನಿಂದ ಅನುಮತಿ ಪಡೆಯದೇ ನೀರಿನ ಸಂಸ್ಕರಣಾ ಘಟಕ ಮತ್ತು ಶೇಖರಣಾ ಟ್ಯಾಂಕ್ ನಿರ್ಮಿಸುತ್ತಿದ್ದಾರೆ. ತೋಟಗಾರಿಕೆ ಇಲಾಖೆಯಿಂದ ಕಾಮಗಾರಿಯನ್ನು ಸ್ಥಗಿತಗೊಳಿಸುವಂತೆ ಈಗಾಗಲೇ ನೋಟಿಸ್ ನೀಡಲಾಗಿದೆ. ಅವರಿಂದ ಯಾವುದೇ ಪ್ರತಿಕ್ರಿಯೆ ಬಂದಿಲ್ಲ' ಎಂದು ತೋಟಗಾರಿಕೆ ಇಲಾಖೆ ಉಪನಿರ್ದೇಶಕ (ಕಬ್ಬನ್ ಉದ್ಯಾನ) ಎಚ್.ಟಿ.ಬಾಲಕೃಷ್ಣ ಮಾಹಿತಿ ನೀಡಿದರು.

ಪಿಎಸ್‌ಐ ನೇಮಕಾತಿ ಅಕ್ರಮ ಆರೋಪದ ಪ್ರಕರಣ

ಮಾಹಿತಿ ಕೇಳಿದ ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪಿಎಸ್‌ಐ ನೇಮಕಾತಿ ಅಕ್ರಮ ಆರೋಪದ ಪ್ರಕರಣದಲ್ಲಿ ಹೈಕೋರ್ಟ್ ಮೆಟ್ಟಿಲೇರಿರುವ 145 ಅಭ್ಯರ್ಥಿಗಳ ಪೈಕಿ ಎಷ್ಟು ಅಭ್ಯರ್ಥಿಗಳು ಯಾವ ರೀತಿಯಲ್ಲಿ ಅಕ್ರಮದಲ್ಲಿ ಭಾಗಿಯಾಗಿದ್ದಾರೆ ಎಂಬ ಬಗ್ಗೆ ಸ್ಪಷ್ಟ ವರದಿ ಸಲ್ಲಿಸಿ ಮತ್ತು ಅರ್ಜಿದಾರ ಅಭ್ಯರ್ಥಿಗಳ ಬಗ್ಗೆ ನಿಮ್ಮ ನಿಲುವನ್ನು ತಿಳಿಸಿ' ಎಂದು ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದೆ.

'ಹೊಸದಾಗಿ ಲಿಖಿತ ಪರೀಕ್ಷೆ ನಡೆಸಲು ಸರ್ಕಾರ ಹೊರಡಿಸಿರುವ ಆದೇಶ ರದ್ದುಪಡಿಸಬೇಕು' ಎಂದು ಕೋರಿ ನಗರದ ವಸಂತ ನಾಯಕ್ ಸೇರಿದಂತೆ 100ಕ್ಕೂ ಹೆಚ್ಚು ಅಭ್ಯರ್ಥಿಗಳು ಸಲ್ಲಿಸಿರುವ ಪ್ರತ್ಯೇಕ ರಿಟ್ ಅರ್ಜಿಗಳನ್ನು ನ್ಯಾಯಮೂರ್ತಿ ಜಿ.ನರೇಂದರ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ಹಿರಿಯ ವಕೀಲ ಪಿ.ಎಸ್. ರಾಜಗೋಪಾಲ್ ಮತ್ತು ಡಿ.ಆರ್. ರವಿಶಂಕರ್, 'ಈ ಪ್ರಕರಣದಲ್ಲಿ ತನಿಖೆ ಶುರುವಾಗಿ ಏಪ್ರಿಲ್ 9ಕ್ಕೆ ಒಂದು ವರ್ಷ ತುಂಬಿದೆ. ಆದರೆ, ಅರ್ಜಿದಾರರಲ್ಲಿನ ಯಾರೊಬ್ಬರ ವಿರುದ್ಧವೂ ಕಪ್ಪುಚುಕ್ಕೆ ಇಲ್ಲ. ಅಕ್ರಮದಲ್ಲಿ ಭಾಗಿಯಾಗಿದ್ದಾರೆ ಎಂಬ ಸಂದೇಹವೂ ಇಲ್ಲ. ಸರ್ಕಾರ ಸಾರಾಸಗಟಾಗಿ ಎಲ್ಲ ಅಭ್ಯರ್ಥಿಗಳ ಆಯ್ಕೆ ಪಟ್ಟಿಯನ್ನೂ ರದ್ದುಗೊಳಿಸಿರುವುದು ಅನ್ಯಾಯ. ಆದ್ದರಿಂದ, ಆರೋಪಗಳೇ ಇಲ್ಲದ ಅರ್ಜಿದಾರ ಅಭ್ಯರ್ಥಿಗಳು ತನಿಖೆಯ ಅಂತಿಮ ವರದಿಗೆ ಬದ್ಧರಾಗಿರತಕ್ಕದ್ದು ಎಂಬ ಷರತ್ತಿನ ಮೇಲೆ ಅವರನ್ನು ಉಳಿಸಿಕೊಳ್ಳಲು ನಿರ್ದೇಶಿಸಬೇಕು' ಎಂದು ಕೋರಿದರು.

ಇದಕ್ಕೆ ಪ್ರತಿಯಾಗಿ ಸರ್ಕಾರದ ಪರ ವಾದ ಮಂಡಿಸಿದ ಅಡ್ವೊಕೇಟ್ ಜನರಲ್ ಪ್ರಭುಲಿಂಗ ಕೆ.ನಾವದಗಿ, 'ಹಿರಿಯ ಅಧಿಕಾರಿಗಳು ಪ್ರಾಮಾಣಿಕವಾಗಿ ವಿಸ್ತೃತ ತನಿಖೆ ನಡೆಸುತ್ತಿದ್ದು ಸಾಕಷ್ಟು ಪ್ರಗತಿ ಸಾಧಿಸಿದ್ದಾರೆ. ಬ್ಲೂ ಟೂತ್ ಬಳಕೆ ಮಾಡಿ ಹೊರಗಿನಿಂದ ಅಭ್ಯರ್ಥಿಗಳಿಗೆ ಉತ್ತರ ಹೇಳಿಕೊಟ್ಟಿರುವುದು ಮತ್ತು ನೇಮಕಾತಿ ವಿಭಾಗದಲ್ಲೇ ಒಎಂಆರ್ ಶೀಟ್‌ಗಳನ್ನು ತಿದ್ದಿರುವುದರ ತನಿಖೆ ಮುಂದುವರಿದಿದೆ. ಒಎಂಆರ್ ಶೀಟುಗಳಿಗೆ ಸಂಬಂಧಿಸಿದಂತೆ ಈಗಾಗಲೇ ವಿಧಿ ವಿಜ್ಞಾನ ಪ್ರಯೋಗಾಲಯದಿಂದ (ಎಫ್‌ಎಸ್‌ಎಲ್) ವರದಿ ಪಡೆಯಲಾಗಿದೆ. ಬ್ಲೂ ಟೂತ್ ಬಳಕೆ ಮಾಡಿ ನಕಲು ಮಾಡಿರುವುದರ ಕುರಿತು ತನಿಖೆ ಪ್ರಗತಿಯಲ್ಲಿದೆ' ಎಂದರು.

'ಹಗರಣದ ಸೂತ್ರಧಾರ ಆರ್.ಡಿ.ಪಾಟೀಲ್ ಇದೊಂದೇ ಹಗರಣ ಮಾತ್ರವಲ್ಲದೆ, ಕೆಪಿಎಸ್‌ಸಿ, ಬೆಸ್ಕಾಂ (ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ), ನೀರಾವರಿ ಇಲಾಖೆಗಳಲ್ಲಿ ನಡೆದಿರುವ ನೇಮಕಾತಿಯಲ್ಲೂ ಅಕ್ರಮ ನಡೆಸಿರುವ ಆರೋಪಗಳಿವೆ. ಹೀಗಾಗಿ, ತನಿಖಾ ವರದಿ ಅಂತಿಮಗೊಳಿಸಲು ಇನ್ನಷ್ಟು ಸಮಯ ಬೇಕು' ಎಂದರು.

ವಾದ–ಪ್ರತಿವಾದ ಆಲಿಸಿದ ನ್ಯಾಯಪೀಠ, 'ಎಲ್ಲರನ್ನೂ ಒಂದೇ ದೃಷ್ಟಿಯಲ್ಲಿ ನೋಡಲಾಗದು. ಅಮಾಯಕರ ದೃಷ್ಟಿಯಿಂದಲೂ ಪರಿಶೀಲನೆ ಮಾಡಬೇಕಿದೆ. ಬೇಕಾದರೆ ಅರ್ಜಿದಾರರ ವಿರುದ್ಧ ಪ್ರಾಥಮಿಕ ತನಿಖೆ ನಡೆಸಿ. ಆದರೆ, ನಾವು ಈ ಸಂಬಂಧ ಯಾವುದೇ ನ್ಯಾಯಾಂಗ ಆದೇಶ ಮಾಡಲು ಹೋಗುವುದಿಲ್ಲ. ಆದಾಗ್ಯೂ, ಅರ್ಜಿದಾರರ ವಿಷಯದಲ್ಲಿ ನಿಮ್ಮ ಸ್ಪಷ್ಟ ನಿಲುವು ಪ್ರದರ್ಶಿಸಬೇಕು. ಒಂದು ವೇಳೆ ಅರ್ಜಿದಾರರಲ್ಲಿ ಯಾರಾದರೂ ಅಕ್ರಮದಲ್ಲಿ ಭಾಗಿಯಾಗಿದ್ದರೆ ಅಂತಹವರ ವಿರುದ್ಧ ತನಿಖೆ ಮುಂದುವರಿಸಬಹುದು. ಹೀಗಾಗಿ, ಈ ಪ್ರಕರಣದಲ್ಲಿ ತನಿಖಾಧಿಕಾರಿಗಳು ಕೈಗೊಂಡಿರುವ ಪ್ರಗತಿ ವರದಿಯನ್ನು ಜೂನ್ 15ರೊಳಗೆ ನ್ಯಾಯಾಲಯಕ್ಕೆ ಸಲ್ಲಿಸಿ' ಎಂದು ನಿರ್ದೇಶಿಸಿ ವಿಚಾರಣೆ ಮುಂದೂಡಿತು.

ಸತ್ಯ ಹೊರಗೆಡಹಲು ಕಸ್ಟಡಿ ವಿಚಾರಣೆ ಅಗತ್ಯ: 'ಸುಪ್ರೀಂ'

ನವದೆಹಲಿ (ಪಿಟಿಐ): 'ಸತ್ಯವನ್ನು ಹೊರಗೆಡಹುವ ಸಲುವಾಗಿ ಆರೋಪಿಯನ್ನು ಕಸ್ಟಡಿಗೆ ಪಡೆದು ವಿಚಾರಣೆ ನಡೆಸುವುದು ಅವಶ್ಯ. ಇದು ತನಿಖಾ ಸಂಸ್ಥೆಗೆ ಇರುವಂತಹ ಮಹತ್ವದ ಹಕ್ಕು' ಎಂದು ಸುಪ್ರೀಂ ಕೋರ್ಟ್ ಸೋಮವಾರ ಅಭಿಪ್ರಾಯಪಟ್ಟಿದೆ.

ಆರೋಪಿಯೊಬ್ಬನನ್ನು ಜಾಮೀನಿನ ಮೇಲೆ ಬಿಡುಗಡೆಗೊಳಿಸುವಂತೆ ಕಲ್ಕತ್ತ ಹೈಕೋರ್ಟ್ ಕಳೆದ ವರ್ಷದ ಸೆಪ್ಟೆಂಬರ್‌ನಲ್ಲಿ ಆದೇಶಿಸಿತ್ತು. ಹೈಕೋರ್ಟ್ ಆದೇಶ ಪ್ರಶ್ನಿಸಿ ಸಿಬಿಐ, ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿತ್ತು.

ಮೇಲ್ಮನವಿಯ ವಿಚಾರಣೆ ನಡೆಸಿದ ದ್ವಿಸದಸ್ಯ ನ್ಯಾಯಪೀಠವು ಆರೋಪಿಯನ್ನು ನಾಲ್ಕು ದಿನಗಳವರೆಗೆ ಕಸ್ಟಡಿಗೆ ಪಡೆಯಲು ಸಿಬಿಐಗೆ ಅನುಮತಿ ನೀಡಿದೆ.

ಒಳ ಉಡುಪಿನಲ್ಲಿ ₹1.33 ಕೋಟಿಯ ಚಿನ್ನ

ದೇವನಹಳ್ಳಿ: ಇಲ್ಲಿನ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಏ.9ರಂದು ದುಬೈನಿಂದ ಆಗಮಿಸಿದ್ದ ಮೂವರು ಪ್ರಯಾಣಿಕರು ತಮ್ಮ ಒಳ ಉಡುಪಿನಲ್ಲಿ ಇಟ್ಟುಕೊಂಡಿದ್ದ ₹1.33 ಕೋಟಿ ಮೌಲ್ಯದ 2.23 ಕೆ.ಜಿ ಚಿನ್ನವನ್ನು ಅಧಿಕಾರಿಗಳು ವಶಕ್ಕೆ ಪಡೆದಿದ್ದಾರೆ.

ಚಿತ್ರಾವಳಿ



ನಗರದಲ್ಲಿ ಭಾನುವಾರ ವೀರಶೈವ ಲಿಂಗಾಯತ ಮಹಾವೇದಿಕೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸತತ ಹೋರಾಟದ ಮೂಲಕ 2ಡಿ ಮೀಸಲಾತಿ ಕಲ್ಪಿಸಿಕೊಟ್ಟ ಲಿಂಗಾಯತ ಪಂಚಮಸಾಲಿ ಮಹಾಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಅವರಿಗೆ ವೇದಿಕೆಯ ರಾಜ್ಯ ಘಟಕದ ಅಧ್ಯಕ್ಷ ಪ್ರಶಾಂತ್ ಕಲ್ಲೂರ್ ನೇತೃತ್ವದಲ್ಲಿ ಗುಲಾಬಿ ಹೂವುಗಳಿಂದ ಪಾದಪೂಜೆ ಮಾಡಲಾಯಿತು



ಪಿಇಎಸ್ ವಿಶ್ವವಿದ್ಯಾಲಯದ ಔಷಧ ವಿಜ್ಞಾನ ವಿಭಾಗ ನಗರದಲ್ಲಿ ಆಯೋಜಿಸಿದ ಎರಡು ದಿನಗಳ ಅಂತರ ಕಾಲೇಜು ಸಾಂಸ್ಕೃತಿಕ ಉತ್ಸವ 'ಆಕಾಂಕ್ಷೆ 2023' ಪ್ರೇಕ್ಷಕರನ್ನು ರಂಜಿಸಿತು –ಪ್ರಜಾವಾಣಿ ಚಿತ್ರ

ದೂರುಗಳ ಹಿನ್ನೆಲೆ ಪರಿಶೀಲಿಸಿ: ಬಿಬಿಎಂಪಿಗೆ ಹೈಕೋರ್ಟ್ ಸೂಚನೆ

ಪ್ರಜಾವಾಣಿ ವಾರ್ತೆ

ಹೈಕೋರ್ಟ್ ಸುದ್ದಿ

ಬೆಂಗಳೂರು: 'ವೈಯಕ್ತಿಕ ದ್ವೇಷಾಸೂಯೆಗಳ ಹಿನ್ನೆಲೆಯಲ್ಲಿ ಸೇಡು ತೀರಿಸಿಕೊಳ್ಳಲು ದೂರು ಸಲ್ಲಿಸುವಂತಹ ವ್ಯಕ್ತಿಗಳ ಕುರಿತಾಗಿ ಎಚ್ಚರದಿಂದ ವ್ಯವಹರಿಸಬೇಕು' ಎಂದು ಹೈಕೋರ್ಟ್, ಬಿಬಿಎಂಪಿಗೆ ಸೂಚಿಸಿದೆ.

ಪ್ರಕರಣವೊಂದರಲ್ಲಿ ನಾಗವಾರದ ಎನ್.ರಾಮಮೂರ್ತಿ ಎಂಬುವರು ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

'ಈ ಅರ್ಜಿಯನ್ನು ಗಮನಿಸಿದರೆ ಇದು ಸಹೋದರರ ಮಧ್ಯದ ವೈಯಕ್ತಿಕ ಸೇಡಿನ ಹಿನ್ನೆಲೆಯಲ್ಲಿ ಉಂಟಾದ ವ್ಯಾಜ್ಯವಾಗಿರುವುದು ಕಂಡು ಬಂದಿದೆ. ಹಾಗಾಗಿ, ಇಂತಹ ದೂರುಗಳು ಬಂದಾಗ ಎಚ್ಚರದಿಂದ ವರ್ತಿಸಬೇಕಾಗುತ್ತದೆ' ಎಂದು ಬಿಬಿಎಂಪಿಗೆ ಸಲಹೆ ನೀಡಿದೆ.

'ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ ಕಾಯ್ದೆ–1976ರ ಕಲಂ 320 ಅನ್ನು ಪರಿಶೀಲಿಸಿದರೆ ಕೇವಲ ದುರಸ್ತಿ ಕಾರ್ಯದಿಂದಾಗಿ ಕಟ್ಟಡದ ಸ್ಥಿತಿಗತಿ ಅಥವಾ ಕಟ್ಟಡದ ವಿಸ್ತೀರ್ಣ ಬದಲಾವಣೆ ಆಗುವುದಿಲ್ಲ. ಕಟ್ಟಡವನ್ನು ಈಗಾಗಲೇ ವಾಸಯೋಗ್ಯವನ್ನಾಗಿ ಮಾಡಲು ದುರಸ್ತಿ ಮಾಡಲಾಗಿದೆ. ಹಾಗಾಗಿ, ಪಾಲಿಕೆ ಅರ್ಜಿದಾರರಿಗೆ ನೋಟಿಸ್ ನೀಡಬಾರದಿತ್ತು' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ಪ್ರಕರಣದ ವಿವರ: ಕಟ್ಟಡವೊಂದರ ಭಾಗವನ್ನು ರಸ್ತೆ ವಿಸ್ತೀರ್ಣದ ಕಾರಣಕ್ಕಾಗಿ ಬಿಬಿಎಂಪಿ ನೆಲಸಮ ಮಾಡಿತ್ತು. ಕಟ್ಟಡದ ಮಾಲೀಕರಾದ ಅರ್ಜಿದಾರರು ನೆಲಸಮವಾಗಿದ್ದ ಜಾಗವನ್ನು ಪ್ಲಾಸ್ಟಿಂಗ್ ಮಾಡಿಸಿ ಅದಕ್ಕೆ ರೋಲಿಂಗ್ ಶಟರ್ ಅಳವಡಿಸಿದ್ದರು. ಅರ್ಜಿದಾರರ ಸಹೋದರ ಎನ್. ರಾಧಾಕೃಷ್ಣ, ಅರ್ಜಿದಾರರ ವಿರುದ್ಧ ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ ಕಾಯ್ದೆಯ ಕಲಂ 321(3)ರ ಅಡಿಯಲ್ಲಿ, 'ಅನುಮತಿ ಪಡೆಯದೆ ಕಟ್ಟಡ ಮಾರ್ಪಾಡು ಮಾಡುತ್ತಿದ್ದಾರೆ' ಎಂದು ಆರೋಪಿಸಿ ಬಿಬಿಎಂಪಿಗೆ ದೂರು ನೀಡಿದ್ದರು.

ಈ ಹಿನ್ನೆಲೆಯಲ್ಲಿ ಬಿಬಿಎಂಪಿ ಅರ್ಜಿದಾರರಿಗೆ ನೋಟಿಸ್ ನೀಡಿತ್ತು. ಅರ್ಜಿದಾರರು ಈ ನೋಟಿಸ್ ಅನ್ನು ಪ್ರಶ್ನಿಸಿ ಕರ್ನಾಟಕ ಮೇಲ್ಮನವಿ ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಿದ್ದರು. ಆದರೆ ಕೆಎಟಿ ಆ ಅರ್ಜಿಯನ್ನು 2016ರ ಫೆಬ್ರುವರಿ 20ರಂದು ವಜಾಗೊಳಿಸಿತ್ತು. ಇದನ್ನು ಪ್ರಶ್ನಿಸಿ ಅರ್ಜಿದಾರರು ಹೈಕೋರ್ಟ್ ಮೆಟ್ಟಿಲೇರಿದ್ದರು.

ಯಶವಂತಪುರ ರೈಲು ನಿಲ್ದಾಣ: ಎರಡು ದ್ವಾರಗಳು ಪ್ರಯಾಣಿಕರಿಗೆ ಮುಕ್ತ

ಮೂರನೇ ಪ್ರವೇಶದ್ವಾರ ಬಂದ್

ಪ್ರಜಾವಾಣಿ ವಾರ್ತೆ



ಯಶವಂತಪುರ ರೈಲು ನಿಲ್ದಾಣದ ಮೂರನೇ ದ್ವಾರ

ಮುಖ್ಯಾಂಶಗಳು

- ಮಂಗಳವಾರದಿಂದ ಅನಿರ್ದಿಷ್ಟಾವಧಿಗೆ ಸ್ಥಗಿತ
- ನಿಲ್ದಾಣದ ಪುನರ್ ಅಭಿವೃದ್ಧಿ ಕಾಮಗಾರಿ ಕೈಗೆತ್ತಿಕೊಂಡಿರುವ ಇಲಾಖೆ
- ರೈಲ್ವೆ ಹೋರಾಟಗಾರರ ಅಸಮಾಧಾನ

ಬೆಂಗಳೂರು: ಯಶವಂತಪುರ ರೈಲು ನಿಲ್ದಾಣದ ಮೂರನೇ ಪ್ರವೇಶದ್ವಾರ ಮಂಗಳವಾರದಿಂದ ಅನಿರ್ದಿಷ್ಟಾವಧಿಗೆ ಸ್ಥಗಿತಗೊಳ್ಳಲಿದೆ.

ರೈಲು ನಿಲ್ದಾಣದ ಪುನರ್ ಅಭಿವೃದ್ಧಿ ಕಾಮಗಾರಿ ಕೈಗೆತ್ತಿಕೊಳ್ಳಲಾಗುತ್ತಿದ್ದು, ಇದರಿಂದಾಗಿ ಮೂರನೇ ದ್ವಾರವನ್ನು ಮುಚ್ಚಲಾಗುತ್ತಿದೆ ಎಂದು ನೈರುತ್ಯ ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

ಮೂರನೇ ಪ್ರವೇಶದ್ವಾರವು ಯಶವಂತಪುರ ಮಾರುಕಟ್ಟೆಯ ಮತ್ತಿಕೆರೆ, ರೈಲ್ವೆ ಕಾಲೊನಿಗೆ ಹೋಗುವ ಮಾರ್ಗದಲ್ಲಿದೆ. ಇಲ್ಲಿ ಎಸ್ಕಲೇಟರ್, ಎತ್ತರಿಸಿದ ಪಾದಚಾರಿ ಮಾರ್ಗಗಳಿದ್ದು, ಅವುಗಳನ್ನೂ ಕಾಮಗಾರಿ ಪೂರ್ಣಗೊಳ್ಳುವ ತನಕ ಮುಚ್ಚಲಾಗುವುದು. ಉಳಿದ ಎರಡು ದ್ವಾರಗಳು ಪ್ರಯಾಣಿಕರಿಗೆ ಮುಕ್ತವಾಗಿರಲಿವೆ ಎಂದು ವಿವರಿಸಿದ್ದಾರೆ.

ಯಶವಂತಪುರ ರೈಲು ನಿಲ್ದಾಣದಿಂದ ನಿತ್ಯ 60 ಸಾವಿರಕ್ಕೂ ಹೆಚ್ಚು ಪ್ರಯಾಣಿಕರು ಸಂಚರಿಸುತ್ತಿದ್ದಾರೆ. ಬೇಸಿಗೆ ರಜೆ ಸಂದರ್ಭದಲ್ಲಿ ಪ್ರಯಾಣಿಕರ ಸಂಖ್ಯೆ ಹೆಚ್ಚಾಗುವ ಸಾಧ್ಯತೆ ಇದೆ. ಈ ಸಂದರ್ಭದಲ್ಲಿ ಕಾಮಗಾರಿ ಕೈಗೆತ್ತಿಕೊಳ್ಳುವ ತುರ್ತು ಇರಲಿಲ್ಲ ಎಂದು ರೈಲ್ವೆ ಹೋರಾಟಗಾರರು ಹೇಳುತ್ತಾರೆ.

ಮಾದಕ ವಸ್ತು ಸಾಗಣೆ, ಮಾರಾಟದ ವಿರುದ್ಧ ಕಾರ್ಯಾಚರಣೆ

₹ 8.52 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡ್ರಗ್ಸ್ ಸಾಗಣೆ ಹಾಗೂ ಮಾರಾಟದ ವಿರುದ್ಧ ಕಾರ್ಯಾಚರಣೆ ನಡೆಸಿರುವ ದಕ್ಷಿಣ ವಿಭಾಗದ ಪೊಲೀಸರು, ನೈಜೀರಿಯಾದ ಐವರು ಪ್ರಜೆಗಳನ್ನು ಬಂಧಿಸಿದ್ದಾರೆ.

'ಡ್ರಗ್ಸ್ ಮಾರಾಟದ ಮೇಲೆ ಹೆಚ್ಚಿನ ನಿಗಾ ವಹಿಸಲಾಗಿದೆ. ವಿ.ವಿ.ಪುರ ಹಾಗೂ ಜಯನಗರ ಪೊಲೀಸರು ಇತ್ತೀಚೆಗೆ ಪ್ರತ್ಯೇಕ ಕಾರ್ಯಾಚರಣೆ ನಡೆಸಿ, ₹ 8.52 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ ಮಾಡಿದ್ದಾರೆ' ಎಂದು ದಕ್ಷಿಣ ವಿಭಾಗದ ಡಿಸಿಪಿ ಪಿ. ಕೃಷ್ಣಕಾಂತ್ ಮಾಹಿತಿ ನೀಡಿದರು.

ಅಪರಾಧ ಸುದ್ದಿ

ಅಕ್ರಮ ವಾಸ: 'ನೈಜೀರಿಯಾದ ಲಾವ್ರೆನ್ಸೆ ಇಜೆನ್ವೊಕೆ ಅಲಿಯಾಸ್ ಪೀಟರ್ ಹಾಗೂ ಚೊಕ್ವೊನೆಜಿಮ್ ಒನ್ವೆಕಚಿ ಅಲಿಯಾಸ್ ಬ್ರೈಟ್ ಎಂಬುವವರನ್ನು ವಿ.ವಿ.ಪುರ ಪೊಲೀಸರು ಬಂಧಿಸಿದ್ದಾರೆ. ವಿದ್ಯಾರ್ಥಿ ವೀಸಾದಡಿ ನಗರಕ್ಕೆ ಬಂದಿದ್ದ ಇಬ್ಬರು, ವೀಸಾ ಅವಧಿ ಮುಗಿದರೂ ವಾಪಸು ಹೋಗಿರಲಿಲ್ಲ. ಮೂರು ವರ್ಷಗಳಿಂದ ಅಕ್ರಮವಾಗಿ ವಾಸವಿದ್ದರು' ಎಂದು ಪೊಲೀಸರು ಹೇಳಿದರು.

'ಹೊರ ದೇಶ ಹಾಗೂ ಹೊರ ರಾಜ್ಯಗಳ ಪೆಡ್ಲರ್ ಜೊತೆ ಆರೋಪಿಗಳು ಒಡನಾಟ ಹೊಂದಿದ್ದರು. ಅವರ ಮೂಲಕ ಎಂಡಿಎಂಎ, ಕೊಕೇನ್ ಖರೀದಿಸಿ ತಂದು ನಗರಕ್ಕೆ ಮಾರುತ್ತಿದ್ದರು. ಐಟಿ–ಬಿಟಿ ಕಂಪನಿಗಳ ಕೆಲ ಉದ್ಯೋಗಿಗಳು, ಶಾಲಾ–ಕಾಲೇಜಿನ ಕೆಲ ವಿದ್ಯಾರ್ಥಿಗಳು ಆರೋಪಿಗಳ ಬಳಿ ಡ್ರಗ್ಸ್ ಖರೀದಿ ಮಾಡುತ್ತಿದ್ದರು' ಎಂದರು.

'ಠಾಣೆ ವ್ಯಾಪ್ತಿಯಲ್ಲಿ ಡ್ರಗ್ಸ್ ಮಾರುತ್ತಿದ್ದ ವೇಳೆ ಪೀಟರ್ ಹಾಗೂ ಬ್ರೈಟ್ ಸಿಕ್ಕಿಬಿದ್ದಿದ್ದರು. ಬಿದರಹಳ್ಳಿ ಬಳಿ ತಾವು ವಾಸವಿದ್ದ ಮನೆಯಲ್ಲಿ ಡ್ರಗ್ಸ್ ಸಂಗ್ರಹಿಸಿದ್ದ ಬಗ್ಗೆ ಮಾಹಿತಿ ಬಾಯ್ಬಿಟ್ಟಿದ್ದರು. ಮನೆ ಮೇಲೆ ದಾಳಿ ಮಾಡಲಾಗಿದೆ. ಆರೋಪಿಗಳಿಂದ 1 ಕೆ.ಜಿ 850 ಗ್ರಾಂ ಬಿಳಿ ಎಂಡಿಎಂಎ, 1 ಕೆ.ಜಿ 150 ಗ್ರಾಂ ಕಂದು ಎಂಡಿಎಂಎ ಹಾಗೂ 310 ಗ್ರಾಂ ಕೊಕೇನ್ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

ಜಯನಗರದಲ್ಲಿ ಸಿಕ್ಕಿಬಿದ್ದ ಆರೋಪಿಗಳು: 'ನೈಜೀರಿಯಾದ ಹಸ್ಲೆ, ಫ್ರಾಂಕ್ ಅಲಿಯಾಸ್ ಸಂಡೆ ಹಾಗೂ ಇಮಾನ್ಯುಲ್ ಎಂಬುವವರನ್ನು ಜಯನಗರ ಪೊಲೀಸರು ಬಂಧಿಸಿದ್ದಾರೆ. ಮೂವರಿಂದ ₹ 1 ಕೆ.ಜಿ 152 ಗ್ರಾಂ ಎಂಡಿಎಂಎ ಹಾಗೂ 40 ಗ್ರಾಂ ಕೊಕೇನ್ ಜಪ್ತಿ ಮಾಡಲಾಗಿದೆ' ಎಂದು ತಿಳಿಸಿದರು.

ಚರಂಡಿಯಲ್ಲಿ ಪತ್ತೆಯಾಗಿದ್ದ ಮೃತದೇಹ • ಮೂವರ ಬಂಧನ

ಕಳ್ಳತನಕ್ಕೆ ಬಂದನೆಂದು ಹೊಡೆದು ಕೊಂದರು

ಪ್ರಜಾವಾಣಿ ವಾರ್ತೆ


ಸೈಫುಲ್ಲಾ


ಪ್ರಶಾಂತ್


ಶಾಬಾಜ್


ಶೇಖ್ ಜಬಿವುಲ್ಲಾ

ಬೆಂಗಳೂರು: ಕಳ್ಳತನಕ್ಕೆ ಬಂದಿದ್ದಾರೆಂದು ತಿಳಿದು ಸೈಫುಲ್ಲಾ (36) ಎಂಬುವವರನ್ನು ಕೊಲೆ ಮಾಡಿ ಚರಂಡಿಗೆ ಮೃತದೇಹ ಎಸೆದಿದ್ದ ಆರೋಪದಡಿ ಗುಜರಿ ಅಂಗಡಿ ಮಾಲೀಕ ಸೇರಿ ಮೂವರನ್ನು ರಾಮಮೂರ್ತಿನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಗುಜರಿ ಅಂಗಡಿ ಮಾಲೀಕ ಶಾಬಾಜ್ ಅಲಿಯಾಸ್ ಬಾಬಾನ್ (28), ಕೆಲಸಗಾರರಾದ ಪ್ರಶಾಂತ್ (34) ಹಾಗೂ ಶೇಖ್ ಜಬಿವುಲ್ಲಾ (32) ಬಂಧಿತರು. ಕೆ.ಜಿ.ಹಳ್ಳಿಯ ಮುಸ್ಲಿಂ ಕಾಲೊನಿ ನಿವಾಸಿ ಸೈಫುಲ್ಲಾ ಅವರನ್ನು ಮೂವರು ಸೇರಿಕೊಂಡು ಕೊಲೆ ಮಾಡಿದ್ದರು. ಚರಂಡಿಯಲ್ಲಿ ಸಿಕ್ಕಿದ್ದ ಮೃತದೇಹದ ಬಗ್ಗೆ ಪ್ರಕರಣ ದಾಖಲಿಸಿಕೊಂಡು ಆರೋಪಿಗಳನ್ನು ಬಂಧಿಸಲಾಗಿದೆ' ಎಂದು ಪೂರ್ವ ವಿಭಾಗದ ಡಿಸಿಪಿ ಭೀಮಾಶಂಕರ್ ಗುಳೇದ ತಿಳಿಸಿದರು.

ನಿರಂತರ ಕಳ್ಳತನ: 'ಆರೋಪಿ ಶಾಬಾಜ್‌ನ ಗುಜರಿ ಅಂಗಡಿಯಲ್ಲಿ ನಿರಂತರವಾಗಿ ಕಳ್ಳತನ ನಡೆಯುತ್ತಿತ್ತು. ಇದರಿಂದ ಆತನಿಗೆ ನಷ್ಟವಾಗುತ್ತಿತ್ತು. ರಾತ್ರಿ ಸಂದರ್ಭದಲ್ಲಿ ಅಂಗಡಿ ಮೇಲೆ ನಿಗಾ ಇರಿಸುವಂತೆ ಕೆಲಸಗಾರರಿಗೆ ಹೇಳಿದ್ದ. ಅದರಂತೆ ಪ್ರಶಾಂತ್, ನಿತ್ಯವೂ ರಾತ್ರಿ ಅಂಗಡಿ ಬಳಿ ಸುತ್ತಾಡುತ್ತಿದ್ದ' ಎಂದು ಪೊಲೀಸರು ಹೇಳಿದರು.

'ಫೆ. 28ರಂದು ರಾತ್ರಿ ಸೈಫುಲ್ಲಾ ಗುಜರಿ ಅಂಗಡಿ ಬಳಿ ಹೋಗಿದ್ದರು. ಅವರನ್ನು ನೋಡಿದ್ದ ಪ್ರಶಾಂತ್, ಮಾಲೀಕ ಶಾಬಾಜ್‌ಗೆ ವಿಷಯ ತಿಳಿಸಿದ್ದ. ಸ್ಥಳಕ್ಕೆ ಬಂದು ಸೈಫುಲ್ಲಾ ಅವರನ್ನು ಹಿಡಿದುಕೊಂಡಿದ್ದ ಶಾಬಾಜ್, ಹಲ್ಲೆ ಮಾಡಿದ್ದ. ನಂತರ, ಮೂವರು ಸೇರಿ ಸೈಫುಲ್ಲಾ ಅವರನ್ನು ಥಳಿಸಿದ್ದರು' ಎಂದು ಪೊಲೀಸರು ತಿಳಿಸಿದರು.

'ಕೆಲಸಕ್ಕೆ ಹೋಗಿದ್ದ ಸೈಫುಲ್ಲಾ ಹಲವು ದಿನವಾದರೂ ಮನೆಗೆ ವಾಪಸು ಬಾರದಿದ್ದರಿಂದ ಪೋಷಕರು ಗಾಬರಿಗೊಂಡಿದ್ದರು. ಸೈಫುಲ್ಲಾ ಕಾಣೆಯಾದ ಬಗ್ಗೆ ಕೆ.ಜಿ.ಹಳ್ಳಿ ಠಾಣೆಗೆ ಏಪ್ರಿಲ್ 8ರಂದು ದೂರು ನೀಡಿದ್ದರು. ಅದರ ತನಿಖೆ ನಡೆಯುತ್ತಿರುವಾಗಲೇ, ಸಾದಹಳ್ಳಿ ಬಳಿಯ ಚರಂಡಿಯಲ್ಲಿ ಸೈಫುಲ್ಲಾ ಮೃತದೇಹ ಪತ್ತೆಯಾಗಿತ್ತು. ಅನುಮಾನಾಸ್ಪದ ಸಾವು ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿತ್ತು' ಎಂದರು.

ಸ್ನೇಹಿತನ ಹುಡುಕಾಟದ ನಾಟಕ: 'ಆರೋಪಿ ಶೇಖ್ ಜಬಿವುಲ್ಲಾ, ಸೈಫುಲ್ಲಾ ಅವರ ಸ್ನೇಹಿತ. ಕೊಲೆ ಮಾಡಿ ಕೆಲ ದಿನ ತಲೆಮರೆಸಿಕೊಂಡಿದ್ದ ಈತ, ನಂತರ ಸೈಫುಲ್ಲಾ ಮನೆಗೆ ಹೋಗಿದ್ದ. ಪೋಷಕರ ಜೊತೆ ಸೇರಿ ಹುಡುಕಾಟದ ನಾಟಕವಾಡಿದ್ದ' ಎಂದು ಪೊಲೀಸರು ಹೇಳಿದರು.

'ಸೈಫುಲ್ಲಾ ಕೊಲೆ ಬಗ್ಗೆ ಕೆಲ ತಾಂತ್ರಿಕ ಪುರಾವೆಗಳು ಸಿಕ್ಕಿದ್ದವು. ಅದನ್ನು ಆಧರಿಸಿ ಜಬೀವುಲ್ಲಾನನ್ನು ವಶಕ್ಕೆ ಪಡೆದು ವಿಚಾರಿಸಿದಾಗ ಕೊಲೆ ರಹಸ್ಯ ಬಾಯ್ಬಿಟ್ಟ. ನಂತರ, ಮಾಲೀಕ ಹಾಗೂ ಮತ್ತೊಬ್ಬನನ್ನು ಬಂಧಿಸಲಾಯಿತು. ಕಳ್ಳತನಕ್ಕೆ ಬಂದರೆಂದು ತಿಳಿದು ಹತ್ಯೆ ಮಾಡಿರುವುದಾಗಿ ತಪ್ಪೊಪ್ಪಿಕೊಂಡಿದ್ದಾರೆ' ಎಂದು ಅವರು ತಿಳಿಸಿದರು.

ನಾಗರಬಾವಿಯಲ್ಲಿ ಸಾಯಿಗೋಲ್ಡ್ ಪ್ಯಾಲೇಸ್ ಮಳಿಗೆ ಆರಂಭ

ಪ್ರಜಾವಾಣಿ ವಾರ್ತೆ


ಶ್ರೀಸಾಯಿಗೋಲ್ಡ್ ಪ್ಯಾಲೇಸ್‌ನ ನೂತನ ಶಾಖೆಯ ಉದ್ಘಾಟನಾ ಸಮಾರಂಭದಲ್ಲಿ ವಿನಯ್ ಗುರೂಜಿ, ನಟಿ ಅದಿತಿ ಪ್ರಭುದೇವ, ನಟಿ ರೂಪಿಕಾ, ಮಾಲೀಕ ಟಿ.ಎ.ಶರವಣ ಪಾಲ್ಗೊಂಡಿದ್ದರು.

ಬೆಂಗಳೂರು: ನಾಗರಬಾವಿಯಲ್ಲಿ ಶ್ರೀಸಾಯಿಗೋಲ್ಡ್ ಪ್ಯಾಲೇಸ್ ನೂತನ ಶಾಖೆ ಆರಂಭಗೊಂಡಿದೆ. ನಟಿ ಅದಿತಿ ಪ್ರಭುದೇವ, ವಿನಯ್ ಗುರೂಜಿ ಅವರು ನೂತನ ಮಳಿಗೆ ಲೋಕಾರ್ಪಣೆ ಮಾಡಿದರು.

ವಿನಯ್ ಗುರೂಜಿ ಮಾತನಾಡಿ, 'ದೇವರ ಅಲಂಕಾರಕ್ಕೂ ಆಭರಣಗಳು ಅಗತ್ಯ. ಆಭರಣಗಳು ಮಹಿಳೆಯರಿಗೆ ಅಚ್ಚುಮೆಚ್ಚು. ಆಭರಣ ಸಮೃದ್ಧಿಯ ಸಂಕೇತ' ಎಂದು ಹೇಳಿದರು.

ನಟಿ ಅದಿತಿ ಪ್ರಭುದೇವ ಅವರು, 'ಮಹಿಳೆಯರಿಗೆ ಚಿನ್ನವೆಂದರೆ ಇಷ್ಟ. ಚಿನ್ನಕ್ಕೆ ಬಡವರು, ಬಲ್ಲಿದರು ಎಂಬ ಭೇದವಿಲ್ಲ. ಸಾಯಿಗೋಲ್ಡ್ ಪ್ಯಾಲೇಸ್ ರಾಯಭಾರಿಯಾಗಿ ಹಲವಾರು ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿದ್ದು, ಸಂಸ್ಥೆ ಗ್ರಾಹಕರ ನಂಬಿಕೆಗೆ ಪಾತ್ರವಾಗಿದೆ' ಎಂದರು.

ಮಾಲೀಕ ಟಿ.ಎ.ಶರವಣ ಮಾತನಾಡಿ, ನಾಗರಬಾವಿಯಲ್ಲಿ ಮಳಿಗೆ ಸ್ಥಾಪನೆಯ ಬಹುದಿನಗಳ ಬೇಡಿಕೆ ಈಡೇರಿದ್ದು, ಚಿನ್ನ ಎಲ್ಲರಿಗೂ ಆಸೆ ಪಡುವ ಲೋಹ. ಚಿನ್ನದ ಸೌಂದರ್ಯ ಅಮರ. ಅದರ ಸಂಪತ್ತು ಎಂದಿಗೂ ಕರಗುವುದಿಲ್ಲ. ಅದರ ಮೌಲ್ಯ ಪ್ರತಿದಿನ, ವರ್ಷದಿಂದ ವರ್ಷಕ್ಕೆ ವೃದ್ಧಿಸುತ್ತದೆ ಎಂದರು. ಉದ್ಘಾಟನೆಯ ಪ್ರಯುಕ್ತ ಪ್ರತಿ ಗ್ರಾಂ ಚಿನ್ನ ಹಾಗೂ ಪ್ರತಿ ಕ್ಯಾರೆಟ್ ವಜ್ರಾಭರಣದ ಮೇಲೂ ಡಿಸ್ಕೌಂಟ್ ದೊರೆಯಲಿದೆ ಎಂದು ತಿಳಿಸಿದರು.

ರೌಡಿ ಹತ್ಯೆ

ಬೆಂಗಳೂರು: ನಗರದ ಇಟ್ಟಮಡು ಬಳಿ ರೌಡಿ ಶಿವರಾಜು (29) ಎಂಬಾತನನ್ನು ಬಿಯರ್ ಬಾಟಲಿಯಿಂದ ಹೊಡೆದು ಕೊಲೆ ಮಾಡಲಾಗಿದ್ದು, ಈ ಸಂಬಂಧ ಸುಬ್ರಹ್ಮಣ್ಯಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಸಿ.ಕೆ. ಅಚ್ಚುಕಟ್ಟು ನಿವಾಸಿ ಶಿವರಾಜು, ಪೇಂಟರ್ ಕೆಲಸ ಮಾಡುತ್ತಿದ್ದ. ಈತ ಹಲವು ಪ್ರಕರಣಗಳಲ್ಲಿ ಜೈಲಿಗೂ ಹೋಗಿ ಬಂದಿದ್ದ. ಈತನ ಹೆಸರು ಸಿ.ಕೆ. ಅಚ್ಚುಕಟ್ಟು ಠಾಣೆಯ ರೌಡಿ ಪಟ್ಟಿಯಲ್ಲಿತ್ತು' ಎಂದು ಪೊಲೀಸರು ಹೇಳಿದರು.

'ರೌಡಿ ಮಂಜುನಾಥ್ ಹಾಗೂ ಆತನ ಮೂವರು ಸಹಚರರು ಸೇರಿ ಶಿವರಾಜುನನ್ನು ಕೊಲೆ ಮಾಡಿರುವ ಮಾಹಿತಿ ಇದೆ. ಸದ್ಯ ಅವರೆಲ್ಲ ತಲೆಮರೆಸಿಕೊಂಡಿದ್ದು, ಪತ್ತೆಗೆ ವಿಶೇಷ ತಂಡ ರಚಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಶಿವರಾಜು ಹಾಗೂ ಸ್ನೇಹಿತರು, ಇಟ್ಟಮಡು ಬಳಿಯ ಬಾರ್‌ಗೆ ಭಾನುವಾರ ರಾತ್ರಿ ಹೋಗಿದ್ದರು. ಮದ್ಯ ಕುಡಿದು ಬಾರ್‌ನಿಂದ ಹೊರಗೆ ಬಂದಿದ್ದಾಗ, ರೌಡಿ ಮಂಜುನಾಥ್ ಎದುರಾಗಿದ್ದ. ಇಬ್ಬರ ನಡುವೆ ಮಾತಿಗೆ ಮಾತು ಬೆಳೆದು ಜಗಳ ಶುರುವಾಗಿತ್ತು.'

'ಎರಡೂ ಕಡೆಯವರ ನಡುವೆ ಮಾರಾಮಾರಿ ಆಯಿತು. ಇದೇ ವೇಳೆ ರೌಡಿ ಮಂಜು ಹಾಗೂ ಸಹಚರರು, ಬಿಯರ್ ಬಾಟಲಿಯಿಂದ ಶಿವರಾಜು ತಲೆಗೆ ಹೊಡೆದಿದ್ದರು. ನಂತರ, ರಸ್ತೆಗೆ ಎಳೆದೊಯ್ದು ಕಲ್ಲಿಗೆ ತಲೆ ಗುದ್ದಿಸಿ ಪರಾರಿಯಾಗಿದ್ದಾರೆ. ರಕ್ತಸ್ರಾವದಿಂದ ಶಿವರಾಜು ಮೃತಪಟ್ಟಿದ್ದಾನೆ' ಎಂದರು.

ನಕಲಿ ಉಯಿಲು ಆರೋಪ: ನೋಟರಿ ವಿರುದ್ಧದ ಪ್ರಕರಣ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಕಲಿ ಉಯಿಲನ್ನು (ವಿಲ್) ದೃಢೀಕರಿಸಿದ (ಅಟೆಸ್ಟ್) ಆರೋಪಕ್ಕೆ ಸಂಬಂಧಿಸಿದಂತೆ ನೋಟರಿಯೊಬ್ಬರ ವಿರುದ್ಧ ದಾಖಲಾಗಿದ್ದ ಕ್ರಿಮಿನಲ್ ಪ್ರಕರಣವನ್ನು ಹೈಕೋರ್ಟ್ ರದ್ದುಪಡಿಸಿದೆ.

'ನನ್ನ ವಿರುದ್ಧ ಬೆಂಗಳೂರಿನ 44ನೇ ಎಸಿಎಂಎಂ ನ್ಯಾಯಾಲಯದ ಕ್ರಮ ರದ್ದುಪಡಿಸಬೇಕು' ಎಂದು ಕೋರಿ ನೋಟರಿ ಜಿ.ಎನ್. ವೆಂಕಟರಮಣಪ್ಪ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಆರ್.ನಟರಾಜನ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿದ್ದು ಈ ಕುರಿತಂತೆ ಆದೇಶಿಸಿದೆ.

'ಕಾನೂನು ಪ್ರಕಾರ ನಕಲಿ ಉಯಿಲು ದೃಢೀಕರಿಸಿದ ಆರೋಪಕ್ಕೆ ಸಂಬಂಧಿಸಿದಂತೆ ಕೇಂದ್ರ ಅಥವಾ ರಾಜ್ಯ ಸರ್ಕಾರದ ಅಧಿಕಾರಿಯು ಲಿಖಿತ ರೂಪದಲ್ಲಿ ದೂರು ಸಲ್ಲಿಸಬೇಕಾಗುತ್ತದೆ. ಈ ನಿಯಮವು ಈ ಪ್ರಕರಣದಲ್ಲಿ ಪಾಲನೆಯಾಗಿಲ್ಲ' ಎಂದು ಪೀಠ ಹೇಳಿದೆ.

'ಪ್ರಕರಣದಲ್ಲಿ ಅರ್ಜಿದಾರರ ವಿರುದ್ಧ ಖಾಸಗಿ ದೂರು ಸಲ್ಲಿಸಲಾಗಿದೆ. ಎಲ್ಲಾ ಆರೋಪಿಗಳು ಒಟ್ಟಾಗಿ ದುರುದ್ದೇಶದಿಂದ ನಕಲಿ ಉಯಿಲು ಸಿದ್ಧಪಡಿಸಿದ್ದಾರೆ ಎಂದು ದೂರುದಾರರು ಅಸ್ಪಷ್ಟ ಆರೋಪ ಮಾಡಿದ್ದಾರೆ. ಇದಕ್ಕೆ ಪೂರಕ ಸಾಕ್ಷ್ಯಾಧಾರಗಳನ್ನುಒದಗಿಸಿಲ್ಲ. ಆದರೆ, ವಿಚಾರಣಾ ನ್ಯಾಯಾಲಯವು ಆರೋಪವನ್ನು ಪರಿಗಣಿಸಿ ದೂರನ್ನು ವಿಚಾರಣೆಗೆ ಅಂಗೀಕರಿಸಿದೆ. ಇದು ನೋಟರಿಗಳ ಕಾಯ್ದೆ-1952ರ ಕಲಂ 13ಕ್ಕೆ ವಿರುದ್ಧವಾಗಿದೆ ಎಂದು ವಿಚಾರಣೆ ರದ್ದುಪಡಿಸಿದೆ.

ಪ್ರಕರಣವೇನು?: ವೆಂಕಟರಮಣಪ್ಪ ಇತರೆ 6 ಆರೋಪಿಗಳೊಂದಿಗೆ ಜೊತೆಗೂಡಿ ಯಲಹಂಕದ ನಿವಾಸಿ ಎಸ್. ಭಾರತಿ ಎಂಬುವರ ಪತಿಯ ಹೆಸರಿನಲ್ಲಿ 2013ರ ಆ.8ರಂದು ನಕಲಿ ವಿಲ್ ಸಿದ್ಧಪಡಿಸಿದ್ದರು. ಅದಕ್ಕೆ ಅರ್ಜಿದಾರರು ದೃಢೀಕರಿಸಿದ್ದಾರೆ ಎಂಬ ಆರೋಪವಿತ್ತು. ಈ ಕುರಿತು ಭಾರತಿ ಮತ್ತು ವೈ.ವಿ. ಚರಣ್ ಎಂಬುವರು ಮ್ಯಾಜಿಸ್ಟ್ರೇಟ್ ಕೋರ್ಟ್‌ಗೆ ಖಾಸಗಿ ದೂರು ಸಲ್ಲಿಸಿದ್ದರು.

ಅಮೃತ್‌ಪಾಲ್ ಆಪ್ತನ ಬಂಧನ

ಚಂಡೀಗಢ: 'ಸಿಖ್ ಮೂಲಭೂತವಾದಿ ಧರ್ಮಪ್ರಚಾರಕ ಅಮೃತ್‌ಪಾಲ್ ಸಿಂಗ್ ಆಪ್ತ ಸಹಾಯಕ ಪಾಪಲ್‌ಪ್ರೀತ್ ಸಿಂಗ್ ಅವರನ್ನು ಪಂಜಾಬ್‌ನ ಹೋಶಿಯಾರ್‌ಪುರದಲ್ಲಿ ಬಂಧಿಸಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ. ಅಮೃತ್‌ಪಾಲ್, ಪಾಪಲ್‌ಗಾಗಿ ಪಂಜಾಬ್ ಪೊಲೀಸರು ಮಾರ್ಚ್ 18ರಿಂದ ಶೋಧ ಕೈಗೊಂಡಿದ್ದರು.


ಯಲ್ಲಮ್ಮ ದೇವಿಯ 47ನೇ ವರ್ಷದ ಕರಗ ಮಹೋತ್ಸವ

47ನೇ ವರ್ಷದ ಕೆಂಗೇರಿ ಕರಗ ಸಂಪನ್ನ

ಪ್ರಜಾವಾಣಿ ವಾರ್ತೆ

ಕೆಂಗೇರಿ: ಭಕ್ತರ ಸಮ್ಮುಖದಲ್ಲಿ ಯಲ್ಲಮ್ಮ ದೇವಿಯ 47ನೇ ವರ್ಷದ ಕರಗ ಮಹೋತ್ಸವ ಸಡಗರ ಸಂಭ್ರಮದೊಡನೆ ಸಂಪನ್ನಗೊಂಡಿತು.

ಮಧ್ಯರಾತ್ರಿ 1.50ಕ್ಕೆ ಯಲ್ಲಮ್ಮ ದೇವಾಲಯದಿಂದ ಹೊರಟ ಕರಗ ದರ್ಗಾದಲ್ಲಿ ಪೂಜೆ ಸ್ವೀಕರಿಸಿ ಮೈಸೂರು ರಸ್ತೆಯ ಗಣಪತಿ ದೇವಾಲಯದ ಮೂಲಕ ಸಾಗಿ ಬಂದಿತು. ಗ್ರಾಮ ದೇವತೆ ಮಾರಮ್ಮ ದೇವಾಲಯ, ಕೋಟೆ, ವಿದ್ಯಾಪೀಠ ರಸ್ತೆ, ಕಸ್ತೂರಮ್ಮ ದೇವಾಲಯ ಸೇರಿದಂತೆ ಊರಿನ ಪ್ರಮುಖ ದೇವಾಲಯ ಹಾಗೂ ಭಕ್ತರ ಪೂಜೆಯನ್ನು ಸ್ವೀಕರಿಸಿ ಸಾಗಿತು.

ಭಕ್ತರು ಕರಗದ ಮೇಲೆ ಮಲ್ಲಿಗೆ ಹೂವನ್ನು ಹಾಕಿದರು. ಗೋವಿಂದ ನಾಮಸ್ಮರಣೆ ಮುಗಿಲು ಮುಟ್ಟಿತ್ತು. ಕರಗದ ಹಿನ್ನೆಲೆಯಲ್ಲಿ ಬೆಳ್ಳಿ ಪಲ್ಲಕ್ಕಿಯಲ್ಲಿ ಸಾಗಿ ಬಂದ ಗಣಪತಿ, ಯಲ್ಲಮ್ಮ ದೇವಿ, ಸಲ್ಲಾಪುರದಮ್ಮದೇವಿ,ಗ್ರಾಮದೇವತೆ ಮಾರಮ್ಮದೇವಿ, ಅಣ್ಣಮ್ಮ ದೇವಿ, ಕೆಂಪಮ್ಮದೇವಿ, ಜಾಜೀರಮ್ಮ ದೇವಿ, ಮಷ್ಣಮ್ಮದೇವಿಯ ಮೂರ್ತಿಗಳು ಜನರ ಭಕ್ತಿ–ಭಾವವನ್ನು ಇಮ್ಮಡಿಗೊಳಿಸಿತು.

ಯಲಮ್ಮದೇವಿ ಭಕ್ತ ಮಂಡಳಿಯಿಂದ ಮಂಗಳವಾದ್ಯ, ಕೀಲು ಕುದುರೆ ನೃತ್ಯ ಸೇರಿ ಅನೇಕ ಕಾರ್ಯಕ್ರಮ ಏರ್ಪಡಿಸಲಾಗಿತ್ತು. . ಶ್ರೀಯಲ್ಲಮ್ಮದೇವಿ ಭಕ್ತಮಂಡಳಿಯ ಸದಸ್ಯರು ಇದ್ದರು.

ಟೆಂಡರ್‌ಗಳ ರದ್ದು: ಆಯೋಗಕ್ಕೆ ಕಾಂಗ್ರೆಸ್ ಮನವಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕ ವಿಧಾನಸಭಾ ಚುನಾವಣಾ ವೇಳಾಪಟ್ಟಿ ಪ್ರಕಟಕ್ಕೆ ಮುನ್ನ 48 ಗಂಟೆಗಳ ಮೊದಲು ಬಿಜೆಪಿ ಸರ್ಕಾರವು ತರಾತುರಿಯಲ್ಲಿ ಕರೆದಿರುವ ಎಲ್ಲ ಟೆಂಡರ್‌ಗಳನ್ನು ರದ್ದುಗೊಳಿಸಬೇಕು ಎಂದು ಆಗ್ರಹಿಸಿ ಕಾಂಗ್ರೆಸ್ ನಿಯೋಗವು ಕೇಂದ್ರ ಚುನಾವಣಾ ಆಯೋಗಕ್ಕೆ ಸೋಮವಾರ ದೂರು ಸಲ್ಲಿಸಿದೆ.

ಪಕ್ಷದ ಹಿರಿಯ ಮುಖಂಡ ಸಲ್ಮಾನ್ ಖುರ್ಷಿದ್, ರಾಜ್ಯಸಭಾ ಸದಸ್ಯ ನಾಸಿರ್ ಹುಸೇನ್, ಎಐಸಿಸಿ ಕಾರ್ಯದರ್ಶಿ ವಿನಿತ್ ಪುನೀಯಾ ಅವರನ್ನು ಒಳಗೊಂಡ ನಿಯೋಗವು ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್ ಅವರಿಗೆ ಮನವಿ ಮಾಡಿತು.

'ವೇಳಾಪಟ್ಟಿ ಪ್ರಕಟಕ್ಕೆ ಮುನ್ನ ಸರ್ಕಾರವು ವಿವಿಧ ಇಲಾಖೆಗಳಲ್ಲಿ ಹಾಗೂ ಜಿಲ್ಲಾ ಕೇಂದ್ರಗಳಲ್ಲಿ ₹20 ಸಾವಿರ ಕೋಟಿ ವೆಚ್ಚದ ಟೆಂಡರ್‌ಗಳನ್ನು ಕರೆದಿದೆ. 48 ಗಂಟೆಗಳ ಅವಧಿಯಲ್ಲಿ ₹1600ಕೋಟಿಯ ಟೆಂಡರ್‌ಗಳನ್ನು ಆಹ್ವಾನಿಸಿದೆ. ಇದು ಶೇ 40 ಭ್ರಷ್ಟಾಚಾರಕ್ಕೆ ಸಾಕ್ಷಿ. ಇದು ಚುನಾವಣೆಯ ಮೇಲೆ ಪ್ರಭಾವ ಬೀರುವ ನೇರ ಪ್ರಯತ್ನ. ಈ ಟೆಂಡರ್‌ಗಳನ್ನು ರದ್ದುಪಡಿಸಬೇಕು ಎಂದು ಆಯೋಗಕ್ಕೆ ಮನವರಿಕೆ ಮಾಡಿಕೊಟ್ಟಿದ್ದೇವೆ' ಎಂದು ನಾಸಿರ್ ಹುಸೇನ್ ತಿಳಿಸಿದರು.

'ಚುನಾವಣಾ ವೇಳಾಪಟ್ಟಿ ಪ್ರಕಟಕ್ಕೆ ಮುನ್ನ ತರಾತುರಿಯಲ್ಲಿ ಟೆಂಡರ್ ಕರೆದಿರುವುದು ಸರಿಯಲ್ಲ ಎಂದೂ ಆಯೋಗ ಅಭಿಪ್ರಾಯಪಟ್ಟಿದೆ. ಇದರ ಪರಿಶೀಲನೆಗೆ ರಾಜ್ಯ ಚುನಾವಣಾ ಆಯೋಗಕ್ಕೆ ನಿರ್ದೇಶನ ನೀಡುವುದಾಗಿಯೂ ಭರವಸೆ ನೀಡಿದೆ' ಎಂದು ಅವರು ಮಾಹಿತಿ ನೀಡಿದರು.

ಕೆಲವು ಅಧಿಕಾರಿಗಳು ಕನಿಷ್ಠ 5ರಿಂದ 9 ವರ್ಷಗಳು ಒಂದೇ ಕಡೆಯಲ್ಲಿ ಕರ್ತವ್ಯ ನಿರ್ವಹಣೆ ಮಾಡುತ್ತಿದ್ದಾರೆ. ಇಂತಹ ಅಧಿಕಾರಿಗಳನ್ನು ಕೂಡಲೇ ವರ್ಗಾವಣೆ ಮಾಡಬೇಕು ಎಂದರು.

ಕ್ಷೇಮ ಕುಶಲ

ಪಿಯುಸಿ- ಸಿಇಟಿ ಪರೀಕ್ಷೆ ದಿಕ್ಸೂಚಿ

CHEMISTRY

56) The statement that is NOT correct is

(a) Compressibility factor measures the deviation of real gas from ideal behavior

(b) vander Waals constant 'a' measures extent of intermolecular attractive forces for real gases

(c) Critical temperature is the lowest temperature at which liquefaction of a gas first occurs

(d) Boyle point depends on the nature of real gas.

Soln: (c):

Expln:- Critical temperature is the temperature above which a gas cannot be liquefied irrespective of the pressure applied.

57) The correct arrangement for the ions in the increasing order of their radii is

a) Na^+, Cl^-, Ca^{2+} b) Ca^{2+}, K^+, S^{2-}

c) Na^+, AL^{3+}, Be^{2+} d) Cl^-, F^-, S^{2-}

Soln: (b)

Species	At No.	No. of e^-
Ca^{2+}	20	18
K^+	19	18
S^{2-}	16	18

The species Ca^{2+}, K^+ and S^{2-} are isoelectronic. For isoelectronic ions, the radius decreases as the nuclear charge increases.

Hence, the increasing order of their radii is

$$Ca^{2+} < K^+ < S^{2-}$$

58) The correct arrangement of the species in the decreasing order of their bond length between carbon and oxygen in them is

(a) $CO, CO_2, HCO^-_2, CO_3^{2-}$

(b) $CO_2, HCO^-_2, CO, CO_3^{2-}$

(c) $CO_3^{2-}, HCO^-_2, CO_2, CO$

(d) $CO, CO_3^{2-}, CO_2, HCO^-_2$

Soln: (c) : Bond order $\alpha \frac{1}{\text{Bond lrngth}}$

Bond order

$$= \frac{\text{Bond order of each C}-\text{O bond}}{\text{Total no. of resonating structures}}$$

(a) $CO \rightarrow c \overset{-}{=} O \quad \Rightarrow \frac{2+1}{1} = 3.0$

(b) $CO_2 \rightarrow O{=}C{=}O \quad \Rightarrow \frac{2+2}{1} = 2.0$

59) Match the following:-

	Column – I		*Column – II*
i	Simple vacancy defect	a	Shown by the non-ionic solids and increases density of the solid.
ii	Simple interstitial defect	b	Shown by the ionic solids and decreases density of the solid.
iii	Frenkel defect	c	Shown by the non-ionic solids and density of the solid decreases.
iv	Schotty defect	d	Shown by the ionic solids and density of the solid remains same

a) (i) – (c), (ii) – (a), (iii) – (d), (iv) – (b)
b) (i) – (d), (ii) – (a), (iii) – (b), (iv) – (c)
c) (i) – (b), (ii) – (a), (iii) – (d), (iv) – (c)
d) (i) – (a), (ii) – (c), (iii) – (d), (iv) – (b)

Ans:- a

60) The factors that influence the rate of a reaction are..................

a) Nature of the reactants
b) Concentration of the reactants
c) Temperature of the reaction d) all of these

Ans:- d

61) On addition of conc. H_2SO_4 to a chloride salt, colourless fumes are evolved but in case of iodide salt, violet fumes come out. This is because................

a) H_2SO_4 reduces HI to I_2
b) HI is of violet colour
c) HI gets oxidized to I_2
d) Hi changes to HIO_3 **Ans:-C**

62) In qualitative analysis when H_2S is passed through an aqueous solution of salt acidified with dil. HCl, a black precipitate is obtained. On boiling the precipitate with dil. HNO_3, it forms a solution of blue colour. Addition of excess of a aqueous solution of ammonia to this solution gives _____ .

a) deep blue precipitate of $Cu(OH)_2$
b) deep blue solution of $[Cu(NH_3)_4]^{2+}$
c) deep blue solution of $Cu(NO_3)_2$
d) deep blue solution of $Cu(OH)_2 . Cu(NO_3)_2$

Ans:-b

63) In a cyclotrimetaphosphoric acid molecule, how many single and double bonds are present?

a) 3 double bonds; 9 single bonds
b) 6 double bonds; 6 single bonds
c) 3 double bonds; 12 single bonds
d) Zero double bonds; 12 single bonds

Ans:- a

64) Which of the following elements can be involved in $p\pi - d\pi$ bonding?

a) Carbon b) Nitrogen
c) Phosphorus d) Boron

Ans:-C

PHYSICS

39) A motor pump lifts 6 tones of water from a well of depth 25m to the first floor of height 35 m from the ground floor in 20 minutes. The power of the pump (in kW) is [$g = 10\ ms^{-2}$]

a) 3 b) 6
c) 1.5 d) 12

Ans: (a)

Expln:- Power = work done / time taken

$P = mgh / t$
$P = (m / t)\, gh$
$h = 25 + 35 = 60m$
Flow rate = (m / t) = 6 tones / 20 min
$= \{[6000] / [20 * 60]\}$ (kg / sec) = 5(kg / sec)
$P = 5 \times 10 \times 60$
$= 3000$ w
$= 3$ kw

40) A square of side L meters lies in the x-y plane in a region, where the magnetic field is given by $B = B_0(2\hat{i} + 3\hat{j} + 4\hat{k})T$, where B_0 is constant. The magnitude of flux passing through the square is -

a) $2 B_0 L^2$ Wb b) $3 B_0 L^2$ Wb
c) $4 B_0 L^2$ Wb d) $\sqrt{20} B_0 L^2$ Wb

Ans:- c

41) A plane electromagnetic wave of frequency 20 MHz travels through a space along x direction. If the electric field vector at a certain point in space is 6 V m^{-1}, what is the magnetic field vector at that point?

a) 2 T b) 2×10^{-8} T
c) $\frac{1}{2}$ T d) $\frac{1}{2} \times 10^{-8}$ T

Ans:- b;

Expln:- the magnitude of magnetic field is


$$B = \frac{E}{C} = \frac{6\ V\,m^{-1}}{3 \times 10^8\ ms^{-1}} = 2 \times 10^{-8}\ T$$

42) A loop, made of straight edges has six corners at A (0,0,0), B (L,O,0), C (L,L,0), D(0,L,0) E(0,L,L) and F(0,0,L). A magnetic field $B = B_0(\hat{i} + \hat{k})T$, is present in the region. The flux passing through the loop ABCDEFA (in that order)is

a) $B_0 L^2$ Wb b) $2 B_0 L^2$ Wb
c) $\sqrt{2} B_0 L^2$ Wb d) $4 B_0 L^2$ Wb

Ans:- b

43) A cylindrical bar magnet is rotated about its axis as in the given figure. A wire is connected from the axis and is made to touch the cylindrical surface through a contact. Then –



a) a direct current flows in the ammeter A.
b) no current flows through the ammeter A.
c) an alternating sinusoidal current flows through the ammeter A.
d) a time varying non-sinusoidal current flows through the ammeter A. **Ans:- a**

44) A car moves from A to B with a speed of 30 kmph and from B to A with a speed of 20 kmph. What is the average speed of the car?

a) 50 kmph b) 25 kmph
c) 10 kmph d) 24 kmph

Ans:- d;

Expln:- Let S be distance between A and B. Let t_1 be time taken by the car to move from A to B with speed v_1

Then

Let t_1 be time taken by the car to move from *A* to *B* with

speed v_1 and t_2 be time taken by the car to move from *B* to *A* with speed v_2. Then

$t_1 = \frac{S}{v_1}$ and $t_2 = \frac{S}{v_2}$

Average speed of the car

$$v_{av} = \frac{\text{Total distance travelled}}{\text{Total time taken}} = \frac{2S}{t_1 + t_2}$$

$$= \frac{2S}{\frac{S}{v_1} + \frac{S}{v_2}} = \frac{2v_1 v_2}{v_1 + v_2}$$

Here, $v_1 = 30$ kmph, $v_2 = 20$ kmph

$$\therefore v_{av} = \frac{2 \times 30 \times 20}{30 + 20} = 24\ \text{kmph}$$

45) Two capacitors of 10 PF and 20 PF are connected to 200 V and 100 V sources respectively. If they are connected by the wire, what is the common potential of the capacitors?

a) 300 volt b) 133.3 volt
c) 400 volt d) 150 volt

Soln: (b): common potential,

$$V = \frac{C_1 V_1 + C_2 V_2}{C_1 + C_2}$$

Here, $C_1 = 10$ PF, $V_1 = 200$ V
$C_2 = 20$ PF, $V_2 = 100$ V

$$\therefore V = \frac{10 \times 200 + 20 \times 100}{10 + 20} = \frac{4000}{30}$$

$V = 133.3$ V

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು



ಬೇಸಿಗೆಗೆ ಬಾಡದಿರಲಿ ಉತ್ಸಾಹ

ಡಾ. ಕಿರಣ್ ವಿ. ಎಸ್.

‘ನಮ್ಮೂರಲ್ಲಿ ಎರಡೇ ಕಾಲ; ಬಿಸಿಲುಕಾಲ ಮತ್ತು ತುಂಬಾ ಬಿಸಿಲುಕಾಲ’ ಎನ್ನುವ ಚಮತ್ಕಾರದ, ಆದರೆ ನೈಜತೆಯ ಛಾಯೆಯಿರುವ ಮಾತುಗಳನ್ನು ಕೇಳಿರುತ್ತೇವೆ. ಚಳಿಗಾಲದ ವೇಳೆ ರಗ್ಗು ಹೊದೆದು ಬೆಚ್ಚನೆ ಮಲಗುವ ಅನೇಕರು ‘ಈ ಋತುವಿನಲ್ಲಿ ಚೆನ್ನಾಗಿ ಮಲಗಿ, ಬೇಸಿಗೆಯಲ್ಲಿ ಘನಂದಾರಿ ಸಾಧನೆ ಮಾಡಿಬಿಡುತ್ತೇನೆ’ ಎಂದು ತಮಗೆ ತಾವೇ ಆಶ್ವಾಸನೆ ನೀಡಿರುತ್ತಾರೆ. ಆದರೆ ಬೇಸಿಗೆಯ ಝಳ ಎಂತಹ ಉತ್ಸಾಹಿಗಳನ್ನೂ ಹೈರಾಣು ಮಾಡಬಲ್ಲದು. ಬೇಸಿಗೆಯನ್ನು ಸಹನೀಯವಾಗಿಸಬಲ್ಲ ಕೆಲವು ಸಲಹೆಗಳು ಇಲ್ಲಿವೆ:

- ವಿಪರೀತ ಬಿಸಿಲಿಗೆ ದೇಹವನ್ನು ಒಡ್ಡದಿರುವುದು ಸೂಕ್ತ. ತಾಪಮಾನ ಹೆಚ್ಚಿರುವಾಗ ಹೆಚ್ಚಿನ ದೇಹಶ್ರಮ ಮಾಡುವ ಪ್ರಮೇಯ ಬಂದರೆ ಎಚ್ಚರ ವಹಿಸಬೇಕು. ಮಕ್ಕಳು, ಸಾಕುಪ್ರಾಣಿಗಳನ್ನು ಬಿಸಿಲಿನಲ್ಲಿ ನಿಂತ ವಾಹನಗಳಲ್ಲಿ ಬಂಧಿಸಿ ಹೆಚ್ಚು ಕಾಲ ಬಿಟ್ಟು ಹೋಗಬಾರದು. ಬಿಸಿಲಿನಲ್ಲಿ ಕೆಲಸ ಮಾಡುವ ವೇಳೆ ಸೂಕ್ತ ಗಾಢತೆಯ ಸನ್-ಸ್ಕ್ರೀನ್ ಮುಲಾಮಿನ ಬಳಕೆಯನ್ನು ವೈದ್ಯರು ಸೂಚಿಸುತ್ತಾರೆ.
- ಶರೀರದ ನೀರಿನ ಪ್ರಮಾಣ ಕಡಿಮೆಯಾಗಬಾರದು. ನೈಸರ್ಗಿಕ ಪಾನೀಯಗಳಾದ ನೀರು, ಎಳೆನೀರು, ನೀರುಮಜ್ಜಿಗೆ, ನಿಂಬೆಹಣ್ಣಿನ ಪಾನಕ, ಸಕ್ಕರೆ ಬೆರೆಸದ ತಾಜಾ ಹಣ್ಣಿನ ರಸ, ಕಲ್ಲಂಗಡಿ, ಕಿತ್ತಳೆ, ಸೌತೆ ಮೊದಲಾದ ದ್ರವಯುಕ್ತ ಹಣ್ಣು-ತರಕಾರಿಗಳನ್ನು ಆಗಾಗ ಸೇವಿಸುವುದು ಒಳಿತು. ಇದರಿಂದ ದೇಹದ ಆಂತರಿಕ ವ್ಯವಸ್ಥೆ ತಂಪಾಗುತ್ತದೆ. ಶರೀರದಲ್ಲಿ ನೀರಿನ ಪ್ರಮಾಣ ಕಡಿಮೆಯಾದಷ್ಟೂ ಒಳಗಿನ ಅಂಗಗಳ ಮೇಲೆ ಒತ್ತಡ ಹೆಚ್ಚುತ್ತದೆ. ಇದು ರಕ್ತದಲ್ಲಿನ ಲವಣದ ಅಂಶಗಳನ್ನು ಏರುಪೇರು ಮಾಡಬಲ್ಲದು. ಇದು ಸ್ನಾಯುಗಳ ಸೆಳೆತದಿಂದ ಹಿಡಿದು ಮಿದುಳಿನ ರಕ್ತಸ್ರಾವದವರೆಗೆ ಅನೇಕ ಪ್ರಮಾದಕಾರಿ ಸಮಸ್ಯೆಗಳಿಗೆ ಕಾರಣವಾಗಬಲ್ಲದು. ಕಾಫಿ, ಟೀ, ಮದ್ಯ, ಸೋಡಾಯುಕ್ತ ಪಾನೀಯಗಳನ್ನು ದೂರವಿಡಬೇಕು. ಇವುಗಳು ಮೂತ್ರಪಿಂಡಗಳನ್ನು ಪ್ರಚೋದಿಸಿ ಶರೀರದಿಂದ ಹೆಚ್ಚು ನೀರಿನ ಅಂಶವನ್ನು ಹೊರಹಾಕುತ್ತವೆ. ಅಂದರೆ, ಒಂದು ಕಪ್ ಟೀ ಸೇವಿಸಿದರೆ, ಅದರ ಪರಿಣಾಮದಿಂದ ಶರೀರ ಆ ಪ್ರಮಾಣಕ್ಕಿಂತ ಹೆಚ್ಚಿನ ನೀರನ್ನು ಕಳೆದುಕೊಳ್ಳುತ್ತದೆ. ಹೀಗಾಗಿ, ಇಂತಹ ಪಾನೀಯಗಳು ನಿರ್ಜಲೀಕರಣಕ್ಕೆ ದಾರಿಯಾಗುತ್ತವೆ.
- ಹಗುರವಾದ, ಮೈಗೆ ಅಂಟದ, ಹತ್ತಿಯ ಬಟ್ಟೆಗಳನ್ನು ಧರಿಸಬೇಕು. ತೀರಾ ಭಾರಿಯಾದ, ಭಾರವಾದ, ಗಾಢವರ್ಣದ ಬಟ್ಟೆಗಳು ಸೆಖೆಯನ್ನು ಹೆಚ್ಚಿಸುತ್ತವೆ. ಇದರಿಂದ ಹೆಚ್ಚಿನ ಪ್ರಮಾಣದ ಬೆವರು ನಷ್ಟವಾಗಿ ನಿರ್ಜಲೀಕರಣ ಉಂಟಾಗಬಹುದು. ಸುಸ್ತು, ನೀರಸ, ತಲೆಸುತ್ತು ಮೊದಲಾದ ಸಮಸ್ಯೆಗಳಿಗೆ ನಿರ್ಜಲೀಕರಣ ದಾರಿಯಾಗುತ್ತದೆ. ಮುಖದ ಮೇಲೆ ಮತ್ತು ಕತ್ತಿನ ಹಿಂಭಾಗದಲ್ಲಿ ತಣ್ಣೀರಿನಲ್ಲಿ ಹಿಂಡಿದ ತೇವದ ಬಟ್ಟೆಯನ್ನು ಹಾಕಿಕೊಳ್ಳುವುದು; ಸ್ನಾನದ ವೇಳೆ ತಣ್ಣೀರನ್ನೋ ಅಥವಾ ಉಗುರು ಬೆಚ್ಚಗಿನ ನೀರನ್ನೋ ಬಳಸುವುದು ಶರೀರದ ಶಾಖವನ್ನು ಕಳೆಯುವ ಬಾಹ್ಯ ವಿಧಾನಗಳು.
- ಆಹಾರ ಮತ್ತು ನೀರಿನ ಮೂಲಕ ಹರಡುವ ರೋಗಗಳು ಬೇಸಿಗೆಯಲ್ಲಿ ಅಧಿಕ. ಹೀಗಾಗಿ, ಸೇವಿಸುವ ಆಹಾರ ಮತ್ತು ಪಾನೀಯಗಳ ಬಗ್ಗೆ ಗಮನ ಇರಬೇಕು. ಈ ಕಾಲದಲ್ಲಿ ಮಕ್ಕಳಿಗೆ ರಜೆ ಇರುವುದರಿಂದ ಪ್ರವಾಸಗಳಿಗೆ ಹೋಗುವವರ ಸಂಖ್ಯೆ ಹೆಚ್ಚು. ಈ ರೀತಿ ಹೊರಗೆ ಹೋಗುವಾಗ ತಿನಿಸು-ಪಾನೀಯಗಳ ಮೇಲೆ ಹೆಚ್ಚಿನ ನಿಯಂತ್ರಣ ಇರುವುದಿಲ್ಲ. ಸಾಧ್ಯವಾದಷ್ಟೂ ಬಿಸಿಯಾಗಿ ತಯಾರಿಸಿದ ತಾಜಾ ಆಹಾರ ಸೇವನೆ ಸೂಕ್ತ. ಸ್ವಚ್ಛವಾದ ನೀರು, ಭದ್ರಪಡಿಸಿದ ಪಾನೀಯಗಳ ಬಳಕೆ ಒಳ್ಳೆಯದು.
- ನಮ್ಮ ವಾಸದ ಪರಿಸರ ಆರೋಗ್ಯದ ಮೇಲೆ ನೇರ ಪರಿಣಾಮ ಬೀರುತ್ತದೆ. ನಮ್ಮಲ್ಲಿ ಕಟ್ಟುವ ಬಹುತೇಕ ಕಟ್ಟಡಗಳು ಶಾಖವನ್ನು ಹೀರಿಕೊಂಡು, ಒಳಗೆ ವಾಸಿಸುವ ಜನರಿಗೆ ಹೆಚ್ಚು ಬಿಸಿಯ ಅನುಭವ ನೀಡುತ್ತವೆ. ನಗರ ಪ್ರದೇಶಗಳಲ್ಲಿ ಒತ್ತೊತ್ತಾಗಿ ಕಟ್ಟಿರುವ ಕಟ್ಟಡಗಳಲ್ಲಿ ಗಾಳಿ ಸಂಚಾರ ಕೂಡ ಸಮಂಜಸವಾಗಿ ಇರುವುದಿಲ್ಲ. ರಾತ್ರಿಯ ವೇಳೆ ಪರಿಸರದ ತಾಪಮಾನ ಕಡಿಮೆ ಇರುವುದರಿಂದ ಗಾಳಿ ತಂಪಾಗಿರುತ್ತದೆ. ಹೀಗಾಗಿ, ಸೂರ್ಯಾಸ್ತದ ನಂತರ ಕಿಟಕಿಗಳನ್ನು ತೆರೆದು ಸಾಧ್ಯವಾದಷ್ಟೂ ನೈಸರ್ಗಿಕ ಗಾಳಿ ಮನೆಯೊಳಗೆ ಸಂಚರಿಸುವಂತೆ ಮಾಡಬೇಕು. ಅಂತೆಯೇ, ಹಗಲಿನ ವೇಳೆ ಕಿಟಕಿಗಳನ್ನು ಮುಚ್ಚಿ, ಗಾಜುಗಳಿಗೆ ಅಡ್ಡಲಾಗಿ ತೆರೆಯನ್ನು ಮುಚ್ಚಬೇಕು. ಮನೆಯೊಳಗಿನ ಗಾಳಿ ಎಲ್ಲೆಡೆ ಹರಡುವಂತೆ ಮಾಡಲು ವಾತಾನುಕೂಲಿಗಳ ಬದಲಿಗೆ ಫ್ಯಾನುಗಳ ಬಳಕೆ ಪರಿಸರಸ್ನೇಹಿ. ಮನೆಯೊಳಗಿನ ತಾಪಮಾನ ಹೊರಗಿನದಕ್ಕಿಂತ 3 ಡಿಗ್ರಿ ಕಡಿಮೆ ಇರುವುದು ನಮ್ಮ ದೇಹದ ಚಯಾಪಚಯಗಳಿಗೆ ಅನುಕೂಲ.
- ವೃದ್ಧರಲ್ಲಿ ಬೆವರನ್ನು ಸ್ರವಿಸುವ ಸಾಮರ್ಥ್ಯ ಕುಂಠಿತವಾಗುವುದರಿಂದ ದೇಹದ ಶಾಖವನ್ನು ನಿರ್ವಹಿಸುವುದು ಕಷ್ಟವಾಗುತ್ತದೆ. ಜೊತೆಗೆ, ವಯೋಸಹಜ ಕಾಯಿಲೆಗಳು ಅವರ ಆಂತರಿಕ ಶಕ್ತಿಯನ್ನು ಕುಂದಿಸುತ್ತವೆ. ಇಂತಹವರು ತೀವ್ರ ಬಿಸಿಲಿನ ವೇಳೆ ಯಾವುದಾದರೂ ತಂಪಾದ ಸ್ಥಳದಲ್ಲಿ ಇರುವುದು ಸಮಂಜಸ.

ಬೇಸಿಗೆ ಅನಿವಾರ್ಯ. ಅದನ್ನು ಜಾಣತನದಿಂದ ನಿರ್ವಹಿಸಲು ಸರಿಯಾದ ಮಾಹಿತಿ ಸಹಾಯಕಾರಿ.



- ಬೇಸಿಗೆಯ ಝಳದ ದುಷ್ಪರಿಣಾಮ ಹೆಚ್ಚಾಗಿ ಕಾಣುವುದು ಶಿಶುಗಳಲ್ಲಿ ಮತ್ತು ವೃದ್ಧರಲ್ಲಿ. ಎಳೆಯ ಶಿಶುಗಳಿಗೆ ತಮ್ಮ ಅಸೌಖ್ಯವನ್ನು ಹೇಳಿಕೊಳ್ಳುವ ವಿಧಾನಗಳಿಲ್ಲ. ಇಂತಹ ಶಿಶುಗಳನ್ನು ಸಲಹುವವರು ಇದರ ಬಗ್ಗೆ ಮಾಹಿತಿ ಹೊಂದಿರಬೇಕು. ಬಿರುಬೇಸಿಗೆಯಲ್ಲೂ ಮಗುವನ್ನು ನಾಲ್ಕಾರು ಮಡಿಕೆಯ ಬಟ್ಟೆಗಳಲ್ಲಿ ಸುತ್ತಿ ಇಡುವವರು ಇದ್ದಾರೆ. ಇವು ಚಳಿಗಾಲದಲ್ಲಿ ಮಗುವನ್ನು ಬೆಚ್ಚಗೆ ಇಡಬಲ್ಲವಾದರೂ, ಬೇಸಿಗೆಯ ಶಾಖದಲ್ಲಿ ಹಾನಿಕರ. ಇದರಿಂದ ವಿಪರೀತ ಬೆವರು ಹರಿದು, ಶಿಶುಗಳು ಕಾಯಿಲೆ ಬೀಳುತ್ತವೆ. ತಾಯಿಯ ಹಾಲು ಕುಡಿಯುವ ಎಳೆ ಶಿಶುಗಳಿಗೆ ಬೇಸಿಗೆಯ ಕಾಲದಲ್ಲಿ ಹಾಲಿನ ಅಗತ್ಯ ಹೆಚ್ಚಾಗಿರುತ್ತದೆ ಎಂಬುದನ್ನು ತಿಳಿದಿರಬೇಕು. ಶಿಶುಗಳ ಮೂತ್ರದ ಬಣ್ಣ ಗಾಢ ಹಳದಿಗೆ ತಿರುಗಿದರೆ ಅವುಗಳಿಗೆ ನಿರ್ಜಲೀಕರಣವಾಗಿದೆ ಎಂದು ಅರ್ಥ. ಇಂತಹ ಸಂದರ್ಭದಲ್ಲಿ ವೈದ್ಯರ ಸಲಹೆ ಪಡೆಯುವುದು ಸೂಕ್ತ.



ಪ್ರಜಾ ಮತ

ಜನತಂತ್ರದ ಹಬ್ಬ 2023



ಶಾಸಕ ಪಿ.ರಾಜೀವ್ ನಡೆಸಿದ ಪ್ರಚಾರ ಸಭೆಯಲ್ಲಿ ಬಾಲಕರು ಬಿಜೆಪಿ ಚಿಹ್ನೆ ಇರುವ ಟಿ ಶರ್ಟ್ ಧರಿಸಿ ಪಾಲ್ಗೊಂಡರು

ಮಕ್ಕಳನ್ನು ಪ್ರಚಾರಕ್ಕೆ ಬಳಸಿದ ಪಿ.ರಾಜೀವ್: ವಿಡಿಯೊ ಹರಿದಾಟ

ಪ್ರಜಾವಾಣಿ ವಾರ್ತೆ

ಮುಗಳಖೋಡ (ಬೆಳಗಾವಿ ಜಿಲ್ಲೆ): ಕುಡಚಿ ಶಾಸಕ ಪಿ.ರಾಜೀವ್ ಪಟ್ಟಣದಲ್ಲಿ ಸೋಮವಾರ ನಡೆಸಿದ ಚುನಾವಣಾ ಪ್ರಚಾರದಲ್ಲಿ ಮಕ್ಕಳನ್ನು ಬಳಸಿಕೊಂಡ ವಿಡಿಯೊ ತುಣುಕು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

ಪಟ್ಟಣದ 6ನೇ ವಾರ್ಡ್‌ನ ಕರಿಸಿದ್ಧೇಶ್ವರ ದೇವಸ್ಥಾನ ಆವರಣದಲ್ಲಿ ಪಿ.ರಾಜೀವ್ ಸಭೆ ನಡೆಸಿದ್ದರು. ಇದರಲ್ಲಿ ಪಾಲಕರ ಜತೆಗೆ ಹಲವು ಮಕ್ಕಳೂ ಪಾಲ್ಗೊಂಡಿದ್ದರು. ಕೆಲವು ಬಾಲಕರಿಗೆ ಬಿಜೆಪಿ ಚಿಹ್ನೆಯ ಟಿ–ಶರ್ಟ್ ಹಾಕಲಾಗಿತ್ತು. ಮತ್ತೆ ಕೆಲವು ಮಕ್ಕಳ ಕೊರಳಲ್ಲಿ ಬಿಜೆಪಿಯ ಶಾಲು ಹೊದಿಸಲಾಗಿತ್ತು. ಸಭೆಯಲ್ಲಿ ಕುಳಿತಿದ್ದ ಬಾಲಕಿಯನ್ನು ಮಾತನಾಡಿಸಿದ ಶಾಸಕ, 'ಪಿ.ರಾಜೀವ್ ಅವರಿಗೇ ವೋಟ್ ಹಾಕುವಂತೆ ಹೇಳಬೇಕು ಪುಟ್ಟಿ' ಎಂದು ಪದೇಪದೇ ಹೇಳಿದ್ದು ಕೂಡ ವಿಡಿಯೊದಲ್ಲಿದೆ.

ಬೆಳಗಾವಿ: ಆರು ಕ್ಷೇತ್ರಗಳಲ್ಲಿ ಅಭ್ಯರ್ಥಿ ಕಣಕ್ಕಿಳಿಸಲು ಮಹಾರಾಷ್ಟ್ರ ಏಕೀಕರಣ ಸಮಿತಿ ಸಿದ್ಧತೆ

ಮತ ಗಳಿಕೆಗೆ 'ವಿಮೆ ಅಸ್ತ್ರ' ಬಳಕೆ

• ಸಂತೋಷ ಈ. ಚಿನಗುಡಿ

ಬೆಳಗಾವಿ: ಮಹಾತ್ಮ ಜ್ಯೋತಿರಾವ್ ಫುಲೆ ಜನಾರೋಗ್ಯ ವಿಮಾ ಯೋಜನೆಯನ್ನೇ ಎಂಇಎಸ್ (ಮಹಾರಾಷ್ಟ್ರ ಏಕೀಕರಣ ಸಮಿತಿ) ಈ ಬಾರಿ ಚುನಾವಣೆಯ ಬಂಡವಾಳ ಮಾಡಿಕೊಳ್ಳಲು ಹುನ್ನಾರ ನಡೆಸಿದೆ. ಎಂಇಎಸ್ ಒತ್ತಡದಿಂದಲೇ ಮಹಾರಾಷ್ಟ್ರ ಸರ್ಕಾರ ಈ ಯೋಜನೆ ಜಾರಿ ಮಾಡಿದೆ ಎಂದು ಪ್ರಚಾರ ಕೂಡ ನಡೆಸಿದೆ.

ಆರು ದಶಕಗಳಿಂದ ಎಂಇಎಸ್ ನಾಯಕರು ಗಡಿ ವಿವಾದವನ್ನೇ ಚುನಾವಣಾ ಅಸ್ತ್ರ ಮಾಡಿಕೊಂಡಿದ್ದರು. ಹೊಸ ತಲೆಮಾರಿನ ಮರಾಠಿಗರು 'ಸತ್ಯ' ಕಂಡುಕೊಂಡಿದ್ದಾರೆ. ಕರ್ನಾಟಕದೊಂದಿಗೆ ಮರಾಠಿಗರೂ ಮುಖ್ಯವಾನಿಯಲ್ಲಿ ಬೆರೆತಿದ್ದಾರೆ. ಹೀಗಾಗಿ, ಎಂಇಎಸ್‌ಗೆ ಸ್ವಭಾಷಿಗರೇ ಕಿಮ್ಮತ್ತು ಕೊಡುತ್ತಿಲ್ಲ.

ಮಹಾರಾಷ್ಟ್ರ ಏಕೀಕರಣ ಸಮಿತಿಯ ಹೋರಾಟವು ಕೇವಲ ರಾಜಕೀಯ ಮೇಲಾಟ ಎಂಬುದನ್ನು ಮರಾಠಿ ಜನ ಅರ್ಥ ಮಾಡಿಕೊಂಡಿದ್ದಾರೆ. ಯಾರದೋ ಅಧಿಕಾರ ಲಾಲಸೆಗೆ ಬಲಿಬೀಳಬಾರದು ಎಂಬುದನ್ನು ಮನವರಿಕೆ ಅವರಿಗಾಗಿದೆ. ಸಾಮಾಜಿಕ ಹಾಗೂ ಸಾಂಸ್ಕೃತಿಕವಾಗಿ ಎರಡೂ ಭಾಷಿಕರು ಒಂದಾಗಿದ್ದಾರೆ. ಈ ಸೌಹಾರ್ದ ಕದಡಲು ಎಂಇಎಸ್ ಹಾಗೂ ಮಹಾರಾಷ್ಟ್ರದ ರಾಜಕಾರಣಿಗಳು ಇನ್ನಿಲ್ಲದ ತಂತ್ರ ಹೂಡುತ್ತಲೇ ಇದ್ದಾರೆ.

ಇದರ ಭಾಗವಾಗಿಯೇ ಮಹಾರಾಷ್ಟ್ರ ಸರ್ಕಾರವು ವಿಮಾ ಯೋಜನೆಯನ್ನು ಕರ್ನಾಟಕದ ಗಡಿಯೊಳಗಿನ 865 ಹಳ್ಳಿಗಳಿಗೂ ವಿಸ್ತರಿಸಿದೆ. ಈ ಎಲ್ಲ ಹಳ್ಳಿಗಳನ್ನೂ ಮಹಾರಾಷ್ಟ್ರಕ್ಕೆ ಸೇರಿಸಬೇಕು ಎಂದು ಎಂಇಎಸ್ ಆರು ದಶಕಗಳಿಂದ ಹೋರಾಟ ಮಾಡುತ್ತಿದೆ. ಮರಾಠಿ ಮತಗಳನ್ನು ಒಂದುಗೂಡಿಸಲು ವಿಮೆಯನ್ನೇ ದಾಳ ಮಾಡಿಕೊಳ್ಳಲು ನಾಯಕರು ತಂತ್ರ ಹೆಣೆದಿದ್ದಾರೆ. 'ಮುಳುಗುವವನಿಗೆ ಹುಲ್ಲುಕಡ್ಡಿ ಆಸರೆ' ಸಿಕ್ಕಂತಾಗಿದೆ.

ಆರು ಕಡೆ ಅಭ್ಯರ್ಥಿ: ಬೆಳಗಾವಿ ಉತ್ತರ, ಬೆಳಗಾವಿ ದಕ್ಷಿಣ, ಬೆಳಗಾವಿ ಗ್ರಾಮೀಣ, ಖಾನಾಪುರ, ನಿಪ್ಪಾಣಿ ಹಾಗೂ ಯಮಕನಮರಡಿ ಕ್ಷೇತ್ರದಲ್ಲಿ ಅಭ್ಯರ್ಥಿಗಳನ್ನು ಕಣಕ್ಕಿಳಿಸುವುದಾಗಿ ಮುಖಂಡರು ತಿಳಿಸಿದ್ದಾರೆ. ಈ ಆರು ಕ್ಷೇತ್ರಗಳ ಪೈಕಿ ನಾಲ್ಕರಲ್ಲಿ ಮರಾಠಿಗರ ಮತದಾರರ ಪ್ರಮಾಣ ಶೇ 60ಕ್ಕೂ ಹೆಚ್ಚಿದೆ.

'ವಿಮಾ ಯೋಜನೆಯನ್ನು ಯಾರು ಪರಿಣಾಮಕಾರಿಯಾಗಿ ಅನುಷ್ಠಾನ ಮಾಡುವ ಪ್ರತಿಜ್ಞೆ ಮಾಡುತ್ತಾರೋ ಅವರಿಗೆ ಮಾತ್ರ ಟಿಕೆಟ್' ಎಂಬ ಸೂತ್ರವನ್ನು ಅನುಸರಿಸಿದ್ದಾಗಿ ಎಂಇಎಸ್ ಮೂಲಗಳು ಹೇಳಿವೆ.

ಎನ್‌ಸಿಪಿಯ ಹಿರಿಯ ನಾಯಕ ಶರದ್ ಪವಾರ್ ಹಾಗೂ ಮಹಾರಾಷ್ಟ್ರ ಸಿ.ಎಂ ಏಕನಾಥ ಶಿಂದೆ ಅವರನ್ನೂ ಪ್ರಚಾರಕ್ಕೆ ಕರೆಸುವ ಮಾತುಗಳು ನಡೆದಿವೆ.

ಒಂದು ಕಾಲದಲ್ಲಿ ಐದು ಸ್ಥಾನಗಳಲ್ಲಿ ಬಿಗಿ ಹಿಡಿತ ಸಾಧಿಸಿದ್ದ ಎಂಇಎಸ್‌ನಲ್ಲಿ ಈಗ 'ಶೂನ್ಯ' ಆವರಿಸಿದೆ. ಮರಾಠಿ ಮತ ಸೆಳೆಯಲು ಬಿಜೆಪಿ, ಕಾಂಗ್ರೆಸ್ ನಾಯಕರು ಊರಿಗೊಂದು ಶಿವಾಜಿ ಪ್ರತಿಮೆ ಅನಾವರಣ ಮಾಡುತ್ತಿದ್ದಾರೆ. ಇದಕ್ಕೆ ತಡೆಯೊಡ್ಡಲು ಎಂಇಎಸ್ ಸಾಂಪ್ರದಾಯಿಕ ಮತ ಕ್ರೂಡೀಕರಿಸುವ ಕಸರತ್ತು ನಡೆಸಿದೆ.

ಎಂಇಎಸ್ ಚುನಾವಣಾ ಇತಿಹಾಸ...

1962, 1967, 1972, 1978, 1983ವರೆಗೆ ಐದು ಸ್ಥಾನಗಳಲ್ಲಿ ಎಂಇಎಸ್ ಹಾಗೂ ಎಂಇಎಸ್ ಬೆಂಬಲಿತ ಅಭ್ಯರ್ಥಿಗಳು ಗೆದ್ದಿದ್ದರು. ನಂತರದ ದಿನಗಳಲ್ಲಿ ಎರಡು ಅಥವಾ ಮೂರು ಸ್ಥಾನ ಗೆದ್ದಿದ್ದಾರೆ. ಆದರೆ, 1999ರಲ್ಲಿ ಸಮಿತಿಯ ಪ್ರಮುಖ ನಾಯಕರನ್ನು ಬಿಜೆಪಿ, ಕಾಂಗ್ರೆಸ್, ಜೆಡಿಎಸ್ ಪಕ್ಷಗಳು ಸೆಳೆದವು. ಹೀಗಾಗಿ, ಎಲ್ಲ ಆರೂ ಕ್ಷೇತ್ರಗಳಲ್ಲಿ ಎಂಇಎಸ್ ನೆಲಕಚ್ಚಿತ್ತು.

2004ರಲ್ಲಿ ಖಾನಾಪುರದಲ್ಲಿ ದಿಗಂಬರ ಪಾಟೀಲ, ಉಚಗಾಂವಿ (ಬೆಳಗಾವಿ ದಕ್ಷಿಣ)ದಲ್ಲಿ ಮನೋಹರ ಕಿಣೇಕರ ಗೆದ್ದರು. 2008ರಲ್ಲಿ ಮತ್ತೆ ಸಮಿತಿ ಸಾಧನೆ ಶೂನ್ಯ. 2013ರಲ್ಲಿ ಸಂಭಾಜಿರಾವ್ ಪಾಟೀಲ ತಮ್ಮ ವೈಯಕ್ತಿಕ ವರ್ಚಸ್ಸಿನಿಂದಾಗಿ ಬೆಳಗಾವಿ ದಕ್ಷಿಣ ಕ್ಷೇತ್ರದಲ್ಲಿ ಜಯ ಸಾಧಿಸಿದ್ದರು. ಖಾನಾಪುರದಲ್ಲಿ ಅರವಿಂದ ಪಾಟೀಲ ಜಯ ಸಾಧಿಸಿದ್ದರು.

ಆದರೆ, 2018ರಲ್ಲಿ ಎಂಇಎಸ್ ಬಂಡಾಯ ಅಭ್ಯರ್ಥಿ ಆಗಿದ್ದ ಸಂಭಾಜಿ ಕೇವಲ 249 ಮತ ಪಡೆದರು. ಆಗ ಎಂಇಎಸ್ ಅಧಿಕೃತ ಅಭ್ಯರ್ಥಿ ಬಾಳಾಸಾಹೇಬ್ ಕಾಕತಕರ ಕೂಡ 869 ಮತ ಮಾತ್ರ ಪಡೆದಿದ್ದರು!

ಹಾಸನದಲ್ಲಿ ಕಾರ್ಯಕರ್ತರಿಗೆ ಟಿಕೆಟ್ ಕೊಡುವ ನಿರ್ಧಾರ ಅಚಲ: ಕುಮಾರಸ್ವಾಮಿ

'ಮನೆ ಹಾಳು ಮಾಡುವ ಶಕುನಿಗಳಿದ್ದಾರೆ'

ಪ್ರಜಾವಾಣಿ ವಾರ್ತೆ

ಬಳ್ಳಾರಿ: 'ಮನೆ ಹಾಳು ಮಾಡುವಂಥ ಶಕುನಿಗಳು ಹಾಸನದಲ್ಲಿದ್ದಾರೆ. ಅವರು ಬೆಳಿಗ್ಗೆಯಿಂದ ಸಂಜೆವರೆಗೆ ನಮ್ಮ ಕುಟುಂಬದವರ ತಲೆ ಕೆಡಿಸುತ್ತಿದ್ದಾರೆ. ಅವರ್‍ಯಾರೆಂಬುದು ನನಗೆ ಗೊತ್ತಿದೆ' ಎಂದು ಮಾಜಿ ಮುಖ್ಯಮಂತ್ರಿ ಎಚ್‌.ಡಿ. ಕುಮಾರಸ್ವಾಮಿ ಸೋಮವಾರ ವಾಗ್ದಾಳಿ ನಡೆಸಿದರು.

'ಹಾಸನದಲ್ಲಿ ಕಾರ್ಯಕರ್ತರಿಗೇ ಟಿಕೆಟ್ ಕೊಡಬೇಕು ಎಂಬುದು ನನ್ನ ಅಚಲ ನಿಲುವು. ಈ ವಿಷಯದಲ್ಲಿ ರಾಜಿ ಪ್ರಶ್ನೆ ಇಲ್ಲ. ಬಿಜೆಪಿಯನ್ನು ಹಾಸನದಲ್ಲಿ ಸೋಲಿಸುವುದಕ್ಕೆ ದೇವೇಗೌಡರ ಕುಟುಂಬದ ಸದಸ್ಯರು ಬೇಕಾಗಿಲ್ಲ. ಸಾಮಾನ್ಯ ಕಾರ್ಯಕರ್ತರು ಸಾಕು ಎಂದು ಹಿಂದೆಯೇ ಹೇಳಿದ್ದೇನೆ. ಅದೇ ನಿಲುವಿಗೆ ಬದ್ಧನಾಗಿದ್ದೇನೆ' ಎಂದರು.

ಬಳ್ಳಾರಿ ನಗರದ ಜೆಡಿಎಸ್ ಅಭ್ಯರ್ಥಿ ಮುನ್ನಾಭಾಯ್ ಪರ ಗುಗ್ಗರ-ಹಟ್ಟಿಯಲ್ಲಿ ಪ್ರಚಾರ ಭಾಷಣ ಮಾಡಿದ ಬಳಿಕ ಮಾಧ್ಯಮ ಪ್ರತಿನಿಧಿಗಳ ಜತೆ ಮಾತನಾಡಿ, 'ಹಾಸನದ ಕೆಲವು ಶಕುನಿಗಳ ಜತೆಗೆ ಬುದ್ಧಿಜೀವಿಗಳ ಬೆಂಬಲಿಗರು ಸೇರಿಕೊಂಡು ನಮ್ಮ ಕುಟುಂಬದೊಳಗೆ ಬಿರುಕು ಮೂಡಿಸು-ತ್ತಿದ್ದಾರೆ' ಎಂದು ಆರೋಪಿಸಿದರು.

'ಚುನಾವಣೆಗೆ ಸ್ಪರ್ಧಿಸಬೇಕೆಂಬ ಆಸೆ ಎಲ್ಲರಿಗೂ ಇರುತ್ತದೆ. ಇಂಥದೊಂದು ಅವಕಾಶವನ್ನು ದುರ್ಬಳಕೆ ಮಾಡಿ ಶಕುನಿಗಳು ತಲೆ ಕೆಡಿಸುತ್ತಿದ್ದಾರೆ. ಕುರುಕ್ಷೇತ್ರ ನಡೆದಿದ್ದು ಏಕೆ? ಶಕುನಿ ನಡವಳಿಕೆಯಿಂದಲ್ಲವೇ? ಈ ದೇಶದ ಮಣ್ಣಿನಲ್ಲೇ ಇಂಥದೊಂದು ಗುಣವಿದೆ' ಎಂದು ವಿಶ್ಲೇಷಿಸಿದರು.

'ಹಾಸನದ ಟಿಕೆಟ್ ವಿಷಯದಲ್ಲಿ ರೇವಣ್ಣ ನನ್ನ ಜತೆ ನೇರ ಸಂಪರ್ಕದಲ್ಲಿಲ್ಲ. ಖುದ್ದು ಮಾತನಾಡು-ವುದಕ್ಕೆ ಅವರಿಗೆ ಎಲ್ಲೋ ಭಯ ಕಾಡುತ್ತಿದೆ. ಇದರಲ್ಲಿ ಕದ್ದುಮುಚ್ಚಿ ಹೇಳುವಂಥದ್ದೇನೂ ಇಲ್ಲ. ನನ್ನೊಂದಿಗೆ ಮಾತನಾಡಿದರೆ ಚುನಾವಣೆಗೆ ಏಕೆ ನಿಲ್ಲಬೇಕು ಎಂಬುದನ್ನು ಮನವರಿಕೆ ಮಾಡಿಕೊಡಬೇಕಾಗುತ್ತದೆ' ಎಂದು ಕುಮಾರಸ್ವಾಮಿ ಅವರು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಜೆಡಿಎಸ್ ಪ್ರಣಾಳಿಕೆ ಸಮಿತಿ ಸಭೆ: ಬೆಂಗಳೂರು: ಜೆಡಿಎಸ್‌ನ ಚುನಾವಣಾ ಪ್ರಣಾಳಿಕೆ ಸಮಿತಿ ಸಭೆ ಸೋಮವಾರ ನಡೆದಿದ್ದು, ಕರಡು ಪ್ರತಿಯನ್ನು ಅಂತಿಮಗೊಳಿಸುವ ಕುರಿತು ಚರ್ಚೆ ನಡೆಸಿದ್ದಾರೆ.

ಪ್ರಣಾಳಿಕೆ ಸಮಿತಿ ಅಧ್ಯಕ್ಷರಾ-ಗಿರುವ ವಿಧಾನ ಪರಿಷತ್ ಸದಸ್ಯ ಬಿ.ಎಂ. ಫಾರೂಕ್ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಸದಸ್ಯರಾದ ಬಂಡೆಪ್ಪ ಕಾಶೆಂಪುರ, ಕುಪೇಂದ್ರ ರೆಡ್ಡಿ, ಕೆ.ಎ. ತಿಪ್ಪೇಸ್ವಾಮಿ ಸಭೆಯಲ್ಲಿದ್ದರು.

65 ವರ್ಷ ಮೀರಿದ ಹಿರಿಯ ನಾಗರಿಕರಿಗೆ ತಿಂಗಳಿಗೆ ₹ 5,000 ಮಾಸಾಶನ, ಅಂಗವಿಕಲರು ಮತ್ತು ವಿಧವೆಯರಿಗೆ ತಿಂಗಳಿಗೆ ₹ 2,500 ಮಾಸಾಶನ, ಉನ್ನತ ಶಿಕ್ಷಣ ಪಡೆಯುವ ವಿದ್ಯಾರ್ಥಿನಿಯರಿಗೆ ಎಲೆಕ್ಟ್ರಿಕ್ ದ್ವಿಚಕ್ರ ವಾಹನ, ಅಡುಗೆ ಅನಿಲ ಸಿಲಿಂಡರ್‌ಗೆ ಶೇಕಡ 50 ರಷ್ಟು ಸಹಾಯಧನ, ಆಟೋ ಚಾಲಕರಿಗೆ ತಿಂಗಳಿಗೆ ₹2,000 ಸಹಾಯಧನ, ವಿರಳ ಕಾಯಿಲೆಯಿಂದ ಬಳಲುತ್ತಿರು-ವವರಿಗೆ ಚಿಕಿತ್ಸೆಗೆ ₹ 25 ಲಕ್ಷದವರೆಗೆ ನೆರವು ನೀಡುವುದು ಸೇರಿದಂತೆ ಹಲವು ಅಂಶಗಳ ಕುರಿತು ಸಭೆಯಲ್ಲಿ ಚರ್ಚೆ ನಡೆಸಲಾಗಿದೆ.

'ಎಲ್ಲವನ್ನೂ ನುಂಗಿದ್ದೇನೆ'

ನಾನು ಕಳೆದ 15 ವರ್ಷಗಳಿಂದ ಪ್ರತಿಯೊಂದನ್ನು ನುಂಗಿದ್ದೇನೆ. ಕೆಲವು ವಿಷಯಗಳನ್ನು ಹೇಳಿಕೊಳ್ಳುವುದಕ್ಕೆ ಆಗುವುದಿಲ್ಲ. ನನಗೆ ಆಗುವಂಥ ಅನಾಹುತಗಳು ಗೊತ್ತಿದ್ದೂ ಸಹ ಯಾವುದೇ ತಪ್ಪು ಮಾಡದೆ ಎಲ್ಲವನ್ನೂ ತಲೆ ಮೇಲೆ ಹೊತ್ತು-ಕೊಳ್ಳಬೇಕಾಯಿತು' ಎಂದು ಕುಮಾರಸ್ವಾಮಿ ಹೇಳಿದರು.

'ಈಗಲೂ ಅದೇ ರೀತಿಯ ವಾತಾವರಣ ಸೃಷ್ಟಿಯಾಗಿದೆ. ಅದು ಅವರುಗಳಿಗೆ ಅರ್ಥ ಆಗಬೇಕು' ಎಂದರು.

ಜೆಡಿಎಸ್ ಎರಡನೇ ಪಟ್ಟಿ ಸಿದ್ಧ: ಎಚ್‌ಡಿಕೆ



ಕುಮಾರಸ್ವಾಮಿ

ಮುಳಬಾಗಿಲು (ಕೋಲಾರ): 'ಅಭ್ಯರ್ಥಿಗಳ ಎರಡನೇ ಪಟ್ಟಿ ಸಿದ್ಧ ಮಾಡಿಟ್ಟಿದ್ದೇನೆ. ನಾನು ಬಳ್ಳಾರಿಗೆ ತೆರಳುತ್ತಿದ್ದು, ಮೂರು ದಿನ ಬೆಂಗಳೂರಿನಲ್ಲಿ ಇರುವುದಿಲ್ಲ. ಒಂದೆರಡು ದಿನಗಳಲ್ಲಿ ಪಟ್ಟಿ ಬಿಡುಗಡೆ ಮಾಡಿಸುತ್ತೇನೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ತಿಳಿಸಿದರು.

ಶಿನಿಗೇನಹಳ್ಳಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, 'ಹಾಸನ ಕ್ಷೇತ್ರದ ಅಭ್ಯರ್ಥಿ ವಿಚಾರವನ್ನು ಸುಗಮವಾಗಿ ಬಗೆಹರಿಸುತ್ತೇವೆ. ನಮ್ಮ ಪಂಚರತ್ನ ರಥಯಾತ್ರೆ ಯಶಸ್ಸು ಎದುರಾಳಿಗಳಲ್ಲಿ ನಡುಕ ಉಂಟು ಮಾಡಿದೆ' ಎಂದರು.

'ಕಳೆದ ಬಾರಿ ವರುಣ ಕ್ಷೇತ್ರದಲ್ಲಿ ಸಿದ್ದರಾಮಯ್ಯ ವಿರುದ್ಧ ಜೆಡಿಎಸ್‌ನಿಂದ ಅಭಿಷೇಕ್ ಎಂಬ ಅಭ್ಯರ್ಥಿಯನ್ನು ಕಣಕ್ಕೆ ಇಳಿಸಿದ್ದೆವು. ಈ ಬಾರಿ ಅವರು ಹಿಂದೆ ಸರಿದಿದ್ದಾರೆ ಎಂಬ ಮಾಹಿತಿ ಬಂದಿದೆ. ಇನ್ನೂ ಅವರನ್ನು ಸಂಪರ್ಕಿಸಿಲ್ಲ. ಸ್ಪರ್ಧೆ ಮಾಡಲ್ಲವೆಂದರೆ ಬೇರೆ ಅಭ್ಯರ್ಥಿ ಕಣಕ್ಕಿಳಿಸುತ್ತೇವೆ' ಎಂದರು. 'ನಂಜನಗೂಡು ಕ್ಷೇತ್ರದಲ್ಲಿ ಪಕ್ಷದಿಂದ ಅಭ್ಯರ್ಥಿ ಕಣಕ್ಕಿಳಿಸಬೇಕೆ ಅಥವಾ ಬೇಡವೇ ಎಂಬುದನ್ನು ಚರ್ಚಿಸಿ ತೀರ್ಮಾನಿಸುತ್ತೇವೆ. ಸ್ಥಳೀಯವಾಗಿ ಈಗಾಗಲೇ ಮಾತನಾ-ಡಿಕೊಂಡಿದ್ದಾರೆ' ಎಂದು ಹೇಳಿದರು.

ಟಿಕೆಟ್ ಸಿಗುವ ವಿಶ್ವಾಸವಿದೆ–ಸ್ವರೂಪ್: (ಹಾಸನ ವರದಿ): 'ಟಿಕೆಟ್ ಸಿಗುವ ನಿರೀಕ್ಷೆ ಇದೆ' ಎಂದು ಹಾಸನ ಟಿಕೆಟ್ ಆಕಾಂಕ್ಷಿ ಎಚ್‌.ಪಿ. ಸ್ವರೂಪ್ ವಿಶ್ವಾಸ ವ್ಯಕ್ತಪಡಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, '2–3 ದಿನಗಳಲ್ಲಿ ಕ್ಷೇತ್ರದ ಅಭ್ಯರ್ಥಿಯ ಹೆಸರು ಘೋಷಣೆಯಾಗಲಿದೆ. ಮುಂದಿನ ಪಟ್ಟಿಯಲ್ಲಿ ನನ್ನ ಹೆಸರಿರಲಿದೆ. ಈಗಾಗಲೇ ಪಕ್ಷದ ಪರ ಪ್ರಚಾರದಲ್ಲಿ ನಿರತನಾಗಿದ್ದೇನೆ. ಮುಖಂಡರು, ಕಾರ್ಯಕರ್ತರೆಲ್ಲರೂ ಹುಮ್ಮಸ್ಸಿನಿಂದ ಕೆಲಸ ಮಾಡುತ್ತಿದ್ದಾರೆ' ಎಂದು ಹೇಳಿದರು.

214 ಕ್ಷೇತ್ರಗಳಲ್ಲಿ ಕಾಂಗ್ರೆಸ್‌ಗೆ ಬೆಂಬಲ: ಸಿಪಿಐ ಘೋಷಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಏಳು ವಿಧಾನ ಸಭಾ ಕ್ಷೇತ್ರಗಳಲ್ಲಿ ಭಾರತೀಯ ಕಮ್ಯುನಿಸ್ಟ್ ಪಕ್ಷ (ಸಿಪಿಐ) ಸ್ಪರ್ಧಿಸಲಿದೆ. ಬಾಗೇಪಲ್ಲಿ, ಮೇಲುಕೋಟೆ ಹೊರತುಪಡಿಸಿ ಉಳಿದ 214 ಕ್ಷೇತ್ರಗಳಲ್ಲೂ ಕಾಂಗ್ರೆಸ್ ಬೆಂಬಲಿಸಲು ನಿರ್ಣಯಿಸಲಾಗಿದೆ ಎಂದು ಪಕ್ಷದ ರಾಷ್ಟ್ರೀಯ ಕಾರ್ಯದರ್ಶಿ ಬಿನೋಯ್ ವಿಶ್ವಂ ಹೇಳಿದರು.

'ಕೋಮು ಸಾಮರಸ್ಯ ಹಾಳು ಮಾಡುತ್ತಿರುವ, ಧರ್ಮದ ಆಧಾರದಲ್ಲಿ ರಾಜಕೀಯ ಮಾಡುತ್ತಿರುವ, ಸಮ ಸಮಾಜದ ಪರಿಕಲ್ಪನೆಗೆ ವಿರುದ್ಧವಾಗಿ-ರುವ ಬಿಜೆಪಿಯನ್ನು ಸೋಲಿಸುವುದೇ ಪಕ್ಷದ ಪ್ರಮುಖ ಧ್ಯೇಯ. ಅದಕ್ಕಾಗಿ ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ ಜಾತ್ಯತೀತ ಪಕ್ಷಗಳನ್ನು ಬೆಂಬಲಿಸಲು ನಿರ್ಧರಿಸಿದ್ದೇವೆ. ಪಕ್ಷದ ಸಂಘಟನೆ ಪ್ರಬಲವಾಗಿರುವ ಆಳಂದ, ಜೇವರ್ಗಿ, ಕೂಡ್ಲಿಗಿ, ಶಿರಾ, ಕೆಜಿಎಫ್, ಮೂಡಿಗೆರೆ, ಮಡಿಕೇರಿ ಕ್ಷೇತ್ರಗಳಲ್ಲಿ ಪಕ್ಷದ ಅಭ್ಯರ್ಥಿಗಳನ್ನು ಕಣಕ್ಕಿಳಿಸಲಾಗುತ್ತಿದೆ. ಮೇಲುಕೋಟೆಯಲ್ಲಿ ಸರ್ವೋದಯ ಪಕ್ಷ, ಬಾಗೇಪಲ್ಲಿಯಲ್ಲಿ ಸಿಪಿಐ(ಎಂ) ಬೆಂಬಲಿಸಲಾಗುತ್ತಿದೆ' ಎಂದು ಸೋಮವಾರ ಪತ್ರಿಕಾ-ಗೋಷ್ಠಿಯಲ್ಲಿ ಮಾಹಿತಿ ನೀಡಿದರು.



ಬಿನೋಯ್ ವಿಶ್ವಂ

'ಪಕ್ಷ ಸ್ಪರ್ಧಿಸಲು ಇಚ್ಛಿಸಿದ ಏಳು ಕ್ಷೇತ್ರಗಳಲ್ಲಿ ಚುನಾವಣಾ ಪೂರ್ವ ಹೊಂದಾಣಿಕೆ ಮಾಡಿಕೊಳ್ಳಲು ಕಾಂಗ್ರೆಸ್‌ಗೆ ವಿನಂತಿಸಿದ್ದೆವು. ಆದರೆ, ಅವರಿಂದ ಸಕಾರಾತ್ಮಕ ಸ್ಪಂದನೆ ಸಿಗಲಿಲ್ಲ. ಪಕ್ಷದ ಅಸ್ತಿತ್ವ ಉಳಿಸಲು ಸ್ಪರ್ಧೆ ಹಾಗೂ ಕೋಮುವಾದಿ ಪಕ್ಷವನ್ನು ಅಧಿಕಾರದಿಂದ ದೂರ ಇಡಲು ಕಾಂಗ್ರೆಸ್ ಬೆಂಬಲಿಸಲು ನಿರ್ಧರಿಸಿದೆವು.' ಎಂದರು.

ಸಿಪಿಐ ರಾಜ್ಯ ಕಾರ್ಯದರ್ಶಿ ಸಾತಿ ಸುಂದರೇಶ್, ಬಿಜೆಪಿ ಸೋಲಿಗೆ ಗಣನೀಯ ಕೊಡುಗೆ ನೀಡಲಿದೆ. ಜನ ವಿರೋಧಿ ಬಿಜೆಪಿ ಸೋಲಿಸುವುದೇ ಪಕ್ಷ ಗುರಿ' ಎಂದರು.

ಪತ್ರಿಕಾಗೋಷ್ಠಿಯಲ್ಲಿ ಸಿಪಿಐ ಸಹ ಕಾರ್ಯದರ್ಶಿ ಅಮ್ಜದ್, ರಾಜ್ಯ ಖಜಾಂಚಿ ಶಿವರಾಜ್, ಸದಸ್ಯ ಕಾರ್ಯದರ್ಶಿ ಎ.ಜ್ಯೋತಿ, ಸಿಪಿಐ ರಾಜ್ಯ ಯುವಜನ ಸಂಘದ ಅಧ್ಯಕ್ಷ ಹರೀಶ್ ಬಾಲಾ ಇದ್ದರು.

'ಯಾವುದೇ ಕಾರಣಕ್ಕೂ ಬಿಜೆಪಿ ಅಧಿಕಾರಕ್ಕೆ ಬರಲ್ಲ'

ಬೆಂಗಳೂರು: 'ರಾಜ್ಯದಲ್ಲಿ ಈ ಬಾರಿ ಯಾವುದೇ ಕಾರಣಕ್ಕೂ ಬಿಜೆಪಿ ಅಧಿಕಾರಕ್ಕೆ ಬರುವುದಿಲ್ಲ. ಕರ್ನಾಟಕವಷ್ಟೇ ಅಲ್ಲ, ದಕ್ಷಿಣದ ಯಾವ ರಾಜ್ಯದಲ್ಲೂ ಅಧಿಕಾರಕ್ಕೆ ಬರಲು ಸಾಧ್ಯವಿಲ್ಲ' ಎಂದು ಕಾಂಗ್ರೆಸ್ ಜೊತೆ ಗುರುತಿಸಿಕೊಂಡಿರುವ ವಿಧಾನ ಪರಿಷತ್ ಸದಸ್ಯ ಎಚ್. ವಿಶ್ವನಾಥ್ ಹೇಳಿದರು.

ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿದ ಅವರು, 'ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬರಲು ಕಾರಣವಾಗಿದ್ದಕ್ಕೆ ನಾನು ಪ್ರಾಯಶ್ಚಿತ್ತ ಮಾಡಿಕೊಂಡಿದ್ದೇನೆ. ಅವರ ಭ್ರಷ್ಟಾಚಾರಕ್ಕೆ ಜನ ಚುನಾವಣೆಯಲ್ಲಿ ತಕ್ಕ ಪಾಠ ಕಲಿಸಲಿದ್ದಾರೆ' ಎಂದರು.

'ನಾನು ಸೋಮವಾರವೇ (ಏಪ್ರಿಲ್ 10) ಕಾಂಗ್ರೆಸ್ ಸೇರಬೇಕಿತ್ತು. ಆದರೆ, ಕಾಂಗ್ರೆಸ್ ನಾಯಕರು ತುರ್ತಾಗಿ ದೆಹಲಿಗೆ ಹೋಗಿರುವುದರಿಂದ ಸಾಧ್ಯವಾಗಿಲ್ಲ. 2–3 ದಿನದಲ್ಲಿ ಕಾಂಗ್ರೆಸ್ ಸೇರ್ಪಡೆಯಾಗುತ್ತೇನೆ. ಇದರಿಂದ ನನ್ನ ಪರಿಷತ್ ಸ್ಥಾನಕ್ಕೆ ಯಾವುದೇ ತೊಂದರೆ ಇಲ್ಲ' ಎಂದೂ ಹೇಳಿದರು.

ಪೊಲೀಸರಿಗೆ ವಾಪಸ್ ಬರಲು ಹೇಳಿದರೇ ಪ್ರೀತಂ?

ಹಾಸನ: 'ಅಕ್ರಮ ಗೋಮಾಂಸ ಮಾರಾಟ ಕೇಂದ್ರದ ಮೇಲೆ ದಾಳಿ ಮಾಡಿದ್ದ ಪೊಲೀಸರಿಗೆ, ವಾಪಸ್ ಬರುವಂತೆ ಬಿಜೆಪಿ ಶಾಸಕ ಪ್ರೀತಂ ಗೌಡ ಸೂಚಿಸಿದ್ದಾರೆ' ಎನ್ನಲಾದ ಆಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

ಇಲ್ಲಿನ ಶ್ರೀನಗರ ಬಡಾವಣೆಯಲ್ಲಿ ಕೇಂದ್ರದ ಮೇಲೆ ಪೊಲೀಸರು ದಾಳಿ ಮಾಡಿದ್ದರು. ಈ ವೇಳೆ ಇನ್‌ಸ್ಪೆಕ್ಟರ್ ಯೋಗೀಶ್ ಜೊತೆ ಶಾಸಕರು ಮಾತನಾಡಿದ್ದಾರೆ ಎನ್ನಲಾಗಿದೆ. 'ಅಣ್ಣಾ ಯೋಗೀಶಣ್ಣ ಚುನಾವಣೆ ಸಂದರ್ಭ ಬಾರೋ ನಿನ್ ದಮ್ಮಯ್ಯ' ಎಂದು ಹೇಳಿರುವುದು ಆಡಿಯೊದಲ್ಲಿದೆ. 'ಬಿಜೆಪಿ ಶಾಸಕರು ಗೋಮಾಂಸ ಅಕ್ರಮ ಮಾರಾಟಕ್ಕೆ ಬೆಂಬಲ ನೀಡಿದ್ದಾರೆ' ಎಂದೂ ಆರೋಪಿಸಲಾಗಿದೆ.

ಸ್ಪಷ್ಟನೆ: ಈ ಬಗ್ಗೆ ಪ್ರತಿಕ್ರಿಯಿಸಿದ ಪ್ರೀತಂ ಗೌಡ, 'ಆ ಆಡಿಯೊ ನನ್ನದಲ್ಲ. ಕಟ್ ಮಾಡಿ ಪೇಸ್ಟ್ ಮಾಡಲಾಗಿದೆ. ಮುಸ್ಲಿಮರು ಹೆಚ್ಚಾಗಿ ನನ್ನನ್ನು ಬೆಂಬಲಿಸುತ್ತಿರುವುದರಿಂದ ಹೀಗೆ ಮಾಡಿದ್ದಾರೆ. ಸಾಮಾಜಿಕ ಜಾಲತಾಣದಲ್ಲಿ ಹರಿದಾ-ಡುತ್ತಿರುವ ಆಡಿಯೊ ಪರಿಶೀಲಿಸಿದ್ದೇನೆ. ಅದು ನನ್ನದಲ್ಲವೇ ಅಲ್ಲ' ಎಂದು ಸ್ಪಷ್ಟಪಡಿಸಿದರು.

ಎ.ಟಿ.ರಾಮಸ್ವಾಮಿ ರಾಜೀನಾಮೆ ಸಲ್ಲಿಕೆ

ಬೆಂಗಳೂರು: ಅರಕಲಗೂಡು ಶಾಸಕ ಎ.ಟಿ.ರಾಮಸ್ವಾಮಿ ಅವರು ಸೋಮವಾರ ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವರಿಗೆ ರಾಜೀನಾಮೆ ಪತ್ರ ಸಲ್ಲಿಸಿದರು.

ಇತ್ತೀಚೆಗೆ ಅವರು ಜೆಡಿಎಸ್ ತೊರೆದು ಬಿಜೆಪಿ ಸೇರ್ಪ-ಡೆಗೊಂಡಿದ್ದರು.

50 ಕ್ಷೇತ್ರಗಳಲ್ಲಿ ಸ್ಪರ್ಧೆಗೆ ಜೆಡಿಯು ನಿರ್ಧಾರ

ರಾಣೆಬೆನ್ನೂರು: ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಪಕ್ಷ 50 ಸ್ಥಾನಗಳಿಗೆ ಸ್ಪರ್ಧೆ ಮಾಡಲಿದೆ ಎಂದು ಜೆಡಿಯು ರೈತ ಮೋರ್ಚಾ ರಾಜ್ಯ ಕಾರ್ಯಾಧ್ಯಕ್ಷ ಶಂಕರಗೌಡ ಗಂಗನಗೌಡ್ರ ಹೇಳಿದರು.

ನಗರದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದ ಅವರು ಈ ಬಾರಿ ರಾಣೆಬೆನ್ನೂರು ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧೆ ಮಾಡುತ್ತಿರುವುದಾಗಿ ತಿಳಿಸಿದರು.

'ಜೆಡಿಯು ಪಕ್ಷವು ಮತದಾರರಿಗೆ ಯಾವುದೇ ರೀತಿಯ ಆಶ್ವಾಸನೆ ನೀಡುವುದಿಲ್ಲ. ಜನರ ಸಮಸ್ಯೆಗಳನ್ನು ಅರಿತು ಕೆಲಸ ಮಾಡುವ ಕಾರ್ಯಕ್ಕೆ ಮುಂದಾಗಲಿದೆ' ಎಂದು ಅವರು ಹೇಳಿದರು.

14 ಕ್ಷೇತ್ರಗಳಲ್ಲಿ ಸರ್ವೋದಯ ಕರ್ನಾಟಕ ಪಕ್ಷ ಕಣಕ್ಕೆ

ದಾವಣಗೆರೆ: ಸರ್ವೋದಯ ಕರ್ನಾಟಕ ಪಕ್ಷವು ವಿಧಾನಸಭೆ ಚುನಾವಣೆಯಲ್ಲಿ ರಾಜ್ಯದ 14 ಕ್ಷೇತ್ರಗಳಿಂದ ಅಭ್ಯರ್ಥಿಗಳನ್ನು ಕಣಕ್ಕಿಳಿಸಲಿದೆ ಎಂದು ಪಕ್ಷದ ಅಧ್ಯಕ್ಷ ಚಾಮರಸ ಮಾಲಿಪಾಟೀಲ ಹೇಳಿದರು.

'ಕೃಷಿ ಕ್ಷೇತ್ರಕ್ಕೆ ಕಂಟಕವಾಗಿರುವ ಕಾನೂನುಗಳಿಂದಾಗಿ ರೈತರ ಬದುಕು ಅಧೋಗತಿ ತಲುಪಿದ್ದು, ರೈತರು ರಾಜಕೀಯ ಶಕ್ತಿಯಾಗಿ ಬೆಳೆಯಬೇಕಾದ ಅನಿವಾರ್ಯತೆ ಇದೆ. ಈ ನಿಟ್ಟಿನಲ್ಲಿ 14 ಕ್ಷೇತ್ರಗಳಲ್ಲಿ ಚುನಾವಣೆಗೆ ಸ್ಪರ್ಧಿಸಲಾಗುವುದು. ಉಳಿದ ಕಡೆ ಸಮಾನ ಮನಸ್ಕ ಪಕ್ಷಗಳಾದ ಸಿಪಿಐ, ಸಿಪಿಎಂ ಹಾಗೂ ಎಸ್‌ಯುಸಿಐ ಅಭ್ಯರ್ಥಿಗಳನ್ನು ಬೆಂಬಲಿಸಲು ಸೋಮವಾರ ನಡೆದ ರಾಜ್ಯ ಸಮಿತಿ ಸಭೆಯಲ್ಲಿ ನಿರ್ಧರಿಸಲಾಗಿದೆ' ಎಂದು ಅವರು ಸೋಮವಾರ ನಡೆದ ಸಭೆಯ ಬಳಿಕ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು.

'ಮಂಡ್ಯ, ಮೇಲುಕೋಟೆ, ಬೆಳ್ತಂಗಡಿ, ವಿರಾಜಪೇಟೆ, ಚಿತ್ರದುರ್ಗ, ಕಡೂರು, ಮಾನ್ವಿ, ರಾಯಚೂರು ಗ್ರಾಮೀಣ, ಕಿತ್ತೂರು, ಸವದತ್ತಿ, ಚಾಮರಾಜನಗರ, ಕೊಳ್ಳೇಗಾಲ, ಹನೂರು ಮತ್ತು ಹಳಿಯಾಳ ಕ್ಷೇತ್ರಗಳಲ್ಲಿ ಪಕ್ಷದ ಅಭ್ಯರ್ಥಿ-ಗಳನ್ನು ಕಣಕ್ಕೆ ಇಳಿಸಲಾಗುವುದು' ಎಂದರು.

'ಕನಕಪುರದಿಂದ ಅಶೋಕ ಸ್ಪರ್ಧಿಸಿದರೆ ಸ್ವಾಗತ'

ಶೃಂಗೇರಿ (ಚಿಕ್ಕಮಗಳೂರು ಜಿಲ್ಲೆ): 'ಕನಕಪುರ ವಿಧಾನಸಭಾ ಕ್ಷೇತ್ರದಲ್ಲಿ ಬಿಜೆಪಿಯವರು ಸಚಿವ ಆರ್. ಅಶೋಕ ಅವರನ್ನು ಕಣಕ್ಕಿಳಿಸಿದರೆ ಸ್ವಾಗತಿಸುತ್ತೇನೆ, ಹೋರಾಟ ಮಾಡುತ್ತೇನೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಪ್ರತಿಕ್ರಿಯಿಸಿದರು.

ಸೋಮವಾರ ಶೃಂಗೇರಿಗೆ ಭೇಟಿ ನೀಡಿದ್ದ ಅವರು, ಶಾರದಾಂಬೆಗೆ ಪೂಜೆ ಸಲ್ಲಿಸಿದರು. ತೋರಣ ಗಣಪತಿ ದೇಗುಲದಲ್ಲಿ ಈಡುಗಾಯಿ ಒಡೆದರು. ಶಾರದಾಪೀಠದ ಸ್ವಾಮೀಜಿ ಅವರ ಆಶೀರ್ವಾದ ಪಡೆದು ಬಳಿಕ ಸುದ್ದಿಗಾರ-ರೊಂದಿಗೆ ಮಾತನಾಡಿದರು.

'ಹಿರಿಯ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಈ ಹಿಂದೆ ಅನ್ಯಾಯ ಆಗಿದೆ ಎಂಬ ಕೂಗು ಇದೆ. ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ತರಬೇಕು ಎಂಬುದೇ ಖರ್ಗೆ ಅವರ ಇಚ್ಛೆ. ಖರ್ಗೆ, ಸಿದ್ದರಾಮಯ್ಯ, ನಾನು ಎಲ್ಲರೂ ಪಕ್ಷದ ಅಣತಿಯಂತೆ ನಡೆದುಕೊಳ್ಳುತ್ತೇವೆ. ಈಗ ಪಕ್ಷವನ್ನು ಅಧಿಕಾರಕ್ಕೆ ತರುವುದೇ ಮುಖ್ಯ' ಎಂದು ಅವರು ಉತ್ತರಿಸಿದರು.

ಬಿ.ವಿ.ನಾಯಕ ಸ್ಥಿತಿ ಅತಂತ್ರ

ರಾಯಚೂರು: ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಯಾಗಿ ಜಿಲ್ಲೆಯ ದೇವದುರ್ಗ ಮತ್ತು ಮಾನ್ವಿ ಕ್ಷೇತ್ರಕ್ಕೆ ಅರ್ಜಿ ಸಲ್ಲಿಸಿರುವ ಕಾಂಗ್ರೆಸ್ ಜಿಲ್ಲಾ ಘಟಕದ ಅಧ್ಯಕ್ಷ ಬಿ.ವಿ.ನಾಯಕ ಸದ್ಯಕ್ಕೆ ಅತಂತ್ರ ಸ್ಥಿತಿಯಲ್ಲಿ ಸಿಲುಕಿದ್ದಾರೆ.

ದೇವದುರ್ಗ ಕ್ಷೇತ್ರದಿಂದ ಸ್ಪರ್ಧಿಸುವಂತೆ ಕಾಂಗ್ರೆಸ್ ವರಿಷ್ಠರು ಸೂಚಿಸಿದರೂ ಬಿ.ವಿ.ನಾಯಕ ಒಪ್ಪುತ್ತಿಲ್ಲ. ಆ ಕ್ಷೇತ್ರದಲ್ಲಿ ಈಗಾಗಲೇ ಬಿಜೆಪಿ ಶಾಸಕ ಕೆ.ಶಿವನಗೌಡ ನಾಯಕ ಮತ್ತು ಜೆಡಿಎಸ್ ಅಭ್ಯರ್ಥಿ ಕರೆಮ್ಮ ಅಬ್ಬರದ ಪ್ರಚಾರ ಕೈಗೊಂಡಿದ್ದಾರೆ.

ಮಾನ್ವಿಯಿಂದ ಬಿ.ವಿ.ನಾಯಕ ಸ್ಪರ್ಧಿಸುವುದಕ್ಕೆ ಅಲ್ಲಿನ ಕಾಂಗ್ರೆಸ್ ಮಾಜಿ ಶಾಸಕ ಹಂಪಯ್ಯ ನಾಯಕ ಹಾಗೂ ಬೆಂಬಲಿಗರ ವಿರೋಧವಿದೆ. 'ಬಿ.ವಿ.ನಾಯಕಗೆ ಟಿಕೆಟ್ ನೀಡಿದರೆ, ಸೋಲಿಸುತ್ತೇವೆ' ಎಂದು ಅವರು ಬಹಿರಂಗ ಎಚ್ಚರಿಕೆ ನೀಡಿದ್ದಾರೆ.

'ಬಿ.ವಿ.ನಾಯಕ ಅವರಿಗೆ ದೇವದುರ್ಗ ಮತ್ತು ಮಾನ್ವಿ ಪೈಕಿ ಯಾವ ಕ್ಷೇತ್ರಕ್ಕೆ ಟಿಕೆಟ್ ನೀಡಬೇಕು ಎಂಬುದರ ಬಗ್ಗೆ ದೆಹಲಿಯಲ್ಲಿ ಚರ್ಚೆ ನಡೆದಿದೆ. ಎರಡು ದಿನಗಳಲ್ಲಿ ಟಿಕೆಟ್ ಘೋಷಣೆಯಾಗಲಿದ್ದು, ಗೊಂದಲ ಪರಿಹಾರ ಆಗಲಿದೆ' ಎಂದು ಅಖಿಲ ಭಾರತ ಕಾಂಗ್ರೆಸ್ ಸಮಿತಿ (ಎಐಸಿಸಿ) ಕಾರ್ಯದರ್ಶಿ ಎನ್.ಎಸ್.ಬೋಸರಾಜ 'ಪ್ರಜಾವಾಣಿ'ಗೆ ತಿಳಿಸಿದರು.



ಪಥಸಂಚಲನ ರೈಲ್ವೆ ರಕ್ಷಣಾ ವಿಶೇಷ ಪಡೆ, ಕರ್ನಾಟಕ ಮೀಸಲು ಪೊಲೀಸ್ ಪಡೆ ಮತ್ತು ಸ್ಥಳೀಯ ಪೊಲೀಸ್ ಸಿಬ್ಬಂದಿ ವಿಧಾನಸಭೆ ಚುನಾವಣೆ ಹಿನ್ನೆಲೆಯಲ್ಲಿ ಬೆಂಗಳೂರಿನ ಕಬ್ಬನ್‌ಪೇಟೆಯಲ್ಲಿ ಸೋಮವಾರ ಪಥಸಂಚಲನ ನಡೆಸಿದರು.

ಪ್ರಜಾವಾಣಿ ಚಿತ್ರ: ಪ್ರಶಾಂತ್ ಎಚ್‌.ಜಿ.

ಬಿಎಸ್‌ವೈ ಹೊರಗಿಟ್ಟು ಶಾ, ನಡ್ಡಾ ಸಭೆ

ಒಂದನೇ ಪುಟದಿಂದ...

ಬಳಿಕ, ರಾಷ್ಟ್ರೀಯ ನಾಯಕರು ಮುಖ್ಯಮಂತ್ರಿ ಬೊಮ್ಮಾಯಿ, ಕೇಂದ್ರ ಸಚಿವ ಪ್ರಲ್ಹಾದ ಜೋಷಿ, ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಬಿ.ಎಲ್‌.ಸಂತೋಷ್, ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ, ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲು ಅವರ ಜತೆಗೆ ಸುಮಾರು ಒಂದೂವರೆ ಗಂಟೆ ಸಮಾಲೋಚನೆ ನಡೆಸಿದರು. '170ರಿಂದ 180 ಕ್ಷೇತ್ರಗಳ ಅಭ್ಯರ್ಥಿಗಳ ಹೆಸರು ಅಖೈರುಗೊಂಡಿದೆ. ಮೊದಲ ಪಟ್ಟಿ ಸೋಮವಾರ ಮಧ್ಯಾ-ಹ್ನದೊಳಗೆ ಬಿಡುಗಡೆಯಾಗಲಿದೆ' ಎಂದು ರಾಜ್ಯ ನಾಯಕರು ಹೇಳಿದ್ದರು.

'ಕೆಲವು ಕ್ಷೇತ್ರಗಳ ಬಗ್ಗೆ ಇನ್ನಷ್ಟು ಚರ್ಚೆಯಾಗಬೇಕಿದೆ. ಸೋಮವಾರ ಬೆಳಿಗ್ಗೆ ಮತ್ತೆ ಸಭೆ ನಡೆಸುತ್ತೇವೆ' ಎಂದು ಬೊಮ್ಮಾಯಿ ತಿಳಿಸಿದ್ದರು.

'ಕುಟುಂಬದವರಿಗೆ ಟಿಕೆಟ್ ನೀಡುವ ವಿಷಯದಲ್ಲಿ ಪ್ರಧಾನಿ ಕಠಿಣ ನಿಲುವು ತಳೆದಿದ್ದಾರೆ. ಇದರಿಂದಾಗಿ, ಯಡಿಯೂರಪ್ಪ ಅಸಮಾಧಾನಗೊಂಡಿದ್ದಾರೆ. ಇದು ಸಹ ಸಭೆಯಿಂದ ಅರ್ಧದಲ್ಲೇ ನಿರ್ಗಮಿಸಲು ಕಾರಣ. ಬಿಜೆಪಿ ಕಠಿಣ ನಿಲುವು ತಳೆದರೆ ಬಿ.ವೈ. ವಿಜಯೇಂದ್ರ ಅವರಿಗೆ ಟಿಕೆಟ್ ಸಿಗುವುದು ಅನುಮಾನ' ಎಂಬ ಸುದ್ದಿಗಳು ಪಕ್ಷದ ವಲಯದಲ್ಲಿ ಹರಿದಾಡಿದವು.

ಅಭ್ಯರ್ಥಿಗಳ ಆಯ್ಕೆ ಹಾಗೂ ಚುನಾವಣಾ ಕಾರ್ಯತಂತ್ರದ ಕುರಿತು ಚರ್ಚಿಸಲು ಅಮಿತ್ ಶಾ ಹಾಗೂ ನಡ್ಡಾ ನೇತೃತ್ವದಲ್ಲಿ ಸೋಮವಾರ ನಡೆದ ಸಭೆಯಲ್ಲಿ ಯಡಿಯೂರಪ್ಪ ಇರಲಿಲ್ಲ. ಬೊಮ್ಮಾಯಿ, ಪ್ರಲ್ಹಾದ ಜೋಷಿ, ನಳಿನ್ ಕುಮಾರ್ ಕಟೀಲು, ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಭಾಗಿಯಾಗಿದ್ದರು.

ನಂತರ ಯಡಿಯೂರಪ್ಪ ಅವರೊಂದಿಗೆ ನಡ್ಡಾ ಪ್ರತ್ಯೇಕ ಸಭೆ ನಡೆಸಿದರು. ಈ ಸಭೆ ಕೆಲವೇ ನಿಮಿಷಗಳಲ್ಲಿ ಮುಗಿದು ಹೋಯಿತು. 'ತಂತ್ರ ಹೆಣೆಯಲು ರಾಜ್ಯ ನಾಯಕರೊಂದಿಗೆ ರಾಷ್ಟ್ರೀಯ ನಾಯಕರು ಸಭೆ ನಡೆಸಿದ್ದಾರೆ. ನನಗೇನೂ ಬೇಸರ ಆಗಿಲ್ಲ' ಎಂದು ಹೇಳಿದ ಯಡಿಯೂರಪ್ಪ, ಸಂಜೆ ಬೆಂಗಳೂರಿಗೆ ತೆರಳಿದರು. ಸಂಜೆ ನಾಲ್ಕರಿಂದ ರಾತ್ರಿ 8 ಗಂಟೆಯ ವರೆಗೆ ನಡ್ಡಾ ಅವರು ಬೊಮ್ಮಾಯಿ, ಜೋಷಿ ಮತ್ತಿತರರು ನಾಯಕರೊಂದಿಗೆ ಸಭೆ ನಡೆಸಿ ಚರ್ಚಿಸಿದರು.

ತಮ್ಮ ಹಿಂಬಾಲಕರಿಗೆ (15ರಿಂದ 20 ಮಂದಿ) ಟಿಕೆಟ್ ನೀಡಬೇಕು ಎಂದು ಯಡಿಯೂರಪ್ಪ ಪಟ್ಟು ಹಿಡಿದಿದ್ದರು. ಈ ಮಾತಿಗೂ ಹೆಚ್ಚಿನ ಮನ್ನಣೆ ಸಿಗಲಿಲ್ಲ. ಈ ವಿಷಯದ ಬಗ್ಗೆಯೂ ಯಡಿಯೂರಪ್ಪ ಅಸಮಾಧಾನಗೊಂಡಿದ್ದಾರೆ ಎಂದು ಪಕ್ಷದ ಮೂಲಗಳು ಹೇಳಿವೆ.

ಮೊದಲ ಪಟ್ಟಿಯಲ್ಲೇ ಹೆಚ್ಚಿನ ಕ್ಷೇತ್ರಗಳು: ಪ್ರಲ್ಹಾದ ಜೋಷಿ

ಚುನಾವಣಾ ಅಧಿಸೂಚನೆ ಪ್ರಕಟವಾಗುವ ಎರಡು ದಿನಗಳ ಹಿಂದೆ ಮೊದಲ ಪಟ್ಟಿ ಬಿಡುಗಡೆಯಾಗಿದ್ದೂ ಇದೆ. ಈ ಬಾರಿ ಮೊದಲ ಪಟ್ಟಿಯಲ್ಲೇ ಅತಿ ಹೆಚ್ಚಿನ ಕ್ಷೇತ್ರಗಳ ಅಭ್ಯರ್ಥಿಗಳ ಹೆಸರು ಪ್ರಕಟಿಸಲಾಗುವುದು ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಷಿ ತಿಳಿಸಿದರು.

ಸುದ್ದಿಗಾರರ ಜತೆಗೆ ಮಾತನಾಡಿದ ಅವರು, 'ಸೋಮವಾರದ ಸಭೆಯಲ್ಲಿ 224 ಕ್ಷೇತ್ರಗಳ ಬಗ್ಗೆ ಚರ್ಚೆ ಆಗಿದೆ. ಕೆಲವು ಕ್ಷೇತ್ರಗಳ ಕುರಿತು ಹೆಚ್ಚುವರಿ ಮಾಹಿತಿಗಳನ್ನು ರಾಷ್ಟ್ರೀಯ ನಾಯಕರು ಕೇಳಿದರು. ಆ ಕ್ಷೇತ್ರಗಳ ಕುರಿತು ಚರ್ಚಿಸಲಾಗಿದೆ. ರ‍್ಯಾಲಿ ಹಾಗೂ ಸಮಾವೇಶಗಳ ಬಗ್ಗೆ ಚರ್ಚಿಸಲಾಗಿದೆ. ನರೇಂದ್ರ ಮೋದಿ, ಅಮಿತ್ ಶಾ, ರಾಜನಾಥ ಸಿಂಗ್ ಪ್ರವಾಸಗಳ ಸಂಬಂಧ ಮಾತುಕತೆ ನಡೆಸಿದ್ದೇವೆ' ಎಂದರು.

ಯಡಿಯೂರಪ್ಪ ಅವರು ಸಲಹೆ ಕೊಟ್ಟು ಬೆಂಗಳೂರಿಗೆ ತೆರಳಿದ್ದಾರೆ. ಪಟ್ಟಿ ಬಿಡುಗಡೆಯಲ್ಲಿ ಯಾವುದೇ ಗೊಂದಲ ಇಲ್ಲ ಎಂದೂ ಸ್ಪಷ್ಟಪಡಿಸಿದರು.

ಕಾಂಗ್ರೆಸ್‌ನತ್ತ ಲಕ್ಷ್ಮಣ ಸವದಿ?

ಒಂದನೇ ಪುಟದಿಂದ...

2019ರಲ್ಲಿ 'ಆಪರೇಷನ್ ಕಮಲ'ದ ಮೂಲಕ ಮಹೇಶ ಕುಮಠಳ್ಳಿ ಅವರನ್ನು ಬಿಜೆಪಿಗೆ ಕರೆತಂದು ಗೆಲ್ಲಿಸಲಾಗಿತ್ತು.

ಕ್ಷೇತ್ರ ಬಿಟ್ಟುಕೊಟ್ಟ ಕಾರಣಕ್ಕೆ ಸವದಿ ಅವರನ್ನು ಪರಿಷತ್‌ಗೆ ನೇಮಕ ಮಾಡಿ, ಉಪಮುಖ್ಯಮಂತ್ರಿ ಸ್ಥಾನ ನೀಡಲಾಗಿತ್ತು. ಪ್ರಸಕ್ತ ಟಿಕೆಟ್‌ಗಾಗಿ ಕುಮಠಳ್ಳಿ, ಸವದಿ ಮಧ್ಯೆ ತೀವ್ರ ಪೈಪೋಟಿ ಏರ್ಪಟ್ಟಿತ್ತು. ಆಪರೇಷನ್ ಕಮಲದ ಸೂತ್ರಧಾರ ರಮೇಶ ಜಾರಕಿಹೊಳಿ ಕೂಡ ಕುಮಠಳ್ಳಿ ಪರ ಲಾಬಿ ನಡೆಸಿದ್ದರು. ಕಳೆದೊಂದು ವಾರದಿಂದ ಈ ಮೂವರೂ ನಾಯಕರು ಬೆಂಗಳೂರಿನಲ್ಲಿ ಠಿಕಾಣಿ ಹೂಡಿದ್ದರು. ಎರಡು ದಿನಗಳ ಹಿಂದೆ ಕ್ಷೇತ್ರಕ್ಕೆ ಮರಳಿದ ಕುಮಠಳ್ಳಿ ಬಿರುಸಿನ ಪ್ರಚಾರ ಶುರು ಮಾಡಿದ್ದಾರೆ. ಆದರೆ, ಸವದಿ ಮಾತ್ರ ಯಾರೊಂದಿಗೂ ಬೆರೆಯದೆ ಮೌನವಾಗಿದ್ದರು. ಅವರು ಕಾಂಗ್ರೆಸ್ ಸೇರಲಿದ್ದಾರೆ ಎಂಬ ಗುಮಾನಿ ಎದ್ದಿತ್ತು. ಸೋಮವಾರ ಇದ್ದಕ್ಕಿಂತೆ ರಾಜಕೀಯ ಚಟುವಟಿಕೆಗಳು ಬಿರುಸುಗೊಂಡಿದ್ದು ಗಮನಾರ್ಹ.

ಸಿದ್ಧಗಂಗಾ ಸ್ವಾಮೀಜಿ ಜತೆ ಸೋಮಣ್ಣ ರಾಜಕೀಯ ಚರ್ಚೆ

ತುಮಕೂರು: ಸಿದ್ಧಗಂಗಾ ಮಠಕ್ಕೆ ಸೋಮವಾರ ಸಂಜೆ ಪತ್ನಿ ಸಮೇತ ಭೇಟಿ ನೀಡಿದ ವಸತಿ ಸಚಿವ ವಿ. ಸೋಮಣ್ಣ ಅವರು ಸಿದ್ಧಲಿಂಗ ಸ್ವಾಮೀಜಿ ಜತೆ ಕೆಲ ಹೊತ್ತು ಪ್ರಸಕ್ತ ರಾಜಕೀಯ ವಿದ್ಯಮಾನಗಳ ಕುರಿತು ಚರ್ಚಿಸಿದರು.

ಮಗನಿಗೆ ಬಿಜೆಪಿ ಹೈಕಮಾಂಡ್ ಟಿಕೆಟ್ ನೀಡಲು ಹಿಂದೆ ಮುಂದೆ ನೋಡುತ್ತಿರುವುದು ಮತ್ತು ವರುಣ ಕ್ಷೇತ್ರದಿಂದ ಸ್ಪರ್ಧಿಸುವಂತೆ ಹೇಳುತ್ತಿರುವುದು ಸೇರಿದಂತೆ ಪ್ರಸ್ತುತ ರಾಜಕೀಯ ಸನ್ನಿವೇಶಗಳ ಬಗ್ಗೆ ಸೋಮಣ್ಣ ಅವರು ಶ್ರೀಗಳೊಂದಿಗೆ ಚರ್ಚಿಸಿದರು ಎಂದು ಮೂಲಗಳು ತಿಳಿಸಿವೆ.

ಸ್ವಾಮೀಜಿ ಭೇಟಿ ಬಳಿಕ ಸುದ್ದಿ-ಗಾರರೊಂದಿಗೆ ಮಾತನಾಡಿದ ಅವರು, 'ತುಮಕೂರು ಜಿಲ್ಲೆಯ ಗುಬ್ಬಿ ಕ್ಷೇತ್ರದಿಂದ ನನ್ನ ಮಗ ಅರುಣ್‌ಗೆ ಟಿಕೆಟ್ ಕೇಳಿರುವುದು ನಿಜ. ಕೊಡುವುದು, ಬಿಡುವುದು ಪಕ್ಷದ ಹೈಕಮಾಂಡ್‌ಗೆ ಬಿಟ್ಟ ವಿಚಾರ. ಟಿಕೆಟ್ ಸಿಗುವ ನಿರೀಕ್ಷೆಯಲ್ಲಿ ಇದ್ದೇವೆ. ಕೊಟ್ಟರೂ ಸಂತೋಷ. ಕೊಡದಿದ್ದರೂ ತೊಂದರೆ ಇಲ್ಲ. ಕೊಟ್ಟರೆ ಪಕ್ಷಕ್ಕಾಗಿ ಕೆಲಸ ಮಾಡುತ್ತಾನೆ' ಎಂದು ಹೇಳಿದರು.

ಪ್ರಚಾರ: ನಿಖಿಲ್‌ಗೆ ಮಹಿಳೆಯರ ತರಾಟೆ

ಹಾರೋಹಳ್ಳಿ: ತಾಲ್ಲೂಕಿನ ಬಾದಗೆರೆ ಗ್ರಾಮಕ್ಕೆ ಚುನಾವಣಾ ಪ್ರಚಾರಕ್ಕೆ ತೆರಳಿದ್ದ ಜೆಡಿಎಸ್ ರಾಜ್ಯ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಮತ್ತು ಜೆಡಿಎಸ್ ಸ್ಥಳೀಯ ಮುಖಂಡರು ಮಹಿಳೆಯರ ಸಿಟ್ಟು ಎದುರಿಸಬೇಕಾಯಿತು.

ನಿಖಿಲ್ ಬರುತ್ತಿದ್ದಂತೆಯೇ ಘೇರಾವ್ ಹಾಕಿದ ಮಹಿಳೆಯರು, ಗ್ರಾಮದಿಂದ ಹೊರ ಹೋಗುವಂತೆ ತಾಕೀತು ಮಾಡಿದರು. ಐದಾರು ದಿನಗಳ ಹಿಂದೆ ನಡೆದಿರುವುದು ಸೋಮವಾರ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

'ಯಾವ ಪಕ್ಷದವರು ಗ್ರಾಮಕ್ಕೆ ಬರಬೇಡಿ. ಮೊದಲು ಅಭಿವೃದ್ಧಿ ಕೆಲಸ ಮಾಡಿ. ನಂತರ ಮತ ಕೇಳಲು ಗ್ರಾಮಕ್ಕೆ ಬನ್ನಿ'ಎಂದು ಹೇಳಿದರು. 'ಮುಂದೆ ಈ ರೀತಿ ಸಮಸ್ಯೆ ಆಗದಂತೆ ನೋಡಿ-ಕೊಳ್ಳುತ್ತೇವೆ. ನಿಮ್ಮ ಗ್ರಾಮದಲ್ಲಿ ಆಗಬೇಕಿರುವ ಅಭಿವೃದ್ಧಿ ಕೆಲಸಗಳನ್ನು ಚುನಾವಣೆ ಮುಗಿದ ನಂತರ ಮಾಡಿ ಕೊಡುತ್ತೇವೆ' ಎಂದು ನಿಖಿಲ್, ಸಮಾಧಾನಪಡಿಸಿದರು.

ಸಾಗರ: ಕಾಂಗ್ರೆಸ್‌ಗೆ ಬಂಡಾಯದ ಬಿಸಿ

ಸಾಗರ: ಶಿವಮೊಗ್ಗ ಜಿಲ್ಲಾ ಕಾಂಗ್ರೆಸ್ ಸಮಿತಿಯ ಮಾಜಿ ಅಧ್ಯಕ್ಷ, ಮಲೆನಾಡು ಭೂ ಹೋರಾಟ ಸಮಿತಿ ಜಿಲ್ಲಾ ಸಂಚಾಲಕ ತೀ.ನ. ಶ್ರೀನಿವಾಸ್ ಅವರು ಸ್ವತಂತ್ರ ಅಭ್ಯರ್ಥಿಯಾಗಿ ಏ.13ರಂದು ನಾಮಪತ್ರ ಸಲ್ಲಿಸುವುದಾಗಿ ಸೋಮವಾರ ಘೋಷಿಸಿದ್ದಾರೆ. ಇದರೊಂದಿಗೆ ಸಾಗರದಲ್ಲಿ ಕಾಂಗ್ರೆಸ್‌ಗೆ ಬಂಡಾಯದ ಬಿಸಿ ತಟ್ಟಲಿದೆ.

'ಮಾಜಿ ಸಚಿವ ಕಾಗೋಡು ತಿಮ್ಮಪ್ಪ ಅವರ ವಿರೋಧದ ನಡುವೆಯೂ ಮಾಜಿ ಶಾಸಕ ಗೋಪಾಲಕೃಷ್ಣ ಬೇಳೂರು ಅವರಿಗೆ ಕಾಂಗ್ರೆಸ್ ಟಿಕೆಟ್ ನೀಡಲಾಗಿದೆ. ಆರ್‌ಎಸ್‌ಎಸ್ ಮುಖಂಡರ ಆಕ್ಷೇಪವನ್ನೂ ಲೆಕ್ಕಿಸದೇ ಶಾಸಕ ಹರತಾಳು ಹಾಲಪ್ಪ ಅವರಿಗೆ ಟಿಕೆಟ್ ಸಿಗುವ ಸಾಧ್ಯತೆ ಇದೆ. ಇವರಿಬ್ಬರೂ ಅಧಿಕಾರದಲ್ಲಿದ್ದಾಗ ದಬ್ಬಾಳಿಕೆಯ ರಾಜಕಾರಣ ಮಾಡಿದ್ದಾರೆ' ಎಂದು ಶ್ರೀನಿವಾಸ್ ಹೇಳಿದರು.

ಪ್ರಜಾ ಪತ್ರ

ಆಶ್ವಾಸನೆಗಳು ದೇಶದ ಪ್ರಗತಿಗೆ ಮಾರಕ



ಚುನಾವಣೆಗಳು ಹತ್ತಿರ ಬರುತ್ತಿವೆ ರಾಜಕೀಯ ಪಕ್ಷಗಳು ನಾನಾ ರೀತಿಯ ಆಶ್ವಾಸನೆಗಳನ್ನು ಮತದಾರರಿಗೆ ಒಡ್ಡುತ್ತಾ ಮತ ಬೇಟೆಗೆ ಮುಂದಾಗುತ್ತಿವೆ. ಬಡ್ಡಿ ರಹಿತ ಸಾಲ, ಉಚಿತ ವಿದ್ಯುತ್, ಉಚಿತ ಪಡಿತರ, ನಿರುದ್ಯೋಗಿ ಪದವೀಧರರಿಗೆ ಮಾಸಿಕ ಭತ್ಯೆ, ಪ್ರತಿ ಮನೆಯ ಮಹಿಳೆಗೆ ಮಾಸಿಕ ₹2000 ಇತ್ಯಾದಿ ಆಮಿಷಗಳು ನೀಡುತ್ತಿವೆ. ಇವು ದೇಶದ ಪ್ರಗತಿಗೆ ಯಾವ ರೀತಿಯಲ್ಲಿ ಸಹಾಯಕವಾಗಿವೆ ಎಂಬುದನ್ನು ಪ್ರಶ್ನಿಸಿಕೊಳ್ಳಬೇಕು. ಇಂತಹ ಘೋಷಣೆಗಳು ಶ್ರೀಮಂತರಿಗೆ ಬೇಕಾಗಿಲ್ಲ ಹಾಗೂ ಬಡವರ ಆರ್ಥಿಕತೆಯನ್ನು ಸುಧಾರಿಸುವುದಿಲ್ಲ. ಮಧ್ಯಮ ವರ್ಗದ ಜನ ತಮ್ಮ ಜೀವನವನ್ನು ಸಮತೋಲನಗೊಳಿಸುವುದರಲ್ಲೇ ಕಂಗಾಲಾಗಿದ್ದಾರೆ. ಇದಾದ ನಂತರವೂ ಜನ ಆಮಿಷಕ್ಕೊಳಗಾಗಿ ಮತ ಹಾಕಿದರೆ ಆಶ್ವಾಸನೆಗಳನ್ನು ಕಾರ್ಯಗತಗೊಳಿಸಲು ಹಣ ಎಲ್ಲಿಂದ ಬರುತ್ತದೆ. ಯಾರ ಮೇಲೆ ತೆರಿಗೆ ವಿಧಿಸಲಾಗುತ್ತದೆ ಎಂಬುದನ್ನು ಯೋಚಿಸಬೇಕು. ರಾಜಕೀಯ ಪಕ್ಷಗಳು ಈ ತರ್ಕಬದ್ಧವಲ್ಲದ ಆಲೋಚನೆಗಳ ಬದಲಿಗೆ ಮೂಲ ಸೌಕರ್ಯಗಳ ಅಭಿವೃದ್ಧಿ, ಗುಣಾತ್ಮಕ ಶಿಕ್ಷಣ, ಒಟ್ಟಾರೆ ಆರ್ಥಿಕ ಅಭಿವೃದ್ಧಿ ಇತ್ಯಾದಿಗಳ ಬಗ್ಗೆ ಯೋಚಿಸಬೇಕು.

ಅಂಜಲಿ ಆರ್.ಕೆ., ಬೆಂಗಳೂರು

ಅಭ್ಯರ್ಥಿಗಳ ಬಗ್ಗೆ ತಿಳಿದುಕೊಳ್ಳಿ



ಚುನಾವಣೆಗೆ ಸ್ಪರ್ಧಿಸುವ ಅಭ್ಯರ್ಥಿಗಳ ಬಗ್ಗೆ ಸಂಪೂರ್ಣವಾಗಿ ತಿಳಿದುಕೊಂಡು ಪ್ರಜ್ಞಾವಂತ ನಾಯಕರನ್ನು ಆಯ್ಕೆ ಮಾಡಬೇಕು. ಕ್ಷೇತ್ರದ ಮೂಲಸೌಕರ್ಯ ಅಭಿವೃದ್ಧಿಗೆ ಕೆಲಸ ಮಾಡುವವರನ್ನು ಆರಿಸಬೇಕು. ನಾವು ಈಗ ಮಾಡುವ ಒಂದು ಸಣ್ಣ ತಪ್ಪಿನಿಂದ ಐದು ವರ್ಷದವರೆಗೂ ಶಿಕ್ಷೆ ಅನುಭವಿಸುವಂತಾಗುತ್ತದೆ. ಆದ್ದರಿಂದ ಒಳ್ಳೆಯ ಅಭ್ಯರ್ಥಿಯ ಆಯ್ಕೆ ಮಾಡಬೇಕು. ಚುನಾವಣೆ ಕೆಲಸ ನಿಮಿತ್ತ ನಿಮ್ಮೂರಿಗೆ ಬರುವ ಸರ್ಕಾರಿ ಅಧಿಕಾರಿಗಳು, ಪೊಲೀಸರು ಮತ್ತು ಸೇನಾ ಪಡೆಗಳಿಗೆ ಗೌರವ ನೀಡುವುದರ ಜೊತೆಗೆ ನಿಮ್ಮ ಭಾಗದಲ್ಲಿರುವ ಸಂಸ್ಕೃತಿಯ ಬಗ್ಗೆ ತಿಳಿಸುವ ಕೆಲಸವಾಗಬೇಕು.

ತುಳಸಿ ಕೃಷ್ಣ, ಬೆಂಗಳೂರು

ರಾಜಕೀಯ ಪಕ್ಷಗಳ ಧೋರಣೆ, ಬದ್ಧತೆ, ಪ್ರಣಾಳಿಕೆ, ಪ್ರಚಾರದ ಕಾರ್ಯವೈಖರಿ ಹೇಗಿರಬೇಕು? ಚುನಾವಣೆಗೆ ಸಂಬಂಧಿಸಿದ ಇಂತಹ ವಿಷಯಗಳ ಬಗ್ಗೆ ನಿಮ್ಮ ಅಭಿಪ್ರಾಯಗಳನ್ನು 100 ಶಬ್ದಗಳ ಮಿತಿ ಒಳಗೆ ಕಳುಹಿಸಿ. ವಿಳಾಸದ ಜತೆ ಭಾವಚಿತ್ರ ಇರಲಿ.

9606038256

‘ಅತಿಥಿ’ಗಳಿಗೆ ಸಿಗದ ಸೇವಾ ಭದ್ರತೆ

• ಚಂದ್ರಹಾಸ ಹಿರೇಮಳಲಿ

ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಹೊರಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿದ್ದ ಪೌರ ಕಾರ್ಮಿಕರ ಸೇವೆ ಕಾಯಂ, ವೃತ್ತಿ ಆಧಾರಿತ ಕೋರ್ಸ್‌ಗಳ (ಜೆಒಸಿ) ಅರೆಕಾಲಿಕ ನೌಕರರ ಸೇವೆ ಕಾಯಂ, ಆರೋಗ್ಯ ಇಲಾಖೆಯ ಗುತ್ತಿಗೆ ವೈದ್ಯರ ಸೇವೆ ಕಾಯಂ, ಸ್ಮಶಾನ ಕಾರ್ಮಿಕರ ಸೇವೆ ಕಾಯಂ... ಹೀಗೆ ವಿವಿಧ ಇಲಾಖೆಗಳಲ್ಲಿ ಗುತ್ತಿಗೆ, ಹೊರಗುತ್ತಿಗೆ, ಅರೆಕಾಲಿಕ ನೌಕರರ ಸೇವೆಯನ್ನು ರಾಜ್ಯ ಸರ್ಕಾರಗಳು ಕಾಯಂ ಮಾಡುವ ಮೂಲಕ ಅವರಿಗೆಲ್ಲ ಸೇವಾ ಭದ್ರತೆ ಒದಗಿಸಿವೆ.

ಆದರೆ, ಉನ್ನತ ಶಿಕ್ಷಣದ ಪ್ರಗತಿಗೆ ಗಣನೀಯ ಕೊಡುಗೆ ನೀಡುತ್ತಿರುವ ಸರ್ಕಾರಿ ಪದವಿ ಕಾಲೇಜುಗಳ ಅತಿಥಿ ಉಪನ್ಯಾಸಕರ ಸೇವೆ ಕಾಯಂ ವಿಚಾರ ಎರಡು ದಶಕಗಳಿಂದ ಸದ್ದು ಮಾಡುತ್ತಲೇ ಇದೆ. ಅತ್ತ ಸೇವೆ ಕಾಯಮಾತಿಯೂ ಇಲ್ಲದೆ, ಇತ್ತ ಕೈತುಂಬಾ ಗೌರವಧನವೂ ಇಲ್ಲದೆ ಜೀವನ ನಿರ್ವಹಣೆಗೂ ಪರದಾಡಬೇಕಾದ ಸ್ಥಿತಿಯಲ್ಲಿ ಅತಿಥಿ ಉಪನ್ಯಾಸಕರು ಇದ್ದಾರೆ. ಈ ವಿಚಾರ ವಿಧಾನಸಭಾ ಚುನಾವಣೆ ಸಮಯದಲ್ಲಿ ಮುನ್ನಲೆಗೆ ಬಂದು ಚುನಾವಣೆ ಮುಗಿಯುತ್ತಿದ್ದಂತೆ ಮತ್ತೆ ಹಿನ್ನೆಲೆಗೆ ಸರಿಯುತ್ತದೆ. ಪ್ರತಿ ಚುನಾವಣೆಯಲ್ಲೂ ವಿರೋಧ ಪಕ್ಷಗಳು ಸೇವಾ ಭದ್ರತೆಯನ್ನು ಒಂದು ವಿಷಯವಾಗಿ ತೆಗೆದುಕೊಂಡು ಆಡಳಿತ ಪಕ್ಷವನ್ನು ಟೀಕಿಸುತ್ತ ಬರುತ್ತಿವೆ. ಅಧಿಕಾರಕ್ಕೆ ಬಂದ ನಂತರ ‘ಕಾಯಂ’ ಪ್ರಹಸನಗಳಲ್ಲೇ ಸಮಯ ದೂಡುತ್ತವೆ. ಹೀಗೆ ಐದು ಚುನಾವಣೆಗಳು ಮುಗಿದಿವೆ. ಮತ್ತೆ ಈ ಬಾರಿಯೂ ವಿಷಯ ಮುನ್ನಲೆಗೆ ಬಂದಿದೆ.

ರಾಜ್ಯದ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಅತಿಥಿ ಉಪನ್ಯಾಸಕರು ಎರಡು ದಶಕಗಳಿಂದ ಅಭದ್ರತೆಯ ಸುಳಿಯಲ್ಲಿದ್ದಾರೆ. ಗೌರವಯುತ– ಘನತೆಯ ಜೀವನ ಸಾಗಿಸಲು ಸಾಕಾಗುವಷ್ಟು ವೇತನವಿಲ್ಲದೇ, ಕಾರ್ಮಿಕರಿಗಿರುವ ಭವಿಷ್ಯ ನಿಧಿ (ಪಿಎಫ್), ಇಎಸ್‌ಐ ಸೌಲಭ್ಯಗಳೂ ಇಲ್ಲದೆ 20–25 ವರ್ಷಗಳಿಂದ ಸರ್ಕಾರಿ ‘ಜೀತದಾಳು’ಗಳಂತೆ ದುಡಿಯುತ್ತಿದ್ದಾರೆ. 500ಕ್ಕೂ ಹೆಚ್ಚು ಅತಿಥಿ ಉಪನ್ಯಾಸಕರು ಸೇವಾ ಭದ್ರತೆಗೆ ಒತ್ತಾಯಿಸಿ ಹೋರಾಟ ನಡೆಸುತ್ತಲೇ, ಸಹಾಯಕ ಪ್ರಾಧ್ಯಾಪಕರ ಹುದ್ದೆಯ ಅವಕಾಶ ದೊರಕದೇ, ನಿವೃತ್ತಿಯ ವಯಸ್ಸು ದಾಟಿ ಮನೆ ಸೇರಿದ್ದಾರೆ.

ಕಾಲೇಜು ಶಿಕ್ಷಣ ಇಲಾಖೆ ವ್ಯಾಪ್ತಿಯಲ್ಲಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ತಮಗೆ ಸೇವಾ ಭದ್ರತೆ ಒದಗಿಸಬೇಕು. ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ಪರಿಗಣಿಸಬೇಕು. ಅದಕ್ಕಾಗಿ ಹೊಸ ಹುದ್ದೆಗಳನ್ನು ಸೃಜಿಸಬೇಕು. ಇಲ್ಲವೇ ಖಾಲಿ ಹುದ್ದೆಗಳನ್ನು ಮೀಸಲಿಡಬೇಕು. ಅಲ್ಲಿಯವರೆಗೂ ವಿಶ್ವ ವಿದ್ಯಾಲಯ ಅನುದಾನ ಆಯೋಗದ (ಯುಜಿಸಿ) ನಿಯಮಗಳ ಪ್ರಕಾರ ವೇತನ ನೀಡಬೇಕು ಎಂಬ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಎರಡು ದಶಕಗಳ ಅವಧಿಯಲ್ಲಿ ನೂರಾರು ಬಾರಿ ಧರಣಿ, ಹೋರಾಟಗಳನ್ನು ನಡೆಸಿದ್ದಾರೆ. ತಮಗೆ ಬರುವ ಸ್ವಲ್ಪ ಮೊತ್ತದ ವೇತನದಲ್ಲೇ ಹೋರಾಟದ ಖರ್ಚು, ವೆಚ್ಚಗಳನ್ನು ಭರಿಸಿಕೊಂಡಿದ್ದಾರೆ. ಅಮೂಲ್ಯ ಸಮಯವನ್ನು ತರಗತಿಗಳಲ್ಲಿ ಪಾಠ ಮಾಡಲು, ಹೋರಾಟಗಳಲ್ಲಿ ತೊಡಗಿಸಿಕೊಳ್ಳಲು ಕಳೆದಿದ್ದಾರೆ. ಸೇವಾ ಭದ್ರತೆ ಇಲ್ಲದ ಕಾರಣಕ್ಕೆ ಎಷ್ಟೋ ಉಪನ್ಯಾಸಕರು ಅವಿವಾಹಿತರಾಗಿಯೇ ಉಳಿದಿದ್ದಾರೆ. ಕೆಲವರು ವೃತ್ತಿ ತೊರೆದು ಹಣ್ಣು, ತರಕಾರಿ, ಸೊಪ್ಪು ಮಾರಾಟ ಮಾಡಿಕೊಂಡು, ತಮ್ಮ ವಿದ್ಯಾರ್ಹತೆಗೆ ತಕ್ಕುದಲ್ಲದ ಬೇರೆ ಕೆಲಸ ಹುಡುಕಿಕೊಂಡು ಜೀವನ ಸಾಗಿಸುತ್ತಿದ್ದಾರೆ.

ಅತಿಥಿ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿರುವವರಲ್ಲಿ ಅರ್ಹ, ಬೋಧನಾ ಕೌಶಲ ಹೊಂದಿದ ಪ್ರತಿಭಾವಂತರಿದ್ದಾರೆ. ಆದರೆ, ಅವರಿಗೆ ಸಾಮರ್ಥ್ಯಕ್ಕೆ ತಕ್ಕಂತೆ ಶೈಕ್ಷಣಿಕ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳಲು ಅವಕಾಶ ದೊರೆತಿಲ್ಲ. ಅತ್ಯಂತ ಕಡಿಮೆ ವೇತನ, ಸಮಯಕ್ಕೆ ಸರಿಯಾಗಿ ಸಿಗದ ಗೌರವಧನ, ವರ್ಷವಿಡೀ ಕೆಲಸ ಇಲ್ಲದಿರುವುದು ಈ ಸಮೂಹವನ್ನು ಆರ್ಥಿಕ ಸಂಕಷ್ಟಕ್ಕೆ ದೂಡಿದೆ. ಸೇವಾ ಭದ್ರತೆ ಇಲ್ಲದ ಅವರ ಬದುಕು ಅಭದ್ರವಾಗಿದೆ.

ಯುಜಿಸಿ ನಿಯಮಾವಳಿ ಪ್ರಕಾರ, ಅರ್ಹತೆ ಹೊಂದಿದವರಿಗೆ ಪ್ರತಿ ತಿಂಗಳು ₹ 50 ಸಾವಿರ ವೇತನ ನೀಡಬೇಕು. ಆದರೆ, ರಾಜ್ಯ ಸರ್ಕಾರ ಅದಕ್ಕೆ ಸಿದ್ಧವಿಲ್ಲ. ಕಾಯಂ ಉಪನ್ಯಾಸಕರಿಗೆ ತಿಂಗಳಿಗೆ ಸುಮಾರು ₹ 1 ಲಕ್ಷದಿಂದ ₹ 2.5 ಲಕ್ಷದವರೆಗೆ ವೇತನವಿದೆ. ರಾಜ್ಯದಲ್ಲಿ ಈಚೆಗೆ ತೆಗೆದುಕೊಂಡ ನಿರ್ಧಾರದಂತೆ ವಾರಕ್ಕೆ 15 ತಾಸು ಕಾರ್ಯಭಾರ ನಿಗದಿಪಡಿಸಿ, ಎಲ್ಲ ಅರ್ಹತೆ ಇರುವವರಿಗೆ ಗರಿಷ್ಠ ₹ 32 ಸಾವಿರ ಗೌರವಧನ ನೀಡಲಾಗುತ್ತಿದೆ. ಅದೂ ಮೂರ್ನಾಲ್ಕು ತಿಂಗಳಿಗೆ ಒಮ್ಮೆ ಪಾವತಿಯಾಗುತ್ತಿದೆ.

‘2003ರಿಂದ ಹೆಚ್ಚುವರಿ ಕಾರ್ಯಭಾರಕ್ಕೆ ನೇಮಿಸಿಕೊಳ್ಳುವ ಉಪನ್ಯಾಸಕರನ್ನು ‘ಅತಿಥಿ ಉಪನ್ಯಾಸಕರು’ ಎಂದು ಕರೆಯಲಾಗುತ್ತಿದೆ. ಇವರು ಅರೆಕಾಲಿಕ ಅಥವಾ ಗುತ್ತಿಗೆ ನೌಕರರು ಅಲ್ಲ. ಅವರಿಗೆ ಹಂಚಿಕೆ ಮಾಡುವ ಕಾರ್ಯಭಾರವನ್ನು ಆಯಾ ಕಾಲೇಜುಗಳ ಶೈಕ್ಷಣಿಕ ವೇಳಾಪಟ್ಟಿಯ ಅನ್ವಯ ತೆಗೆದುಕೊಳ್ಳಲಾಗುತ್ತದೆ. ಹೀಗಾಗಿ ಅವರಿಗೆ ಸೇವಾ ಭದ್ರತೆ ಒದಗಿಸುವ ಪ್ರಶ್ನೆಯೇ ಇಲ್ಲ’ ಎನ್ನುವುದು ‘ಕಾಯಂ’ ಪ್ರಕ್ರಿಯೆಗಳಿಗೆ ಚಾಲನೆ ದೊರೆತಾಗಲೆಲ್ಲ ಉನ್ನತ ಶಿಕ್ಷಣ ಇಲಾಖೆ ಅಧಿಕಾರಿಗಳು ಮುಖ್ಯಮಂತ್ರಿ, ಸಚಿವರಿಗೆ ನೀಡಿರುವ ಸಮಜಾಯಿಷಿ.




‘ಸರ್ಕಾರ ಮನಸ್ಸು ಮಾಡಿದರೆ ಎಲ್ಲವೂ ಸಾಧ್ಯ’



ದೆಹಲಿ ಸರ್ಕಾರ ವಿಶೇಷ ನಿಯಮ ರೂಪಿಸಿ 16 ಸಾವಿರ ‘ಅತಿಥಿ’ ಶಿಕ್ಷಕರ ಸೇವೆಯನ್ನು ಕಾಯಂ ಮಾಡಿತ್ತು. ಹರಿಯಾಣ, ಪಂಜಾಬ್ ಸೇರಿದಂತೆ ಹಲವು ರಾಜ್ಯಗಳು ಸೇವೆ ಕಾಯಂ ಮಾಡಿವೆ. ಅದೇ ರೀತಿ ಕರ್ನಾಟಕ ನಾಗರಿಕ ಸೇವಾ ನಿಯಮಗಳಡಿ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ತಂದು ಸೇವಾ ಭದ್ರತೆ ಒದಗಿಸಲು ಅವಕಾಶವಿದೆ. ಆದರೆ, ಅಧಿಕಾರಕ್ಕೆ ಬಂದ ಯಾವ ಪಕ್ಷಗಳೂ ನಮ್ಮ ನೋವು ಆಲಿಸಲಿಲ್ಲ.

ಡಾ.ಸೋಮಶೇಖರ್ ಶಿಮೊಗ್ಗಿ, ಅಧ್ಯಕ್ಷ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಅತಿಥಿ ಉಪನ್ಯಾಸಕರ ರಾಜ್ಯ ಸಮನ್ವಯ ಸಮಿತಿ

‘ನಿರುದ್ಯೋಗಿಗಳಾದ ಸಹೋದ್ಯೋಗಿಗಳು’



ಗೌರವಧನ ಹೆಚ್ಚಳದ ನೆಪದಲ್ಲಿ ಮೊದಲು 8 ಗಂಟೆ ಇದ್ದ ಕೆಲಸದ ಅವಧಿಯನ್ನು 15 ಗಂಟೆಗೆ ಹೆಚ್ಚಳ ಮಾಡಲಾಯಿತು. ಇಬ್ಬರು ಕಾರ್ಯನಿರ್ವಹಿಸುವ ಜಾಗದಲ್ಲಿ ಒಬ್ಬರಿಗೆ ಮಾತ್ರ ಅವಕಾಶ ದೊರೆಯಿತು. ಇದರಿಂದ 5 ಸಾವಿರಕ್ಕೂ ಹೆಚ್ಚು ಅತಿಥಿ ಉಪನ್ಯಾಸಕರು ಶಾಶ್ವತ ನಿರುದ್ಯೋಗಿಗಳಾದರು. ಸಂಘಟನೆಯ ಕೆಲವರು ಸರ್ಕಾರದ ಜತೆ ಸೇರಿಕೊಂಡು ಹೋರಾಟವನ್ನೇ ವ್ಯವಸ್ಥಿತವಾಗಿ ದಿಕ್ಕು ತಪ್ಪಿಸಿದರು. ಜತೆಗೆ, ಮೂರು ವರ್ಷಗಳಲ್ಲಿ ಯುಜಿಸಿ ನಿಗದಿಪಡಿಸಿದ ವಿದ್ಯಾರ್ಹತೆ ಪಡೆಯದವರನ್ನು ನೇಮಕಾತಿಯಿಂದ ಸಂಪೂರ್ಣವಾಗಿ ನಿರ್ಬಂಧಿಸುವುದಾಗಿ ಹೇಳಿರುವುದು ಮತ್ತಷ್ಟು ಅಭದ್ರತೆ ಮೂಡಿಸಿದೆ. ಸುಮಾರು 4 ಸಾವಿರ ಮಹಿಳಾ ಅತಿಥಿ ಉಪನ್ಯಾಸಕರು ಸೇವೆ ಸಲ್ಲಿಸುತ್ತಾ ಬಂದಿದ್ದೇವೆ. ನಮಗೆ ಯಾವುದೇ ರೀತಿಯ ವೈದ್ಯಕೀಯ ಸೌಲಭ್ಯ, ಪಿಎಫ್ ಸೌಲಭ್ಯಗಳಿಲ್ಲ, ತಿಂಗಳಿಗೆ ಒಂದು ರಜೆಯ ಸೌಲಭ್ಯವೂ ಇಲ್ಲ. ಹೆರಿಗೆ ರಜೆಗೂ ಅವಕಾಶ ನೀಡಿಲ್ಲ.

ಎಂ.ಆರ್.ರೂಪಾ, ಮಹಿಳಾ ಸಂಯೋಜಕರು, ಅತಿಥಿ ಉಪನ್ಯಾಸಕರ ಸಂಘ

‘ನಿಯಮಗಳ ಮಾರ್ಪಾಡು ಅಗತ್ಯ’



ಅತಿಥಿ ಶಿಕ್ಷಕರು ಒಂದು ಸೀಮಿತ ಅವಧಿಗೆ ಕೆಲಸ ಮಾಡುತ್ತಾರೆ. ಪ್ರತಿ ವರ್ಷವೂ ಮಕ್ಕಳು ಮತ್ತು ಶಿಕ್ಷಕರ ಅನುಪಾತದ ಆಧಾರದಲ್ಲಿ ಅಗತ್ಯವಿರುವ ಅತಿಥಿ ಶಿಕ್ಷಕರನ್ನು ಸ್ಥಳೀಯವಾಗಿ ನೇಮಿಸಿಕೊಳ್ಳಲಾಗುತ್ತದೆ. ಅವರ ಗೌರವಧನವನ್ನು ಎಸ್‌ಡಿಎಂಸಿ ಸೇರಿದಂತೆ ಶಿಕ್ಷಣ ಇಲಾಖೆಯ ಬೇರೆಬೇರೆ ವಿಭಾಗಗಳಿಂದ ಭರಿಸಲಾಗುತ್ತದೆ. ಇದರಿಂದ ಸೇವಾ ಭದ್ರತೆ ಒದಗಿಸಲು ನಿಯಮಗಳಲ್ಲಿ ಅವಕಾಶವಿಲ್ಲ. ಈ ನಿಯಮಗಳನ್ನು ಮಾರ್ಪಡಿಸಬೇಕಾದ ಅಗತ್ಯವಿದೆ.

ಚಂದ್ರಶೇಖರ ನುಗ್ಗಿ, ಪ್ರಧಾನ ಕಾರ್ಯದರ್ಶಿ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ

ಅಂಕಿಅಂಶಗಳು

430 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು

5,000 ಕಾರ್ಯಭಾರ ಹೆಚ್ಚಳದಿಂದ ಕೆಲಸ ಕಳೆದುಕೊಂಡ ‘ಅತಿಥಿ’ಗಳು

10,600 ಪದವಿ ಕಾಲೇಜು ಅತಿಥಿ ಉಪನ್ಯಾಸಕರು

47,483 ಸರ್ಕಾರಿ ಶಾಲೆಗಳು

25,000 ಅತಿಥಿ ಶಿಕ್ಷಕರು

ಅರೆಕಾಲಿಕ ‘ಅತಿಥಿ’ಯಾದ ಬಗೆ

ಸುಪ್ರೀಂ ಕೋರ್ಟ್ ಆದೇಶದಂತೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ 1995–96ರವರೆಗೆ ಕೆಲಸ ಮಾಡಿದ್ದ ಅರೆಕಾಲಿಕ ಉಪನ್ಯಾಸಕರನ್ನು ಕಾಯಂ ಮಾಡಲು ಅಂದಿನ ಸರ್ಕಾರ ನಿರ್ಧಾರ ತೆಗೆದುಕೊಂಡಿತ್ತು. ‘ಅರೆಕಾಲಿಕ’ ಪದನಾಮದ ಮೇಲೆ ಸೇವಾ ಭದ್ರತೆ ಒತ್ತಾಯಿಸಿ ಮತ್ತೆ ಕೋರ್ಟ್ ಮೊರೆ ಹೋಗಬಹುದು ಎಂಬ ದೂರದೃಷ್ಟಿಯಿಂದ 2003ರಲ್ಲಿ ‘ಅರೆಕಾಲಿಕ’ ಪದನಾಮ ಬದಲಾಯಿಸಿ ‘ಅತಿಥಿ’ ಎಂದು ತಿದ್ದುಪಡಿ ಮಾಡಲಾಯಿತು.

ಅಂದು ಮಾಸಿಕ ₹ 1,200 ಗೌರವಧನ ಪಡೆಯುತ್ತಿದ್ದ ಅತಿಥಿ ಉಪನ್ಯಾಸಕರು ಸೇವಾ ಭದ್ರತೆಗೆ ಆಗ್ರಹಿಸಿ ಮತ್ತೆ ಹೋರಾಟ ಆರಂಭಿಸಿದ್ದರು. ಹೋರಾಟ ತೀವ್ರಗೊಂಡಾಗಲೆಲ್ಲ ಸರ್ಕಾರ ಸ್ವಲ್ಪಸ್ವಲ್ಪವೇ ಗೌರವಧನ ಹೆಚ್ಚಳ ಮಾಡುತ್ತಾ ಬಂದಿತು. 2013ರ ಚುನಾವಣೆಯ ನಂತರ ಅಸ್ತಿತ್ವಕ್ಕೆ ಬಂದ ಸರ್ಕಾರ ಅತಿಥಿ ಉಪನ್ಯಾಸಕರ ಸೇವಾ ವಿಲೀನ ಕುರಿತು ಅಭಿಪ್ರಾಯ ನೀಡುವಂತೆ ಉನ್ನತ ಶಿಕ್ಷಣ ಇಲಾಖೆಗೆ ಸೂಚಿಸಿತ್ತು. ‘ಸೇವಾ ಭದ್ರತೆ ಸಾಧ್ಯವಿಲ್ಲ’ ಎಂದು ಉನ್ನತ ಶಿಕ್ಷಣ ಇಲಾಖೆಯ ಕಾರ್ಯದರ್ಶಿ ವರದಿ ನೀಡಿದ್ದರು. ಅತಿಥಿ ಉಪನ್ಯಾಸಕರ ಸೇವಾ ವಿಲೀನ, ಸೇವಾಭದ್ರತೆ ಮತ್ತು ಶಾಶ್ವತ ನಿಯಮಾವಳಿ ರಚನೆ ಮಾಡಲು ಒತ್ತಾಯಿಸಿ ಸರ್ಕಾರಿ ಪದವಿ ಕಾಲೇಜುಗಳ ಅತಿಥಿ ಉಪನ್ಯಾಸಕರ ರಾಜ್ಯ ಸಮನ್ವಯ ಸಮಿತಿ 2017ರಲ್ಲಿ ಧರಣಿ ಆರಂಭಿಸಿದ ನಂತರ ನಿವೃತ್ತ ನ್ಯಾಯಮೂರ್ತಿ ನೇತೃತ್ವದಲ್ಲಿ ಸಮಿತಿ ರಚಿಸಲಾಯಿತು. ಸೇವಾ ಭದ್ರತೆಗೆ ಶಾಶ್ವತ ನಿಯಮಾವಳಿ ರಚನೆ ಸರ್ಕಾರದ ಕಾರ್ಯನೀತಿ ವಿಷಯ. ಹಾಗಾಗಿ, ಸರ್ಕಾರ ನಿರ್ಧಾರ ತೆಗೆದುಕೊಳ್ಳಬೇಕು ಎಂದು ಸಮಿತಿ ಸಲಹೆ ನೀಡಿತ್ತು. ಆದರೆ, ನಂತರ ಬಂದ ಸರ್ಕಾರಗಳು ಸೇವಾ ಭದ್ರತೆಗೆ ಆದ್ಯತೆ ನೀಡಲೇ ಇಲ್ಲ.

ಉನ್ನತ ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿಯಾಗಿದ್ದ ಕುಮಾರ್ ನಾಯ್ಕ ಸಮಿತಿ ಶಿಫಾರಸಿನಂತೆ ಈಗಿನ ಸರ್ಕಾರ ಬೋಧನಾ ಅವಧಿಯನ್ನು ವಾರಕ್ಕೆ 8 ಗಂಟೆಯಿಂದ 15 ಗಂಟೆಯವರೆಗೆ ಹೆಚ್ಚಿಸಿ, ₹ 13,000 ಇದ್ದ ಗೌರವಧನವನ್ನು ಕನಿಷ್ಠ ₹ 26,000 ದಿಂದ ಗರಿಷ್ಠ ₹ 32,000ಕ್ಕೆ ಏರಿಸಿತು. ಉನ್ನತ ಶಿಕ್ಷಣ ಇಲಾಖೆಯ ಈ ನಿರ್ಧಾರದಿಂದಾಗಿ 10,600 ಮಂದಿ ಪುನರಾಯ್ಕೆಯಾದರು. ಆದರೆ ಕಾರ್ಯಭಾರ ಹೆಚ್ಚಳದಿಂದ 5 ಸಾವಿರಕ್ಕೂ ಹೆಚ್ಚು ‘ಅತಿಥಿ’ಗಳು ಶಾಶ್ವತವಾಗಿ ಕೆಲಸ ಕಳೆದುಕೊಂಡರು.

ಸಂಘಟಿತರಾಗದ ಅತಿಥಿ ಶಿಕ್ಷಕರು

ಪದವಿ ಕಾಲೇಜುಗಳ ಅತಿಥಿ ಉಪನ್ಯಾಸಕರು ಸೇವಾ ಭದ್ರತೆಗಾಗಿ ನಿರಂತರ ಹೋರಾಟ ನಡೆಸಿದರೆ, ರಾಜ್ಯದ ಪ್ರಾಥಮಿಕ, ಪ್ರೌಢಶಾಲೆಗಳ ಅತಿಥಿ ಶಿಕ್ಷಕರು ಹೋರಾಟಕ್ಕಾಗಿ ಸಂಘಟಿತರಾಗೇ ಇಲ್ಲ. ಕಳೆದ ಶೈಕ್ಷಣಿಕ ಸಾಲಿನಲ್ಲಿ ರಾಜ್ಯದಲ್ಲಿ ಪ್ರಾಥಮಿಕ ಶಾಲೆಗಳ 17 ಸಾವಿರ ಸೇರಿ ಒಟ್ಟು 25 ಸಾವಿರ ಅತಿಥಿ ಶಿಕ್ಷಕರು ಕಾರ್ಯನಿರ್ವಹಿಸಿದ್ದಾರೆ.

ಮೊರಾರ್ಜಿ ವಸತಿ ಶಾಲೆಗಳಲ್ಲಿ ಹೊರಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿದ್ದ 465 ಶಿಕ್ಷಕರನ್ನು 2011ರಲ್ಲಿ ಕಾಯಂ ಮಾಡಲಾಯಿತು. ಪ್ರಾಥಮಿಕ ಶಾಲೆಗಳ ಶಿಕ್ಷಕರಿಗೆ 1983 ಹಾಗೂ 1992ರಲ್ಲಿ ಸೇವಾ ಭದ್ರತೆ ಒದಗಿಸಲಾಗಿತ್ತು. ಪದವಿ ಹಾಗೂ ಪಿಯು ಕಾಲೇಜುಗಳ ಅರೆಕಾಲಿಕ ಉಪನ್ಯಾಸಕರನ್ನು 2002–03ನೇ ಸಾಲಿನಲ್ಲಿ ಕಾಯಂ ಮಾಡಲಾಗಿತ್ತು. ನಂತರ 2007ರಲ್ಲಿ ‘ಕೃಪಾಂಕ’ ನೀಡಿ ಒಂದಷ್ಟು ಅತಿಥಿ ಉಪನ್ಯಾಸಕರಿಗೆ ಅನುಕೂಲ ಮಾಡಿಕೊಡಲಾಗಿತ್ತು.

ಗಾಳಿ ಮಾತು

ಫುಟ್‌ಬಾಲ್ ಆಡುವುದನ್ನು ನಿಷೇಧಿಸಿ!



ಜನಾರ್ದನ ರೆಡ್ಡಿ ಸ್ಥಾಪಿಸಿರುವ ಕಲ್ಯಾಣ ರಾಜ್ಯ ಪ್ರಗತಿ ಪಕ್ಷಕ್ಕೆ ಚುನಾವಣಾ ಆಯೋಗ ಫುಟ್‌ಬಾಲ್ ಚಿಹ್ನೆ ಕೊಟ್ಟಾಗಿನಿಂದ ಈ ಚೆಂಡಿನ ಬಗ್ಗೆ ದೊಡ್ಡ ಚರ್ಚೆ ನಡೆಯುತ್ತಿದೆ. ‘ನಾನು ಎಲ್ಲರಿಗೂ ಫುಟ್‌ಬಾಲ್ ಆಡಿಸುತ್ತೇನೆ’ ಎಂದು ರೆಡ್ಡಿ ಪ್ರಚಾರ ಮಾಡುತ್ತಿದ್ದರೆ, ‘ಫುಟ್‌ಬಾಲ್ ಆಡಲು ಅವಕಾಶ ಕೊಡಬೇಡಿ. ಕೊಟ್ಟರೆ ಮತದಾರರ ಮೇಲೆ ಪ್ರಭಾವ ಬೀರಿದಂತೆ ಆಗುತ್ತದೆ’ ಎಂದು ವಿರೋಧಿಗಳು ಆಯೋಗಕ್ಕೆ ದೂರು ನೀಡಿದ್ದಾರಂತೆ.

ದಾವಣಗೆರೆಯ ಗುಂಡಿ ವೃತ್ತದಲ್ಲಿರುವ ಫುಟ್‌ಬಾಲ್ ಪ್ರತಿಕೃತಿ ಮುಚ್ಚುವಂತೆ ಕಾಂಗ್ರೆಸ್ ಆಗ್ರಹಿಸುತ್ತಿದ್ದಂತೆ ವಿವಿಧ ರಾಜಕೀಯ ಪಕ್ಷಗಳು ಕೂಡ ರೆಡ್ಡಿ ಪಕ್ಷದ ವಿರುದ್ಧ ‘ಫುಟ್‌ಬಾಲ್’ ಆಡಲು ಶುರುಮಾಡಿವೆ. ಇದರ ಬಿಸಿ ಆಟದ ಪ್ರಿಯರಿಗೂ ಹಾಗೂ ಆಟಗಾರರಿಗೂ ತಟ್ಟಿದೆಯಂತೆ. ಈ ಕಾಲ್ಚೆಂಡಿನ ಆಟವನ್ನು ಹೆಚ್ಚಾಗಿ ಆಡುವ ಬೆಂಗಳೂರಿನ ಆಸ್ಟಿನ್ ಟೌನ್, ಗೌತಮಪುರ, ಗದಗ, ಹುಬ್ಬಳ್ಳಿಯಲ್ಲಿರುವ ರೈಲ್ವೆ ಕಾಲೊನಿಗಳಲ್ಲಿ ಚುನಾವಣೆ ಮುಗಿಯುವ ತನಕ ಫುಟ್‌ಬಾಲ್ ಆಡುವುದನ್ನು ನಿಷೇಧಿಸಬೇಕು ಎಂದು ಪಕ್ಷಗಳು ಆಗ್ರಹಿಸುತ್ತಿವೆಯಂತೆ.

ಇದು ರೆಡ್ಡಿಯನ್ನು ಇಕ್ಕಟ್ಟಿಗೆ ಸಿಲುಕಿಸಿದರೆ, ಕೆಲವರು ಇದನ್ನೇ ಸೊಗಸಾಗಿ ಪ್ರಚಾರಕ್ಕೆ ವೇದಿಕೆಯಾಗಿ ಬಳಸಿಕೊಳ್ಳುತ್ತಿದ್ದಾರೆ. ಫುಟ್‌ಬಾಲ್ ಚಿಹ್ನೆ ಇರುವ ಟೊಪ್ಪಿಗೆಗಳನ್ನು ತಯಾರಿಸಲು ಕಲ್ಯಾಣ ರಾಜ್ಯ ಪ್ರಗತಿ ಪಕ್ಷ ತಯಾರಿ ಮಾಡಿಕೊಂಡಿದೆಯಂತೆ.

ರೆಡ್ಡಿ, ಗಂಗಾವತಿ ಕ್ಷೇತ್ರದಿಂದ ಸ್ಪರ್ಧೆ ಮಾಡುವುದಾಗಿ ಈಗಾಗಲೇ ಘೋಷಿಸಿದ್ದಾರೆ. ಹೀಗಾಗಿ ಗಲ್ಲಿಗಲ್ಲಿಗಳಲ್ಲಿ ಈಗ ಫುಟ್‌ಬಾಲ್ ಸದ್ದು. ಇದಲ್ಲದೇ ಬೇಸಿಗೆ ರಜೆಯಿರುವ ಕಾರಣ ಮಕ್ಕಳು ಮನೆಯ ಅಂಗಳದಲ್ಲಿ, ಸಮೀಪದ ಮೈದಾನದಲ್ಲಿ ಫುಟ್‌ಬಾಲ್ ಆಡಲು ಮುಂದಾದರೆ ‘ಇದು ರೆಡ್ಡಿ ಪಕ್ಷದ ಪರ ಪ್ರಚಾರವೇ’ ಎಂದು ವಿರೋಧಿಗಳು ಕುಟುಕುತ್ತಿದ್ದಾರಂತೆ.

ಹೀಗಾಗಿ ಪೋಷಕರು ತಮ್ಮ ಮಕ್ಕಳಿಗೆ ರಾಜಕೀಯದ ಗೊಡವೆ ಬಿಟ್ಟು ‘ಫುಟ್‌ಬಾಲ್’ ಪಂದ್ಯವಾಡದೇ ‘ವಾಕ್‌ಓವರ್’ ಕೊಟ್ಟು ಬಂದುಬಿಡಿ ಎಂದು ಕಿವಿಮಾತು ಹೇಳುತ್ತಿದ್ದಾರೆ ಎನ್ನುವ ಸುದ್ದಿ ಹರಿದಾಡುತ್ತಿದೆ.

ಮಾತಿನೇಟು



ಕಾಂಗ್ರೆಸ್ ಡಿಎನ್‌ಎ ದಲ್ಲಿಯೇ ವಿಭಜನೆಯ ಗುಣ ಅಡಗಿದ್ದು, ವಿನಾಕಾರಣ ದ್ವೇಷ ರಾಜಕಾರಣ ಮಾಡುತ್ತಿದೆ. ನಂದಿನಿ ಕರ್ನಾಟಕದ ಅಸ್ಮಿತೆಯಾಗಿದೆ. 2018ರಲ್ಲಿ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ನಂದಿನಿ ಉತ್ಪನ್ನಗಳ ಒಟ್ಟಾರೆ ವಹಿವಾಟು ₹14,500 ಕೋಟಿ ಇತ್ತು. 2021-22ರಲ್ಲಿ ಬಿಜೆಪಿ ಸರ್ಕಾರದ ಅವಧಿಯಲ್ಲಿ ಅದು ₹15 ಸಾವಿರ ಕೋಟಿ ಆಗಿದೆ. ನಂದಿನಿಯ ವ್ಯವಹಾರದಲ್ಲಿ ಕಾಂಗ್ರೆಸ್ ಅವಧಿಗಿಂತ ಪ್ರಸ್ತುತ ಶೇ 3 ರಷ್ಟು ಸಾಧನೆ ಸಾಧ್ಯವಾಗಿದೆ.

ಗೌರವ್ ಭಾಟಿಯಾ
ಬಿಜೆಪಿ ರಾಷ್ಟ್ರೀಯ ವಕ್ತಾರ



ದೀಡ್ ನಮಸ್ಕಾರ

ಅಫಜಲಪುರ ಕ್ಷೇತ್ರದಿಂದ ನಿತಿನ್ ಗುತ್ತೇದಾರ ಅವರಿಗೆ ಬಿಜೆಪಿ ಟಿಕೆಟ್ ನೀಡುವಂತೆ ಒತ್ತಾಯಿಸಿ ಅವರ ಅಭಿಮಾನಿ ರವಿ ಮಡಿವಾಳ ಅವರು ಕಲಬುರಗಿ ತಾಲ್ಲೂಕಿನ ಫರಹತಾಬಾದ್ ಗ್ರಾಮದಿಂದ ಕಲಬುರಗಿಯ ಶರಣಬಸವೇಶ್ವರ ದೇವಸ್ಥಾನದವರೆಗೆ 20 ಕಿ.ಮೀ ವರೆಗೆ ದೀಡ್ ನಮಸ್ಕಾರ ಹಾಕಿದರು ಪ್ರಜಾವಾಣಿ ಚಿತ್ರ: ತಾಜುದ್ದೀನ್ ಆಜಾದ್


ಟಿಕೆಟ್‌ಗಾಗಿ ಸಿದ್ದರಾಮಯ್ಯ ಬೆನ್ನುಬಿದ್ದ ಅಖಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಟಿಕೆಟ್‌ಗಾಗಿ ತೀವ್ರ ಕಸರತ್ತು ನಡೆಸುತ್ತಿರುವ ಪುಲಕೇಶಿನಗರ ಕ್ಷೇತ್ರದ ಶಾಸಕ ಅಖಂಡ ಶ್ರೀನಿವಾಸಮೂರ್ತಿ, ಮೂರನೇ ಪಟ್ಟಿಯಲ್ಲಾದರೂ ತಮ್ಮ ಹೆಸರು ಘೋಷಿಸುವಂತೆ ಸಿದ್ದರಾಮಯ್ಯ ಅವರನ್ನು ಸೋಮವಾರ ಮತ್ತೊಮ್ಮೆ ಭೇಟಿ ಮಾಡಿ ಆಗ್ರಹಿಸಿದರು.

ದೆಹಲಿಗೆ ತೆರಳುವ ಮಾಹಿತಿ ಗೊತ್ತಾಗುತ್ತಿದ್ದಂತೆ ಅವರ ನಿವಾಸಕ್ಕೆ ಶಾಸಕ ಜಮೀರ್ ಅಹ್ಮದ್ ಜೊತೆ ತರಾತುರಿಯಲ್ಲಿ ಬಂದ ಅಖಂಡ ಶ್ರೀನಿವಾಸಮೂರ್ತಿ, ಟಿಕೆಟ್ ಕೈ ತಪ್ಪದಂತೆ ಬೆನ್ನಿಗೆ ನಿಲ್ಲಬೇಕೆಂದು ಅವರ ಬಳಿ ಬೇಡಿಕೆ ಇಟ್ಟಿದ್ದಾರೆ. ಅಲ್ಲದೆ, ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ದವರೆಗೆ ಸಿದ್ದರಾಮಯ್ಯ ಜೊತೆಗೇ ತೆರಳಿದರು.

‘ಕೆ.ಜಿ. ಹಳ್ಳಿ, ಡಿ.ಜಿ. ಹಳ್ಳಿ ಘಟನೆಯ ಕಾರಣಕ್ಕೆ ಅಖಂಡ ಅವರಿಗೆ ಟಿಕೆಟ್ ಕೊಡಲು ಸಾಧ್ಯವಾಗದೇ ಇದ್ದರೆ, ನನಗೆ ಟಿಕೆಟ್ ಕೊಡಿ. ಅಷ್ಟೇ ಅಲ್ಲ, ಮಾಜಿ ಮೇಯರ್ ಸಂಪತ್‌ರಾಜ್ ಅವರಿಗೂ ಟಿಕೆಟ್ ನೀಡಬಾರದು. ಈ ಘಟನೆಯಲ್ಲಿ ಆರೋಪಿಯಾಗಿ ಸಂಪತ್ ರಾಜ್ ಕೂಡಾ ಜೈಲು ಸೇರಿದ್ದರು’ ಎಂದು ಅಖಂಡ ಶ್ರೀನಿವಾಸಮೂರ್ತಿ ಸಹೋದರ ಶ್ರೀಧರ್ ರಾಮಯ್ಯ ಆಗ್ರಹಿಸಿದ್ದಾರೆ.



ಅಖಂಡ ಶ್ರೀನಿವಾಸಮೂರ್ತಿ

ಸೆಲೆಬ್ರಿಟಿ ಮಾತು

ನಗು, ಮತದಾನ: ಎರಡೂ ಮುಖ್ಯ



ಯಶವಂತ ಸರದೇಶಪಾಂಡೆ
ರಂಗಕರ್ಮಿ, ಹುಬ್ಬಳ್ಳಿ

ಜಗದಾಗಿರುವ ಮಾನವಜೀವಿ ಮಾತ್ರ ನಗಬಹುದು ಮತ್ತ ಮತ ಚಲಾಯಿಸಬಹುದು. ಅದರಾಗ ಭವ್ಯ ಪ್ರಜಾಪ್ರಭುತ್ವದ ಭಾರತ ದೇಶವಾಸಿಗಳಾದ ನಾವು ಅತ್ಯಂತ ಗೌರವ– ಹೆಮ್ಮೆಯಿಂದ ಮಾಡಬಹುದಾದ ಕೆಲಸ ಮತ ಚಲಾಯಿಸುವುದು! ನಗು ನಮ್ಮನ್ನ ಆರೋಗ್ಯವಂತರಾಗಿ ಮಾಡಿದರ...ಮತ ಹಾಕೋದು ಆರೋಗ್ಯಕರ ಸಮಾಜ ಸೃಷ್ಟಿಗೆ ಕಾರಣವಾಗ್ತದ. ಅದಕ್ಕ ನಗು ನಗುತ ನಿಮ್ಮ ಹಕ್ಕ ಚಲಾಯಿಸ್ರಿ, ಮತ ಹಾಕ್ರಿ.

ಮತ ಆಮಿಷ, ಸಿಕ್ಕಿದ್ದೇನು?

₹2.10 ಕೋಟಿ ನಗದು
ಜಮಖಂಡಿ ಕ್ಷೇತ್ರದ ಹುನ್ನೂರ ಚೆಕ್‌ಪೋಸ್ಟ್

₹1.30 ಕೋಟಿ ಮೌಲ್ಯದ ಗಾಂಜಾ; ಔರಾದ್‌ನ ಎಕಂಬಾ ಚೆಕ್‌ಪೋಸ್ಟ್

₹38 ಲಕ್ಷ ನಗದು ಜಪ್ತಿ
ಚನ್ನಪಟ್ಟಣದ ಜಗದಾಪುರ ಚೆಕ್‌ಪೋಸ್ಟ್

₹2.41 ಲಕ್ಷ ನಗದು
ಬಾಗಲಕೋಟೆ ಜಿಲ್ಲೆಯ ತೇರದಾಳ


ಕ್ಷೇತ್ರದ ಕೂಗು

- **ಕ್ಷೇತ್ರ: ಮಂಡ್ಯ**
- **ಶಾಸಕ: ಎಂ.ಶ್ರೀನಿವಾಸ್** (ಜೆಡಿಎಸ್)




ಬೆಂಗಳೂರು– ಮೈಸೂರು ನಗರಗಳ ನಡುವೆ ಇರುವ ಮಂಡ್ಯ ನಗರ ಅಭಿವೃದ್ಧಿಯಲ್ಲಿ ಹಿಂದುಳಿದೆ. ಇಲ್ಲಿನ ಮೈಷುಗರ್ ಸಕ್ಕರೆ ಕಾರ್ಖಾನೆ ಬಾಗಿಲು ಮುಚ್ಚಿದೆ. ಸುತ್ತಲೂ ಹಸಿರು ವಲಯ ಆವರಿಸಿರುವುದರಿಂದ ಕೈಗಾರಿಕೆಗಳು ಬರಲು ಸಾಧ್ಯವಾಗುತ್ತಿಲ್ಲವೆಂಬ ಮಾತುಗಳಿವೆ. ಹೊರ ವಲಯದಲ್ಲಿ ಕೈಗಾರಿಕೆಗಳ ಸ್ಥಾಪನೆಯ ಅವಕಾಶವಿದ್ದರೂ ಅಭಿವೃದ್ಧಿಯಾಗಿಲ್ಲ. ‘ಮಿಮ್ಸ್’ ಆವರಣದ ಕಿದ್ವಾಯಿ ಕ್ಯಾನ್ಸರ್ ಕೇಂದ್ರ ಸ್ಥಗಿತಗೊಂಡಿದೆ. ಮಂಡ್ಯ ವಿಶ್ವವಿದ್ಯಾಲಯ ಮೂಲ ಸೌಲಭ್ಯಗಳ ಕೊರತೆಯಿಂದ ಬಳಲುತ್ತಿದೆ.

- **ಕ್ಷೇತ್ರ: ಶ್ರೀರಂಗಪಟ್ಟಣ**
- **ಶಾಸಕ: ರವೀಂದ್ರ ಶ್ರೀಕಂಠಯ್ಯ** (ಜೆಡಿಎಸ್)




ಐತಿಹಾಸಿಕವಾಗಿ ಪ್ರಸಿದ್ಧವಾಗಿರುವ ಶ್ರೀರಂಗಪಟ್ಟಣದಲ್ಲಿ ಸ್ಮಾರಕಗಳಿಗೆ ಸರಿಯಾದ ರಕ್ಷಣೆ ಇಲ್ಲ. ಪುರಾತತ್ವ ಇಲಾಖೆ, ಎಎಸ್‌ಐ ಸಂಸ್ಥೆಗಳಿಂದಲೂ ಶ್ರೀರಂಗಪಟ್ಟಣದ ಐತಿಹಾಸಿಕ ಪರಂಪರೆಯನ್ನು ಸಂರಕ್ಷಿಸಲು ಸಾಧ್ಯವಾಗುತ್ತಿಲ್ಲ. ಕೆಆರ್‌ಎಸ್ ಜಲಾಶಯವಿದ್ದರೂ, ಕಾವೇರಿ ನದಿ ಹರಿಯುತ್ತಿದ್ದರೂ ಹಲವು ಹಳ್ಳಿಗಳಿಗೆ ಕುಡಿಯುವ ನೀರಿನ ಕೊರತೆ ಇದೆ. ನೀರಾವರಿ ಯೋಜನೆ ಸಮರ್ಪಕವಾಗಿ ಇಲ್ಲದ ಕಾರಣ ರೈತರಿಗೂ ಅನುಕೂಲವಾಗುತ್ತಿಲ್ಲ.

- **ಕ್ಷೇತ್ರ: ಮೇಲುಕೋಟೆ**
- **ಶಾಸಕ: ಸಿ.ಎಸ್.ಪುಟ್ಟರಾಜು** (ಜೆಡಿಎಸ್)



ಕ್ಷೇತ್ರ ಅಕ್ರಮ ಕಲ್ಲು ಗಣಿಗಾರಿಕೆ ಹಾವಳಿಯಿಂದ ನಲುಗಿದೆ. ಕಲ್ಲು ಗಣಿ ಕಂಪನಿಗಳು ಬೇಬಿ ಬೆಟ್ಟವನ್ನು ಅಗೆದು ಹಾಕಿವೆ. ಅಮೃತ್ ಮಹಲ್ ಕಾವಲು ವಿಚಾರವಾಗಿ ಮೈಸೂರು ರಾಜವಂಶಸ್ಥರಾದ ಪ್ರಮೋದಾದೇವಿ ಭೂಮಿಯ ಬಗ್ಗೆ ತಕರಾರು ಮಾಡಿದ್ದಾರೆ. ಅಲ್ಲಿ ಗಣಿ ಕಂಪನಿಗಳು ಪ್ರಭಾವಿಗಳಿಗೆ ಸೇರಿದ್ದು ಗಣಿ ಹಾವಳಿ ತಡೆಯಲು ಸಾಧ್ಯವಾಗುತ್ತಿಲ್ಲ. ಸಹಕಾರ ಕ್ಷೇತ್ರದ ಪಾಂಡವಪುರ ಸಹಕಾರ ಸಕ್ಕರೆ ಕಾರ್ಖಾನೆಯ ಖಾಸಗೀಕರಣಗೊಂಡಿದ್ದು ಸಚಿವರಾದ ಮುರುಗೇಶ್ ನಿರಾಣಿ ಒಡೆತನದ ಸಂಸ್ಥೆಗೆ ನೀಡಲಾಗಿದೆ. ಈ ಬಗ್ಗೆ ರೈತರಲ್ಲಿ ಅಸಮಾಧಾನವಿದೆ.

- **ಕ್ಷೇತ್ರ: ಕೆ.ಆರ್.ಪೇಟೆ**
- **ಶಾಸಕ: ಕೆ.ಸಿ.ನಾರಾಯಣಗೌಡ** (ಬಿಜೆಪಿ)




ಹಿಂದುಳಿದ ತಾಲ್ಲೂಕು ಎಂಬ ಹಣೆಪಟ್ಟಿ ಕಟ್ಟಿಕೊಂಡಿದೆ. ಸಂತೇಬಾಚಹಳ್ಳಿ ಹೋಬಳಿ ಸಂಪೂರ್ಣ ಒಣ ಭೂಮಿಯಾಗಿದ್ದು ನೀರಾವರಿ ಸೌಲಭ್ಯ ಪಡೆಯುವುದು ರೈತರಿಗೆ ಗಗನಕುಸುಮವಾಗಿದೆ. ಹೊಸದಾಗಿ ಜಾರಿಗೊಳಿಸಲಾಗಿರುವ ಬಹುಗ್ರಾಮ ಯೋಜನೆ ಕುಂಟುತ್ತಿದೆ. ಕೆ.ಆರ್. ಪೇಟೆ ಪಟ್ಟಣಕ್ಕೆ ಕುಡಿಯುವ ನೀರಿನ ಸಮಸ್ಯೆ ಇದ್ದು ಮೂರು ದಿನಕ್ಕೊಮ್ಮೆ ಕುಡಿಯುವ ನೀರು ಬರುತ್ತಿದೆ. ಪಟ್ಟಣದ ವಿವಿಧ ಬಡಾವಣೆಗಳು ಸಮರ್ಪಕ ರಸ್ತೆ ಇಲ್ಲದೆ ನರಳುತ್ತಿವೆ. ಪಟ್ಟಣದ ಬಸ್ ನಿಲ್ದಾಣವನ್ನು ಕೆರೆ ಜಾಗದಲ್ಲೇ ನಿರ್ಮಿಸಿದ್ದು ಮಳೆ ಬಂದರೆ ಜಲಾವೃತಗೊಳ್ಳುತ್ತದೆ.

- **ಕ್ಷೇತ್ರ: ನಾಗಮಂಗಲ**
- **ಶಾಸಕ: ಕೆ.ಸುರೇಶ್‌ಗೌಡ** (ಜೆಡಿಎಸ್)




ನೀರಾವರಿ ಸೌಲಭ್ಯದಿಂದ ವಂಚಿತವಾಗಿರುವ ಕ್ಷೇತ್ರದ ಜನ ದೇಶದ ಹಲವು ನಗರಗಳಿಗೆ ವಲಸೆ ಹೋಗಿ ಜೀವನ ಕಟ್ಟಿಕೊಂಡಿದ್ದಾರೆ. ಹೇಮಾವತಿ ಜಲಾಶಯದಿಂದ ನೀರು ತಂದರೂ ಶೇ 10ರಷ್ಟು ಜಮೀನಿಗೆ ಮಾತ್ರ ನೀರಾವರಿ ಸೌಲಭ್ಯ ದೊರೆತಿದೆ. ಬೇಸಿಗೆ ಬಂದರೆ ಟ್ಯಾಂಕರ್ ನೀರು ಸಾಮಾನ್ಯ. ನಾಗಮಂಗಲ ಕನ್ನಡ ಸಂಸ್ಥೆ ರಂಗಭೂಮಿಯಲ್ಲಿ ದೇಶದೆಲ್ಲೆಡೆ ಹೆಸರು ಗಳಿಸಿದೆ. ಆದರೆ ಪಟ್ಟಣದಲ್ಲಿ ಸಂಘಕ್ಕೊಂದು ಜಾಗ, ಸಭಾಂಗಣ ಇಲ್ಲದಿರುವುದು ಕಲಾವಿದರ ಬೇಸರಕ್ಕೆ ಕಾರಣವಾಗಿದೆ.

- **ಕ್ಷೇತ್ರ: ಮಳವಳ್ಳಿ**
- **ಶಾಸಕ: ಡಾ.ಕೆ.ಅನ್ನದಾನಿ** (ಜೆಡಿಎಸ್)



ಇಲ್ಲಿನ ವಿಶ್ವವಿಖ್ಯಾತ ಗಗನಚುಕ್ಕಿ ಜಲಪಾತ ಪ್ರವಾಸಿಗರನ್ನು ಕೈಬೀಸಿ ಕರೆಯುತ್ತಿದೆ. ಆದರೆ ಜಲಪಾತದ ಬಳಿ ಪ್ರವಾಸಿಗರಿಗೆ ಸೌಲಭ್ಯಗಳಿಲ್ಲ. ಸಮೀಪವೇ ಇರುವ ಚಾಮರಾಜನಗರ ಜಿಲ್ಲೆಯ ಭರಚುಕ್ಕಿಯಲ್ಲಿರುವಷ್ಟು ಸೌಲಭ್ಯವೂ ಇಲ್ಲಿಲ್ಲ. ಏಷ್ಯಾ ಖಂಡದಲ್ಲಿ ಮೊದಲ ಬಾರಿಗೆ ಜಲವಿದ್ಯುತ್ ಉತ್ಪಾದಿಸಿದ ಶಿವನಸಮುದ್ರ ಜಲವಿದ್ಯುತ್ ಕೇಂದ್ರವೂ ಪ್ರವಾಸಿತಾಣವಾಗಿ ಅಭಿವೃದ್ಧಿಗೊಂಡಿಲ್ಲ. ಬರಪೀಡಿತ ಪ್ರದೇಶವಾದ ಬಿ.ಜಿ ಪುರ ಹೋಬಳಿ ರೈತರಿಗೆ ನೀರು ಪೂರೈಸುವ ಪೂರಿಗಾಲಿ ಏತ ನೀರಾವರಿ ಯೋಜನೆ 7 ವರ್ಷಗಳಿಂದಲೂ ಕುಂಟುತ್ತಿದೆ. ಹಲಗೂರು ಹೋಬಳಿ, ಮುತ್ತತ್ತಿ ಪ್ರದೇಶದ ಕಾಡಂಚಿನ ಜನ ಮೂಲ ಸೌಕರ್ಯ ಸಮಸ್ಯೆ ಎದುರಿಸುತ್ತಿದ್ದಾರೆ.


- **ಕ್ಷೇತ್ರ: ಮದ್ದೂರು**
- **ಶಾಸಕ: ಡಿ.ಸಿ.ತಮ್ಮಣ್ಣ** (ಜೆಡಿಎಸ್)



ಇಲ್ಲಿಂದ ಆಯ್ಕೆಯಾಗಿದ್ದ ಎಸ್.ಎಂ.ಕೃಷ್ಣ ಅವರು ಈ ಹಿಂದೆ ಮುಖ್ಯಮಂತ್ರಿಯಾಗಿದ್ದರೂ ಕ್ಷೇತ್ರ ಅಭಿವೃದ್ಧಿಯಲ್ಲಿ ಹಿಂದುಳಿದಿದೆ. ಇದು ಕೆ.ಆರ್.ಎಸ್‌ನ ಅಚ್ಚುಕಟ್ಟು ಪ್ರದೇಶದ ಕೊನೆಯ ಭಾಗವಾಗಿದ್ದು, ನೀರು ಹರಿಯುತ್ತಿಲ್ಲ. ಕೈಗಾರಿಕೆಗಳ ಸ್ಥಾಪನೆಗೆ ಸಾಕಷ್ಟು ಅವಕಾಶವಿದ್ದರೂ ಬೃಹತ್ ಕೈಗಾರಿಕೆಗಳಿಲ್ಲ. ಮದ್ದೂರು ಪಟ್ಟಣದ ಒಳಚರಂಡಿ ವ್ಯವಸ್ಥೆ ಹದಗೆಟ್ಟಿದ್ದು ಹಲವು ಬಡಾವಣೆಗಳಿಗೆ ಕೊಳಚೆ ನೀರು ನುಗ್ಗುತ್ತದೆ. ಸಮೀಪದ ನಾಲೆಗಳಲ್ಲೂ ಕೊಳಚೆ ನೀರು ಹರಿಯುತ್ತಿದೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ



❦ ಸುಭಾಷಿತ ❦
ಹಿಂದಿನ ಕಾಲದಲ್ಲಿ ವ್ಯಕ್ತಿಗಳು ಸ್ವಯಂ ಸುಧಾರಣೆಗಾಗಿ ಅಧ್ಯಯನ ಮಾಡುತ್ತಿದ್ದರು, ಆದರೆ ಈಗ ಮಾಡುವುದು ಇತರರನ್ನು ಮೆಚ್ಚಿಸುವ ಸಲುವಾಗಿ. –ಕನ್‌ಫ್ಯೂಷಿಯಸ್

ಭ್ರಷ್ಟಾಚಾರ ಪ್ರಕರಣಗಳ ವಿಚಾರಣೆಗೆ ಅನುಮತಿ ವಿಳಂಬ ಜನದ್ರೋಹ

ಸರ್ಕಾರಿ ನೌಕರರು, ಚುನಾಯಿತ ಪ್ರತಿನಿಧಿಗಳು ಮತ್ತು ನಿಗಮ, ಮಂಡಳಿಗಳಂತಹ ಸಾರ್ವಜನಿಕ ಸಂಸ್ಥೆಗಳಿಗೆ ನಾಮನಿರ್ದೇಶನ ಹೊಂದುವವರು ಭ್ರಷ್ಟಾಚಾರದಲ್ಲಿ ನಿರತರಾಗುವುದನ್ನು ತಡೆಯಲು ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ–1988 ಜಾರಿಯಲ್ಲಿದೆ. ಕೇಂದ್ರ ಸರ್ಕಾರದಲ್ಲಿ ಸಿಬಿಐ ಮತ್ತು ರಾಜ್ಯದಲ್ಲಿ ಲೋಕಾಯುಕ್ತ ಸಂಸ್ಥೆಗಳು ಈ ಕಾಯ್ದೆಯ ಅಡಿಯಲ್ಲಿ ಪ್ರಕರಣ ದಾಖಲಿಸಿ ತನಿಖೆ ನಡೆಸುವ ಅಧಿಕಾರ ಹೊಂದಿವೆ. ರಾಜ್ಯದಲ್ಲಿ 2016ರ ಜುಲೈನಿಂದ 2022ರ ಆಗಸ್ಟ್‌ವರೆಗೂ ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ಈ ಅಧಿಕಾರವನ್ನು ಹೊಂದಿತ್ತು. ಲಂಚ ಪಡೆಯುವುದು, ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿರುವುದು ಹಾಗೂ ಸರ್ಕಾರಿ ಕೆಲಸಗಳಲ್ಲಿ ಅಧಿಕಾರ ದುರ್ಬಳಕೆ ಮಾಡಿಕೊಂಡು ವೈಯಕ್ತಿಕ ಲಾಭ ಪಡೆಯುವುದರ ವಿರುದ್ಧ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿ ತನಿಖೆ ನಡೆಸುವ ಅಧಿಕಾರವನ್ನು ರಾಜ್ಯದಲ್ಲಿ ಲೋಕಾಯುಕ್ತವು ಹೊಂದಿದೆ. ಪ್ರತೀ ವರ್ಷ ಈ ರೀತಿಯ ನೂರಾರು ಪ್ರಕರಣಗಳನ್ನು ದಾಖಲಿಸಿ ತನಿಖೆ ನಡೆಸಲಾಗುತ್ತಿದೆ. ಭ್ರಷ್ಟಾಚಾರ ಆರೋಪಕ್ಕೆ ಸಂಬಂಧಿಸಿದ ಪ್ರಕರಣಗಳ ತನಿಖೆಯನ್ನು ತ್ವರಿತವಾಗಿ ಪೂರ್ಣಗೊಳಿಸಿ, ಕಾಲಮಿತಿಯೊಳಗೆ ನ್ಯಾಯಾಲಯದಲ್ಲಿ ವಿಚಾರಣೆ ಪೂರ್ಣಗೊಳಿಸುವುದು ಅಗತ್ಯ. ತನಿಖೆ ಮತ್ತು ವಿಚಾರಣೆ ವಿಳಂಬ ಆದಷ್ಟೂ ಆರೋಪಿಗಳು ಅದರ ಅನುಕೂಲ ಪಡೆದುಕೊಂಡು, ಕಾನೂನಿನ ಕುಣಿಕೆಯಿಂದ ತಪ್ಪಿಸಿಕೊಳ್ಳುವ ಸಾಧ್ಯತೆಗಳು ಹೆಚ್ಚಿರುತ್ತವೆ. ರಾಜ್ಯದಲ್ಲಿ ಪ್ರತೀ ಚುನಾವಣೆಯಲ್ಲೂ ಭ್ರಷ್ಟಾಚಾರದ ವಿಷಯ ಎಲ್ಲ ಪಕ್ಷಗಳಿಗೂ ಮತಬೇಟೆಯ ದೊಡ್ಡ ಅಸ್ತ್ರವಾಗುತ್ತದೆ.



ಲೋಕಾಯುಕ್ತ ಸಂಸ್ಥೆಯು ಅನುಮತಿ ಕೋರಿರುವ 500 ಪ್ರಕರಣಗಳನ್ನು ತ್ವರಿತವಾಗಿ ವಿಲೇವಾರಿ ಮಾಡಬೇಕಾದ ಹೊಣೆಗಾರಿಕೆ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಮೇಲಿದೆ


ಅಧಿಕಾರಕ್ಕೆ ಬಂದರೆ ಲೋಕಾಯುಕ್ತದಂತಹ ತನಿಖಾ ಸಂಸ್ಥೆಗಳನ್ನು ಬಲಪಡಿಸಿ, ಭ್ರಷ್ಟಾಚಾರವನ್ನು ಬೇರುಸಹಿತ ಕಿತ್ತು ಹಾಕುವುದಾಗಿ ಆಶ್ವಾಸನೆ ನೀಡುವುದನ್ನು ಬಿಜೆಪಿ, ಕಾಂಗ್ರೆಸ್, ಜೆಡಿಎಸ್ ಮೂರೂ ಪ್ರಮುಖ ಪಕ್ಷಗಳು ಅನೂಚಾನವಾಗಿ ಮಾಡಿಕೊಂಡು ಬರುತ್ತಿವೆ. ಆದರೆ, ಅಧಿಕಾರಕ್ಕೇರಿದ ಯಾರೊಬ್ಬರೂ ಈ ಕೆಲಸವನ್ನು ಬದ್ಧತೆಯಿಂದ ಮಾಡಿದ ಉದಾಹರಣೆ ಇಲ್ಲ. ಲೋಕಾಯುಕ್ತ ಹಾಗೂ ಹಿಂದಿನ ಎಸಿಬಿ, ಭ್ರಷ್ಟಾಚಾರ ಪ್ರಕರಣಗಳಲ್ಲಿ ತನಿಖೆ ಪೂರ್ಣಗೊಳಿಸಿ ಆರೋಪಿಗಳ ವಿರುದ್ಧ ನ್ಯಾಯಾಲಯದಲ್ಲಿ ವಿಚಾರಣೆ ಆರಂಭಿಸಲು ಅಭಿಯೋಜನಾ ಮಂಜೂರಾತಿ ನೀಡುವಂತೆ ಕೋರಿ ಸಲ್ಲಿಸಿರುವ 100 ಪ್ರಸ್ತಾವಗಳನ್ನು ರಾಜ್ಯ ಸರ್ಕಾರದ ವಿವಿಧ ಇಲಾಖೆಗಳು ಬಾಕಿ ಇರಿಸಿಕೊಂಡಿವೆ. ಭ್ರಷ್ಟಾಚಾರ ಆರೋಪಕ್ಕೆ ಸಂಬಂಧಿಸಿದಂತೆ ಸರ್ಕಾರಿ ನೌಕರರು ಹಾಗೂ ಜನಪ್ರತಿನಿಧಿಗಳ ವಿರುದ್ಧ ಪ್ರಾಥಮಿಕ ತನಿಖೆ ನಡೆಸಿ, ಆರೋಪಗಳು ಮೇಲ್ನೋಟಕ್ಕೆ ಸಾಬೀತಾದ ಪ್ರಕರಣಗಳಲ್ಲಿ ಎಫ್‌ಐಆರ್ ದಾಖಲಿಸಿ ತನಿಖೆ ನಡೆಸಲು ಪೂರ್ವಾನುಮತಿ ಕೋರಿರುವ 400 ಪ್ರಸ್ತಾವಗಳನ್ನೂ ಸಕ್ಷಮ ಪ್ರಾಧಿಕಾರಗಳು ಬಾಕಿ ಇರಿಸಿಕೊಂಡಿವೆ.

ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯ ಸೆಕ್ಷನ್–19ರ ಪ್ರಕಾರ, ಭ್ರಷ್ಟಾಚಾರ ಆರೋಪದ ಪ್ರಕರಣಗಳಲ್ಲಿ ಸರ್ಕಾರಿ ನೌಕರರು, ಜನಪ್ರತಿನಿಧಿಗಳು ಮತ್ತು ನಾಮನಿರ್ದೇಶನದ ಮೂಲಕ ಸರ್ಕಾರಿ ಸಂಸ್ಥೆಗಳಲ್ಲಿ ಅಧಿಕಾರದಲ್ಲಿರುವವರ ವಿರುದ್ಧ ನ್ಯಾಯಾಲಯಗಳಿಗೆ ಆರೋಪಪಟ್ಟಿ ಸಲ್ಲಿಸಲು ತನಿಖಾಧಿಕಾರಿಯು ಸಕ್ಷಮ ಪ್ರಾಧಿಕಾರಗಳಿಂದ ಅನುಮತಿ ಪಡೆಯುವುದು ಕಡ್ಡಾಯ. ಸರ್ಕಾರಿ ನೌಕರರ ವಿಷಯದಲ್ಲಿ ನೇಮಕಾತಿ ಪ್ರಾಧಿಕಾರವೇ ಸಕ್ಷಮ ಪ್ರಾಧಿಕಾರ. ಜನಪ್ರತಿನಿಧಿಗಳು ಮತ್ತು ನಾಮನಿರ್ದೇಶಿತರಿಗೆ ಅವರನ್ನು ಹುದ್ದೆಯಿಂದ ತೆಗೆದುಹಾಕುವ ಅಧಿಕಾರ ಹೊಂದಿರುವ ಪ್ರಾಧಿಕಾರಗಳೇ ಸಕ್ಷಮ ಪ್ರಾಧಿಕಾರಗಳು. ತನಿಖಾಧಿಕಾರಿಯು ಸಕ್ಷಮ ಪ್ರಾಧಿಕಾರಗಳ ಮುಂದೆ ಲಿಖಿತ ಪ್ರಸ್ತಾವ ಮಂಡಿಸಿ, ಅನುಮತಿ ಪಡೆದ ಬಳಿಕವೇ ನ್ಯಾಯಾಲಯದಲ್ಲಿ ಆರೋಪಪಟ್ಟಿ ಸಲ್ಲಿಸಲು ಅವಕಾಶವಿದೆ. ಈ ರೀತಿ ಸಲ್ಲಿಕೆಯಾಗುವ ಪ್ರಸ್ತಾವಗಳನ್ನು ಮೂರು ತಿಂಗಳೊಳಗೆ ವಿಲೇವಾರಿ ಮಾಡುವಂತೆ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಸುತ್ತೋಲೆ ಹೊರಡಿಸಿ ಸೂಚನೆ ನೀಡುತ್ತಿದ್ದರೂ ಪರಿಪಾಲನೆ ಹಿಂದೆ ಇತ್ತು. ಆದರೆ, ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಗೆ 2018ರಲ್ಲಿ ತಂದಿರುವ ತಿದ್ದುಪಡಿಯ ಪ್ರಕಾರ, ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿ ಆರೋಪಪಟ್ಟಿ ಸಲ್ಲಿಸಲು ಅನುಮತಿ ಕೋರಿ ಸಲ್ಲಿಸುವ ಪ್ರಸ್ತಾವಗಳನ್ನು ಮೂರು ತಿಂಗಳೊಳಗೆ ವಿಲೇವಾರಿ ಮಾಡುವುದು ಕಡ್ಡಾಯ. ಹೆಚ್ಚಿನ ವಿವರಣೆ ಬೇಕಾದ ಪ್ರಕರಣಗಳಲ್ಲಿ ಒಂದು ತಿಂಗಳ ಹೆಚ್ಚುವರಿ ಕಾಲಾವಕಾಶ ಬಳಸಿಕೊಳ್ಳಬಹುದು. ತಮಿಳುನಾಡಿನ ಪ್ರಕರಣವೊಂದರಲ್ಲಿ 2022ರಲ್ಲಿ ತೀರ್ಪು ನೀಡಿರುವ ಸುಪ್ರೀಂ ಕೋರ್ಟ್, ಸಕ್ಷಮ ಪ್ರಾಧಿಕಾರಗಳು ಈ ಕಾಲಮಿತಿಯನ್ನು ಪಾಲಿಸುವುದು ಕಡ್ಡಾಯ ಎಂದು ಸ್ಪಷ್ಟವಾಗಿ ಹೇಳಿದೆ. ಸರ್ಕಾರಿ ನೌಕರರು ಮತ್ತು ಜನಪ್ರತಿನಿಧಿಗಳು ಅಧಿಕಾರ ದುರ್ಬಳಕೆ ಮಾಡಿಕೊಂಡ ಆರೋಪಕ್ಕೆ ಸಂಬಂಧಿಸಿದಂತೆ ಎಫ್‌ಐಆರ್ ದಾಖಲಿಸುವ ಮೊದಲು ಸಕ್ಷಮ ಪ್ರಾಧಿಕಾರಗಳಿಂದ ಪೂರ್ವಾನುಮತಿ ಪಡೆಯುವುದನ್ನೂ 2018ರ ತಿದ್ದುಪಡಿಯಲ್ಲಿ ಕಡ್ಡಾಯಗೊಳಿಸಲಾಗಿದೆ. ಆರೋಪಪಟ್ಟಿ ಸಲ್ಲಿಕೆಗೆ ಅನುಮತಿ ಕೋರಿದ ಪ್ರಸ್ತಾವಗಳ ವಿಲೇವಾರಿಗೆ ನಿಗದಿಪಡಿಸಿದ ಕಾಲಮಿತಿಯೇ ಈ ವಿಚಾರಕ್ಕೂ ಅನ್ವಯವಾಗುತ್ತದೆ.

ಕಾಯ್ದೆ, ಸುಪ್ರೀಂ ಕೋರ್ಟ್ ತೀರ್ಪು, ಸರ್ಕಾರದ ಸುತ್ತೋಲೆ ಎಲ್ಲವೂ ಇದ್ದರೂ ಭ್ರಷ್ಟಾಚಾರ ಪ್ರಕರಣಗಳಲ್ಲಿ ನ್ಯಾಯಾಲಯಕ್ಕೆ ಆರೋಪಪಟ್ಟಿ ಸಲ್ಲಿಸಲು ಹಾಗೂ ಎಫ್‌ಐಆರ್ ದಾಖಲಿಸಲು ಅನುಮತಿ ಕೋರುವ ಪ್ರಸ್ತಾವಗಳನ್ನು ವರ್ಷಗಟ್ಟಲೆ ಬಾಕಿ ಇರಿಸಿಕೊಳ್ಳಲಾಗುತ್ತಿದೆ. ಶಾಸಕರು, ಸಂಪುಟ ದರ್ಜೆ ಸ್ಥಾನಮಾನ ಹೊಂದಿದವರ ವಿರುದ್ಧದ ಪ್ರಕರಣಗಳೂ ಹೀಗೆಯೇ ಬಾಕಿ ಇವೆ. ಅವುಗಳನ್ನು ತ್ವರಿತವಾಗಿ ವಿಲೇವಾರಿ ಮಾಡುವ ಮೂಲಕ ವಿಧಾನಸಭೆಯ ಅಧ್ಯಕ್ಷರು ಉಳಿದವರಿಗೆ ಮಾದರಿ ಆಗಬೇಕಾಗಿತ್ತು. ಲೋಕಾಯುಕ್ತದ ಅಧಿಕಾರಿಗಳು ಸಲ್ಲಿಸಿರುವ ಇಂತಹ ಪ್ರಸ್ತಾವಗಳನ್ನು 2018ರಿಂದಲೂ ಸಕ್ಷಮ ಪ್ರಾಧಿಕಾರಗಳು ಬಾಕಿ ಇರಿಸಿಕೊಂಡಿರುವುದು ಉತ್ತಮ ಆಡಳಿತದ ಲಕ್ಷಣವಲ್ಲ. ಭ್ರಷ್ಟಾಚಾರ ಪ್ರಕರಣಗಳಲ್ಲಿ ತನಿಖೆ ಮತ್ತು ವಿಚಾರಣೆಗೆ ತ್ವರಿತ ಅನುಮತಿ ನೀಡುವ ಮೂಲಕ ಭ್ರಷ್ಟರನ್ನು ಸಹಿಸಿಕೊಳ್ಳುವುದಿಲ್ಲ ಎಂಬ ಕಠಿಣ ಸಂದೇಶವನ್ನು ರವಾನಿಸುವ ಕೆಲಸವನ್ನು ಸರ್ಕಾರ ಮಾಡಬೇಕಿತ್ತು. ಆದರೆ, ತನಿಖಾಧಿಕಾರಿಗಳು ಸಲ್ಲಿಸುವ ಕೋರಿಕೆಗಳನ್ನು ಸಕ್ಷಮ ಪ್ರಾಧಿಕಾರಗಳು ಕುಂಟುನೆಪ ಹೇಳಿಕೊಂಡು ವರ್ಷಗಟ್ಟಲೆ ಬಾಕಿ ಇರಿಸಿಕೊಳ್ಳುವುದರ ಹಿಂದಿನ ಉದ್ದೇಶವು ಭ್ರಷ್ಟರನ್ನು ರಕ್ಷಿಸುವುದೇ ಆಗಿರುತ್ತದೆ ಎಂಬುದರಲ್ಲಿ ಯಾವ ಅನುಮಾನವೂ ಇಲ್ಲ. ಈ ರೀತಿಯ ಧೋರಣೆಯು ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ ಹಾಗೂ ತನಿಖಾ ಸಂಸ್ಥೆಗಳ ಅಸ್ತಿತ್ವವನ್ನೇ ಅಣಕಿಸುವಂಥದ್ದು. ಇದು ಸರ್ಕಾರವೊಂದು ತನ್ನ ಪ್ರಜೆಗಳಿಗೆ ಬಗೆವ ದ್ರೋಹವೂ ಹೌದು. ಲೋಕಾಯುಕ್ತ ಸಂಸ್ಥೆಯು ಅನುಮತಿ ಕೋರಿರುವ 500 ಪ್ರಕರಣಗಳನ್ನು ತ್ವರಿತವಾಗಿ ವಿಲೇವಾರಿ ಮಾಡಬೇಕಾದ ಹೊಣೆಗಾರಿಕೆ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಮೇಲಿದೆ. ಯಾವ ಒತ್ತಡಕ್ಕೂ ಮಣಿಯದೆ ಭ್ರಷ್ಟಾಚಾರದ ವಿರುದ್ಧ ಗಟ್ಟಿ ನಿಲುವನ್ನು ತಾಳುವ ಬದ್ಧತೆಯನ್ನು ಅವರು ಪ್ರದರ್ಶಿಸಬೇಕು.

ದಿನದ ಟ್ವೀಟ್

ಇದಲ್ಲವೇ ಮಾದರಿ ಕಾರ್ಯ?



ಕರ್ನಾಟಕದ ಅಂಕೋಲಾ ಬಸ್ ನಿಲ್ದಾಣದಲ್ಲಿ ಮಹಿಳೆಯೊಬ್ಬರು ಎಲೆಗಳಲ್ಲಿ ಸುತ್ತಿದ ಹಣ್ಣುಗಳನ್ನು ಮಾರಾಟ ಮಾಡುತ್ತಾರೆ. ಕೆಲವರು ಆ ಹಣ್ಣುಗಳನ್ನು ತಿಂದ ಬಳಿಕ, ಅದಕ್ಕೆ ಸುತ್ತಿದ್ದ ಎಲೆಗಳನ್ನು ಬಸ್ಸಿನ ಕಿಟಕಿಯಿಂದ ಆಚೆಗೆ ಎಸೆಯುತ್ತಾರೆ. ಆದರೆ ಈ ಮಹಿಳೆ ಆ ಎಲೆಗಳನ್ನು ಹೆಕ್ಕಿ ತೆಗೆದುಕೊಂಡು ಬಂದು ಕಸದ ಬುಟ್ಟಿಗೆ ಹಾಕುತ್ತಾರೆ. ಇದು ತನ್ನ ಕೆಲಸವಲ್ಲದಿದ್ದರೂ ಆಕೆ ಅದನ್ನು ಮಾಡುತ್ತಿದ್ದಾರೆ.

ಆದರ್ಶ ಹೆಗಡೆ

ಕಿಡಿನುಡಿ



ಹಾಲಿನ ಉತ್ಪನ್ನಗಳ ಇತರ ಬ್ರ್ಯಾಂಡ್‌ಗಳು 'ನಂದಿನಿ'ಯ ಅಕ್ಕ-ತಂಗಿಯರಾ ಅಥವಾ ತಮಿಳುನಾಡು ಮತ್ತು ಆಂಧ್ರದಿಂದ ಬಂದ ಸೊಸೆ-ಅಳಿಯಂದಿರಾ? ಇಷ್ಟು ವರ್ಷದಿಂದ ಈ ಬ್ರ್ಯಾಂಡ್‌ಗಳು ಕರ್ನಾಟಕದಲ್ಲಿ ಮಾರಾಟ ಆಗುತ್ತಿಲ್ಲವೇ? ಬಿಜೆಪಿ ಅಧಿಕಾರಕ್ಕೆ ಬಂದ ಮೇಲೆ ಇವು ರಾಜ್ಯಕ್ಕೆ ಬಂದವಾ?

ಪ್ರತಾಪ ಸಿಂಹ, ಸಂಸದ

25 ವರ್ಷಗಳ ಹಿಂದೆ — ಶನಿವಾರ, 11-4-1998

● **ಸತ್ತವರಲ್ಲಿ 24 ಮಂದಿ ಭಾರತೀಯರು**

ನವದೆಹಲಿ, ಏ. 10 (ಯುಎನ್‌ಐ, ಪಿಟಿಐ)– ಮೆಕ್ಕಾ ಬಳಿಯ ಮಿನಾದಲ್ಲಿ ಗುರುವಾರ ಸಂಭವಿಸಿದ ನೂಕುನುಗ್ಗಲಿನಿಂದ ಸತ್ತವರಲ್ಲಿ ಕನಿಷ್ಠ 24 ಮಂದಿ ಭಾರತೀಯರು ಸೇರಿದ್ದಾರೆ ಎಂದು ವಿದೇಶಾಂಗ ವ್ಯವಹಾರ ಸಚಿವಾಲಯದ ಮೂಲಗಳು ತಿಳಿಸಿವೆ.

ಸತ್ತ 24 ಮಂದಿ ಭಾರತೀಯರಲ್ಲಿ 11 ಮಂದಿ ಮಹಿಳೆಯರು. ಸತ್ತ ಒಟ್ಟು ಯಾತ್ರಿಗಳು 118 ಎಂದು ಸೌದಿ ಅರೇಬಿಯಾದ ಆರೋಗ್ಯ ಸಚಿವಾಲಯದ ಮೂಲಗಳು ಮಿನಾದಲ್ಲಿ ತಿಳಿಸಿವೆ. ಇವರಲ್ಲಿ ದುರಂತದ ಬಳಿಕ ಆಸ್ಪತ್ರೆಯಲ್ಲಿ ಸತ್ತ 11 ಮಂದಿಯೂ ಸೇರಿದ್ದಾರೆ.

50 ವರ್ಷಗಳ ಹಿಂದೆ — ಬುಧವಾರ, 11-4-1973

● **ರಾಜ್ಯದಲ್ಲಿ ನೈಲಾನ್ ದಾರದ ಕಾರ್ಖಾನೆ ಸ್ಥಾಪನೆ**

ನವದೆಹಲಿ, ಏ. 10– ಮೈಸೂರು, ಹರಿಯಾಣ ಮತ್ತು ಆಂಧ್ರಪ್ರದೇಶದಲ್ಲಿ ಜಂಟಿ ಕ್ಷೇತ್ರದಲ್ಲಿ ನೈಲಾನ್ ಫಿಲಮೆಂಟ್ ದಾರದ ತಯಾರಿಕೆ ಕಾರ್ಖಾನೆ ಸ್ಥಾಪಿಸಲು ಕೇಂದ್ರ ಸರ್ಕಾರ ಕೈಗೊಂಡಿರುವ ನಿರ್ಧಾರವನ್ನು ಪೆಟ್ರೋಲಿಯಂ ಖಾತೆಯ ಉಪಸಚಿವ ಬಲಬೀರ್ ಸಿಂಗ್ ಇಂದು ಲೋಕಸಭೆಯಲ್ಲಿ ಪ್ರಕಟಿಸಿದರು. 2,000 ಟನ್ ಉತ್ಪಾದನೆ ಸಾಮರ್ಥ್ಯದ 3 ನೈಲಾನ್ ಕಾರ್ಖಾನೆಗಳ ಅಂದಾಜು ವೆಚ್ಚ 7 ಕೋಟಿ ರೂಪಾಯಿ.

ಆರೋಗ್ಯವಂತ ಶಿಶುವನ್ನು ಪಡೆಯುವಲ್ಲಿ ಇಡೀ ಕುಟುಂಬದವರ ಹೊಣೆಗಾರಿಕೆ ಇದೆ

ಸುರಕ್ಷಿತ ತಾಯ್ತನ ಮತ್ತು ಆರೋಗ್ಯ ವ್ಯವಸ್ಥೆ



ವಿಶ್ಲೇಷಣೆ

ಡಾ. ವಿನಯ ಶ್ರೀನಿವಾಸ್

ಅವು ನಾನು ಎಂಬಿಬಿಎಸ್ ಓದುತ್ತಿದ್ದ ದಿನಗಳು. ಒಮ್ಮೆ ಆಸ್ಪತ್ರೆಯ ಸ್ತ್ರೀರೋಗ ವಿಭಾಗದ ಕೊಠಡಿಯಲ್ಲಿ ರೋಗನಿರೋಧಕ ಶಾಸ್ತ್ರದ ಪ್ರಾಧ್ಯಾಪಕರ ಮುಂದೆ ಒಬ್ಬ ರೋಗಿಯ ಬಗ್ಗೆ ವಿವರಿಸುತ್ತಿದ್ದೆ. 'ಈ ಗರ್ಭಿಣಿ ರೋಗಿಯ ತೊಂದರೆ ಏನೆಂದರೆ...' ಎಂದು ಆರಂಭಿಸಿದ್ದೆನಷ್ಟೆ. ನಮ್ಮ ಪ್ರಾಧ್ಯಾಪಕರು ನನ್ನನ್ನು ಮಧ್ಯದಲ್ಲೇ ತಡೆದಿದ್ದರು. 'ಆಕೆ ರೋಗಿಯಲ್ಲ, ಗರ್ಭಾವಸ್ಥೆ, ಪ್ರಸವ ಮತ್ತು ಬಾಣಂತನ ಇವೆಲ್ಲವೂ ಮಹಿಳೆಯ ಜೀವನದಲ್ಲಿನ ಸ್ವಾಭಾವಿಕ ಪ್ರಕ್ರಿಯೆಗಳು. ಆಕೆ ಯಾವುದೇ ಕಾಯಿಲೆಯಿಂದ ಬಳಲುತ್ತಿಲ್ಲ, ನೀವು ಆಕೆಯನ್ನು ರೋಗಿ ಎಂದು ಸಂಬೋಧಿಸಿದರೆ ಅದು ತಪ್ಪಾಗುತ್ತದೆ' ಎಂದು ನನ್ನನ್ನು ತಿದ್ದಿದ್ದರು. ಇದು ಒಂದರ್ಥದಲ್ಲಿ ಸರಿಯೆನಿಸಿದರೂ, ಮಹಿಳೆಯ ಬದುಕಿನ ಆ ಹಂತಗಳು ಒಂದಿಷ್ಟು ಹೆಚ್ಚು ಕಾಳಜಿಯನ್ನು ಬೇಡುತ್ತವೆ ಎಂಬುದು ನೂರಕ್ಕೆ ನೂರರಷ್ಟು ನಿಜ. ಆ ದಿನಗಳಲ್ಲಿನ ಆರೈಕೆಯಲ್ಲಿ ಸ್ವಲ್ಪ ವ್ಯತ್ಯಯವಾದರೂ ಮಹಿಳೆಯ ಜೀವವೇ ಅಪಾಯದಲ್ಲಿರುತ್ತದೆ.

ವಿಶ್ವದಾದ್ಯಂತ ಎಲ್ಲ ದೇಶಗಳೂ ಮಾತೃಮರಣವನ್ನು ಗಂಭೀರವಾಗಿ ಪರಿಗಣಿಸುತ್ತವೆ. ಕಾರಣ, ಇದು ಆ ದೇಶದ ಆರೋಗ್ಯ ವ್ಯವಸ್ಥೆಯ ಮತ್ತು ಅಭಿವೃದ್ಧಿಯ ಸೂಚ್ಯಂಕ. ಹಾಗೆಂದೇ ಮೊದಲಿನಿಂದಲೂ ಬಹುಪಾಲು ದೇಶಗಳು ಮಾತೃಮರಣವನ್ನು ವರ್ಷದಿಂದ ವರ್ಷಕ್ಕೆ ಕಡಿಮೆ ಮಾಡಲು ಹಲವಾರು ಯೋಜನೆಗಳನ್ನು ಹಾಕಿಕೊಳ್ಳುತ್ತಲೇ ಬಂದಿವೆ. ಭಾರತವೂ ಇದಕ್ಕೆ ಹೊರತಲ್ಲ. 2003ರ ಮೊದಲು ಭಾರತದಲ್ಲಿ ಮಾತೃಮರಣ ಅನುಪಾತ (ಅಂದರೆ ಪ್ರತೀ ಒಂದು ಲಕ್ಷ ಜೀವಂತ ಶಿಶುಗಳ ಜನನವಾದಾಗ ಸಾವಿಗೀಡಾಗುವ ತಾಯಂದಿರ ಸಂಖ್ಯೆ) ಮುನ್ನೂರಕ್ಕೂ ಹೆಚ್ಚೇ ಇತ್ತು. ಬಡತನ, ಅನಕ್ಷರತೆ, ಬಾಲ್ಯವಿವಾಹ, ಗ್ರಾಮೀಣ ಭಾಗಗಳಲ್ಲಿ ಸೂಕ್ತ ಸೌಲಭ್ಯಗಳ ಕೊರತೆಯಂತಹವು ಮುಖ್ಯ ಕಾರಣಗಳಾದರೆ, ಗರ್ಭಾವಸ್ಥೆ, ಪ್ರಸವ ಮತ್ತು ಬಾಣಂತನದ ಆರೈಕೆಯ ಕುರಿತಾಗಿ ಸಮರ್ಪಕ ಮಾಹಿತಿಯ ಕೊರತೆಯೂ ಸ್ವಲ್ಪಮಟ್ಟಿಗೆ ಕಾರಣ ಎಂದರೆ ಪ್ರಾಯಶಃ ತಪ್ಪಾಗಲಿಕ್ಕಿಲ್ಲ. ಈ ಎಲ್ಲ ಅಂಶಗಳನ್ನೂ ಗಮನದಲ್ಲಿರಿಸಿ 2003ರಲ್ಲಿ 'ರಾಷ್ಟ್ರೀಯ ಸುರಕ್ಷಿತ ತಾಯ್ತನ ದಿನ'ದ ಆಚರಣೆಯ ಪರಿಕಲ್ಪನೆ ಹುಟ್ಟಿಕೊಂಡಿತು. ಸಾರ್ವಜನಿಕರಲ್ಲಿ ಈ ಬಗ್ಗೆ ಅರಿವು ಮೂಡಿಸುವುದು ಪ್ರತಿವರ್ಷ ಏಪ್ರಿಲ್ 11ರಂದು ನಡೆಯುವ ಈ ದಿನಾಚರಣೆಯ ಉದ್ದೇಶ. ಅಂದು ಕಸ್ತೂರಬಾ ಗಾಂಧಿಯವರ ಜನ್ಮದಿನವೂ ಹೌದು.

ನಂತರದ ವರ್ಷಗಳಲ್ಲಿ ಜಾರಿಗೆ ಬಂದ ಸರ್ಕಾರದ ಯೋಜನೆಗಳು ಹಲವು. ಜನನಿ ಶಿಶು ಸುರಕ್ಷಾ ಕಾರ್ಯಕ್ರಮ, ಪ್ರಧಾನಮಂತ್ರಿ ಮಾತೃ ಸುರಕ್ಷಾ ಅಭಿಯಾನ ಮತ್ತು ಅನೀಮಿಯಾಮುಕ್ತ ಭಾರತ ಕಾರ್ಯಕ್ರಮದಂತಹ ಯೋಜನೆಗಳ ಮುಖ್ಯ ಉದ್ದೇಶ ಸುರಕ್ಷಿತ ತಾಯ್ತನವೇ. ಸರ್ಕಾರದ ಈ ಎಲ್ಲ ಯೋಜನೆಗಳು ಕಾರ್ಯರೂಪಕ್ಕೆ ಬಂದ ಪರಿಣಾಮವಾಗಿ ಅನುಪಾತವು ಗಣನೀಯವಾಗಿ ಇಳಿಮುಖ ಕಂಡಿದೆ. ಅನುಪಾತವು 2014- 16ರಲ್ಲಿ 130, 2017- 19ರಲ್ಲಿ 103 ಮತ್ತು 2018- 20ರಲ್ಲಿ 97ಕ್ಕೆ ಇಳಿದಿರುವುದು ನಿಜವಾದ ಸಾಧನೆಯೇ ಸರಿ. ಇದೀಗ 2030ರ ಹೊತ್ತಿಗೆ ಅನುಪಾತವನ್ನು ಎಪ್ಪತ್ತಕ್ಕಿಂತಲೂ ಕಡಿಮೆಗೆ ಇಳಿಸುವ ಗುರಿಯನ್ನು ಸರ್ಕಾರ ಹೊಂದಿದೆ.

ಸರ್ಕಾರದ ಯೋಜನೆಗಳ ಜೊತೆ ನಾವೂ ಕೈಗೂಡಿಸಬೇಕು. ಒಮ್ಮೆ ನಮ್ಮ ಗ್ರಾಮೀಣ ಭಾರತದ ನಿಜ ಚಿತ್ರಣವನ್ನು ಗಮನಿಸುವುದಾದರೆ, ಇಂದಿಗೂ ಹಳ್ಳಿಗಳಲ್ಲಿ ಗರ್ಭಿಣಿಯರ ಆರೋಗ್ಯದ ಬಗ್ಗೆ ಹೆಚ್ಚು ನಿಗಾ ಇಡುವಲ್ಲಿ ಕೆಲವು ಕುಟುಂಬಗಳು ವಿಫಲವಾಗುತ್ತವೆ. ಪ್ರತೀ ತಿಂಗಳು ಸ್ತ್ರೀರೋಗ ತಜ್ಞರಲ್ಲಿ ತಪಾಸಣೆ ಮಾಡಿಸುವುದನ್ನು ಕೆಲವರು ಕಡೆಗಣಿಸಿದರೆ, ಇನ್ನು ಕೆಲವರು ತಜ್ಞರು ಸೂಚಿಸಿದ ಔಷಧ, ಮಾತ್ರೆಗಳನ್ನು ಒದಗಿಸುವಲ್ಲಿ ನಿರ್ಲಕ್ಷ್ಯ ಮಾಡುತ್ತಾರೆ. ಒಂದುವೇಳೆ ಮಾತ್ರೆ, ಔಷಧಗಳನ್ನು ತಂದುಕೊಟ್ಟರೂ ಎಷ್ಟು ಮಹಿಳೆಯರು ಅದನ್ನು ಸರಿಯಾಗಿ ತೆಗೆದುಕೊಳ್ಳುತ್ತಿದ್ದಾರೆ ಎಂಬುದೂ ಮುಖ್ಯವಾಗುತ್ತದೆ. ಕಾರಣ, ಗ್ರಾಮೀಣ ಭಾಗದ ಮಹಿಳೆಯರಿಗೆ ಬೆಳಿಗ್ಗೆ ಎದ್ದಾಗಿನಿಂದ ರಾತ್ರಿ ಮಲಗುವವರೆಗೂ ಕೈತುಂಬಾ ಕೆಲಸ. ದಿನವಿಡೀ ಒಂದು ಕ್ಷಣವೂ ಬಿಡುವಿಲ್ಲದಂತೆ ಮನೆ, ಕೊಟ್ಟಿಗೆ, ಹೊಲದ ಕೆಲಸದಲ್ಲಿ ಮಗ್ನರಾಗಿರುವ ಗರ್ಭಿಣಿಯರು ಮಾತ್ರೆ, ಔಷಧವನ್ನು ಸಮಯಕ್ಕೆ ಸರಿಯಾಗಿ ತೆಗೆದುಕೊಳ್ಳುವುದಾಗಲೀ ಅಥವಾ ತಜ್ಞರು ಸೂಚಿಸುವಂತೆ ಮಧ್ಯಾಹ್ನದ ವಿಶ್ರಾಂತಿಯನ್ನು ಪಡೆಯುವುದಾಗಲೀ ಅಷ್ಟು ಸುಲಭವಲ್ಲ.

ಇನ್ನು ಆಹಾರದ ವಿಷಯಕ್ಕೆ ಬರುವುದಾದರೆ, ಗರ್ಭಿಣಿಯರಿಗೆ ಪೌಷ್ಟಿಕಾಂಶಯುಕ್ತ ಆಹಾರ ಅತ್ಯಗತ್ಯ. ಆ ಸ್ಥಿತಿಯಲ್ಲಿ ಅವರಿಗೆ ಹೆಚ್ಚುವರಿ ಕ್ಯಾಲೊರಿ, ಕಬ್ಬಿಣಾಂಶ ಮತ್ತು ಕ್ಯಾಲ್ಸಿಯಂಯುಕ್ತ ಆಹಾರವನ್ನು ಕಡ್ಡಾಯವಾಗಿ ಕೊಡಬೇಕು. ಕಬ್ಬಿಣಾಂಶ ಹೆಚ್ಚಿರುವ ಸೊಪ್ಪು, ತರಕಾರಿ, ಹಣ್ಣುಗಳು, ಹಾಲು, ಮೊಟ್ಟೆ ಮೊದಲಾದವು ಆಕೆಯ ಆಹಾರದಲ್ಲಿರುವಂತೆ ಗಮನವಹಿಸಬೇಕು. ನಾರಿನಂಶವಿರುವ ದವಸಧಾನ್ಯಗಳು ಮತ್ತು ಕನಿಷ್ಠ ಮೂರು ಲೀಟರ್ ನೀರು ದಿನನಿತ್ಯದ ಆಹಾರದ ಭಾಗವಾಗಿರುವುದನ್ನು ಖಾತರಿಪಡಿಸಿಕೊಳ್ಳಬೇಕು. ಇವೆಲ್ಲವೂ ಕಾರ್ಯರೂಪಕ್ಕೆ ಬರಲು ಈ ಅಂಶಗಳನ್ನು ಸ್ವತಃ ಗರ್ಭಿಣಿಯೊಬ್ಬಳೇ ಅರಿತಿದ್ದರೆ ಸಾಲದು, ಆಕೆಯ ಕುಟುಂಬದವರೂ ಈ ಬಗ್ಗೆ ತಿಳಿದಿರಬೇಕು.



ಆರೋಗ್ಯವಂತ ಶಿಶುವನ್ನು ಪಡೆಯಲು ಗರ್ಭಧಾರಣೆಗೂ ಮೊದಲಿನ ದೇಹಸ್ಥಿತಿ ಕೂಡ ಮುಖ್ಯವೇ. ಹಾಗಾಗಿ, ತಾಯ್ತನದ ಕನಸನ್ನು ಹೊತ್ತ ಮಹಿಳೆ ಗರ್ಭಧಾರಣೆಗೂ ಮೊದಲು ಸ್ತ್ರೀರೋಗ ತಜ್ಞರೊಂದಿಗೆ ಸಮಾಲೋಚಿಸುವುದು ಉತ್ತಮ. ಏಕೆಂದರೆ, ಭಾರತದಲ್ಲಿ 15- 49 ವಯೋಮಾನದ ಶೇಕಡ 57ರಷ್ಟು ಮಹಿಳೆಯರು ರಕ್ತಹೀನತೆಯಿಂದ ಬಳಲುತ್ತಾರೆ. ಇದು ಕೂಡ ಗಂಭೀರ ಸಮಸ್ಯೆ. ಗರ್ಭಪೂರ್ವ ರಕ್ತಹೀನತೆಯನ್ನು ಸರಿಪಡಿಸದಿದ್ದರೆ ಅದು ಮುಂದೆ ತಾಯಿ ಮತ್ತು ಮಗುವಿನ ಜೀವಕ್ಕೇ ಅಪಾಯವನ್ನು ತಂದೊಡ್ಡಬಹುದು. ಅಷ್ಟೇಅಲ್ಲ, ಗರ್ಭಿಣಿಯರಲ್ಲಿ ಕಂಡುಬರುವ ಫೋಲಿಕ್ ಆ್ಯಸಿಡ್ ಕೊರತೆ, ಹುಟ್ಟುವ ಮಗುವಿನಲ್ಲಿ ಮೆದುಳು ಮತ್ತು ಬೆನ್ನುಹುರಿಯ ನ್ಯೂನತೆಗೆ ಕಾರಣವಾಗಬಹುದು. ಆದ್ದರಿಂದ ಗರ್ಭಧಾರಣೆಗೂ ಮೂರು ತಿಂಗಳು ಮೊದಲೇ ಮಹಿಳೆ ಸೇವಿಸಬೇಕಾದ ಫೋಲಿಕ್ ಆ್ಯಸಿಡ್ ಮಾತ್ರೆಗಳ ಬಗ್ಗೆಯೂ ಪ್ರತಿಯೊಬ್ಬರೂ ತಿಳಿದಿರಬೇಕು.

ಪ್ರಸವ ಬಹಳ ಮುಖ್ಯವಾದ ಹಂತ. ತಜ್ಞರು ಸೂಚಿಸಿದ ದಿನಾಂಕದಂದು ಅಥವಾ ಯಾವುದೇ ಅಸಾಮಾನ್ಯ ಲಕ್ಷಣಗಳು ಕಂಡುಬಂದ ತಕ್ಷಣವೇ ಆಕೆಯನ್ನು ಸುಸಜ್ಜಿತ ಆರೋಗ್ಯ ಕೇಂದ್ರಕ್ಕೆ ಕರೆದೊಯ್ಯುವುದು ಮತ್ತು ಆಕೆಗೆ ಹಿತವೆನಿಸುವ ಆಸ್ಪತ್ರೆಯಲ್ಲಿಯೇ ಪ್ರಸವಕ್ಕೆ ವ್ಯವಸ್ಥೆ ಮಾಡುವುದೂ ಮುಖ್ಯವೆನಿಸುತ್ತವೆ. ಮಧುಮೇಹ ಅಥವಾ ಏರು ರಕ್ತದೊತ್ತಡದಿಂದ ಬಳಲುವ ಗರ್ಭಿಣಿಯರ ಬಗ್ಗೆ ಹೆಚ್ಚು ಕಾಳಜಿ ಅಗತ್ಯ. ಮಹಿಳೆಯರ ಆ ಹಂತದ ಸೂಕ್ಷ್ಮ ಮನಃಸ್ಥಿತಿಯನ್ನು ಕುಟುಂಬದ ಎಲ್ಲ ಸದಸ್ಯರೂ ಅರ್ಥೈಸಿಕೊಂಡಿದ್ದರೆ ಒಳಿತು.


ಪ್ರಸವದ ಬಳಿಕ ಮಹಿಳೆಯ ಆರೈಕೆಯಲ್ಲಿ ಇಂದಿಗೂ ಅವೈಜ್ಞಾನಿಕ ಪದ್ಧತಿಗಳನ್ನು ಕೆಲವೆಡೆ ಅನುಸರಿಸುತ್ತಿರುವುದು ದುಃಖಕರ. ಬಾಣಂತಿಯರಿಗೆ ಕುಡಿಯಲು ಕೊಡುವ ನೀರಿನ ಪ್ರಮಾಣದಲ್ಲಿ ಕಟ್ಟುನಿಟ್ಟು, ಆಹಾರದಲ್ಲಿ ಹಣ್ಣು, ತರಕಾರಿಗಳ ನಿಷೇಧ, ಅತಿಯಾದ ತುಪ್ಪದ ಬಳಕೆ ಮೊದಲಾದ ಅಭ್ಯಾಸಗಳು ಸಮಂಜಸವಲ್ಲ. ತಾಯಿ, ಮಗುವಿನ ಸ್ನಾನಕ್ಕೆ ಸುಡುವ ಅತಿ ಬಿಸಿಯಾದ ನೀರನ್ನೇ ಬಳಸಬೇಕೆಂಬ ಪರಿಕಲ್ಪನೆ ಕೂಡ ಅವೈಜ್ಞಾನಿಕವೇ. ಇವು ಪರೋಕ್ಷವಾಗಿ ತಾಯಿ ಮಗುವಿನ ಅನಾರೋಗ್ಯಕ್ಕೆ ಕಾರಣವಾಗಬಹುದು.

ಪ್ರಸವದ ಬಳಿಕ ಮಹಿಳೆಯರ ಮನಸ್ಸು ಸೂಕ್ಷ್ಮವಾಗಿರುತ್ತದೆ. ಈ ಅಂಶವನ್ನು ಅರಿತು ಮನೆಯವರು ಆಕೆಯೊಂದಿಗೆ ಪ್ರೀತಿಯಿಂದ ನಡೆದುಕೊಳ್ಳಬೇಕು. ಕೆಲವು ಬಾಣಂತಿಯರನ್ನು ಕಾಡುವ ಬಾಣಂತಿ ಸನ್ನಿ ಮತ್ತು ಬಾಣಂತನದ ಖಿನ್ನತೆಯ ಲಕ್ಷಣಗಳ ಬಗ್ಗೆಯೂ ಮನೆಯ ಸದಸ್ಯರು ತಿಳಿದಿರಬೇಕು. ತಾಯಿ ಸದಾ ಮಂಕಾಗಿ ಕುಳಿತಿದ್ದರೆ, ಮಗುವಿನ ಆರೈಕೆಯಲ್ಲಿ ಆಸಕ್ತಿ ತೋರದಿದ್ದರೆ, ನಿದ್ರಾಹೀನತೆ ಅಥವಾ ಮಾನಸಿಕ ಕಿರಿಕಿರಿಯಿಂದ ಬಳಲುತ್ತಿದ್ದರೆ, ಅತಿಯಾಗಿ ಸಿಟ್ಟು, ರಂಪಾಟ ಮಾಡುತ್ತಿದ್ದರೆ ನಿರ್ಲಕ್ಷಿಸಬಾರದು. ಇದು ಮಾನಸಿಕ ಸಮಸ್ಯೆ ಇರಬಹುದು ಎಂಬುದನ್ನು ಮನಗಂಡು ಮನೋವೈದ್ಯರ ಬಳಿ ಸಮಾಲೋಚನೆಗೆ ಕರೆದೊಯ್ಯಬೇಕು.

ಇಂತಹ ಸೂಕ್ಷ್ಮ ಸಂಗತಿಗಳ ಬಗ್ಗೆ ಅರಿವು ಹೊಂದಿರುವುದೂ ಸುರಕ್ಷಿತ ತಾಯ್ತನವನ್ನು ಸಾಧಿಸುವಲ್ಲಿ ಮುಖ್ಯ ಎನ್ನಿಸುತ್ತದೆ.

ಲೇಖಕಿ: ರೋಗಲಕ್ಷಣ ಶಾಸ್ತ್ರಜ್ಞೆ

ಚುರುಮುರಿ



ಸತ್ಯವೇ ತಾಯಿತಂದೆ

● ಲಿಂಗರಾಜು ಡಿ.ಎಸ್.

'ನಂದಿನಿ ಹಾಲೇ ಸಿಕ್ತಾ ಇಲ್ಲ ಅಂತ ಸುದ್ದಿಯಾಗ್ಯದಲ್ಲಾ ಸಾ?' ಕೈಯಲ್ಲಿ ನಂದಿನಿ ಹಾಲಿನ ಪ್ಯಾಕೆಟ್ ಹಿಡಕಬಂದ ತುರೇಮಣೆಗೆ ಕೇಳಿದೆ.

'ಪರರಾಜ್ಯದ ಹುಲಿಗೆ ಹೆದರಿ ನಂದಿನಿ ಕಾಣ್ತಿಲ್ಲ ಅಂತ, ಆಗದೋರು ಹಾಲಿಗೆ ಹಾಲಾಹಲ ಹಿಂಡಿಬುಟ್ಟವ್ರೆ. ನಾವು ನಂದಿನಿ ಹಾಲುಮತದೋರು ಅಂತ ಜನ ತೀರ್ಮಾನ ತಕ್ಕಂದು ಪುಣ್ಯಕೋಟಿಯನ್ನ ಉಳಿಸಬಕು' ಅಂದ್ರು ತುರೇಮಣೆ.

'ಅಲ್ಲ ಕನ್ರೋ 'ನಮ್ಮ ಹಸ ನನಗೆ ವದ್ದುಬುಟ್ಟದೆ. ನಾನು ಹಾಲು ಕರೆಯೋ ಪಕ್ಸಕ್ಕೋಯ್ತಿನಿ' ಅಂತಾವ್ರಂತೆ ಟಿಕೇಟು ಸಿಕ್ಕದೋರು?' ಯಂಟಪ್ಪಣ್ಣ ರೇಗಿತು.

'ಎಮ್ಮೆಲ್ಲೆ ಸೀಟು ತಮ್ಮ ಪಿತ್ರಾರ್ಜಿತವಾದ ಆಸ್ತಿ ಅನ್ನಂಗೆ ಟಿಕೇಟು ಸಿಕ್ಕದಿರೋ ಸಾಸಕರು ಕಣ್ಣಿರಾಕ್ತಾ ಕೂತಿದ್ರೆ ಇನ್ನು ಕೆಲವರು ಟಿಕೇಟು ಯಾಕೆ ಕೊಡಕಿಲ್ಲ ಅಂತ ಜಗಳಕ್ಕೆ ಬಿದ್ದವ್ರೆ ಕನಣ್ಣೆ. ಇಂತಾ ಸಭ್ಯರ್ಥಿಗಳು ಬಂದಾರ ಅಂತ ಕೆಲವು ಪಕ್ಷಗಳು ಗಾಳ ಹಿಡಕಂದು ಕದ್ದು ನೋಡುವ ತಂತ್ರ ಅನುಸರಿಸ್ತಾ ಕುಂತವಂತೆ' ಅಂತಂದೆ.

'ಕೈಲಾಗದೋರೂ ಟಿಕೇಟು ಬೇಕೇ ಬೇಕು ಅಂತ ನಿಗುರಾಡ್ತಾವ್ರೆ ಕಪ್ಪಾ. ಗೆಯ್ಕಾಗದ ಈ ಕಳ್ಳೆತ್ತುಗಳ ನಂಬಿದ್ರೆ ನಾವು ಉದ್ದಾರಾಯ್ತಿವಾ' ಯಂಟಪ್ಪಣ್ಣ ಮಂಗಳಾಷ್ಟಕ ಪಠಿಸಿತು.

'ನೋಡ್ರೋ ಒಳ್ಳೆ ಕ್ಯಾಂಡಿಡೇಟಿಗೆ ವೋಟಾಕಬೇಕು ಅಂತ ನನಗೂ ಆಸೆ ಅದೆ. ಒಳ್ಳೆ ಜನ ಎಲೆಕ್ಷನ್ನಿಗೆ ನಿಲ್ಲಕುಲ್ಲ ಅಂದಮ್ಯಾಲೆ ವೋಟಾಕದ್ಯಾಕೆ' ತುರೇಮಣೆ ಬೇಜಾರಾದ್ರು.

'ನೀನೇಳದು ದಿಟ ಕನೋ. ಮತದಾರರೆಲ್ಲಾ ತಪ್ಪದೇ ವೋಟು ಮಾಡಬಕು ಅಂತ ಭಗವಂತ ಹೇಳ್ತನೆ. ಆದ್ರೆ ಆಯಪ್ಪನು ಒಳ್ಳೆ ಕ್ಯಾಂಡಿಡೇಟು ಕೊಡದೇ ನಮ್ಮನ್ನ ತಬ್ಬಲಿಗಳನ್ನ ಮಾಡಿ ಹುಲಿಗಳ ಕೈಗೆ ಕೊಡ್ತಾವ್ನಲ್ಲ' ಯಂಟಪ್ಪಣ್ಣ ಗಾಬರಿಯಾಯ್ತು.

'ಅದಕೇನು ಮಾಡಬಕು ಅಂತೀರಿ?' ಅಂತ ಕೇಳಿದೆ.

'ಸುಳ್ಳು ಆಶ್ವಾಸನೆ ಕೊಡ್ತಿರೋ ಕ್ಯಾಂಡಿಡೇಟುಗಳಿಗೆ ಜನ 'ನೀವು ನಮಗೆ ಸುಳ್ಳು ಹೇಳದು ನಿಲ್ಲಿಸದಿದ್ರೆ ನಾವು ನಿಮ್ಮ ಬಗ್ಗೆ ನಿಜ ಹೇಳಕ್ಕೆ ಸುರು ಮಾಡಬೇಕಾಯ್ತದೆ' ಅಂತ ಜಬರಿಸಿ ಕೇಳಬೇಕು ಕನ್ರೋ' ಅಂದ್ರು ತುರೇಮಣೆ.

ಸಂಗತ

ಎಸ್‌ಸಿಎಸ್‌ಪಿ, ಟಿಎಸ್‌ಪಿ: ಇರಲಿ ಪಾರದರ್ಶಕತೆ

ಪರಿಶಿಷ್ಟರ ಉಪಯೋಜನೆಗಳಿಗೆ ಅವರ ಜನಸಂಖ್ಯೆಗೆ ಅನುಗುಣವಾಗಿ ಹೇಗೆ ಅನುದಾನ ನಿಗದಿ ಮಾಡಲಾಗುತ್ತಿದೆ ಎಂಬುದರ ವಿವರವನ್ನು ಬಜೆಟ್‌ನಲ್ಲಿ ನೀಡುತ್ತಿಲ್ಲವೇಕೆ?

● ಬಿ.ರಾಜಶೇಖರಮೂರ್ತಿ

ರಾಜ್ಯದ ಪ್ರತಿವರ್ಷದ ಬಜೆಟ್‌ನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಜನಸಂಖ್ಯೆಗೆ ಅನುಗುಣವಾಗಿ ಅನುದಾನ ಮೀಸಲಿಡುವುದನ್ನು ಕಡ್ಡಾಯಗೊಳಿಸಿ ರಾಜ್ಯ ಸರ್ಕಾರವು 2013ರಲ್ಲಿ ಪರಿಶಿಷ್ಟ ಜಾತಿ ಉಪಯೋಜನೆ (ಎಸ್‌ಸಿಎಸ್‌ಪಿ) ಮತ್ತು ಪರಿಶಿಷ್ಟ ಪಂಗಡ ಉಪಯೋಜನೆ (ಟಿಎಸ್‌ಪಿ) ಕಾಯ್ದೆ ರೂಪಿಸಿ, ಜಾರಿಗೊಳಿಸಿತು. ಪರಿಶಿಷ್ಟರ ಸಬಲೀಕರಣದ ದಿಸೆಯಲ್ಲಿ ಇದೊಂದು ದಿಟ್ಟ ಹೆಜ್ಜೆ. ಆದರೆ ಈ ಕಾಯ್ದೆಯ ಅನುಸಾರ ಬಜೆಟ್‌ನಲ್ಲಿ ಪೂರ್ಣ ಪ್ರಮಾಣದ ಅನುದಾನ ಒದಗಿಸುತ್ತಿಲ್ಲ.

ಒಟ್ಟು ಬಜೆಟ್ ಗಾತ್ರದ ಶೇಕಡ 24.1ರಷ್ಟು ಅನುದಾನವನ್ನು ಒದಗಿಸುವುದರ ಬದಲಿಗೆ ರಾಜ್ಯದ ಒಟ್ಟಾರೆ ಆಡಳಿತ ವೆಚ್ಚವನ್ನು ಹೊರಗಿಟ್ಟು, ಉಳಿದ ಮೊತ್ತದಲ್ಲಿ ಮಾತ್ರ ಪಾಲು ನೀಡಲಾಗುತ್ತಿದೆ. ಈ ಸತ್ಯ ಬಹಿರಂಗ ಆಗಬಾರದು ಎಂಬ ಉದ್ದೇಶದಿಂದ ಎಸ್‌ಸಿಎಸ್‌ಪಿ ಮತ್ತು ಟಿಎಸ್‌ಪಿಗಳಿಗೆ ಯಾವ ಆಧಾರದಲ್ಲಿ ಲೆಕ್ಕ ಹಾಕಿ ಅನುದಾನವನ್ನು ನೀಡಲಾಗುತ್ತದೆ ಎಂಬ ಬಗ್ಗೆ ಬಜೆಟ್‌ನಲ್ಲಾಗಲೀ ಅಥವಾ ಮಧ್ಯಮಾವಧಿ ವಿತ್ತೀಯ ಯೋಜನೆಗಳಲ್ಲಾಗಲೀ ಮಾಹಿತಿ ನೀಡುತ್ತಿಲ್ಲ.

ವರ್ಷದಿಂದ ವರ್ಷಕ್ಕೆ ಬಜೆಟ್‌ನ ಮೊತ್ತ ಏರುಗತಿಯಲ್ಲಿ ಇರುತ್ತದೆ. ಆದರೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಉಪಯೋಜನೆಗಳ ಅನುದಾನದ ಪ್ರಮಾಣ ಮಾತ್ರ ಇಳಿಕೆಯಾಗುತ್ತಿದೆ. ಅಭಿವೃದ್ಧಿ ವೆಚ್ಚದ ಅಥವಾ ಆಡಳಿತ- ನಿರ್ವಹಣೆ ವೆಚ್ಚ ಕಳೆದು ರಾಜಸ್ವ ಸ್ವೀಕೃತಿಯ ಶೇಕಡ 24.1ರಷ್ಟನ್ನು ಉಪ ಯೋಜನೆಗಳಿಗೆ ನೀಡಲಾಗುತ್ತಿದೆ ಎಂದು ಹೇಳಲಾಗುತ್ತಿದೆ. ಇದರ ವಿವರ ಬಜೆಟ್ ಸಂಪುಟಗಳಲ್ಲಿ ಅಥವಾ ಬಜೆಟ್ ಭಾಷಣಗಳಲ್ಲಿ ಏಕೆ ಇರುವುದಿಲ್ಲ?

ಉಪಯೋಜನೆಗಳು ಜಾರಿಗೆ ಬಂದು ನಾಲ್ಕು ದಶಕಗಳೇ ಆಗಿವೆ. ಈ ಅವಧಿಯಲ್ಲಿ ಉಪಯೋಜನೆಗಳಿಂದ ದಲಿತರು ಮತ್ತು ಆದಿವಾಸಿಗಳಿಗೆ ಏನೆಲ್ಲ ಅನುಕೂಲ ದೊರೆತಿದೆ? ಈ ಉಪಯೋಜನೆಗಳು ಅವರ ಬದುಕನ್ನು ಎಷ್ಟರಮಟ್ಟಿಗೆ ಉತ್ತಮಪಡಿಸಿವೆ ಎಂಬುದು ಸ್ಪಷ್ಟವಿಲ್ಲ. ತಾಲ್ಲೂಕು ಮತ್ತು ಗ್ರಾಮ ಮಟ್ಟದಲ್ಲಿ ಇವು ಹೇಗೆ ಅನುಷ್ಠಾನಗೊಳ್ಳುತ್ತಿವೆ ಎಂಬುದರ ಬಗ್ಗೆ ಖಚಿತ ಅಂಕಿಅಂಶಗಳು ದೊರೆಯುತ್ತಿಲ್ಲ. ಈ ಯೋಜನೆಗಳನ್ನು ರೂಢಿಗತ ರೀತಿಯಲ್ಲಿಯೇ ಜಾರಿ ಮಾಡಿಕೊಂಡು ಬರಲಾಗುತ್ತಿದೆ.

ಉಪಯೋಜನೆಯನ್ನು ಸರ್ಕಾರ ಇತರ ಯೋಜನೆಗಳಂತೆ ಪರಿಗಣಿಸಬಾರದು. ಪ್ರಜ್ಞಾಪೂರ್ವಕವಾಗಿ ಚಾರಿತ್ರಿಕವಾಗಿ ಪ್ರತ್ಯೇಕೀಕರಣವನ್ನು ಸಾವಿರಾರು ವರ್ಷಗಳಿಂದ ಅನುಭವಿಸಿಕೊಂಡು ಬರುತ್ತಿರುವ ಈ ಸಮುದಾಯಗಳ ಅಭಿವೃದ್ಧಿಯೇ ಈ ಉಪಯೋಜನೆಗಳ ಮಹತ್ತರ ಉದ್ದೇಶವಾಗಿದೆ ಎಂಬುದನ್ನು ಮನಗಾಣಬೇಕು. ದಲಿತ ಸಮುದಾಯಗಳಲ್ಲಿ ಹೆಚ್ಚಿನ ಜನರಿಗೆ ಈ ಉಪಯೋಜನೆಯ ಅರಿವೇ ಇಲ್ಲ. ಚೂರುಪಾರು ತಿಳಿದಿರುವ ಅರ್ಹ ಬಡ ದಲಿತರ ಕೈಗೆ ಯೋಜನೆಯ ಫಲ ಎಟಕುವುದಿಲ್ಲ. ಈ ಯೋಜನೆಯೂ ದಲಿತರಲ್ಲೇ ಉಳ್ಳವರ ಪಾಲಾಗುತ್ತಿದೆ. ಹೀಗಾಗಿ ಈ ಉಪಯೋಜನೆಯ ಉದ್ದೇಶವೇನು, ಹೇಗೆ ಇದರ ಅನುಕೂಲಗಳನ್ನು ಪಡೆಯುವುದು ಎಂಬುದರ ಬಗ್ಗೆ ಈ ಸಮುದಾಯಗಳ ನಡುವೆ ಜಾಗೃತಿ ಮೂಡಿಸುವ ತುರ್ತು ಅಗತ್ಯವಿದೆ.

ಹಿಂದಿನ 40-50 ವರ್ಷಗಳಲ್ಲಿ ರಾಜ್ಯದ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಸ್ವರೂಪದಲ್ಲಿ ಬಹಳಷ್ಟು ಬದಲಾವಣೆಗಳಾಗಿವೆ. ದಲಿತರು ಮತ್ತು ಆದಿವಾಸಿಗಳ ಸ್ಥಿತಿಗತಿಗಳಲ್ಲೂ ಗಮನಾರ್ಹ ಬದಲಾವಣೆಗಳಾಗಿವೆ. ಇದನ್ನೆಲ್ಲ ಮುಂದಿಟ್ಟು ಉಪಯೋಜನೆಗಳ ಮೌಲ್ಯಮಾಪನವಾಗಬೇಕು. ದಲಿತರು ಮತ್ತು ಆದಿವಾಸಿಗಳಿಗೆ ಇವುಗಳಿಂದ ಎಷ್ಟರ ಮಟ್ಟಿಗೆ ಅನುಕೂಲ ದೊರೆಯುತ್ತಿದೆ ಎಂಬುದರ ಅಧ್ಯಯನ ನಡೆಯಬೇಕು. ಆಗ ಇದರಲ್ಲಿ ಏನೆಲ್ಲ ಬದಲಾವಣೆಗಳಾಗಬೇಕು ಎಂಬುದು ತಿಳಿಯುತ್ತದೆ.



ಒಟ್ಟು ಜನಸಂಖ್ಯೆಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರದ ಬಳಿ ಇರುವ ಖಚಿತ ಅಂಕಿಅಂಶಗಳನ್ನು ಕಾಲಕಾಲಕ್ಕೆ ಪ್ರಕಟಿಸಬೇಕು. ಉದಾಹರಣೆಗೆ, ದಲಿತ ಮತ್ತು ಆದಿವಾಸಿ ಸಮುದಾಯಗಳಲ್ಲಿನ ಶಿಶುಮರಣ ಪ್ರಮಾಣ, ಆಯಸ್ಸು, ಬಡತನದ ಪ್ರಮಾಣ, ಮಹಿಳೆಯರು ಮತ್ತು ಮಕ್ಕಳಲ್ಲಿ ರಕ್ತಹೀನತೆ, ಕುಡಿಯುವ ನೀರಿನ ಸಂಪರ್ಕ, ಕೃಷಿ ಜಮೀನು ಹೊಂದಿರುವವರ ಸಂಖ್ಯೆ, ಸ್ವಂತ ಮನೆ ಹೊಂದಿರುವವರು ಮತ್ತು ಹೊಂದದೇ ಇರುವವರ ಸಂಖ್ಯೆ, ವಿವಿಧ ಕ್ಷೇತ್ರಗಳಲ್ಲಿ ಉದ್ಯೋಗದಲ್ಲಿ ಇರುವವರ ಪ್ರಮಾಣ ಕುರಿತ ಅಂಕಿಅಂಶಗಳನ್ನು ಪ್ರಕಟಿಸಬೇಕು. ಎಸ್‌ಸಿಎಸ್‌ಪಿ ಮತ್ತು ಟಿಎಸ್‌ಪಿ ಅಡಿಯಲ್ಲಿ ಅನುದಾನದ ಬಿಡುಗಡೆ ಹಾಗೂ ವೆಚ್ಚದ ವಿವರಗಳನ್ನು ಕರ್ನಾಟಕ ಆರ್ಥಿಕ ಸಮೀಕ್ಷೆಯಲ್ಲಿ ಪ್ರಕಟಿಸುವುದನ್ನು ಆರಂಭಿಸಬೇಕು.

ಉಪಯೋಜನೆಗಳ ಅನುದಾನವನ್ನು ಸಾಮಾನ್ಯ ವಲಯಗಳಿಗೆ ನೀಡುವುದನ್ನು ತಕ್ಷಣ ನಿಲ್ಲಿಸಬೇಕು. ಮೆಟ್ರೊ ರೈಲು, ಬಸ್ ತಂಗುದಾಣಗಳು, ಹೆದ್ದಾರಿಗಳು, ಚೆಕ್‌ಡ್ಯಾಂಗಳಂತಹ ಕಾರ್ಯಗಳಿಗೆ ಉಪಯೋಜನೆ ಅನುದಾನವನ್ನು ನೀಡಲಾಗುತ್ತಿದೆ. ಹೀಗಾಗಿ, ಸಂಬಂಧಿಸಿದ ಕಾಯ್ದೆಯ ಸೆಕ್ಷನ್ 7(ಸಿ) ಮತ್ತು 7(ಡಿ)ಗಳಿಗೆ ತಕ್ಷಣ ತಿದ್ದುಪಡಿ ತಂದು, ಸಾಮಾನ್ಯ ವಲಯಗಳಿಗೆ ಈ ಉಪಯೋಜನೆಯ ಅನುದಾನ ನೀಡುವುದನ್ನು ನಿಲ್ಲಿಸಬೇಕು.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಉಪಯೋಜನೆ ಅನುದಾನವನ್ನು ಅರ್ಹ ದಲಿತರ ಸಬಲೀಕರಣಕ್ಕೆಂದೇ ಬಳಸುವಂತೆ ಆಗಬೇಕು. ಈ ದಿಸೆಯಲ್ಲಿ ಆಳುವ ಸರ್ಕಾರಗಳು ಇಚ್ಛಾಶಕ್ತಿ ಪ್ರದರ್ಶಿಸಬೇಕು. ದಲಿತಪರ ಸಂಘಟನೆಗಳು ಈ ದಿಸೆಯಲ್ಲಿ ಏಕತೆಯಿಂದ ತಾತ್ವಿಕ ನೀತಿಯ ಆಧಾರದಲ್ಲಿ ಧ್ವನಿ ಎತ್ತಬೇಕು. ಇಲ್ಲವಾದಲ್ಲಿ ಈ ಉಪಯೋಜನೆಯ ಮೂಲ ಉದ್ದೇಶವೇ ಬುಡಮೇಲಾಗುವ ಸಾಧ್ಯತೆ ಇದೆ.

ವಾಚಕರ ವಾಣಿ

ಧರ್ಮರಕ್ಷಕರೋ ತೆರೆಮರೆಯ ರಾಜಕಾರಣಿಗಳೋ?

'ಧರ್ಮ ಮತ್ತು ರಾಜಕೀಯವು ಒಂದು ನಾಣ್ಯದ ಎರಡು ಮುಖಗಳಿದ್ದಂತೆ. ಸಮಾಜದ ಉದ್ಧಾರಕ್ಕೆ ಧರ್ಮವೂ ಬೇಕು ರಾಜಕೀಯವೂ ಬೇಕು. ಆದರೆ ಎರಡೂ ಒಂದನ್ನೊಂದು ಕಲೆತರೆ ಸಮಾಜ ದಾರಿ ತಪ್ಪುತ್ತದೆ' ಎಂಬ ಎಚ್ಚರಿಕೆಯ ಸಂದೇಶ ನೀಡುತ್ತಾ ಬಂದಿದ್ದರು ಮಠಾಧೀಶರು. ಅವರು ಎಲ್ಲೂ ಬಹಿರಂಗವಾಗಿ ಯಾವುದೇ ಪಕ್ಷ ಅಥವಾ ಅಭ್ಯರ್ಥಿಯ ಪರ ನಿಂತ ಉದಾಹರಣೆಗಳು ಇರಲಿಲ್ಲ. ಆಶೀರ್ವಾದ ಬಯಸಿ ಮಠಕ್ಕೆ ಬಂದವರನ್ನೆಲ್ಲಾ ಆಶೀರ್ವದಿಸಿ, 'ನಿಮ್ಮ ನಿಮ್ಮ ಶಕ್ತಿಯ ಅನುಸಾರ ಗೆದ್ದು ಒಳ್ಳೆಯ ಕೆಲಸ ಕಾರ್ಯಗಳನ್ನು ಮಾಡಿ, ನಿಮ್ಮನ್ನು ನಂಬಿದ ಜನರಿಗೆ ನಿಷ್ಠರಾಗಿ ನಡೆದುಕೊಳ್ಳಿ' ಎನ್ನುವ ಸಂದೇಶ ನೀಡುತ್ತಿದ್ದರು. ದೂರದಿಂದಲೇ ಎಲ್ಲವನ್ನೂ ಗ್ರಹಿಸಿ, ಸಮಾಜದ ಅಂಕುಡೊಂಕುಗಳನ್ನು ತಿದ್ದಿ ತೀಡಿ ಸರಿದಾರಿಗೆ ತರುತ್ತಿದ್ದರು. ಆದರೆ ಈಗ ಆ ಕಾಲ ಕಣ್ಮರೆಯಾಗುತ್ತಿದೆ.

ಅಸ್ತಿತ್ವದ ಹಟಕ್ಕೆ ಬಿದ್ದವರಂತೆ ಕೆಲವು ಮಠಾಧೀಶರು ಇಂದು ರಾಜಕಾರಣಿಗಳಿಗೆ ಪಕ್ಷಗಳ ಟಿಕೆಟ್ ಕೊಡಿಸುವಲ್ಲಿಂದ ಅವರನ್ನು ಗೆಲ್ಲಿಸಿಕೊಂಡು ಬರುವವರೆಗೆ ಪಕ್ಷ ಮತ್ತು ವ್ಯಕ್ತಿ ನಿಷ್ಠೆಗೆ ಕಟ್ಟುಬಿದ್ದವರಂತೆ ವರ್ತಿಸುತ್ತಿದ್ದಾರೆ. ಜಾತಿಯ ಅಸ್ತ್ರ ಹಿಡಿದುಕೊಂಡು ಭಾವಿ ಕಾವಿ ರಾಜಕಾರಣಿಗಳಂತೆ ವರ್ತಿಸುತ್ತಿದ್ದಾರೆ.

ಶಿವಕುಮಾರ್ ಯರಗಟ್ಟಿಹಳ್ಳಿ, ಚನ್ನಗಿರಿ

ಶಿಕ್ಷಕರಿಗೆ ಸಿಗಲಿ ರಿಯಾಯಿತಿ ರಜೆ

ಮೇ 29ರಿಂದ ಶಾಲೆಗಳು ಆರಂಭವಾಗುವುದಾಗಿ ವರದಿಯಾಗಿದೆ. ಇನ್ನೂ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಮುಗಿದಿಲ್ಲ. ಅದಾದ ನಂತರ ಮೌಲ್ಯಮಾಪನ, ಶಿಕ್ಷಕರಿಗೆ ತರಬೇತಿಗಳು ಶುರು. ಮೇ ಹತ್ತರ ತನಕ ಶಿಕ್ಷಕರು ಒಂದಿಲ್ಲೊಂದು ತರಬೇತಿಯಲ್ಲಿ ತಲ್ಲೀನರಾಗಿರುತ್ತಾರೆ, ಬಳಿಕ ಚುನಾವಣಾ ಕಾರ್ಯ, ಅದು ಮುಗಿದ ಬಳಿಕ ಮತ ಎಣಿಕೆ. ಅದಾದ ವಾರ ಹತ್ತು ದಿನಕ್ಕೆ ಶಾಲೆ ಆರಂಭ! ಇಷ್ಟೆಲ್ಲದರ ನಡುವೆ ರಜೆಯ ಮಜೆ ಸವಿಯಲಾದೀತೇ? ಶಿಕ್ಷಕರ ಸಂಕಷ್ಟ ಒಂದೆಡೆಯಾದರೆ ಅವರ ಮಡದಿ, ಮಕ್ಕಳಿಗೂ ಇವರ ಜೊತೆ ಮನೆವಾಸವೇ ಗತಿ. ಪರೀಕ್ಷೆ, ಮೌಲ್ಯಮಾಪನ, ಚುನಾವಣಾ ಕಾರ್ಯಗಳಲ್ಲಿ ಕಳೆದುಹೋಗುವ ಶಿಕ್ಷಕರಿಗೆ ಕಡೇಪಕ್ಷ ಹದಿನೈದು ದಿನ ರಿಯಾಯಿತಿ ರಜೆಯನ್ನಾದರೂ ಶಿಕ್ಷಣ ಇಲಾಖೆ ನೀಡಿದರೆ ಮಹದುಪಕಾರವಾದೀತೇನೊ. ಅಧಿಕಾರಿಗಳು ಚಿಂತಿಸಿ ನಿರ್ಣಯ ತೆಗೆದುಕೊಳ್ಳಲಿ.

ಸಂತೆಬೆನ್ನೂರು ಫೈಜ್ನಟ್ರಾಜ್, ಸಂತೆಬೆನ್ನೂರು

ನಂದಿನಿ ಬೆಣ್ಣೆ ಮಾಯವಾಗಿದ್ದೇಕೆ?

ನಮ್ಮ ಮನೆಯಲ್ಲಿ ಸುಮಾರು ಇಪ್ಪತ್ತು ವರ್ಷಗಳಿಂದಲೂ ನಂದಿನಿ ಹಾಲು ಮತ್ತು ಬೆಣ್ಣೆಯನ್ನೇ ಬಳಸುತ್ತಾ ಬಂದಿದ್ದೇವೆ. ನಂದಿನಿ ಹೊರತಾಗಿ ಅಪ್ಪಿತಪ್ಪಿಯೂ ಬೇರೆ ಬ್ರ್ಯಾಂಡ್‌ನ ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ನಾವು ಬಳಸಿಲ್ಲ. ಇದು ನಮಗೆ ಹೆಮ್ಮೆಯ ವಿಷಯ. ಈಗ್ಗೆ ನಾಲ್ಕೈದು ತಿಂಗಳಿನಿಂದ ನಂದಿನಿ ಬೆಣ್ಣೆ ಮಾರುಕಟ್ಟೆಯಿಂದ ಇದ್ದಕ್ಕಿದ್ದಂತೆ ಮಾಯವಾಗಿದೆ. ಇದಕ್ಕೇನು ಕಾರಣವೋ ತಿಳಿಯದಾಯಿತು. ಕೆಎಂಎಫ್ ಅಧಿಕಾರಿಗಳನ್ನೇ ನಮ್ಮ ನಂದಿನಿ ಹಾಲಿನ ವಿತರಕರು ನೇರವಾಗಿ ವಿಚಾರಿಸಿದಾಗಲೂ ಅವರಿಂದ ಸ್ಪಷ್ಟ ಉತ್ತರವಿಲ್ಲ.

ಈಗೊಂದು ವಾರದ ಕೆಳಗೆ ದಾವಣಗೆರೆಯ ವಿದ್ಯಾನಗರದ ಮುಖ್ಯ ಬೀದಿಯಲ್ಲಿರುವ ನಂದಿನಿ ಪಾರ್ಲರ್‌ನಲ್ಲಿ ನಂದಿನಿ ಬೆಣ್ಣೆಗಾಗಿ ವಿಚಾರಿಸಿದೆ. ಅವರು ನಂದಿನಿ ಇಲ್ಲ ಅಮೂಲ್ ಬೆಣ್ಣೆ ಇದೆ ಎಂದಾಗ ನನಗೆ ಆಘಾತವಾಯಿತು. ನಂದಿನಿಯ ಹೊಟ್ಟೆಯೊಳಗೆ ಅಮೂಲ್ ಎಂಬ ಅನ್ಯ ಪ್ರಾಣಿ ಇದ್ದಕ್ಕಿದ್ದಂತೆ ಪ್ರವೇಶಿಸಿದ್ದಾದರೂ ಹೇಗೆ ಎಂದು ಸೋಜಿಗವಾಯಿತು. ನಮ್ಮಂತಹ ಸಾಮಾನ್ಯರಿಗೆ ಇದರ ಮರ್ಮ ತಿಳಿಯುವುದು ದುಸ್ತರ. ನಾನೀಗ ನಂದಿನಿಯ ಪ್ಯಾಕೆಟ್ ಮೇಲಿನ ಮುದ್ದಾದ ಹಸುವಿನ ಚಿತ್ರ ನೋಡುತ್ತಾ ವಿಷಾದದ ನಿಟ್ಟುಸಿರುಬಿಡುತ್ತಾ ಕುಳಿತಿರುವೆ.

ಚಂದ್ರಶೇಖರ ತಾಳ್ಯ, ಹೊಳಲ್ಕೆರೆ

ಫುಟ್‌ಬಾಲ್ ಪ್ರತಿಕೃತಿ ಮರೆಮಾಚಬೇಕೆ?

ದಾವಣಗೆರೆಯ ವೃತ್ತವೊಂದರಲ್ಲಿರುವ 'ಫುಟ್‌ಬಾಲ್' ಪ್ರತಿಕೃತಿಯನ್ನು ಮರೆಮಾಚಲು ರಾಷ್ಟ್ರೀಯ ಪಕ್ಷವೊಂದು ಆಗ್ರಹಿಸಿರುವ ಸುದ್ದಿ (ಪ್ರ.ವಾ., ಏ. 10) ಓದಿ ಆಶ್ಚರ್ಯವಾಯಿತು. ಈ ಬಾರಿ 'ಫುಟ್‌ಬಾಲ್' ರಾಜಕೀಯ ಪಕ್ಷವೊಂದರ ಚಿಹ್ನೆ ಎಂಬುದು ಅದಕ್ಕೆ ಕಾರಣ. ಇದು ಸರಿ ಎನ್ನುವುದಾದರೆ, ದೈನಂದಿನ ಚಲಾವಣೆಯಲ್ಲಿರುವ, ಹಸ್ತದ ಗುರುತು ಇರುವ ಎರಡು ರೂಪಾಯಿಯ ನಾಣ್ಯವನ್ನು ಏನು ಮಾಡುವುದು? ಏಕೆಂದರೆ ಅದು ಒಂದು ರಾಜಕೀಯ ಪಕ್ಷದ ಚಿಹ್ನೆ. ಜೊತೆಗೆ 'ತೆನೆ ಹೊತ್ತ ಮಹಿಳೆ' ಸಹ ರಾಜಕೀಯ ಪಕ್ಷವೊಂದರ ಚಿಹ್ನೆ ಆಗಿರುವುದರಿಂದ, ರೈತಮಹಿಳೆಯರಿಗೆ ತಮ್ಮ ಜಮೀನಿನಲ್ಲಿ ತೆನೆಯನ್ನು ತಲೆ ಮೇಲೆ ಹೊತ್ತು ಹೋಗಬೇಡಿ ಎನ್ನಲು ಸಾಧ್ಯವೇ? ಹಾಗಾದರೆ ಕ್ರೀಡಾ ಸಾಮಗ್ರಿ ಮಾರಾಟ ಅಂಗಡಿಗಳ ಶೋಕೇಸ್‌ನಲ್ಲಿ ಪ್ರದರ್ಶನಕ್ಕೆ ಇಟ್ಟ ಫುಟ್‌ಬಾಲ್‌ಗಳನ್ನೂ ತೆಗೆಸಬೇಕಾಗುತ್ತದೆ ಅಲ್ಲವೇ?

ಸಿ.ಸಿದ್ದರಾಜು ಆಲಕೆರೆ, ಮಂಡ್ಯ

ಜಪ್ತಿ ವಸ್ತು: ವಿವರ ಬಹಿರಂಗವಾಗಲಿ

ಮತದಾರರಿಗೆ ಅಭ್ಯರ್ಥಿಗಳು ಒಡ್ಡುವ ಪ್ರಲೋಭನೆಗಳನ್ನು ತಡೆಯಲು ಈ ಬಾರಿ, ವಿಧಾನಸಭಾ ಚುನಾವಣೆ ದಿನಾಂಕ ಪ್ರಕಟವಾಗುವ ಸ್ವಲ್ಪ ದಿನಗಳ ಮುಂಚೆಯಿಂದಲೇ, ಮತದಾರರಿಗೆ ಹಂಚಲು ಸಾಗಿಸಲಾಗುತ್ತಿದ್ದ ಸಾಮಾನು ಸರಂಜಾಮು, ನಗದನ್ನು ಜಪ್ತಿ ಮಾಡಲು ಚುನಾವಣಾ ಆಯೋಗ ಕ್ರಮ ಕೈಗೊಂಡಿದ್ದು ಪ್ರಶಂಸನೀಯ. ಪ್ರತೀ ಚುನಾವಣೆ ಕಾಲಕ್ಕೆ ಆಯೋಗ ಇಂತಹ ಕ್ರಮಗಳನ್ನು ಕೈಗೊಳ್ಳುತ್ತದೆ. ಹಲವಾರು ಬಾರಿ ಕ್ರಿಮಿನಲ್ ಪ್ರಕರಣಗಳನ್ನು ಕೂಡ ದಾಖಲಿಸಲಾಗುತ್ತಿದೆ. ಆದರೆ ಸಾರ್ವಜನಿಕರಿಗೆ ಆನಂತರ ಈ ಪ್ರಕರಣಗಳಲ್ಲಿ ಏನು ಕ್ರಮವಾಯಿತು, ಎಷ್ಟು ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಯಿತು ಹಾಗೂ ಎಷ್ಟು ಅಪರಾಧಿಗಳಿಗೆ ಶಿಕ್ಷೆಯಾಯಿತು ಎಂಬುದು ತಿಳಿದುಬರುವುದಿಲ್ಲ.

ಆಯೋಗವು ಪ್ರತೀ ಚುನಾವಣೆ ಕಾಲಕ್ಕೆ, ಹಿಂದಿನ ಚುನಾವಣೆಗಳಲ್ಲಿ ಜಪ್ತಿ ಮಾಡಲಾದ ನಗದು, ವಸ್ತುಗಳು ಹಾಗೂ ದಾಖಲಾದ ಕ್ರಿಮಿನಲ್ ಪ್ರಕರಣಗಳಲ್ಲಿ ಶಿಕ್ಷೆಯಾದ ಕುರಿತು ಸಾರ್ವಜನಿಕರ ಗಮನಕ್ಕೆ ತರುವುದು ಉತ್ತಮ. ಚುನಾವಣಾ ನೀತಿ ಸಂಹಿತೆ ಎನ್ನುವುದು ಚುನಾವಣೆಗಳ ನಂತರ ಮರೆತುಬಿಡುವ ಒಂದು ಪ್ರಹಸನವಾಗಬಾರದು.

ವೆಂಕಟೇಶ ಮಾಚಕನೂರ, ಧಾರವಾಡ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ನಂದಿನಿಗೆ ಅಮೂಲ್ ಮಾರಕವೇ...?

ಪ್ರಜಾವಾಣಿ ವಾರ್ತೆ



ಗುಜರಾತಿನ ಹಾಲು ಉತ್ಪಾದಕರ ಸಹಕಾರ ಸಂಘದ ಬ್ರ್ಯಾಂಡ್ ಅಮೂಲ್, ಕರ್ನಾಟಕದಲ್ಲೂ ಮಾರುಕಟ್ಟೆ ವಿಸ್ತರಿಸಲಿದೆ ಎಂಬುದಕ್ಕೆ ವ್ಯಾಪಕ ವಿರೋಧ ವ್ಯಕ್ತವಾಗುತ್ತಿದೆ. ಕರ್ನಾಟಕ ಹಾಲು ಮಹಾಮಂಡಳ–ಕೆಎಂಎಫ್‌ನ ಬ್ರ್ಯಾಂಡ್ ನಂದಿನಿಗೆ, ಅಮೂಲ್‌ನಿಂದ ಭಾರಿ ಹೊಡೆತ ಬೀಳಲಿದೆ ಎಂದು ಈ ಸ್ವರೂಪದ ವಿರೋಧ ವ್ಯಕ್ತವಾಗುತ್ತಿದೆ. ಅಮೂಲ್‌ನ ಉತ್ಪನ್ನಗಳು ಕರ್ನಾಟಕದಲ್ಲಿ ಹಲವು ವರ್ಷಗಳಿಂದ ಮಾರಾಟವಾಗುತ್ತಿವೆ. ಆದರೆ, ಈಗ ತಾಜಾ ಹಾಲು ಮಾರಾಟಕ್ಕೆ ಮುಂದಾದ ಅಮೂಲ್‌ನ ಕ್ರಮಕ್ಕೆ ಕನ್ನಡಿಗರಿಂದ ವ್ಯಾಪಕ ವಿರೋಧ ವ್ಯಕ್ತವಾಗುತ್ತಿದೆ. ಇದು, ನಂದಿನಿ–ಕೆಎಂಎಫ್ ಅನ್ನು ಮುಗಿಸುವ ಹುನ್ನಾರ ಎಂಬ ಕಳವಳ ವ್ಯಕ್ತವಾಗುತ್ತಿದೆ.

ಈ ವಿರೋಧ ಮತ್ತು ಕಳವಳಕ್ಕೆ ಕಿಡಿ ಹೊತ್ತಿಸಿದ್ದು, ಈಚೆಗೆ ಅಮೂಲ್ ಮಾಡಿದ್ದ ಟ್ವೀಟ್. ಕೆಂಗೇರಿಯಿಂದ ವೈಟ್‌ಫೀಲ್ಡ್‌ವರೆಗೆ ತಾಜಾ ಹಾಲು ದೊರೆಯುತ್ತದೆ ಎಂದು ಅಮೂಲ್ ಈಚೆಗೆ ಟ್ವೀಟ್ ಮಾಡಿತ್ತು. ಸದ್ಯದ ವಿರೋಧಕ್ಕೆ ಈ ಟ್ವೀಟ್ ತಕ್ಷಣದ ಕಾರಣ ಮಾತ್ರ. ಆದರೆ, ಇದಕ್ಕೂ ಹಿಂದೆ ನಡೆದಿದ್ದ ಹಲವು ಬೆಳವಣಿಗೆಗಳು ಈ ವಿರೋಧದ ತೀವ್ರತೆಗೆ ಕಾರಣವಾಗಿವೆ. ಕೇಂದ್ರ ಸರ್ಕಾರವು ಸಹಕಾರ ಸಚಿವಾಲಯವನ್ನು ರಚಿಸಿದ್ದು, ಕೇಂದ್ರ ಸಹಕಾರ ಸಚಿವರಾದ ಅಮಿತ್ ಶಾ ಅವರು ಕೆಎಂಎಫ್ ಮತ್ತು ಅಮೂಲ್ ಒಟ್ಟಾಗಿ ಕೆಲಸ ಮಾಡುವ ಬಗ್ಗೆ ಮಾತನಾಡಿದ್ದು ಕೆಎಂಎಫ್‌ನ ಹಾಲು ಉತ್ಪಾದಕರಲ್ಲಿ ಆತಂಕ ಮೂಡಿಸಿತ್ತು.

ಸಹಕಾರ ತತ್ವದಡಿ ಕಾರ್ಯನಿರ್ವಹಿಸುವ ಸಂಸ್ಥೆ ಕೆಎಂಎಫ್. ಸಹಕಾರವು ರಾಜ್ಯಪಟ್ಟಿಯಲ್ಲಿ ಬರುತ್ತದೆ. ಆದರೆ, 2022ರಲ್ಲಿ ಕೇಂದ್ರದ ಬಿಜೆಪಿ ಸರ್ಕಾರವು ದೇಶದ ಎಲ್ಲಾ ಸಹಕಾರ ಸಂಘಗಳನ್ನು ಒಂದೇ ವೇದಿಕೆ ಅಡಿ ತರುವ ಉದ್ದೇಶದಿಂದ ಸಹಕಾರ ಸಚಿವಾಲಯವನ್ನು ಹೊಸದಾಗಿ ಸೃಷ್ಟಿಸಿತ್ತು. ಕೇಂದ್ರ ಸರ್ಕಾರದ ಈ ಕ್ರಮಕ್ಕೆ ಬಿಜೆಪಿಯೇತರ ಪಕ್ಷಗಳ ಆಡಳಿತವಿರುವ ರಾಜ್ಯ ಸರ್ಕಾರಗಳು ತೀವ್ರ ವಿರೋಧ ವ್ಯಕ್ತಪಡಿಸಿದ್ದವು.

ಅದರ ಬೆನ್ನಲ್ಲೇ 2022ರ ಡಿಸೆಂಬರ್‌ನಲ್ಲಿ, ಸಹಕಾರ ಸಚಿವ ಅಮಿತ್ ಶಾ ಅವರು ಮಂಡ್ಯದ ಗೆಜ್ಜಲಗೆರೆಯಲ್ಲಿ ಡೇರಿ ಉದ್ಘಾಟನೆಗೆ ಬಂದಿದ್ದರು. ‘ಅಮೂಲ್ ಮತ್ತು ನಂದಿನಿ ಒಟ್ಟಾದರೆ ಕರ್ನಾಟಕದ ಹಾಲು ಉತ್ಪಾದಕರಿಗೆ ಹೆಚ್ಚು ಅನುಕೂಲವಾಗಲಿದೆ’ ಎಂದು ಹೇಳಿದ್ದರು. ಅಮೂಲ್ ಮತ್ತು ನಂದಿನಿಯನ್ನು ವಿಲೀನ ಮಾಡುವ ಸೂಚನೆಯಾಗಿಯೇ ಅಮಿತ್ ಶಾ ಈ ಮಾತು ಹೇಳಿದ್ದಾರೆ ಎಂದು ಹಾಲು ಉತ್ಪಾದಕರು, ರೈತ ಸಂಘಟನೆಗಳು ಆತಂಕ ವ್ಯಕ್ತಪಡಿಸಿದ್ದವು. ಈ ಹೇಳಿಕೆ ವಿರುದ್ಧ ರಾಜ್ಯದಾದ್ಯಂತ ತೀವ್ರ ಪ್ರತಿಭಟನೆಯೂ ನಡೆದಿತ್ತು. ಅಮೂಲ್ ಮತ್ತು ನಂದಿನಿಯನ್ನು ವಿಲೀನ ಮಾಡುವ ಪ್ರಸ್ತಾವ ಇಲ್ಲ ಎಂದು ಸರ್ಕಾರ ಸ್ಪಷ್ಟಪಡಿಸಿತ್ತು.

ವಿಲೀನದ ಆತಂಕ ದೂರವಾದ ಕೆಲವೇ ದಿನಗಳಲ್ಲಿ ರಾಜ್ಯದಾದ್ಯಂತ ಹಾಲು ಉತ್ಪಾದನೆ ಕಡಿಮೆಯಾಯಿತು. ಕೆಎಂಎಫ್‌ನ ನಂದಿನಿ ಹಾಲಿನ ಪೂರೈಕೆಯಲ್ಲಿ ವ್ಯತ್ಯಯವಾಯಿತು. ಅದರ ಬೆನ್ನಲ್ಲೇ ಬೆಂಗಳೂರಿನಲ್ಲಿ ಹಾಲು ಮಾರಾಟ ಮಾಡುವ ಬಗ್ಗೆ ಅಮೂಲ್ ಟ್ವೀಟ್ ಮಾಡಿತು. ‘ನಂದಿನಿ ಹಾಲಿನ ಕೊರತೆ ಇದೆ ಎಂದು ನಂಬಿಸಿ, ಅಮೂಲ್ ಹಾಲಿನ ಮಾರಾಟಕ್ಕೆ ಅವಕಾಶ ಸೃಷ್ಟಿಸಲಾಗುತ್ತಿದೆ. ಈ ಮೂಲಕ ಕೆಎಂಎಫ್ ಅನ್ನು ಮುಗಿಸಲು ಸಂಚು ಮಾಡಲಾಗಿದೆ’ ಎಂದು ವಿರೋಧ ಪಕ್ಷಗಳು, ಹಾಲು ಉತ್ಪಾದಕರ ಸಂಘಗಳು, ರೈತ ಸಂಘಗಳು, ಕನ್ನಡ ಭಾಷಾ ಸಂಘಟನೆಗಳು ಆರೋಪಿಸಿದವು. ಕೆಎಂಎಫ್–ನಂದಿನಿ ಉಳಿಸಿ ಎಂಬ ಅಭಿಯಾನವನ್ನೂ ಆರಂಭಿಸಿದವು.

ಆಧಾರ: ಅಮೂಲ್, ಪಿಟಿಐ, ಪಿಐಬಿ

ಮಾರುಕಟ್ಟೆ: ಅಮೂಲ್‌ನದ್ದೇ ಸಿಂಹಪಾಲು

ಭಾರತದಲ್ಲಿ ಬಳಕೆಯಾಗುವ ಹಾಲಿನಲ್ಲಿ ಬ್ರ್ಯಾಂಡೆಡ್ ಹಾಲಿನ ಪ್ರಮಾಣ ಮೂರನೇ ಒಂದರಷ್ಟು ಮಾತ್ರ. ದೇಶದ ಬ್ರ್ಯಾಂಡೆಡ್ ಹಾಲಿನ ಮಾರುಕಟ್ಟೆಯಲ್ಲಿ ಅಮೂಲ್‌ನ ಪಾಲು ಶೇ 63ರಷ್ಟು. ಕೆಎಂಎಫ್ ದೇಶದ ಎರಡನೇ ಅತ್ಯಂತ ದೊಡ್ಡ ಹಾಲು ಉತ್ಪಾದಕ ಸಂಘಟನೆಯಾಗಿದೆ.

ಅಮೂಲ್ ಇಷ್ಟು ದೊಡ್ಡ ಸಂಸ್ಥೆಯಾದರೂ, ದೇಶದ ಎಲ್ಲಾ ಹಾಲು ಉತ್ಪಾದಕ ಸಂಘಟನೆಗಳು ಅದರ ಅಡಿಯಲ್ಲಿ ಕಾರ್ಯನಿರ್ವಹಿಸುವುದಿಲ್ಲ. ಗುಜರಾತ್‌ನ 18 ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳು ಮಾತ್ರವೇ ಅಮೂಲ್‌ನ ಅಡಿಯಲ್ಲಿ ನೇರವಾಗಿ ಕಾರ್ಯನಿರ್ವಹಿಸುತ್ತವೆ. ಆದರೆ 20ಕ್ಕೂ ಹೆಚ್ಚು ರಾಜ್ಯಗಳಲ್ಲಿ ಅಲ್ಲಿನ ಹಾಲು ಉತ್ಪಾದಕರ ಸಹಕಾರ ಸಂಘಗಳ ಸಹಭಾಗಿತ್ವದಲ್ಲಿ ಅಮೂಲ್ ಕಾರ್ಯನಿರ್ವಹಿಸುತ್ತಿದೆ.

ಅಮೂಲ್ ಒಂದು ಬಹುರಾಜ್ಯ ಸಹಕಾರ ಸಂಘಟನೆಯಾಗಿದೆ. ಬಹುರಾಜ್ಯ ಸಹಕಾರ ಸಂಘಗಳು ಒಂದಕ್ಕಿಂತ ಹೆಚ್ಚು ರಾಜ್ಯಗಳಲ್ಲಿ ಸ್ವತಂತ್ರವಾಗಿ ಕಾರ್ಯನಿರ್ವಹಿಸಬಹುದು. ಸಹಕಾರ ನೀತಿ–2002, ಸಹಕಾರ ಕಾಯ್ದೆ–2002 ಮತ್ತು ಸಹಕಾರ ಕಾನೂನು–2002ರಲ್ಲಿ ಈ ಸ್ವರೂಪದ ವಹಿವಾಟಿಗೆ ಯಾವುದೇ ನಿರ್ಬಂಧವಿಲ್ಲ. ಆದರೂ, ಒಂದು ಸಹಕಾರ ಸಂಘದ ಕಾರ್ಯವ್ಯಾಪ್ತಿಯಲ್ಲಿ ಮತ್ತೊಂದು ಸಹಕಾರ ಸಂಘವು ಪ್ರವೇಶಿಸದೇ ಇರುವ ಅಲಿಖಿತ ನಿಯಮವನ್ನು ಪಾಲಿಸಿಕೊಂಡು ಬರಲಾಗಿದೆ.

ದೇಶದ ಬಹುತೇಕ ರಾಜ್ಯಗಳಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘಗಳು ಇವೆ. ಆ ರಾಜ್ಯಗಳಲ್ಲಿ ಅಮೂಲ್ ನೇರವಾಗಿ ಹಾಲು ಸಂಗ್ರಹ, ಸಂಸ್ಕರಣೆ ಮತ್ತು ಮಾರಾಟ ಮಾಡುತ್ತಿಲ್ಲ. ಬದಲಿಗೆ ಆಯಾ ರಾಜ್ಯದ ಸಹಕಾರ ಸಂಘಗಳ ಜತೆಗೆ ಒಪ್ಪಂದ ಮಾಡಿಕೊಂಡು ವಹಿವಾಟು ನಡೆಸುತ್ತಿದೆ. ಕೆಲವು ರಾಜ್ಯಗಳಲ್ಲಿ, ಕೆಲವು ಜಿಲ್ಲಾ ಮಟ್ಟದ ಹಾಲು ಉತ್ಪಾದಕರ ಸಂಘಗಳನ್ನು ಅಮೂಲ್ ನೇರವಾಗಿ ನಿರ್ವಹಣೆ ಮಾಡುತ್ತಿದೆ. ಕೆಲವು ರಾಜ್ಯಗಳಲ್ಲಿ ರಾಜ್ಯ ಮಟ್ಟದ ಸಂಘವನ್ನು ಅಮೂಲ್ ಸಂಪೂರ್ಣವಾಗಿ ನಿರ್ವಹಣೆ ಮಾಡುತ್ತಿದೆ. ಈ ರೀತಿ 25ಕ್ಕೂ ಹೆಚ್ಚು ರಾಜ್ಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರಣದಿಂದಲೇ ಅಮೂಲ್‌ನ ಮಾರುಕಟ್ಟೆ ಪಾಲು ಅತ್ಯಂತ ದೊಡ್ಡದು. ಈ ಸ್ವರೂಪದಲ್ಲಿ ಕೆಎಂಎಫ್ ಜತೆಗೆ ಕಾರ್ಯನಿರ್ವಹಿಸುವ ಬಗ್ಗೆಯೇ ಅಮಿತ್ ಶಾ ಮಾತನಾಡಿದ್ದರು. ಆದಕ್ಕೆ ವಿರೋಧ ವ್ಯಕ್ತವಾದ ಕಾರಣ ಅಮೂಲ್ ಮತ್ತು ಕೆಎಂಎಫ್ ಒಟ್ಟಾಗಿ ಕೆಲಸ ಮಾಡುವ ಪ್ರಸ್ತಾವವನ್ನು ಕೇಂದ್ರ ಸರ್ಕಾರ ಕೈಬಿಟ್ಟಿತ್ತು. ಆದರೆ, ಈಗ ಕರ್ನಾಟಕದಲ್ಲಿ ಆನ್‌ಲೈನ್ ಮೂಲಕ ನೇರವಾಗಿ ತಾಜಾ ಹಾಲು ಮಾರಾಟ ಮಾಡಲು ಅಮೂಲ್ ಮುಂದಾಗಿದೆ.

‘ದಕ್ಷಿಣದಲ್ಲಿ ಮಾರುಕಟ್ಟೆ ವಿಸ್ತರಿಸಬೇಕು’

‘ದಕ್ಷಿಣ ಭಾರತದಲ್ಲೂ ಅಮೂಲ್ ಹಾಲಿನ ಮಾರುಕಟ್ಟೆ ವಿಸ್ತರಿಸಬೇಕು’ ಎಂದು ಅಮೂಲ್‌ನ ಈ ಹಿಂದಿನ ನಿರ್ದೇಶಕರಾಗಿದ್ದ ಆರ್.ಎಸ್.ಸೋಧಿ ಹೇಳಿದ್ದರು. ಅಮೂಲ್ ಮಾರುಕಟ್ಟೆ ವಿಸ್ತರಣಾ ಕಾರ್ಯಯೋಜನೆ ಬಗ್ಗೆ 2020ರಲ್ಲಿ ಅವರು ಮಾತನಾಡಿದ್ದರು. ದಕ್ಷಿಣದಲ್ಲಿ ಮಾರುಕಟ್ಟೆ ವಿಸ್ತರಿಸಬೇಕು ಎಂಬ ಅವರ ಮಾತಿಗೆ ಆಗಲೇ ತೀವ್ರ ಆಕ್ಷೇಪ ವ್ಯಕ್ತವಾಗಿತ್ತು.

‘ನಾವು ಪಶ್ಚಿಮ ಭಾರತದಲ್ಲಿ ವಹಿವಾಟು ಆರಂಭಿಸಿದ್ದೆವು. ನಂತರ ಉತ್ತರದಲ್ಲೂ ಮಾರುಕಟ್ಟೆ ವಿಸ್ತರಿಸಿದೆವು. ಆನಂತರದಲ್ಲಿ ಮಧ್ಯ ಭಾರತಕ್ಕೂ ಅಮೂಲ್ ಅನ್ನು ವಿಸ್ತರಿಸಿದೆವು. ಪೂರ್ವ ಭಾರತದಲ್ಲೂ ದೊಡ್ಡ ಮಾರುಕಟ್ಟೆ ಸೃಷ್ಟಿಸಿದೆವು. ಆದರೆ, ಈವರೆಗೆ ದಕ್ಷಿಣ ಭಾರತಕ್ಕೆ ಮಾತ್ರ ಕಾಲಿಟ್ಟಿಲ್ಲ. ದಕ್ಷಿಣ ಭಾರತದಲ್ಲಿ ಅಮೂಲ್ ಹಾಲಿನ ಮಾರುಕಟ್ಟೆಗೆ ವಿಪುಲ ಅವಕಾಶಗಳಿವೆ. ಬೇರೆ ಯಾರೋ ಆ ಅವಕಾಶವನ್ನು ಬಳಸಿಕೊಳ್ಳುವ ಮುನ್ನ, ನಾವು ಅಲ್ಲಿ ಮಾರುಕಟ್ಟೆ ಹಿಡಿಯಬೇಕು’ ಎಂದು ಹೇಳಿದ್ದರು.

ದೇಶದ ಎಲ್ಲಾ ರಾಜ್ಯಗಳಲ್ಲೂ ಅಮೂಲ್‌ನ ಬೆಣ್ಣೆ, ಚೀಸ್, ಐಸ್‌ಕ್ರೀಂ ಮತ್ತು ಸ್ನ್ಯಾಕ್ಸ್ ಸೇರಿ 26 ಸ್ವರೂಪದ ಉತ್ಪನ್ನಗಳು ಲಭ್ಯವಿವೆ. ದಕ್ಷಿಣ ಭಾರತದ ರಾಜ್ಯಗಳನ್ನು ಹೊರತುಪಡಿಸಿ, ಬೇರೆಲ್ಲಾ ರಾಜ್ಯಗಳಲ್ಲಿ ಅಮೂಲ್‌ನ ತಾಜಾ ಹಾಲು ದೊರೆಯುತ್ತದೆ. ಹೀಗಾಗಿ ಸೋಧಿ ಅವರ ಹೇಳಿಕೆಯು, ಅಮೂಲ್ ತಾಜಾ ಹಾಲಿನ ಮಾರುಕಟ್ಟೆಯನ್ನು ದಕ್ಷಿಣ ಭಾರತದಲ್ಲೂ ವಿಸ್ತರಿಸುವ ಕುರಿತದ್ದೇ ಎಂದು ಕರ್ನಾಟಕ, ಕೇರಳ ಮತ್ತು ತಮಿಳುನಾಡಿನ ಹಾಲು ಉತ್ಪಾದಕರ ಸಹಕಾರ ಸಂಘಗಳು ಹೇಳಿದ್ದವು. ಆ ಹೇಳಿಕೆಗೆ ವಿರೋಧ ವ್ಯಕ್ತಪಡಿಸಿದ್ದವು.

ಆದರೆ, ಆ ಹೇಳಿಕೆಯ ನಂತರ ತೆಲಂಗಾಣ ಮತ್ತು ಆಂಧ್ರಪ್ರದೇಶದಲ್ಲಿ ಅಮೂಲ್ ದೊಡ್ಡಮಟ್ಟದಲ್ಲಿ ಮಾರುಕಟ್ಟೆ ವಿಸ್ತರಣೆಗೆ ಕ್ರಮ ತೆಗೆದುಕೊಂಡಿದೆ. ಈಗ ಕರ್ನಾಟಕದಲ್ಲೂ ತಾಜಾ ಹಾಲು ಮಾರಾಟಕ್ಕೆ ಮುಂದಾಗಿರುವುದು ಇಂಥದ್ದೇ ಒಂದು ಕ್ರಮ ಎಂದು ಅರ್ಥೈಸಲಾಗುತ್ತಿದೆ.

ಆಂಧ್ರದಲ್ಲಿ ಮೇಲುಗೈ



ಕರ್ನಾಟಕದ ರೀತಿ ಆಂಧ್ರಪ್ರದೇಶದಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘಟನೆ ಪ್ರಬಲವಾಗಿಲ್ಲ. ಇಲ್ಲಿ ಹಾಲು ಖರೀದಿ, ಸಂಸ್ಕರಣೆ ಹಾಗೂ ಮಾರಾಟ ಪ್ರಕ್ರಿಯೆಗಳು ಕರ್ನಾಟಕದಷ್ಟು ಯಶಸ್ವಿಯಾಗಿಲ್ಲ. ಇಲ್ಲಿ ಖಾಸಗಿ ಸಂಸ್ಥೆಗಳ ಡೇರಿ ಉತ್ಪನ್ನಗಳೇ ಮಾರುಕಟ್ಟೆಯನ್ನು ಆವರಿಸಿವೆ. ಖಾಸಗಿ ಸಂಸ್ಥೆಗಳ ಹಿಡಿತ ತಪ್ಪಿಸಿ, ರೈತರು ಹಾಗೂ ಗ್ರಾಹಕರಿಗೆ ಅನುಕೂಲ ಕಲ್ಪಿಸುವ ಉದ್ದೇಶದಿಂದ ಆಂಧ್ರಪ್ರದೇಶ ಸರ್ಕಾರವು ಅಮೂಲ್‌ಗೆ ರಾಜ್ಯದಲ್ಲಿ ಮಣೆ ಹಾಕಿದೆ.

ಮುಖ್ಯಮಂತ್ರಿ ಜಗನ್‌ಮೋಹನ್ ರೆಡ್ಡಿ ಅವರು ಅಮೂಲ್‌ನ ಜೊತೆಗೆ ಒಡಂಬಡಿಕೆಯೊಂದಕ್ಕೆ ಸಹಿ ಹಾಕಿದ ಬಳಿಕ ಆಂಧ್ರಪ್ರದೇಶದಲ್ಲಿ ಅಮೂಲ್ ಚಟುವಟಿಕೆಗಳು ಬಿರುಸುಗೊಂಡವು. ಅಮೂಲ್ ಸಂಸ್ಥೆಯು ಆಂಧ್ರ ಪ್ರದೇಶದ ರೈತರಿಂದ ಹಾಲು ಖರೀದಿಸುತ್ತದೆ. ಸಂಸ್ಕರಿಸಿದ ಹಾಲನ್ನು ರಾಜ್ಯದ ಅಂಗನವಾಡಿ ಮಕ್ಕಳಿಗೆ ಪೂರೈಸುತ್ತದೆ. ಅಮೂಲ್ ಹಾಲನ್ನು ರಾಜ್ಯ ಸರ್ಕಾರವೇ ಖರೀದಿಸಿ ಅಂಗನವಾಡಿ ಮಕ್ಕಳಿಗೆ ನೀಡುತ್ತದೆ.

ಈ ಯೋಜನೆಯ ಭಾಗವಾಗಿ, ರಾಜ್ಯದ ಪ್ರಕಾಶಂ, ಕೃಷ್ಣಾ, ಗುಂಟೂರು ಸೇರಿದಂತೆ ಏಳು ಜಿಲ್ಲೆಗಳಲ್ಲಿ ಅಮೂಲ್ ಹಾಲು ಖರೀದಿ ಮಾಡುತ್ತಿದೆ. ಮುಂದಿನ ದಿನಗಳಲ್ಲಿ ಉತ್ತರ ಕರಾವಳಿ ಜಿಲ್ಲೆಗಳಲ್ಲೂ ಖರೀದಿ ಪ್ರಕ್ರಿಯೆ ಆರಂಭವಾಗಲಿದೆ. ನೂಜಿವೀಡು ಎಂಬಲ್ಲಿ ಹಾಲು ಸಂಸ್ಕರಣಾ ಘಟಕವನ್ನು ಅಮೂಲ್ ತೆರೆದಿದೆ. ಈ ಘಟಕವು ದಿನಕ್ಕೆ 50,000 ಲೀಟರ್ ಹಾಲು ಸಂಸ್ಕರಣೆ ಸಾಮರ್ಥ್ಯ ಹೊಂದಿದೆ. ಮುಂದಿನ ದಿನಗಳಲ್ಲಿ ಒಂಗೋಲ್ ಹಾಗೂ ಇತರ ಕಡೆಗಳಲ್ಲೂ ಸಂಸ್ಕರಣಾ ಘಟಕಗಳನ್ನು ಅಮೂಲ್ ತೆರೆಯಲಿದೆ. ಈ ಯೋಜನೆಯಡಿ, ರಾಜ್ಯದಲ್ಲಿ 11,690 ಹಾಲು ಖರೀದಿ ಕೇಂದ್ರಗಳು ಹಾಗೂ 4,900 ಹಾಲು ಶೀತಲೀಕರಣ ಘಟಕಗಳು ನಿರ್ಮಾಣವಾಗಲಿವೆ ಎಂದು ಒಡಂಬಡಿಕೆಗೆ ಸಹಿ ಹಾಕುವ ವೇಳೆ ಸರ್ಕಾರ ಹೇಳಿತ್ತು.

ರಾಜ್ಯದಲ್ಲಿ ಅಮೂಲ್‌ಗೆ ಇಷ್ಟರಮಟ್ಟಿಗೆ ಕೆಂಪುಹಾಸು ಹಾಸಿರುವ ಜಗನ್ ಸರ್ಕಾರದ ನಡೆಯ ಹಿಂದೆ ರಾಜಕೀಯದ ವಾಸನೆ ಇದೆ ಎನ್ನಲಾಗಿದೆ. ತಮ್ಮ ಎದುರಾಳಿ ಚಂದ್ರಬಾಬು ನಾಯ್ಡು ಅವರ ಒಡೆತನದ ‘ಹೆರಿಟೇಜ್’ ಎಂಬ ಖಾಸಗಿ ಸಂಸ್ಥೆಯನ್ನು ಗುರಿಯಾಗಿಸಿಕೊಂಡು ಜಗನ್ ಅವರು ಅಮೂಲ್‌ಗೆ ಹೆಚ್ಚಿನ ಪ್ರಾಶಸ್ತ್ಯ ನೀಡುತ್ತಿದ್ದಾರೆ ಎಂಬ ಆರೋಪಗಳು ಕೇಳಿಬಂದಿವೆ.

ತೆಲಂಗಾಣದಲ್ಲಿ ರತ್ನಗಂಬಳಿ

ಆಂಧ್ರದಂತೆ ತೆಲಂಗಾಣ ರಾಜ್ಯದಲ್ಲೂ ಅಮೂಲ್ ಕಾರ್ಯಾಚರಣೆಗೆ ಸಮಸ್ಯೆಗಳೇ ಇಲ್ಲ. ದಕ್ಷಿಣದ ಪ್ರಮುಖ ರಾಜ್ಯವಾಗಿರುವ ತೆಲಂಗಾಣದಲ್ಲಿ, ಅಲ್ಲಿನ ರಾಜ್ಯ ಸರ್ಕಾರವು ಅಮೂಲ್‌ಗೆ ರತ್ನಗಂಬಳಿ ಹಾಸಿ ಸ್ವಾಗತಿಸಿದೆ. ರಾಜ್ಯದಲ್ಲಿ ಬಂಡವಾಳ ಹೂಡಿಕೆಯ ಒಪ್ಪಂದಕ್ಕೆ ಅಮೂಲ್ ಜೊತೆ ತೆಲಂಗಾಣ ಸರ್ಕಾರ ಸಹಿ ಹಾಕಿದೆ. ಈ ಒಪ್ಪಂದದಿಂದಾಗಿ ತೆಲಂಗಾಣದಲ್ಲಿ ಅಮೂಲ್ ಚಟುವಟಿಕೆಗಳು ಸರಾಗವಾಗಿ ಸಾಗುತ್ತಿವೆ. 2021ರ ಡಿಸೆಂಬರ್‌ನಲ್ಲಿ ಮಾಡಿಕೊಂಡ ಒಪ್ಪಂದದ ಪ್ರಕಾರ, ಅಮೂಲ್ ಸಂಸ್ಥೆಯು ತೆಲಂಗಾಣದಲ್ಲಿ ₹500 ಕೋಟಿ ಹೂಡಿಕೆ ಮಾಡಲಿದೆ. ಮೊದಲ ಹಂತದಲ್ಲಿ ₹300 ಕೋಟಿ ಹಾಗೂ ಎರಡನೇ ಹಂತದಲ್ಲಿ ₹200 ಕೋಟಿ ಹೂಡಿಕೆ ಮಾಡುವುದಾಗಿ ಸಂಸ್ಥೆ ಭರವಸೆ ನೀಡಿದೆ.

ತೆಲಂಗಾಣದಲ್ಲಿ ದೇಶದಲ್ಲೇ ಅತಿದೊಡ್ಡ ಸಂಸ್ಕರಣಾ ಘಟಕವನ್ನು ಸ್ಥಾಪಿಸುವುದಾಗಿ ಅಮೂಲ್ ಹೇಳಿದೆ. ಇಲ್ಲಿ ನಿರ್ಮಾಣವಾಗುವ ಘಟಕವು ದಿನವೊಂದಕ್ಕೆ 5 ಲಕ್ಷ ಲೀಟರ್ ಹಾಲು ಸಂಸ್ಕರಣೆ ಮಾಡುವ ಸಾಮರ್ಥ್ಯ ಹೊಂದಿರಲಿದೆ. ಈ ಸಾಮರ್ಥ್ಯವನ್ನು 10 ಲಕ್ಷ ಲೀಟರ್‌ಗೆ ವಿಸ್ತರಿಸಲು ಸಾಧ್ಯವಾಗುವ ರೀತಿಯಲ್ಲಿ ಘಟಕವನ್ನು ಅಮೂಲ್ ನಿರ್ಮಿಸುತ್ತಿದೆ. ಇಡೀ ದಕ್ಷಿಣ ಭಾರತಕ್ಕೆ ಈ ಬೃಹತ್ ಘಟಕದಿಂದ ಹಾಲು ಹಾಗೂ ಇತರೆ ಡೇರಿ ಉತ್ಪನ್ನಗಳನ್ನು ಸರಬರಾಜು ಮಾಡಲು ಅಮೂಲ್ ಯೋಜನೆ ಹಾಕಿಕೊಂಡಿದೆ ಎನ್ನಲಾಗಿದೆ. ಮುಂದಿನ ದಿನಗಳಲ್ಲಿ ಕರ್ನಾಟಕಕ್ಕೂ ತೆಲಂಗಾಣದ ಘಟಕದಿಂದಲೇ ಹಾಲು ಪೂರೈಕೆಯಾಗಲಿದೆ ಎನ್ನಲಾಗಿದೆ.

ಘಟಕ ಸ್ಥಾಪನೆಯಾದ ಬಳಿಕ, ತೆಲಂಗಾಣದ ಹಾಲು ಉತ್ಪಾದಕರು, ಸಹಕಾರಿ ಸಂಘಗಳಿಂದ ನೇರವಾಗಿ ಹಾಲು ಖರೀದಿ ಮಾಡುವುದಾಗಿ ಅಮೂಲ್ ಭರವಸೆ ನೀಡಿದೆ.

‘ಭಾರತ ಒಂದು ಮುಕ್ತ ಮಾರುಕಟ್ಟೆ’

ನಂದಿನಿಗೆ ಸಂಬಂಧಿಸಿ ಈಗ ನಡೆಯುತ್ತಿರುವ ವಿವಾದವು ‘ಅಮೂಲ್ ವರ್ಸಸ್ ನಂದಿನಿ’ ಅಲ್ಲ. ಬದಲಿಗೆ ‘ಅಮೂಲ್ ಮತ್ತು ನಂದಿನಿ’ ಎಂದು ಅಮೂಲ್‌ನ ವ್ಯವಸ್ಥಾಪಕ ನಿರ್ದೇಶಕ ಜಯೇನ್ ಮೆಹ್ತಾ ಹೇಳಿದ್ದಾರೆ. ಭಾರತ ಒಂದು ಮುಕ್ತ ಮಾರುಕಟ್ಟೆ. ದೇಶದ ಎಲ್ಲೆಡೆ ಎಲ್ಲರೂ ಮಾರಾಟ ಮಾಡಬಹುದು ಎಂದು ಅವರು ‘ಪ್ರಜಾವಾಣಿ’ಗೆ ನೀಡಿದ ಸಂದರ್ಶನದಲ್ಲಿ ಅಭಿಪ್ರಾಯಪಟ್ಟಿದ್ದಾರೆ

● ಪವನ್ ಕುಮಾರ್ ಎಚ್.



ಪ್ರಜಾವಾಣಿ ಸಂದರ್ಶನ

ಜೆ.ಮೆಹ್ತಾ, ಅಮೂಲ್ ಎಂ.ಡಿ.

● **ಒಂದು ರಾಜ್ಯದ ಹಾಲು ಉತ್ಪಾದಕರ ಒಕ್ಕೂಟವು, ಬೇರೆ ರಾಜ್ಯದಲ್ಲಿ ಸ್ಪರ್ಧೆಗೆ ಇಳಿಯುವುದಿಲ್ಲ ಎಂಬ ಅಲಿಖಿತ ನಿಯಮವಿದೆ. ಹೀಗಿದ್ದೂ, ಅಗತ್ಯಕ್ಕಿಂತ ಹೆಚ್ಚು ಹಾಲು ಉತ್ಪಾದನೆಯಾಗುತ್ತಿರುವ ಕರ್ನಾಟಕದಲ್ಲಿ ಅಮೂಲ್ ತಾಜಾ ಹಾಲು ಮತ್ತು ಮೊಸರು ಮಾರಾಟಕ್ಕೆ ಮುಂದಾಗುತ್ತಿರುವುದೇಕೆ?**

ಭಾರತ ಒಂದು ಮುಕ್ತ ಮಾರುಕಟ್ಟೆ. ಯಾವುದೇ ಉತ್ಪಾದಕ/ತಯಾರಕ ದೇಶದಲ್ಲಿ ಎಲ್ಲಿ ಬೇಕಾದರೂ ತನ್ನ ಉತ್ಪನ್ನವನ್ನು ಮಾರಾಟ ಮಾಡಬಹುದು. ಅಂತಹ ವ್ಯಾಪಾರವನ್ನು ವಿರೋಧಿಸಬಾರದು. ತಮಗೆ ಏನು ಬೇಕು ಮತ್ತು ತಾವು ಏನನ್ನು ಖರೀದಿಸಬೇಕು ಎಂಬುದನ್ನು ಗ್ರಾಹಕ ನಿರ್ಧರಿಸುತ್ತಾನೆ. ಅಮೂಲ್ ಮತ್ತು ಕೆಎಂಎಫ್ ಎರಡೂ ಒಕ್ಕೂಟಗಳು ರೈತರ ಲಾಭಕ್ಕಾಗಿಯೇ ದುಡಿಯುತ್ತಿವೆ.

● **ಅಮೂಲ್ ಜೊತೆ ನಂದಿನಿ ವಿಲೀನವಾಗಲಿದೆಯೇ?**

ವಿಲೀನದ ಪ್ರಶ್ನೆಯೇ ಇಲ್ಲ. ಎರಡೂ ರಾಜ್ಯಗಳ ಸಹಕಾರಿ ಕಾಯ್ದೆಗಳ ಅಡಿಯಲ್ಲಿ ಸಂಸ್ಥೆಗಳು ಸ್ಥಾಪನೆಯಾಗಿದ್ದು, ರೈತರ ಶ್ರೇಯೋಭಿವೃದ್ಧಿಗಾಗಿ ಇವು ಕೆಲಸ ಮಾಡುತ್ತಿವೆ. ಆದರೆ, ಕರ್ನಾಟಕದಲ್ಲಿ ಅಮೂಲ್ ಅನ್ನು ನಂದಿನಿಯ ಪ್ರತಿಸ್ಪರ್ಧಿ ಎಂಬಂತೆ ಬಿಂಬಿಸುತ್ತಿರುವುದು ದುರದೃಷ್ಟಕರ. ನಂದಿನಿಯು ಪ್ರೀಮಿಯಂ ಹಾಲನ್ನು ₹44ಕ್ಕೆ ನೀಡುತ್ತಿದೆ. ಆದರೆ ಅಮೂಲ್‌ನ ಟೋನ್ಡ್ ಹಾಲಿನ ದರ ₹54 ಇದೆ. ಅಮೂಲ್‌ನ ಮೊಸರಿನ ಬೆಲೆ ₹66 ಇದ್ದರೆ, ನಂದಿನಿ ₹46ಕ್ಕೆ ನೀಡುತ್ತಿದೆ. ಆದರೆ ನಂದಿನಿಗೆ ಅಮೂಲ್ ಸ್ಪರ್ಧಿ ಅಲ್ಲ. ಮುಂದಿನ ದಶಕ ಅಥವ ಅದಕ್ಕೂ ಮುಂಚೆ ನಾವು ಕೆಎಂಎಫ್ ಜೊತೆ ಸ್ಪರ್ಧೆ ಮಾಡಲು ಸಾಧ್ಯವಾಗುವುದಿಲ್ಲ.



● **ಬೆಂಗಳೂರಿನಲ್ಲಿ ತಾಜಾ ಹಾಲು ಪೂರೈಸುವ ಕುರಿತು ಅಮೂಲ್ ನೀಡಿದ ಜಾಹೀರಾತಿಗೆ ಕರ್ನಾಟಕದಲ್ಲಿ ತೀವ್ರ ವಿರೋಧ ವ್ಯಕ್ತವಾಗಿದೆ. ಕರ್ನಾಟಕದ ದೈನಂದಿನ ಮಾರುಕಟ್ಟೆಗೆ ಅಮೂಲ್ ಲಗ್ಗೆಯಿಡಲಿದೆಯೇ?**

2015ರಿಂದಲೂ ಅಮೂಲ್ ಕರ್ನಾಟಕದ ಮಾರುಕಟ್ಟೆಯಲ್ಲಿದೆ. ಬೆಳಗಾವಿ ಹಾಗೂ ಧಾರವಾಡ ಜಿಲ್ಲೆಗಳಲ್ಲಿ ನಿತ್ಯ 6ರಿಂದ 8 ಸಾವಿರ ಲೀಟರ್ ಹಾಲು ಮಾರಾಟವಾಗುತ್ತಿದೆ. ಈ ಎರಡೂ ಜಿಲ್ಲೆಗಳಲ್ಲಿ ನಂದಿನಿ ಮಾರಾಟ ಮಾಡುವ 1.35 ಲಕ್ಷ ಲೀಟರ್‌ಗೆ ಹೋಲಿಸಿದರೆ ಅಮೂಲ್‌ನ ಪ್ರಮಾಣ ನಗಣ್ಯ. ಇ–ಮಾರುಕಟ್ಟೆ ಮೂಲಕ ಬೆಂಗಳೂರಿನ ಜನರು ಇನ್ನುಮುಂದೆ ತಾಜಾ ಹಾಲು, ಮೊಸರು ಪಡೆಯಬಹುದು ಎಂಬುದನ್ನು ತಿಳಿಸುವುದಷ್ಟೇ ಸಾಮಾಜಿಕ ಜಾಲತಾಣ ಪೋಸ್ಟ್‌ನ ಉದ್ದೇಶವಾಗಿತ್ತು. ಇದಕ್ಕೆ ಬೇಡಿಕೆಯೂ ಇತ್ತು.

● **ಅಮೂಲ್–ಕೆಎಂಎಫ್ ಪರಸ್ಪರ ಸಹಕಾರದಿಂದ ಹಾಗೂ ಜೊತೆಯಾಗಿ ಇರಲಿವೆ ಎಂಬ ನಿಮ್ಮ ಮಾತಿನ ಅರ್ಥವೇನು?**

ಅಮೂಲ್ ಹಾಗೂ ಕೆಎಂಎಫ್ ನಡುವೆ ಆರೋಗ್ಯಕರ ಸಂಬಂಧವಿದೆ. ಬೆಂಗಳೂರು, ಹಾಸನ, ಬಳ್ಳಾರಿಯ ಕೆಎಂಎಫ್ ಮದರ್ ಡೇರಿಗಳಲ್ಲಿ 1998ರಿಂದ ಅಮೂಲ್ ಐಸ್‌ಕ್ರೀಂ ತಯಾರಿಸಲಾಗುತ್ತಿದೆ. ಹಾಗೆಯೇ ಎರಡು ವರ್ಷಗಳ ಹಿಂದೆ ಕೆಎಂಎಫ್ ಹೆಚ್ಚುವರಿ ಹಾಲನ್ನು ಅಮೂಲ್‌ಗೆ ಪೂರೈಸಲಾಗಿತ್ತು. ಕೆಎಂಎಫ್‌ನಲ್ಲಿ ಸುವಾಸಿತ ಹಾಲು ಉತ್ಪಾದನೆಗೆ ಅಮೂಲ್ ಘಟಕದಿಂದ ನೆರವು ನೀಡಲಾಗಿತ್ತು. ಎರಡೂ ಸಂಸ್ಥೆಗಳು ಜೊತೆಯಾಗಿ ಹಾಗೂ ನಿಕಟವಾಗಿ ಕೆಲಸ ಮಾಡುತ್ತಿವೆ ಎಂಬುದಕ್ಕೆ ಇವು ಕೆಲವು ನಿದರ್ಶನಗಳು ಮಾತ್ರ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಕೋಲ್ಕತ್ತದ ಪ್ರೆಸಿಡೆನ್ಸಿ ವಿಶ್ವವಿದ್ಯಾಲಯದ ಆವರಣದಲ್ಲಿ ಇಫ್ತಾರ್ ಕೂಟವನ್ನು ಆಯೋಜಿಸಲಾಗಿದ್ದು, ಇದೇ ಜಾಗದಲ್ಲಿ ಸರಸ್ವತಿ ಪೂಜೆಗೆ ವಿಶ್ವವಿದ್ಯಾಲಯ ಅನುಮತಿ ನೀಡಿರಲಿಲ್ಲ ಎಂದು ಹೇಳಲಾಗುವ ಪೋಸ್ಟ್‌ಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ. ಪಶ್ಚಿಮ ಬಂಗಾಳದ ಕೆಲವು ಬಿಜೆಪಿ ಮುಖಂಡರು ಈ ಕುರಿತಂತೆ ಟ್ವೀಟ್ ಮಾಡಿದ್ದು, ವಿಶ್ವವಿದ್ಯಾಲಯವು ಹಿಂದೂಗಳ ಭಾವನೆಗೆ ಧಕ್ಕೆ ತಂದಿದೆ ಎಂದು ಆರೋಪಿಸಿದ್ದಾರೆ. ಇಫ್ತಾರ್ ಕೂಟಕ್ಕೆ ಸಂಬಂಧಿಸಿದ ಚಿತ್ರಗಳನ್ನು ಟ್ವಿಟರ್‌ನಲ್ಲಿ ಹಂಚಿಕೊಳ್ಳಲಾಗಿದೆ. ಆದರೆ ಈ ಆರೋಪ ಸುಳ್ಳು.



ವಿಶ್ವವಿದ್ಯಾಲಯಕ್ಕೆ ಸಮೀಪದ ಈಡನ್ ಹಿಂದೂ ಹಾಸ್ಟೆಲ್‌ನಲ್ಲಿ ಇಫ್ತಾರ್ ಕೂಟ ಆಯೋಜಿಸಲಾಗಿತ್ತೇ ವಿನಾ ವಿಶ್ವವಿದ್ಯಾಲಯದ ಆವರಣದಲ್ಲಿ ಅಲ್ಲ ಎಂದು ‘ಇಂಡಿಯಾ ಟುಡೇ’ ವರದಿ ಮಾಡಿದೆ. ಜಾತ್ಯತೀತ ನಿಲುವಿನ ಕಾರಣ ನೀಡಿ, ವಿಶ್ವವಿದ್ಯಾಲಯದ ಆವರಣದಲ್ಲಿ ಸರಸ್ವತಿ ಪೂಜೆ ನಡೆಸಲು ಆಡಳಿತ ಅನುಮತಿ ನೀಡಿರಲಿಲ್ಲ. ಹಾಗೆಯೇ ಇಫ್ತಾರ್ ಕೂಟವೂ ಆವರಣದಲ್ಲಿ ನಡೆದಿಲ್ಲ. ಇದೇ ಹಾಸ್ಟೆಲ್‌ನಲ್ಲಿ ಪ್ರತೀ ವರ್ಷ ಸರಸ್ವತಿ ಪೂಜೆ ಹಾಗೂ ಇಫ್ತಾರ್ ಕೂಟಗಳನ್ನು ಆಯೋಜಿಸಲಾಗುತ್ತಿದೆ. ಆದರೆ, ವಿಶ್ವವಿದ್ಯಾಲಯ ಆವರಣದಲ್ಲಿ ಇಫ್ತಾರ್ ಕೂಟಕ್ಕೆ ಅನುಮತಿ ನೀಡಲಾಗಿದೆ ಎಂದು ತಪ್ಪಾಗಿ ಬಿಂಬಿಸಲಾಗುತ್ತಿದೆ ಎಂದು ಇಂಡಿಯಾ ಟುಡೇ ವರದಿ ಮಾಡಿದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ಅನ್ಯೋನ್ಯ ಸಂಬಂಧಿಗಳು

ಸೃಷ್ಟಿ ಚೋದನೆಗಳಿಂ ನರನೊಳಿಷ್ಟಗಳುದಯ |
ವಿಷ್ಟಸಿದ್ಧಿಗೆ ಯಂತ್ರತಂತ್ರಗಳ ಯುಕ್ತಿ ||
ತ್ವಷ್ಟೃ ಕುಶಲದೆ ಸೃಷ್ಟಿವಿಕೃತಿ: ಇಂತನ್ಯೋನ್ಯ |
ಸ್ಪೃಷ್ಟರ್ ಪೃಕೃತಿ ನರರು – ಮಂಕುತಿಮ್ಮ || 860 ||

ಪದ-ಅರ್ಥ: ಸೃಷ್ಟಿ ಚೋದನೆಗಳಿಂ = ಸೃಷ್ಟಿ + ಚೋದನೆಗಳಿಂ (ಪ್ರಚೋದನೆಗಳಿಂದ), ನರನೊಳಿಷ್ಟಗಳುದಯ = ನರನೊಳ್(ಮನುಷ್ಯನಲ್ಲಿ) + ಇಷ್ಟಗಳ + ಉದಯ, ವಿಷ್ಟಸಿದ್ಧಿಗೆ = ವಿಷ್ಟ(ಇಷ್ಟ) + ಸಿದ್ಧಿಗೆ, ತ್ವಷ್ಟೃಕುಶಲದೆ = ತ್ವಷ್ಟೃ (ಬ್ರಹ್ಮ) + ಕುಶಲದೆ(ಕೌಶಲದಿಂದ), ಇಂತನ್ಯೋನ್ಯ = ಇಂತು + ಅನ್ಯೋನ್ಯ, ಸ್ಪೃಷ್ಟರ್ = ಸ್ಪರ್ಶಿಸಿದವರು.

ವಾಚ್ಯಾರ್ಥ: ಪೃಕೃತಿಯ ಪ್ರಚೋದನೆಯಿಂದ ಮನುಷ್ಯರಲ್ಲಿ ಆಸೆಗಳ ಉದಯ. ಆ ಇಷ್ಟಗಳ ಸಿದ್ಧಿಗಾಗಿ ಯಂತ್ರ- ತಂತ್ರಗಳ ಬಳಕೆ. ಅವುಗಳಿಂದ ಸೃಷ್ಟಿಯ ವಿಕೃತಿ. ಹೀಗೆ ಪ್ರಕೃತಿ ಮತ್ತು ಮನುಷ್ಯರು ಅನ್ಯೋನ್ಯ ಸಂಬಂಧಿಗಳು.

ವಿವರಣೆ: ಮರದಲ್ಲಿ ಹಣ್ಣಾದ ಹಣ್ಣು ಅದನ್ನು ನೋಡುವವನಲ್ಲಿ ಪಡೆಯುವ ಆಸೆಯನ್ನು ಹುಟ್ಟಿಸುತ್ತದೆ. ದೂರದ ಸುಂದರ ಪರ್ವತ, ಅದನ್ನು ಆರೋಹಿಸಲು ಆಹ್ವಾನ ನೀಡುತ್ತದೆ. ಒಂದು ರೀತಿಯಲ್ಲಿ ಪ್ರಪಂಚದ ವಿವಿಧ ಸೊಬಗು-ಸುಂದರತೆಗಳು ಮನುಷ್ಯನನ್ನು ಹುಚ್ಚಿಗೆಬ್ಬಿಸಿ ಕೆರಳಿಸುತ್ತವೆ. ಪ್ರಕೃತಿ ತನ್ನ ಒನಪು ವಯ್ಯಾರದಿಂದ ಎಲ್ಲರ ಮನಸ್ಸನ್ನು ಸೆಳೆದು ದಾರಿ ತಪ್ಪಿಸುತ್ತದೆ. ಒಂದು ಬಾರಿ ಮನುಷ್ಯ ಆಸೆಯ ಸೆಳೆತಕ್ಕೆ ಸಿಕ್ಕನೋ, ಅದನ್ನು ಪಡೆಯುವವರೆಗೆ ವಿಶ್ರಮಿಸಲಾರ. ಅದಕ್ಕಾಗಿ ಏನೇನೋ ಪ್ರಯತ್ನಗಳನ್ನು ಮಾಡುತ್ತಾನೆ. ಆಸೆಯ ಪೂರ್ತಿಗಾಗಿ ತರತರಹದ ಯಂತ್ರ- ತಂತ್ರಗಳನ್ನು ಮಾಡುತ್ತಾನೆ. ಭೂಗರ್ಭದಲ್ಲಿರುವ ಬಂಗಾರವನ್ನು ಅಗೆಯುತ್ತಾನೆ, ಪಾತಾಳದಲ್ಲಿಯ ನೀರನ್ನು ಹೊರತರುತ್ತಾನೆ. ವಾತಾವರಣದಲ್ಲಿಯ ಆಮ್ಲಜನಕವನ್ನು ಹಿಡಿದು ಕಟ್ಟಿ ಹಾಕುತ್ತಾನೆ. ಮುಂದೆಂದೋ ಕರಗಿ ಹೋಗಬಹುದಾದ ಈ ಭೂಮಿಯ ನಶ್ವರತೆಯಿಂದ ಪಾರಾಗಿ ಶಾಶ್ವತತೆ ಪಡೆಯಲು ಮಂಗಳಗ್ರಹದ ಮೇಲ್ಮೈಯನ್ನು ಪರೀಕ್ಷಿಸುತ್ತಾನೆ. ಅದಕ್ಕಾಗಿ ಅಂತರಿಕ್ಷಯಾನಗಳನ್ನು ನಡೆಸುತ್ತಾನೆ. ಈ ಯಂತ್ರ-ತಂತ್ರಗಳ ಅನ್ವೇಷಣೆಯಲ್ಲಿ ಮತ್ತು ಬಳಕೆಯಲ್ಲಿ ಪ್ರಕೃತಿ ನಾಶವೂ ಆಗುತ್ತದೆ. ಇದೆಂಥ ವಿಚಿತ್ರ! ಭಗವಂತನ ಸೃಷ್ಟಿ ಪ್ರಕೃತಿ. ಆ ಪ್ರಕೃತಿ ಪ್ರಚೋದಿಸುವ ರೀತಿಯಿಂದ ಮನುಷ್ಯನ ಆಸೆಗಳು ಕೆರಳುತ್ತವೆ. ಆ ಆಸೆಗಳನ್ನು ಪೂರೈಸಿಕೊಳ್ಳಲೇಬೇಕೆಂದು ಹೊರಟ ಮನುಷ್ಯ ಅನೇಕ ಉಪಾಯಗಳನ್ನು, ಕಾರ್ಯಗಳನ್ನು ಮಾಡುತ್ತಾನೆ. ಆ ಕಾರ್ಯಗಳಿಂದ ಪ್ರಕೃತಿ ನಾಶ, ಪ್ರಕೃತಿಯ ವಿಕೃತಿಯಾಗುತ್ತದೆ. ಹೀಗೆ ಪ್ರಕೃತಿ ಮತ್ತು ಮನುಷ್ಯರು ಅನ್ಯೋನ್ಯ ಸಂಬಂಧಿಗಳು ಎನ್ನುತ್ತದೆ ಕಗ್ಗ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಮಂಗಳವಾರ ಏಪ್ರಿಲ್ 11, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ವಸಂತ ಋತು ತಿಥಿ: ಚೈತ್ರ ಬಹುಳ ಪಂಚಮಿ ಗಂ. 07-18, ಷಷ್ಠಿ ಗಂ. 29-40 ನಕ್ಷತ್ರ: ಜ್ಯೇಷ್ಠ ಗಂ. 12-58 ಯೋಗ: ವರಿಯಾನ್ ಗಂ.17-52, ಕರಣ: ತೈತಿಲ ಗಂ. 07-18, ಮೀನ ಮಾಸದ 27 ನೇ ದಿನ, ಮಳೆನಕ್ಷತ್ರ: ರೇವತಿ 4 ರಾಹುಕಾಲ : ಮಧ್ಯಾಹ್ನ 03-00 -04-30
ಸೂರ್ಯೋದಯ : 06-23 ಸೂರ್ಯಾಸ್ತ : 06-40
ಮುಸ್ಲಿಂ ದಿನಾಂಕ : 19 ರಂಜಾನ್
ಅದೃಷ್ಟ ಸಂಖ್ಯೆ : 4, 9

ಮೇಷ: ಹಠಮಾರಿತನದಿಂದ ಮಕ್ಕಳ ಪ್ರತಿಯೊಂದು ಹೆಜ್ಜೆಗೂ ವಿವಿಧ ಕಾರಣಗಳನ್ನು ನೀಡಿ ಅವರನ್ನು ಅಸಮಧಾನ ಪಡಿಸಲು ಹೋಗಬೇಡಿ. ಅಪವಾದಗಳಿಗೆ ಹೆದರಿ ಯಾವುದೇ ಹೊಸ ಕೆಲಸ ಪ್ರಾರಂಭಿಸದೆ ಇರಬೇಡಿ.

ವೃಷಭ: ಕಾರ್ಯವನ್ನು ಶುರು ಮಾಡಿದ ನಂತರ ಪದೇ ಪದೇ ನಿಲ್ಲಿಸುವಂತಹ ಸನ್ನಿವೇಶಗಳು ಎದುರಾಗುತ್ತಲೇ ಇರುತ್ತವೆ. ವಿನಾಶಕಾರಿ ಪ್ರವೃತ್ತಿಗಳನ್ನು ದ್ವೇಷಿಗಳೇ ಆಗಿದ್ದರೂ ಪ್ರಯೋಗಿಸುವ ಯೋಚನೆ ಮಾಡದಿರಿ.

ಮಿಥುನ: ವೈವಾಹಿಕ ಜೀವನದ ಆರಂಭಿಕ ಭಾಗದವರು ಧೈರ್ಯದಿಂದ ಎಲ್ಲವನ್ನು ಎದುರಿಸುವ ಮನಸ್ಥಿತಿಯನ್ನು ಬೇಗ ಹೊಂದಬೇಕು. ಸಣ್ಣ ಹಾಗೂ ಮಧ್ಯಮ ಪ್ರಮಾಣದ ರೈತವರ್ಗಕ್ಕೆ ಶುಭಸುದ್ದಿ ದೊರೆಯಲಿದೆ.

ಕರ್ಕಾಟಕ: ಸ್ಟಾರ್ಟಪ್‌ಗಳನ್ನು ಪ್ರಾರಂಭ ಮಾಡಬೇಕೆಂದು ಯೋಜನೆ ಹೊಂದಿರುವವರು ಸಮಾನ ಮನಸ್ಕರೊಂದಿಗೆ ಕೂತು ಸಮಾಲೋಚನೆ ನಡೆಸಿ. ವ್ಯಾಜ್ಯ ಮನೆಯಿಂದ ಹೊರಗೆ ಹೋಗುವುದು ಸರಿಯಲ್ಲ.

ಸಿಂಹ: ಭಾವನಾತ್ಮಕವಾಗಿ ವರ್ತಿಸಿದಾಗ ಪರಿಹಾರವಾಗದ ಸಂಗಾತಿಯೊಂದಿಗಿನ ಮುನಿಸು ಶಾಂತವಾಗಿದ್ದು ತಾಳ್ಮೆಯಿಂದ ಕಾದರೆ ಸರಿಹೋಗುತ್ತದೆ. ಕಲ್ಲಿನ ನಿಕ್ಷೇಪಕ್ಕಾಗಿ ಹುಡುಕಾಟ ನಡೆಸುತ್ತಿದ್ದಲ್ಲಿ ಪರಾಮರ್ಶಿಸದೇ ತೆರಳಬೇಡಿ.

ಕನ್ಯಾ: ಬರವಣಿಗೆಯಿಂದಾಗಿ ಜೀವನವನ್ನು ನಡೆಸುತ್ತಿರುವವರು ವಿವಾದಾತ್ಮಕ ಹೇಳಿಕೆಯನ್ನು ನೀಡುವಂತಹ ಬರಹಗಳನ್ನು ಕೈಗೆತ್ತಿಕೊಳ್ಳದಿರಿ. ವಿದ್ಯಾವಂತರಾಗಿದ್ದರೂ ಪ್ರಜ್ಞಾವಂತಿಕೆಯನ್ನು ಕಳೆದುಕೊಂಡರೆ ವಿದ್ಯೆಗೆ ಬೆಲೆ ಬರುವುದಿಲ್ಲ

ತುಲಾ: ಎಂಜಿನಿಯರಿಂಗ್ ಮುಗಿಸುವ ಹಂತದ ವಿದ್ಯಾರ್ಥಿಗಳು ಪರದೇಶಕ್ಕೆ ಹೋಗುವುದಿದ್ದಲ್ಲಿ ಆದಷ್ಟು ಬೇಗ ಕೆಲವು ಕೋರ್ಸ್‌ಗಳನ್ನು ಮಾಡಿಕೊಳ್ಳುವ ಯೋಚನೆ ಮಾಡಿ. ಊಟ ಉಪಹಾರಗಳನ್ನು ಆದಷ್ಟು ಸ್ವಗೃಹದಲ್ಲಿ ಮಾಡಿ.

ವೃಶ್ಚಿಕ: ನೀವು ಮಾಡಿದ ವ್ಯವಹಾರ ವಿಶ್ಲೇಷಣೆಗೂ, ವಾಸ್ತವ ಪರಿಸ್ಥಿತಿಗೂ ಹಲವಾರು ವ್ಯತ್ಯಾಸಗಳು ಉಂಟಾಗಬಹುದು. ಸರ್ವಸಿದ್ಧರಾಗಿರಿ. ದೇವಸ್ಥಾನದ ದರ್ಶನದಿಂದಾಗಿ ವಿಶೇಷವಾದ ಅನುಭೂತಿಯಾಗುತ್ತದೆ.

ಧನು: ಹಲವು ಕೆಲಸಗಳಲ್ಲಿ ಅಡೆತಡೆ ಉಂಟಾಗುತ್ತಿರುವುದು ಜನ್ಮಸ್ಥಾನದ ದೇವರ ಹರಕೆಯನ್ನು ತೀರಿಸದ ಪ್ರಭಾವ ಇದ್ದಿರಬಹುದು. ದಾಯದಿವರ್ಗದ ಜನರಿಗೆ ಅವರು ನಿಮ್ಮನ್ನು ಸತ್ಕರಿಸುವಷ್ಟು ಅಷ್ಟೇ ಸತ್ಕಾರವು ಸಾಕಾಗುತ್ತದೆ.

ಮಕರ: ನಿಮ್ಮ ಮುಂದಿನ ಪೀಳಿಗೆಯವರಿಗೆ ನಿಮ್ಮ ಪೀಳಿಗೆಯ ವಿಷಯವನ್ನು ಸರಿಯಾಗಿ ತಿಳಿಸದೆ ಇದ್ದಲ್ಲಿ ಅವರು ಪದ್ಧತಿಗಳನ್ನು ಮುಂದುವರೆಸಲು ಕಷ್ಟ ಸಾಧ್ಯವಾಗುತ್ತದೆ. ಮಕ್ಕಳ ಆಟಿಕೆ ಸಾಮಾನು ಮಾರಾಟಗಾರರಿಗೆ ಲಾಭವಿದೆ.

ಕುಂಭ: ಕೆಲವೊಂದು ವಿಷಯಗಳು ಹೀಗಾಗಬಹುದು ಎಂಬ ಅನುಭವ ನಿಮಗಾಗುತ್ತಿದರೂ ಅವಘಡ ತಪ್ಪಿಸಲು ಸಾಧ್ಯವಾಗುವುದಿಲ್ಲ. ನಿತ್ಯದ ಕೆಲಸ ಕಾರ್ಯಗಳಿಂದ ಸ್ವಲ್ಪ ಮುಕ್ತಿ ಸಿಗುವ ಅವಕಾಶವಿದೆ.


ಮೀನ: ಪುರುಷ ಪ್ರಧಾನ ಕುಟುಂಬದಲ್ಲಿ ವಾಸಿಸುತ್ತಿರುವ ಮಹಿಳೆಯರಿಗೆ ಗೌರವವವು ತೀರ ಕಡಿಮೆಯಾದಂತೆ ಅನ್ನಿಸಬಹುದು. ಹಿರಿಯರ ಮಾತುಗಳನ್ನು ಮನಸ್ಸಿಗೆ ಹಚ್ಚಿಕೊಂಡು ಯೋಚಿಸುವುದರಲ್ಲಿ ಪ್ರಯೋಜನವಿಲ್ಲ.

ಪದಬಂಧ 5285

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1. ಅಭಾವ ಕಾಲದಲ್ಲಿ ಬಂದಿರುವ ಅಕ್ಕನ ಗಂಡ (2)
3. ಪ್ರವಾಸದಲ್ಲಿ ಪಟ್ಟಿರುವ ಶ್ರಮ (3)
6. ವಿಷಯಾಸಕ್ತ ಇಲ್ಲಿದ್ದಾನೆ (3)
8. ಈ ಪರಿ ಕರದಲ್ಲಿ ಹಿಡಿದಿರುವ ಸಾಮಾನು (4)
10. ಅತಿ ತೀಕ್ಷ್ಣವಾದದು (3)
11. ಕಣದಲ್ಲಿ ಆಗಿರುವ ಮದುವೆ (3)
12. ಕ್ಷುದ್ರಲೋಹವನ್ನು ಚಿನ್ನವನ್ನಾಗಿ ಪರಿವರ್ತಿಸುವುದು (4)
15. ಮರದ ಹತ್ತಿರ ಕಾಣಿಸಿದ ಮೊಸಳೆ (3)
17. ಈತ ಕಬ್ಬಿಣದ ಕೆಲಸಗಾರ (3)
18. ಜನನಿ ನುಡಿದಿರುವ ಸತ್ಯ (2)

ಮೇಲಿಂದ ಕೆಳಕ್ಕೆ
2. ಅನೇಕ ಚಿಕ್ಕ ಚಿಕ್ಕ ಮನೆಗಳುಳ್ಳ ಆವಾರ (3)
3. ಪ್ರತಿಬಿಂಬ ಇಲ್ಲಿ ಕಾಣುತ್ತಿದೆ (3)
4. ಹತ್ತಿರಕ್ಕೊಂದು ಪರ್ಯಾಯ ಪದ (3)
5. ತೆರಿಗೆ ಅಥವಾ ತೆರ (2)
7. ತಾರ ನುಡಿಸಿದ ತಂತಿ ವಾದ್ಯ (3)
9. ಮಣ ಭಾರ ಹೊತ್ತಿರುವ ನಲ್ಲ (3)
10. ಸೇವಕನನ್ನು ಕೊನೆಗೆ ನಿಲ್ಲಿಸಿದಾಗಲೇ ಹರಡುವಿಕೆ! (3)
11. ಕಲೆಸಿದ ಗೋಧಿ ಹಿಟ್ಟು (3)
13. ಎಳೆಯ ಗಿಡ ಇಲ್ಲಿದೆ (2)
14. ಹತ್ತು ವರ್ಷಗಳ ಕಾಲದ ಅವಧಿ (3)
15. ಮರದೊಳಗೆ ಸವಿಯಾದುದು ಇದೆ (3)
16. ರಜ ಇರುವಾಗಿನ ಇರುಳು (3)



5284ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ವಿರೇಚಕ 3.ಅಧರ
4.ಸಹವಾಸ 6.ಹಸಿರು
8.ಅಂಡಜ 9.ಜನನಾಯಕ
10.ಪ್ರಥಮಾ 11.ಕತಲಂ
13.ಶಬ್ದಕೋಶ 15.ಬವಣೆ
16.ಮಹಾದ್ವಾರ

ಮೇಲಿಂದ ಕೆಳಕ್ಕೆ:
1.ವಿರಹ 2.ಕಸ
3.ಅತಿಕ್ರಮಪ್ರವೇಶ
5.ಸಮಾಜಸುಧಾರಣೆ 7.ರುದ್ರನಾಟಕ
8.ಅಂಕ 9.ಜಮಾ
12.ಅಂಬರ 14.ಶಮ

ಸುಡೊಕು 5671

2		6					5	
	4	7	5		6	3		2
3	8			2			6	
	2							4
			2	4	7			6
	7					5		
7		9			8		4	
4				3			8	1
	6		4		2	7		3

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5670 ಸುಡೊಕು

3	9	1	8	7	5	6	4	2
7	6	5	2	4	9	3	8	1
2	8	4	3	1	6	7	9	5
1	5	9	7	2	4	8	6	3
4	2	7	6	8	3	5	1	9
8	3	6	5	9	1	2	7	4
6	1	2	4	5	8	9	3	7
9	7	8	1	3	2	4	5	6
5	4	3	9	6	7	1	2	8

ಎಸಿಎಫ್: ಸಮಿತಿಯಲ್ಲಿ ಕೆಪಿಎಸ್‌ಸಿ ಏಕೈಕ ಸದಸ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅರಣ್ಯ ಇಲಾಖೆಯ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ (ಎಸಿಎಫ್) ವೃಂದದ 16 ಹುದ್ದೆಗಳಿಗೆ ಮೌಖಿಕ ಸಂದರ್ಶನವನ್ನು ಅತ್ಯಂತ ಪಾರದರ್ಶಕವಾಗಿ ನಡೆಸುವ ಉದ್ದೇಶದಿಂದ ನಾಲ್ವರು ಸದಸ್ಯರನ್ನು ಒಳಗೊಂಡ ಸಮಿತಿ ರಚಿಸುವಂತೆ ಕರ್ನಾಟಕ ಲೋಕಸೇವಾ ಆಯೋಗಕ್ಕೆ (ಕೆಪಿಎಸ್‌ಸಿ) ರಾಜ್ಯ ಸರ್ಕಾರ ನಿರ್ದೇಶನ ನೀಡಿದೆ.

ಈ ಸಮಿತಿಯಲ್ಲಿ ಕೆಪಿಎಸ್‌ಸಿಯ ಒಬ್ಬರು ಸದಸ್ಯರು ಇರಬೇಕು. ಸರ್ಕಾರದ ಪ್ರಧಾನ ಕಾರ್ಯದರ್ಶಿಗಿಂತ ಕಡಿಮೆ ಇಲ್ಲದಂತೆ ಕರ್ತವ್ಯ ಸಲ್ಲಿಸಿದ ನಿವೃತ್ತ ಐಎಎಸ್ ಅಥವಾ ಐಪಿಎಸ್ ಅಧಿಕಾರಿ, ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯವರ ಹುದ್ದೆಗಿಂತ ಕಡಿಮೆ ಇಲ್ಲದಂತೆ ಕರ್ತವ್ಯ ಸಲ್ಲಿಸಿದ ಒಬ್ಬ ನಿವೃತ್ತ ಐಎಫ್‌ಎಸ್ ಅಧಿಕಾರಿ, ವಿಶ್ವವಿದ್ಯಾಲಯದ ಪ್ರಾಧ್ಯಾಪಕರ ಹುದ್ದೆಗಿಂತ ಕಡಿಮೆ ಇಲ್ಲದಂತೆ ಕರ್ತವ್ಯ ಸಲ್ಲಿಸುತ್ತಿರುವ ಒಬ್ಬ ಸಂಬಂಧಿಸಿದ ವಿಷಯ ತಜ್ಞ ಹೀಗೆ ಮೂವರು ಇರಬೇಕು ಎಂದು ಸ್ಪಷ್ಟವಾಗಿ ತಿಳಿಸಲಾಗಿದೆ.

ಈ ಬಗ್ಗೆ ಕೆಪಿಎಸ್‌ಸಿ ಕಾರ್ಯದರ್ಶಿಗೆ ಪತ್ರ ಬರೆದಿರುವ ಅರಣ್ಯ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, 'ಈ ಹುದ್ದೆಗಳಿಗೆ ನೇರ ನೇಮಕಾತಿಯ ಮೌಖಿಕ ಸಂದರ್ಶನಕ್ಕೆ ಹಾಲಿ ಇರುವ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ವಿವರವಾದ ಮಾನದಂಡಗಳನ್ನು ನಿಗದಿಪಡಿಸಿಲ್ಲ. ಆದ್ದರಿಂದ ನಾಲ್ವರ ಸಮಿತಿ ರಚಿಸಿ ಸಂದರ್ಶನ ಪ್ರಕ್ರಿಯೆ ನಡೆಸಬೇಕು. ಈ ಪ್ರಸ್ತಾವಕ್ಕೆ ಮುಖ್ಯಮಂತ್ರಿ ಕೂಡಾ ಅನುಮೋದನೆ ನೀಡಿದ್ದಾರೆ' ಎಂದು ತಿಳಿಸಿದ್ದಾರೆ.

ಒಟ್ಟು 16 ಹುದ್ದೆಗಳಿಗೆ 1:5 ಅನುಪಾತದಲ್ಲಿ 80 ಅಭ್ಯರ್ಥಿಗಳಿಗೆ ಕೆಪಿಎಸ್‌ಸಿ ಸಂದರ್ಶನ ನಡೆಸಲಿದೆ. ಸ್ಪರ್ಧಾತ್ಮಕ ಪರೀಕ್ಷೆ ನಡೆಸಿ, ಸಂದರ್ಶನಕ್ಕೆ ಅರ್ಹತೆ ಪಡೆದವರ ಪಟ್ಟಿಯನ್ನು ಆಯೋಗದ ಅನುಮೋದನೆಗೆ ಕಾರ್ಯದರ್ಶಿ ಏಪ್ರಿಲ್ 3ರಂದೇ ಸಲ್ಲಿಸಿದ್ದಾರೆ.

> **ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಹುದ್ದೆಗಳಿಗೆ ಆಯೋಗದ ಒಬ್ಬರು ಸದಸ್ಯರು, ಇತರ ಮೂವರನ್ನು ಒಳಗೊಂಡ ಸಂದರ್ಶನ ಸಮಿತಿ ರಚಿಸಲು ಸರ್ಕಾರ ಸೂಚಿಸಿದೆ.**
> **ಸುರಳ್ಕರ್ ವಿಕಾಸ್ ಕಿಶೋರ್,** ಕೆಪಿಎಸ್‌ಸಿ ಕಾರ್ಯದರ್ಶಿ

ಲೋಕೋಪಯೋಗಿ ಇಲಾಖೆಯ (ಪಿಡಬ್ಲ್ಯುಡಿ) ಸಹಾಯಕ ಎಂಜಿನಿಯರ್ (ಎಇ) 660 ಹುದ್ದೆಗೆ ಅಭ್ಯರ್ಥಿಗಳ ಸಂದರ್ಶನ ಪ್ರಕ್ರಿಯೆಯನ್ನು ಕೂಡಾ ಪಾರದರ್ಶಕ ರೀತಿಯಲ್ಲಿ ನಡೆಸಲು ಸಂದರ್ಶನ ಸಮಿತಿ ರಚಿಸಲು ಸರ್ಕಾರ ನಿರ್ದೇಶನ ನೀಡಿತ್ತು. ಕೆಪಿಎಸ್‌ಸಿ ಇಬ್ಬರು ಸದಸ್ಯರು, ಉಳಿದಂತೆ ಇಬ್ಬರು ನಿವೃತ್ತ ಐಎಎಸ್, ಐಪಿಎಸ್, ಐಎಫ್‌ಎಸ್ ಅಧಿಕಾರಿಗಳು, ಕುಲಪತಿಗಳು, ಮುಖ್ಯ ಎಂಜಿನಿಯರ್‌ಗಳು ಮತ್ತು ವಿಶ್ವವಿದ್ಯಾಲಯಗಳ ಪ್ರಾಧ್ಯಾಪಕರನ್ನು ಒಳಗೊಂಡ ಸಮಿತಿ ರಚಿಸಲು ಸೂಚಿಸಲಾಗಿತ್ತು. ಇದೀಗ ಕೆಪಿಎಸ್‌ಸಿಯ ಒಬ್ಬ ಸದಸ್ಯ ಮಾತ್ರ ಸಮಿತಿಯಲ್ಲಿರಬೇಕು ಎಂದೂ ನಿರ್ದೇಶನ ನೀಡಲಾಗಿದೆ.

'ಸಂದರ್ಶನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಅರ್ಹರ ಆಯ್ಕೆಗೆ ಈ ರೀತಿ ಸಮಿತಿ ರಚಿಸಿದ ಕ್ರಮ ಸೂಕ್ತವಾಗಿದೆ. ಕೆಎಎಸ್ ಸೇರಿದಂತೆ ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ನೇಮಕಾತಿಗೆ ನಡೆಯುವ ವ್ಯಕ್ತಿತ್ವ ಪರೀಕ್ಷೆಗೂ (ಸಂದರ್ಶನ) ಇದೇ ರೀತಿ ಒಬ್ಬ ಕೆಪಿಎಸ್‌ಸಿ ಸದಸ್ಯ, ಉಳಿದಂತೆ ನಿವೃತ್ತ ಐಎಎಸ್, ಐಪಿಎಸ್, ವಿಷಯತಜ್ಞರ ಸಮಿತಿ ರಚಿಸಬೇಕು' ಎಂದು ಅಭ್ಯರ್ಥಿಗಳು ಆಗ್ರಹಿಸಿದ್ದಾರೆ.

ರಾಜ್ಯದಲ್ಲಿ ತಾಪಮಾನ ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಹಲವೆಡೆ ಕಳೆದ ವಾರದಲ್ಲಿ ಸುರಿದಿದ್ದ ಮಳೆಯಿಂದ ಕೊಂಚ ತಗ್ಗಿದ್ದ ಉಷ್ಣಾಂಶವು ಮತ್ತೆ ಏರಿಕೆ ಕಂಡಿದೆ. ಮಧ್ಯಾಹ್ನದ ವೇಳೆಯಲ್ಲಿ ಜನರು ಮನೆಯಿಂದ ಹೊರಬಂದರೆ ಬಿಸಿಲು ಕೆಂಡದಂತೆ ಸುಡುತ್ತಿದೆ. ವೃದ್ಧರು, ಮಕ್ಕಳು ನೆರಳು ಆಶ್ರಯಿಸುತ್ತಿದ್ದಾರೆ.


ಕಲಬುರಗಿ ಜಿಲ್ಲೆಯಲ್ಲಿ ಸೋಮವಾರ ಗರಿಷ್ಠ ಉಷ್ಣಾಂಶವು 39.4 ಡಿಗ್ರಿ ಸೆಲ್ಸಿಯಸ್‌ಗೆ ತಲುಪಿತ್ತು. ಕರಾವಳಿ ಜಿಲ್ಲೆಗಳಾದ ದಕ್ಷಿಣ ಕನ್ನಡ, ಉತ್ತರ ಕನ್ನಡ, ಉಡುಪಿ ಜಿಲೆಗಳಲ್ಲೂ ತಾಪಮಾನ ಏರಿಕೆಯಾಗಿದೆ. ಜತೆಗೆ, ಬಿಸಿಗಾಳಿ ಬೀಸುತ್ತಿದೆ. ಗದಗ ಜಿಲ್ಲೆಯಲ್ಲಿ ಗರಿಷ್ಠ ಉಷ್ಣಾಂಶವು 36 ಡಿಗ್ರಿ ಸೆಲ್ಸಿಯಸ್ ದಾಖಲಾಗಿತ್ತು. ಕರಾವಳಿ, ಉತ್ತರ ಒಳನಾಡು ಹಾಗೂ ದಕ್ಷಿಣ ಒಳನಾಡು ವ್ಯಾಪ್ತಿಯ ಜಿಲ್ಲೆಗಳಲ್ಲಿ ಮಂಗಳವಾರ ಸಾಮಾನ್ಯಕ್ಕಿಂತ 2 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ಹೆಚ್ಚಲಿದೆ ಎಂದು ಐಎಂಡಿ ಮುನ್ನೆಚ್ಚರಿಕೆ ನೀಡಿದೆ.

ಚಿಕ್ಕಮಗಳೂರು, ಕೊಡಗು, ಶಿವಮೊಗ್ಗ, ದಾವಣಗೆರೆ, ಹಾಸನ ಜಿಲ್ಲೆಯ ಅಲ್ಲಲ್ಲಿ ಮುಂದಿನ 48 ಗಂಟೆಗಳಲ್ಲಿ ಸಾಧಾರಣ ಮಳೆಯಾಗುವ ಸಾಧ್ಯತೆ ಇದೆ. ಬೆಂಗಳೂರಿನಲ್ಲಿ ಶುಭ್ರ ಆಕಾಶ ಇರಲಿದೆ ಎಂದು ತಿಳಿಸಿದೆ.

ಬಂಡೀಪುರಕ್ಕೆ 2ನೇ ಸ್ಥಾನ

ಮೈಸೂರು: ರಾಜ್ಯಗಳ ಹುಲಿ ಸಂರಕ್ಷಿತಾರಣ್ಯಗಳ ಪರಿಣಾಮಕಾರಿ ನಿರ್ವಹಣೆ ಮೌಲ್ಯಮಾಪನದಲ್ಲಿ (ಎಂಇಇ) ಬಂಡೀಪುರ ಸಂರಕ್ಷಿತಾರಣ್ಯವು 2ನೇ ಸ್ಥಾನ ಪಡೆದಿದೆ.


ಭಾನುವಾರ ಎಂಇಇ ವರದಿ ಬಿಡುಗಡೆಯಾಗಿದ್ದು, ಉತ್ತಮ ಸಾಧನೆ ಮಾಡಿರುವ 12 ಹುಲಿ ಸಂರಕ್ಷಿತ ಪ್ರದೇಶಗಳಲ್ಲಿ ಬಂಡೀಪುರವು (ಶೇ 93.18) ಮಧ್ಯಪ್ರದೇಶದ ಸಾತ್ಪುರ ದೊಂದಿಗೆ ದ್ವಿತೀಯ ಸ್ಥಾನ ಹಂಚಿಕೊಂಡಿದೆ. ಮೊದಲ ಸ್ಥಾನವನ್ನು ಕೇರಳದ ಪೆರಿಯಾರ್ ಹುಲಿ ಸಂರಕ್ಷಿತಾರಣ್ಯವು (ಶೇ 94.38) ಪಡೆದಿದೆ. ರಾಜ್ಯದ ನಾಗರಹೊಳೆ (ಶೇ 92.42) 4, ಬಿಳಿಗಿರಿರಂಗನ ಬೆಟ್ಟ (ಶೇ 91.67) 6, ಭದ್ರಾ (ಶೇ 90.91) 7, ಕಾಳಿ ಹುಲಿ ಸಂರಕ್ಷಿತಾರಣ್ಯವು (ಶೇ 90.30) 10ನೇ ಸ್ಥಾನ ಗಳಿಸಿವೆ.



ಮೈಸೂರು ವಿ.ವಿ ಕುಲಪತಿ ವಿರುದ್ಧ ನಿವೇಶನ ಒತ್ತುವರಿ ಪ್ರಕರಣ

ವಿವಾದ ಸೃಷ್ಟಿಸಿದ ಕುಲಪತಿ ನೇಮಕ

ಪ್ರಜಾವಾಣಿ ವಾರ್ತೆ



ಪ್ರೊ.ಎನ್. ಕೆ.ಲೋಕನಾಥ್

ಮೈಸೂರು: ವಂಚನೆ ಪ್ರಕರಣ ಎದುರಿಸುತ್ತಿರುವ ಪ್ರೊ.ಎನ್.ಕೆ.ಲೋಕನಾಥ್ ಅವರನ್ನು ಮೈಸೂರು ವಿಶ್ವವಿದ್ಯಾಲಯದ ಕುಲಪತಿಯನ್ನಾಗಿ ನೇಮಕ ಮಾಡಿರುವ ನಿರ್ಧಾರ ವಿವಾದಕ್ಕೆ ಕಾರಣವಾಗಿದೆ.

ನಿವೇಶನ ಒತ್ತುವರಿ ಮಾಡಿಕೊಂಡಿದ್ದಾರೆ ಎಂದು ಆರೋಪಿಸಿ ಜಯಲಕ್ಷ್ಮಿಪುರಂನ ಡಿ.ವಿ. ಶಶಿಧರ ಎಂಬುವರು ಲೋಕನಾಥ್ (5ನೇ ಆರೋಪಿ) ಸೇರಿದಂತೆ 13 ಮಂದಿ ವಿರುದ್ಧ ಸರಸ್ವತಿಪುರಂ ಪೊಲೀಸ್ ಠಾಣೆಯಲ್ಲಿ 2020ರ ನ.4ರಂದು ದೂರು ನೀಡಿದ್ದರು. ಇದಕ್ಕೆ ಸಂಬಂಧಿಸಿ ಪ್ರಕರಣ ದಾಖಲಾಗಿದೆ.

'ಆಯಿಷ್ ಬಡಾವಣೆಯ 2ನೇ ಹಂತದಲ್ಲಿ 30x50 ನಿವೇಶನವನ್ನು ₹70 ಸಾವಿರ ನೀಡಿ 2003ರ ಸೆ.9ರಂದು ಹಕ್ಕುಪತ್ರ ಹಾಗೂ ಅದೇ ವರ್ಷ ನ.5ರಂದು ಸ್ವಾಧೀನ ಪತ್ರ ಪಡೆದಿದ್ದೆ. ಕಂದಾಯವನ್ನು ಪಾವತಿಸಿದ್ದೇನೆ. ಆದರೆ, ದೆಹಲಿಯಲ್ಲಿ ಇದ್ದುದರಿಂದ ನಿವೇಶನದ ಬಗ್ಗೆ ಗಮನ ಹರಿಸಿರಲಿಲ್ಲ. ಮರಳಿ ಬಂದು ನೋಡಿದಾಗ ಒತ್ತುವರಿಯಾಗಿತ್ತು. ಬಡಾವಣೆಯ ನಿವೇಶನ ಸಂಖ್ಯೆ ಎ2-8ರಿಂದ 20ರವರೆಗಿನ ಮಾಲೀಕರು ಸಂಚು ಮಾಡಿ ಒತ್ತುವರಿ ಮಾಡಿದ್ದಾರೆ' ಎಂದು ಶಶಿಧರ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

'13 ಮಂದಿ ನನ್ನ ಸ್ವತ್ತನ್ನು ತಮ್ಮ ಹೆಸರಿಗೆ ಮಾಡಿಕೊಂಡಿದ್ದಾರೆ. ಅವರ ವಿರುದ್ಧ ಕಾನೂನು ಕ್ರಮ ವಹಿಸಬೇಕು' ಎಂದು ಹೇಳಿದ್ದಾರೆ.

ಅರ್ಹರಲ್ಲ: 'ಕುಲಪತಿ ಹುದ್ದೆಗಾಗಿ ಅರ್ಜಿ ಸಲ್ಲಿಸಿದವರ ಪಟ್ಟಿಯನ್ನು ಉನ್ನತ ಶಿಕ್ಷಣ ಇಲಾಖೆಯು 2022ರ ನವೆಂಬರ್ ಅಂತ್ಯದಲ್ಲಿ ಬಿಡುಗಡೆ ಮಾಡಿದ್ದು, ಲೋಕನಾಥ್ ಅವರ ಹೆಸರಿನ ಮುಂದೆ- ಅವರ ಪ್ರಕರಣ ದಾಖಲಾಗಿದ್ದು, ಯುಜಿಸಿ ನಿಯಮಾವಳಿ ಪ್ರಕಾರ ಹುದ್ದೆಗೆ ಅರ್ಹರಲ್ಲ' ಎಂದು ಷರಾ ಕೂಡ ಬರೆದಿತ್ತು.

'ಉನ್ನತ ಶಿಕ್ಷಣ ಇಲಾಖೆಯು ನ.8ರಂದು ಹೊರಡಿಸಿದ್ದ ಅಧಿಸೂಚನೆಯಲ್ಲಿ ಕುಲಪತಿ ಹುದ್ದೆಗೆ 20 ದಿನದ ಒಳಗಾಗಿ ಅರ್ಜಿ ಸಲ್ಲಿಸಬೇಕು ಎಂದು ಹೇಳಿತ್ತು. ಯಾವುದೇ ತನಿಖೆಯನ್ನು ಎದುರಿಸುತ್ತಿರುವ ಸೇವಾನಿರತರು ಅರ್ಜಿ ಸಲ್ಲಿಸುವಂತಿಲ್ಲ ಎಂದು ಅಧಿಸೂಚನೆಯಲ್ಲಿ ಹೇಳಲಾಗಿತ್ತು. ಆದರೆ, ಲೋಕನಾಥ್ ಒಂದು ದಿನ ತಡವಾಗಿ ಅರ್ಜಿ ಸಲ್ಲಿಸಿದ್ದರು' ಎಂದು ಮೂಲಗಳು ತಿಳಿಸಿವೆ.

ಎಂ.ಎಸ್.ಶಿವಕುಮಾರ್ ನೇತೃತ್ವದ ಕುಲಪತಿಗಳ ಶೋಧನಾ ಸಮಿತಿಯು ಜಿ.ವೆಂಕಟೇಶ ಕುಮಾರ್, ಡಿ.ಎಸ್. ಗುರು, ಶರತ್ ಅನಂತಮೂರ್ತಿ ಅವರ ಹೆಸರನ್ನು ರಾಜ್ಯಪಾಲರಿಗೆ ಶಿಫಾರಸು ಮಾಡಿತ್ತು. ಜಿ.ವೆಂಕಟೇಶ ಕುಮಾರ್ ಹೆಸರನ್ನು ಕೈಬಿಟ್ಟು ಲೋಕನಾಥ್ ಹೆಸರನ್ನು ಮಾರ್ಚ್ 16ರಂದು ಸೇರಿಸಲಾಯಿತು ಎನ್ನಲಾಗಿದೆ. ಲೋಕನಾಥ್ ಮಾರ್ಚ್ 23ರಂದು ಅಧಿಕಾರ ಸ್ವೀಕರಿಸಿದ್ದಾರೆ. ಲೋಕನಾಥ್ ಅವರಿಗೆ ಹಲವು ಬಾರಿ ಕರೆ ಮಾಡಿದರೂ ಪ್ರತಿಕ್ರಿಯೆಗೆ ಲಭ್ಯರಾಗಲಿಲ್ಲ.



ದಕ್ಷಿಣ ಕನ್ನಡ ಜಿಲ್ಲೆ ಪುತ್ತೂರಿನ ಮಹಾಲಿಂಗೇಶ್ವರ ದೇವಳದಲ್ಲಿ ವರ್ಷಾವಧಿ ಜಾತ್ರೆಗೆ ಸೋಮವಾರ ಧ್ವಜಾರೋಹಣದೊಂದಿಗೆ ಚಾಲನೆ ನೀಡಲಾಯಿತು

ದಾಖಲೆ ಇಲ್ಲದ ₹ 2.10 ಕೋಟಿ ಜಪ್ತಿ

ಬಾಗಲಕೋಟೆ: 'ಜಿಲ್ಲೆಯ ಜಮಖಂಡಿ ಕ್ಷೇತ್ರ ವ್ಯಾಪ್ತಿಯ ಹುನ್ನೂರ ಚೆಕ್ ಪೋಸ್ಟ್‌ನಲ್ಲಿ ದಾಖಲೆ ಇಲ್ಲದೆ ಸಾಗಿಸುತ್ತಿದ್ದ ₹2.10 ಕೋಟಿ ನಗದು ಜಪ್ತಿ ಮಾಡಲಾಗಿದೆ' ಎಂದು ಜಿಲ್ಲಾ ಚುನಾವಣಾಧಿಕಾರಿ ಪಿ.ಸುನೀಲ್‌ಕುಮಾರ್ ತಿಳಿಸಿದ್ದಾರೆ.

ಚೆಕ್‌ಪೋಸ್ಟ್‌ನಲ್ಲಿ ಅನುಮಾನ ಕಂಡು ಬಂದ ಜೀಪ್ ಅನ್ನು ತಡೆದು ತಪಾಸಣೆ ಮಾಡಿದಾಗ ನಗದು ಇರುವುದು ಪತ್ತೆಯಾಗಿದೆ.

ನೌಕಾದಳ: ಕೆ.ಎಂ.ರಾಮಕೃಷ್ಣನ್ ಅಧಿಕಾರ ಸ್ವೀಕಾರ

ಪ್ರಜಾವಾಣಿ ವಾರ್ತೆ



ಕಾರವಾರ: ನೌಕಾದಳದ ಕರ್ನಾಟಕ ಪ್ರದೇಶದ ಮುಖ್ಯಸ್ಥರಾಗಿ (ಫ್ಲ್ಯಾಗ್ ಆಫೀಸರ್ ಕಮಾಂಡಿಂಗ್) ರಿಯರ್ ಅಡ್ಮಿರಲ್ ಕೆ.ಎಂ.ರಾಮಕೃಷ್ಣನ್ ಸೋಮವಾರ ಅಧಿಕಾರ ವಹಿಸಿಕೊಂಡರು.

ಈ ಮುನ್ನ ನೌಕಾ ಸೇನೆಯ ಸಹಾಯಕ ಮುಖ್ಯಸ್ಥರಾಗಿ ಅವರು ಕೆಲಸ ಮಾಡಿದ್ದರು. 1991ರ ಜನವರಿ 1ರಂದು ನೌಕಾಪಡೆಗೆ ಸೇರಿರುವ ಅವರು ಕ್ಷಿಪಣಿ ನೌಕೆ ಐ.ಎನ್.ಎಸ್. ನಿರ್ಭೀಕ್, ಪೆಟ್ರೋಲ್ ನೌಕೆ ಸುಭದ್ರ ಮತ್ತು ಐ.ಎನ್.ಎಸ್.ಬೆಟ್ವಾ ನೌಕೆಗಳನ್ನು ಮುನ್ನಡೆಸಿದ್ದಾರೆ. ಜತೆಗೆ ಶಾರದಾ, ಕುತಾರ್, ರಾಣಾ, ಕೃಷ್ಣ ಮತ್ತು ತಲ್ವಾರ್ ಹಡಗುಗಳ ನೌಕಾ ಅಧಿಕಾರಿಯಾಗಿಯೂ ಕೆಲಸ ಮಾಡಿದ್ದಾರೆ.

ನ್ಯಾಷನಲ್ ಡಿಫೆನ್ಸ್ ಅಕಾಡೆಮಿಯಲ್ಲಿ ವ್ಯಾಸಂಗ ಮಾಡಿರುವ ರಾಮಕೃಷ್ಣನ್ ರಕ್ಷಣಾ ವಿಭಾಗದಲ್ಲಿ ಪದವಿ ಪಡೆದವರಾಗಿದ್ದಾರೆ ಎಂದು ನೌಕಾದಳದ ಅಧಿಕಾರಿಗಳು ತಿಳಿಸಿದ್ದಾರೆ.

ಈ ಹಿಂದೆ ನೌಕಾದಳದ ಕರ್ನಾಟಕ ವಲಯದ ಮುಖ್ಯಸ್ಥರಾಗಿದ್ದ ಅತುಲ್ ಆನಂದ್ ಈಚೆಗಷ್ಟೆ ಪದೋನ್ನತಿ ಪಡೆದು ನೌಕಾದಳದ ಕಾರ್ಯಾಚರಣೆ ವಿಭಾಗದ ಮುಖ್ಯಸ್ಥರಾಗಿ ನಿಯೋಜನೆಗೊಂಡಿದ್ದಾರೆ.

ಚರ್ಬಿ ತಿಂದು ಕೊಬ್ಬಿನ ಮಾತು: ಸಿದ್ದರಾಮಯ್ಯ ವಿರುದ್ಧ ಪ್ರತಾಪ ಸಿಂಹ ವಾಗ್ದಾಳಿ

ಪ್ರಜಾವಾಣಿ ವಾರ್ತೆ

ಮೈಸೂರು: 'ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ಕುರಿಯ ಚರ್ಬಿ ತಿಂದು ತಿಂದು, ಪ್ರಧಾನಿ ನರೇಂದ್ರ ಮೋದಿ ಅವರ ವಿರುದ್ಧ ಕೊಬ್ಬಿನ ಮಾತುಗಳನ್ನು ಆಡುವುದನ್ನು ಬಿಡಬೇಕು' ಎಂದು ಸಂಸದ ಪ್ರತಾಪ ಸಿಂಹ ಇಲ್ಲಿ ವಾಗ್ದಾಳಿ ನಡೆಸಿದರು.

ಪತ್ರಕರ್ತರೊಂದಿಗೆ ಸೋಮವಾರ ಮಾತನಾಡಿದ ಅವರು, 'ಪ್ರಧಾನಿಯು ವನ್ಯಜೀವಿಗಳ ಕಾಳಜಿಯಿಂದಾಗಿ ದೂರದ ದೆಹಲಿಯಿಂದ ಬಂಡೀಪುರಕ್ಕೆ ಬಂದಿದ್ದರು. ಮುಖ್ಯಮಂತ್ರಿಯಾಗಿದ್ದ ನೀವು ಇಲ್ಲೇ ಸಮೀಪದಲ್ಲಿದ್ದರೂ ಒಂದು ದಿನವಾದರೂ ಬಂಡೀಪುರಕ್ಕೋ ನಾಗರಹೊಳೆಗೋ ಹೋಗಿದ್ರಾ? ವಾರಕ್ಕೊಮ್ಮೆ ಮೈಸೂರಿಗೆ ಬಂದು ಕುರಿ ಚರ್ಬಿ ತಿಂದು ಹೋಗುತ್ತಿದ್ದ ನೀವು ಪ್ರಧಾನಿಗೆ ಪಾಠ ಮಾಡಬೇಡಿ. ಗೌರವದಿಂದ ಮಾತಾಡಿ' ಎಂದರು.

> **ಹಸುಗಳನ್ನು ಕಡಿಯುವವರ ಪರವಿರುವ ಸಿದ್ದರಾಮಯ್ಯಗೆ ಅಧಿಕಾರ ಕೊಟ್ಟರೆ, ಗೋಮಾಂಸ ತಿನ್ನುವವರೇ ಜಾಸ್ತಿ ಆಗುತ್ತಾರೆ.**
> **ಪ್ರತಾಪ ಸಿಂಹ,** ಸಂಸದ

'ವಾಯುದಳದ ಮೂರು ಹೆಲಿಕಾಪ್ಟರ್‌ಗಳು ಏಕಕಾಲಕ್ಕೆ ಬಂದಿಳಿದಿದ್ದರಿಂದ ಉಂಟಾದ ಶಬ್ದದಿಂದಾಗಿ ಪ್ರಾಣಿಗಳು ದಟ್ಟ ಅರಣ್ಯದೊಳಗೆ ಸೇರಿರುತ್ತವೆ. ಹೀಗಾಗಿ, ಪ್ರಧಾನಿ ನರೇಂದ್ರ ಮೋದಿ ಅವರಿಗೆ ಬಂಡೀಪುರದಲ್ಲಿ ಹುಲಿಗಳು ಕಾಣಿಸಿಲ್ಲದಿರಬಹುದು. ಈ ಲೋಕ ಜ್ಞಾನವೂ ಸಿದ್ದರಾಮಯ್ಯ ಅವರಿಗೆ ಇಲ್ಲವೇ' ಎಂದು ಕೇಳಿದರು.

'ಗುಜರಾತ್‌ನ ಸಿಂಹ ಮೋದಿ ಕರ್ನಾಟಕಕ್ಕೆ ಬಂದಾಗಲೆಲ್ಲಾ ಕಾಂಗ್ರೆಸಿಗರು ಊಳಿಡುತ್ತೀರೇಕೆ? ನಿಮ್ಮ ಎದೆಯಲ್ಲಿ ನಡುಕ ಬರುತ್ತದೇಕೆ? ಸಿದ್ದರಾಮಯ್ಯ ಎದೆಯಲ್ಲಿ ಆ ಭಯ ಇರಬೇಕು. ಅದು ಎಂಥ ಪರಿಣಾಮ ಬೀರುತ್ತದೆ ಎನ್ನುವುದನ್ನು ಮೇ 10ರಂದು ಸಾಬೀತು ಮಾಡುತ್ತೇವೆ' ಎಂದರು.

ಮಾಡಾಳ್ ಪ್ರಶಾಂತ್ ಜಾಮೀನು ಅರ್ಜಿ ವಜಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಸಾಬೂನು ಮತ್ತು ಮಾರ್ಜಕ ಕಾರ್ಖಾನೆ (ಕೆಎಸ್‌ಡಿಎಲ್) ನಿಯಮಿತದ ಟೆಂಡರ್ ಪ್ರಕ್ರಿಯೆಯಲ್ಲಿ, ಲಂಚ ಪಡೆದ ಪ್ರಕರಣದಲ್ಲಿ ಆರೋಪಿಯಾದ ಚನ್ನಗಿರಿ ಕ್ಷೇತ್ರದ ಶಾಸಕ ಮಾಡಾಳ್ ವಿರೂಪಾಕ್ಷಪ್ಪ ಪುತ್ರ ಮಾಡಾಳ್ ಪ್ರಶಾಂತ್ ಅವರ ಜಾಮೀನು ಅರ್ಜಿಯನ್ನು ಜನಪ್ರತಿನಿಧಿಗಳ ಕೋರ್ಟ್ ವಜಾಗೊಳಿಸಿದೆ.


ಪ್ರಶಾಂತ್ ಸಲ್ಲಿಸಿದ್ದ ಜಾಮೀನು ಅರ್ಜಿಯನ್ನು, 'ಶಾಸಕರು-ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಬಿ.ಜಯಂತ್ ಕುಮಾರ್ ಸೋಮವಾರ ವಿಚಾರಣೆ ನಡೆಸಿದರು.



ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)

ದಪ್ಪ	₹1000-1500
ಮಧ್ಯಮ	₹700-100
ಸಣ್ಣ	₹300-700

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,599
ಇಂದಿನ ಅಂತ್ಯ	17,624
▲	25
ದಿನದ ಗರಿಷ್ಠ	17,694

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹410
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹410

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1720 (1720)
ಸೋಯಾ (ರಿಫೈನ್ಡ್)	₹1045 (1045)
ಸೂರ್ಯಕಾಂತಿ (ರಿಫೈನ್ಡ್)	₹1070 (1075)
ಪಾಮೋಲಿನ್	₹964 (960)

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹146.50
ಆರ್‌ಎಸ್‌ಎಸ್-5	₹141
ಗುಡ್ ಲಾಟ್	₹132

ಜಾನ್ ಪ್ಲೇಯರ್ಸ್‌ಗೆ ಸಿದ್ಧಾರ್ಥ ಮಲ್ಹೋತ್ರ ರಾಯಭಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪುರುಷರ ಉಡುಪುಗಳ ಪ್ರಮುಖ ಬ್ರ್ಯಾಂಡ್‌ಗಳಲ್ಲಿ ಒಂದಾಗಿರುವ ಜಾನ್ ಪ್ಲೇಯರ್ಸ್, ನಟ ಸಿದ್ಧಾರ್ಥ ಮಲ್ಹೋತ್ರ ಅವರನ್ನು ತನ್ನ ರಾಯಭಾರಿ ಎಂದು ಘೋಷಿಸಿದೆ. ಇದರ ಜೊತೆಯಲ್ಲೇ ಕಂಪನಿಯು, ಸ್ಪ್ರಿಂಗ್ ಸಮ್ಮರ್'23 ಹೆಸರಿನ ಹೊಸ ಸಂಗ್ರಹವನ್ನು ಕೂಡ ಬಿಡುಗಡೆ ಮಾಡಿದೆ. 'ಮಲ್ಹೋತ್ರ ಅವರು ನಮ್ಮ ಬ್ರ್ಯಾಂಡ್ ಪಾಲಿಗೆ ಅತ್ಯಂತ ಸೂಕ್ತವಾದ ರಾಯಭಾರಿ' ಎಂದು ಕಂಪನಿಯು ಬ್ಯುಸಿನೆಸ್ ಹೆಡ್ ನಿತಿನ್ ಸೆಹಗಲ್ ಹೇಳಿದ್ದಾರೆ.

ಜಾನ್ ಪ್ಲೇಯರ್ಸ್ ಬ್ರ್ಯಾಂಡ್‌ನ ಉಡುಪುಗಳು ದೇಶದಾದ್ಯಂತ ಮೂರು ಸಾವಿರ ಮಳಿಗೆಗಳಲ್ಲಿ ಲಭ್ಯವಿವೆ.

ಈಕ್ವಿಟಿಯಲ್ಲಿ ಎಂಎಫ್ ಹೂಡಿಕೆ ₹ 1.82 ಲಕ್ಷ ಕೋಟಿ

ನವದೆಹಲಿ (ಪಿಟಿಐ): ಮ್ಯೂಚುವಲ್ ಫಂಡ್ ಕಂಪನಿಗಳು 2022-23ನೇ ಹಣಕಾಸು ವರ್ಷದಲ್ಲಿ ಭಾರತದ ಷೇರುಪೇಟೆಗಳಲ್ಲಿ ಒಟ್ಟು ₹ 1.82 ಲಕ್ಷ ಕೋಟಿ ಹೂಡಿಕೆ ಮಾಡಿವೆ.

ಸಣ್ಣ ಹೂಡಿಕೆದಾರರ ಭಾಗವಹಿಸುವಿಕೆ ಹೆಚ್ಚಾಗಿರುವುದು ಹಾಗೂ ಮಾರುಕಟ್ಟೆ ಮೌಲ್ಯವು ತುಸು ಕಡಿಮೆ ಆಗಿರುವ ಕಾರಣಗಳಿಂದಾಗಿ ಇಷ್ಟು ಮೊತ್ತದ ಹೂಡಿಕೆಯನ್ನು ಷೇರುಪೇಟೆಗಳು ಆಕರ್ಷಿಸಿವೆ ಎಂದು ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿ (ಸೆಬಿ) ತಿಳಿಸಿದೆ.

ಹೂಡಿಕೆ ವಿವರ (ಲಕ್ಷ ಕೋಟಿ)

2022-23	₹1.82
2021-22	₹1.81
2020-21	₹1.2

2021-22ನೇ ಹಣಕಾಸು ವರ್ಷದಲ್ಲಿ ₹1.81 ಲಕ್ಷ ಕೋಟಿ ಬಂಡವಾಳ ಹೂಡಿಕೆ ಮಾಡಿದ್ದವು.

ಅಮೆರಿಕದಲ್ಲಿ ಹಣದುಬ್ಬರ ಇಳಿಮುಖ ಆಗಲು ಆರಂಭಿಸುತ್ತಿದ್ದಂತೆಯೇ ಅಮೆರಿಕದ ಕೇಂದ್ರೀಯ ಬ್ಯಾಂಕ್ ತನ್ನ ಕಠಿಣ ಸ್ವರೂಪದ ಹಣಕಾಸು ನೀತಿಯನ್ನು ಬದಲಿಸಲಿದೆ. ಅದರಿಂದಾಗಿ 2023-24ನೇ ಹಣಕಾಸು ವರ್ಷದ ಈಕ್ವಿಟಿ ಮುನ್ನೋಟವು ಒಂದೆರಡು ತ್ರೈಮಾಸಿಕಗಳಲ್ಲಿ ಸುಧಾರಿಸಲಿದೆ ಎಂದು ಬಜಾಜ್ ಕ್ಯಾಪಿಟಲ್‌ನ ಅಧ್ಯಕ್ಷ ರಾಜೀವ್ ಬಜಾಜ್ ಹೇಳಿದ್ದಾರೆ.

ರಿಟೇಲ್ ಹೂಡಿಕೆದಾರರಿಗೆ ವ್ಯವಸ್ಥಿತ ಹೂಡಿಕೆ ಯೋಜನೆಯು (ಎಸ್‌ಐಪಿ) ಜನಪ್ರಿಯ ಹೂಡಿಕೆ ಆಯ್ಕೆಯಾಗಿ ಮುಂದುವರಿಯಲಿದೆ.

ಮ್ಯೂಚುವಲ್ ಫಂಡ್‌ನಲ್ಲಿ ಹಣಕಾಸು ಸೇವೆಗಳ ವಲಯವು ಅತಿ ಹೆಚ್ಚಿನ ಪಾಲು ಹೊಂದಿವೆ. ಐ.ಟಿ., ಬಂಡವಾಳ ಸರಕುಗಳು, ವಾಹನ ಮತ್ತು ಆರೋಗ್ಯ ಸೇವೆಗಳು ನಂತರದ ಸ್ಥಾನದಲ್ಲಿವೆ.

ಮ್ಯೂಚುವಲ್ ಫಂಡ್‌ಗಳು 2022-23ನೇ ಹಣಕಾಸು ವರ್ಷದಲ್ಲಿ ಸಾಲಪತ್ರ ಮಾರುಕಟ್ಟೆಯಿಂದ ₹ 40,600 ಕೋಟಿ ಬಂಡವಾಳ ಹಿಂದಕ್ಕೆ ಪಡೆದಿವೆ. ಲಿಕ್ವಿಡ್ ಫಂಡ್‌ಗಳಿಂದ ಹೆಚ್ಚಿನ ಹೊರಹರಿವು ಆಗಿದೆ. ಅಲ್ಟ್ರಾ-ಶಾರ್ಟ್ ಡ್ಯುರೇಷನ್ ಮತ್ತು ಶಾರ್ಟ್ ಡ್ಯುರೇಷನ್ ಫಂಡ್‌ಗಳಿಂದಲೂ ಬಂಡವಾಳ ಹೊರಹರಿವು ಕಂಡುಬಂದಿದೆ.

ಟಮಾಸೆಕ್ ಅಧೀನಕ್ಕೆ ಮಣಿಪಾಲ್ ಹಾಸ್ಪಿಟಲ್ಸ್

ಹೆಚ್ಚುವರಿಯಾಗಿ ಶೇ 41 ಷೇರು ಖರೀದಿ ಒಪ್ಪಂದಕ್ಕೆ ಸಹಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಣಿಪಾಲ್ ಆಸ್ಪತ್ರೆಗಳನ್ನು ಮುನ್ನಡೆಸುವ ಮಣಿಪಾಲ್ ಹೆಲ್ತ್ ಎಂಟರ್‌ಪ್ರೈಸಸ್‌ನಲ್ಲಿ (ಎಂಎಚ್‌ಇ) ಹೆಚ್ಚುವರಿಯಾಗಿ ಶೇಕಡ 41ರಷ್ಟು ಷೇರುಗಳನ್ನು ಖರೀದಿಸಲು ನಿರ್ಣಾಯಕ ಒಪ್ಪಂದಕ್ಕೆ ಸಹಿ ಮಾಡಿರುವುದಾಗಿ ಸಿಂಗಪುರ ಮೂಲದ ಟಮಾಸೆಕ್ ಕಂಪನಿ ಸೋಮವಾರ ಹೇಳಿದೆ.

ಈ ಸ್ವಾಧೀನ ಪ್ರಕ್ರಿಯೆಯ ಬಳಿಕ ಎಂಎಚ್‌ಇನಲ್ಲಿ ಟಮಾಸೆಕ್ ಷೇರುಪಾಲು ಶೇ 59ಕ್ಕೆ ಏರಿಕೆ ಆಗಲಿದೆ. ಮಣಿಪಾಲ್ ಸಮೂಹದ ಷೇರುಪಾಲು ಶೇ 30ಕ್ಕೆ ಇಳಿಕೆ ಆಗಲಿದೆ. ನ್ಯಾಷನಲ್ ಇನ್‌ವೆಸ್ಟ್‌ಮೆಂಟ್ ಆ್ಯಂಡ್ ಇನ್‌ಫ್ರಾಸ್ಟ್ರಕ್ಚರ್ ಫಂಡ್ (ಎನ್‌ಐಐಎಫ್) ತಾನು ಹೊಂದಿರುವ ಅಷ್ಟೂ ಪ್ರಮಾಣದ ಷೇರುಗಳನ್ನು ಟಮಾಸೆಕ್‌ಗೆ ಮಾರಾಟ ಮಾಡಲಿದೆ.

ಟಮಾಸೆಕ್ ಕಂಪನಿಯು ಟಿಪಿಜಿ ಮತ್ತು ಮಣಿಪಾಲ್ ಸಮೂಹದ ಅಧ್ಯಕ್ಷ ರಂಜನ್ ಪೈ ಅವರ ಕುಟುಂಬದವರಿಂದ ಷೇರುಗಳನ್ನು ಖರೀದಿಸಲಿದೆ ಎಂದು ಕಂಪನಿಗಳು ಜಂಟಿ ಹೇಳಿಕೆ ನೀಡಿವೆ. ಆದರೆ, ಖರೀದಿಗೆ ಸಂಬಂಧಿಸಿದ ಹಣಕಾಸಿನ ವಿವರಗಳನ್ನು ಬಹಿರಂಗಪಡಿಸಿಲ್ಲ.



ಆದರೆ, ಮೂಲಗಳನ್ನು ಉಲ್ಲೇಖಿಸಿ ಪಿಟಿಐ ಸುದ್ದಿಸಂಸ್ಥೆ ಮಾಡಿರುವ ವರದಿಯ ಪ್ರಕಾರ, ಟಮಾಸೆಕ್ ಕಂಪನಿಯು ₹ 16,300 ಕೋಟಿಗೆ ಮಣಿಪಾಲ್ ಹಾಸ್ಪಿಟಲ್ಸ್ ಷೇರುಗಳನ್ನು ಖರೀದಿಸಲಿದ್ದು, ಭಾರತದ ಆರೋಗ್ಯ ಸೇವಾ ವಲಯದಲ್ಲಿ ಅತಿದೊಡ್ಡ ಖರೀದಿ ಒಪ್ಪಂದ ಇದಾಗಲಿದೆ.

ಎಂಎಚ್‌ಇನಲ್ಲಿ ಗಮನಾರ್ಹ ಪ್ರಮಾಣದ ಷೇರುಗಳನ್ನು ಟಮಾಸೆಕ್ ಸ್ವಾಧೀನ ಮಾಡಿಕೊಂಡಿರುವುದು ಹಾಗೂ ಕಂಪನಿಯ ಪೂರ್ಣ ಸಾಮರ್ಥ್ಯವನ್ನು ಬಳಸಿಕೊಳ್ಳಲು ಆಗುವಂತೆ ಆಡಳಿತ ಮಂಡಳಿಗೆ ಬೆಂಬಲ ನೀಡುತ್ತಿರುವುದು ಸಂತೋಷ ನೀಡಿದೆ ಎಂದು ರಂಜನ್ ಪೈ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬೆಂಗಳೂರಿನಲ್ಲಿ ಕೇಂದ್ರ ಕಚೇರಿ ಹೊಂದಿರುವ ಮಣಿಪಾಲ್ ಹೆಲ್ತ್ ಕೇರ್, ತನ್ನ 29 ಆಸ್ಪತ್ರೆಗಳ ಜಾಲದ ಮೂಲಕ ವಾರ್ಷಿಕ 50 ಲಕ್ಷಕ್ಕೂ ಅಧಿಕ ರೋಗಿಗಳಿಗೆ ಚಿಕಿತ್ಸೆ ನೀಡುತ್ತಿದೆ. ಮಣಿಪಾಲ್ ಹಾಸ್ಪಿಟಲ್ಸ್ ಈಚೆಗಷ್ಟೇ ಕೊಲಂಬಿಯಾ ಏಷ್ಯಾ ಮತ್ತು ವಿಕ್ರಂ ಹಾಸ್ಪಿಟಲ್ ಅನ್ನು ಸ್ವಾಧೀನಪಡಿಸಿಕೊಂಡಿದೆ.

ಫ್ಯೂಚರ್ ರಿಟೇಲ್ ಖರೀದಿ: ರಿಲಯನ್ಸ್, ಅದಾನಿ ಆಸಕ್ತಿ

ನವದೆಹಲಿ (ಪಿಟಿಐ): ದಿವಾಳಿ ಪ್ರಕ್ರಿಯೆಯಲ್ಲಿ ಇರುವ ಫ್ಯೂಚರ್ ರಿಟೇಲ್ ಕಂಪನಿಯನ್ನು ಸ್ವಾಧೀನಪಡಿಸಿಕೊಳ್ಳಲು ರಿಲಯನ್ಸ್ ರಿಟೇಲ್, ಜಿಂದಾಲ್ ಪವರ್, ಅದಾನಿ ಸಮೂಹ ಸೇರಿದಂತೆ 49 ಕಂಪನಿಗಳು ಆಸಕ್ತಿ ವ್ಯಕ್ತಪಡಿಸಿ ಬಿಡ್ ಸಲ್ಲಿಸಿವೆ.

ತನ್ನ ಆಸ್ತಿಗಳನ್ನು ಕ್ಲಸ್ಟರ್‌ಗಳಾಗಿ ವಿಭಜಿಸಿದ ಬಳಿಕ ಹೊಸದಾಗಿ ಬಿಡ್ ಆಹ್ವಾನಿಸಲು ಫ್ಯೂಚರ್ ರಿಟೇಲ್ ನಿರ್ಧರಿಸಿದೆ. ಇದರಿಂದಾಗಿ ರಿಲಯನ್ಸ್ ಇಂಡಸ್ಟ್ರೀಸ್‌ನ ರಿಲಯನ್ಸ್ ರಿಟೇಲ್ ವೆಂಚರ್ಸ್ ಲಿಮಿಟೆಡ್, ಅದಾನಿ ಏರ್‌ಪೋರ್ಟ್ ಹೋಲ್ಡಿಂಗ್ಸ್ ಮತ್ತು ಫ್ಲೆಮಿಂಗೊ ಸಮೂಹದ ಜಂಟಿ ಕಂಪನಿ ಏಪ್ರಿಲ್ ಮೂನ್ ರಿಟೇಲ್ ಪ್ರೈವೇಟ್ ಲಿಮಿಟೆಡ್ ಮತ್ತೆ ಬಿಡ್ ಸಲ್ಲಿಸಿವೆ.

ಸೆಂಚ್ಯುರಿ ಕಾಪರ್ ಕಾರ್ಪ್, ಗ್ರೀನ್‌ಟೆಕ್ ವರ್ಲ್ಡ್ ವೈಡ್, ಹರ್ಷವರ್ಧನ್ ರೆಡ್ಡಿ, ಜೆ.ಸಿ. ಫ್ಲವರ್ಸ್ ಅಸೆಟ್ ರಿಕನ್‌ಸ್ಟ್ರಕ್ಷನ್ ಪ್ರೈವೇಟ್ ಲಿಮಿಟೆಡ್, ಪಿನಾಕಲ್ ಏರ್ ಪ್ರೈವೇಟ್ ಲಿಮಿಟೆಡ್, ಯೂನಿವರ್ಸಲ್ ಅಸೋಸಿಯೇಟ್ಸ್ ಮತ್ತು ಡಬ್ಲ್ಯುಎಚ್ ಸ್ಮಿತ್ ಟ್ರಾವೆಲ್ ಲಿಮಿಟೆಡ್ ಕಂಪನಿಗಳು ಬಿಡ್ ಸಲ್ಲಿಸಿರುವ ಕಂಪನಿಗಳಲ್ಲಿ ಪ್ರಮುಖವಾಗಿವೆ.

ಮುಖ್ಯಾಂಶಗಳು

- ಸಾಲದ ಸುಳಿಯಲ್ಲಿ ಫ್ಯೂಚರ್ ರಿಟೇಲ್
- 49 ಕಂಪನಿಗಳಿಂದ ಖರೀದಿ ಆಸಕ್ತಿ ವ್ಯಕ್ತಪಡಿಸಿ ಬಿಡ್ ಸಲ್ಲಿಕೆ

ಸಾಲದಾತರ ಸಮಿತಿಯು ಫ್ಯೂಚರ್ ರಿಟೇಲ್ ಖರೀದಿಸುವ ಕುರಿತು ಬಿಡ್ ಸಲ್ಲಿಸಲು ಎರಡು ರೀತಿಯ ಆಯ್ಕೆಗಳನ್ನು ನೀಡಿತ್ತು. ಮೊದಲನೆಯದು, ಫ್ಯೂಚರ್ ರಿಟೇಲ್ ಅನ್ನು ಅದರ ಅಂಗಸಂಸ್ಥೆಯೊಂದಿಗೆ ಸಂಪೂರ್ಣವಾಗಿ ಖರೀದಿಸುವುದು. ಎರಡನೇಯದು ಫ್ಯೂಚರ್ ರಿಟೇಲ್ ವಹಿವಾಟನ್ನು 5 ಕ್ಲಸ್ಟರ್‌ಗಳಾಗಿ ವಿಭಜಿಸಿ, ಅದರಲ್ಲಿ ಯಾವುದೇ ಒಂದು ಕ್ಲಸ್ಟರ್ ಖರೀದಿಗೆ ಹೂಡಿಕೆದಾರರು ಬಿಡ್ ಸಲ್ಲಿಸಬಹುದು ಎನ್ನುವ ಆಯ್ಕೆ ನೀಡಲಾಗಿತ್ತು.

ಮೊದಲ ಆಯ್ಕೆಗೆ ರಿಲಯನ್ಸ್, ಏಪ್ರಿಲ್ ಮೂನ್ ರಿಟೇಲ್ ಸೇರಿದಂತೆ 11 ಹೂಡಿಕೆದಾರರು ಬಿಡ್ ಸಲ್ಲಿಸಿದ್ದರು. ಆದರೆ, ಎರಡು ಬಾರಿ ಗಡುವು ವಿಸ್ತರಣೆ ಮಾಡಿದರೂ ಪುನಶ್ಚೇತನ ಯೋಜನೆಯನ್ನು ಸಲ್ಲಿಸಲಿಲ್ಲ. 49 ಹೂಡಿಕೆದಾರರಿಗೆ ಎರಡನೇ ಆಯ್ಕೆ ಅಡಿಯಲ್ಲಿ ಪುನಶ್ಚೇತನ ಯೋಜನೆ ಸಲ್ಲಿಸಲು ಅವಕಾಶ ನೀಡುವುದಾಗಿ ದಿವಾಳಿ ಪ್ರಕ್ರಿಯೆಯನ್ನು ನಿರ್ವಹಿಸುವ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಮುಂಬೈ ಧಾರಣೆ

ಶೇಂಗಾ 10-4-2023

ಜಾವಾ 70/80(ಹೊಸ)	11750-11800
ಜಾವಾ 80/90(ಹೊಸ)	10850-10900
ದಪ್ಪ ಮಧ್ಯಪ್ರದೇಶ(ಹೊಸ)	11100-11200
ದಪ್ಪ ಗುಜರಾತ್(ಹೊಸ)	12100-12200

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1730 (1730)
ಒಂದು ವಾರದ ಡೆಲಿವರಿ	1725 (1725)
ಸೋಯಾ ಕಚ್ಚಾ	935 (940)
ಪಾಮ್ ವಾರದ ಡೆಲಿವರಿ	962 (960)
ಸೂರ್ಯಕಾಂತಿ ಎಣ್ಣೆ ಕಚ್ಚಾ	930 (920)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ 59,900 (60,100)
ಬೆಳ್ಳಿ ಕೆ.ಜಿ 74,500 (73,800)

ಆವರಣದಲ್ಲಿ ಶನಿವಾರದ ಧಾರಣೆ

ಕೊಬ್ಬರಿ ಧಾರಣೆ (ಪ್ರತಿ ಕೆ.ಜಿಗೆ)

ಕೆ.ಆರ್.ಪೇಟೆ	₹8076-8076
ತುಮಕೂರು	₹3800-4200
ತುರುವೇಕೆರೆ	₹9100-9100

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹14750
ಎಸಿ	₹7700
ಆರ್‌ಪಿ	₹10400
ಆರ್‌ಸಿ	₹5340

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಬಂಟ್ವಾಳ		ಚಾಲಿ	31699-36000	ಬಿಳಿಗೋಟು	26199-35099
ಕೋಕ	12500-25000	ಕೋಕ	12699-31199	ಚಾಲಿ	33718-36699
ಹೊಸತು	27500-38000	ಕೆಂಪುಗೋಟು	21399-35899	ಕೆಂಪುಗೋಟು	26980-33818
ಹಳತು	48000-53000	ರಾಶಿ	37399-45529	ರಾಶಿ	41419-44189
ಕುಮಟ		ಸಿಪ್ಪೆಗೋಟು	5290-20015	**ಯಲ್ಲಾಪುರ**	
ಚಿಪ್ಪು	28019-31599	**ಶಿವಮೊಗ್ಗ**		ಬಿಳಿಗೋಟು	23212-32699
ಕೋಕ	18609-29169	ಬೆಟ್ಟೆ	47000-52909	ಚಾಲಿ	33780-37030
ಫ್ಯಾಕ್ಟರಿ	11509-21169	ಗೊರಬಲು	15599-33199	ಕೋಕ	17109-29599
ಹಳೆಚಾಲಿ	36699-39199	ರಾಶಿ	31039-45400	ಕೆಂಪುಗೋಟು	24099-33799
ಹೊಸಚಾಲಿ	34529-36509	ಸರಕು	51000-80396	ರಾಶಿ	41697-47899
ಸಾಗರ		**ಶಿರಸಿ**		ತಟ್ಟಿಬೆಟ್ಟೆ	36736-43109
ಬಿಳಿಗೋಟು	22129-31100	ಬೆಟ್ಟೆ	35210-41099		



ಅರುಣಾಚಲ ಗಡಿಯ ಕಿಬಿತೂನಲ್ಲಿ 'ವೈಬ್ರಂಟ್ ವಿಲೇಜ್' ಕಾರ್ಯಕ್ರಮಕ್ಕೆ ಚಾಲನೆ, ಗ್ರಾಮವಾಸ್ತವ್ಯ

ಗಡಿ ವಿಷಯದಲ್ಲಿ ರಾಜಿ ಇಲ್ಲ: ಶಾ

ಪ್ರಜಾವಾಣಿ ವಾರ್ತೆ

ಕಿಬಿತೂ, ಅರುಣಾಚಲ ಪ್ರದೇಶ: 'ಭಾರತವು ಸದಾ ಶಾಂತಿ ಬಯಸುತ್ತದೆ. ಆದರೆ, ದೇಶದ ಭೂಮಿ ಅತಿಕ್ರಮಣ ಯತ್ನ, ಗಡಿ ವಿಷಯದಲ್ಲಿ ಯಾವುದೇ ರಾಜಿ ಇಲ್ಲ' ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಸೋಮವಾರ ಹೇಳಿದರು.

'ನಮ್ಮ ನೀತಿಯು ಸ್ಪಷ್ಟವಾಗಿದೆ. ಎಲ್ಲರೊಂದಿಗೆ ನಾವು ಶಾಂತಿ ಬಯಸುತ್ತೇವೆ. ಆದರೆ, ಗಡಿ ಅತಿಕ್ರಮಿಸುವ ಯತ್ನವನ್ನು ಸಹಿಸುವುದಿಲ್ಲ. ಗಡಿ ರಕ್ಷಣೆ ಮತ್ತು ಸೇನೆಗೆ ಗೌರವ ಸಲ್ಲಿಸುವುದು ಮೋದಿ ಸರ್ಕಾರದ ಪರಮೋಚ್ಚ ಆದ್ಯತೆ' ಎಂದರು.

ಚೀನಾ ದೇಶದ ಗಡಿಗೆ ಹೊಂದಿಕೊಂಡಿರುವ, ಅರುಣಾಚಲ ಪ್ರದೇಶದ ಗಡಿಗ್ರಾಮ ಕಿಬಿತೂನಲ್ಲಿ ಸೋಮವಾರ 'ವೈಬ್ರಂಟ್ ವಿಲೇಜ್' ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

'ಮೋದಿ ನೇತೃತ್ವದ ಸರ್ಕಾರ ಅರುಣಾಚಲ ಪ್ರದೇಶದ ಗಡಿಯ ಗ್ರಾಮಗಳನ್ನು ನೋಡುವ ದೃಷ್ಟಿಕೋನವನ್ನೇ ಈಗ ಬದಲಿಸಿದೆ. ಮೊದಲು ಈ ಗ್ರಾಮಗಳಿಗೆ ಭೇಟಿ ನೀಡಿದವರು, 'ದೇಶದ ಕಡೆಯ ಗ್ರಾಮಕ್ಕೆ ಭೇಟಿ ನೀಡಿದ್ದೆ' ಎನ್ನುತ್ತಿದ್ದರು. ಈಗ 'ಮೊದಲ ಪ್ರಥಮ ಗ್ರಾಮಕ್ಕೆ' ತೆರಳಿದ್ದೆವು ಎನ್ನುತ್ತಾರೆ. 2014ಕ್ಕೂ ಮೊದಲು ಆತಂಕದ ಸ್ಥಿತಿ ಇತ್ತು. ಈಗ ಅಭಿವೃದ್ಧಿ, ಅಭ್ಯುದಯದಿಂದ ಗಮನಸೆಳೆಯುತ್ತಿದೆ ಎಂದು ಪ್ರತಿಪಾದಿಸಿದರು.

2014 ಮತ್ತು 2023ರ ಅವಧಿಯಲ್ಲಿ ಈ ಭಾಗದಲ್ಲಿ ಸುಮಾರು 547 ಕಿ.ಮೀ. ಉದ್ದಕ್ಕೂ ತಂತಿ ಬೇಲಿ ಅಳವಡಿಸಲಾಗಿದೆ. 1,100 ಕಿ.ಮೀ. ರಸ್ತೆಯಲ್ಲಿ 1057 ಫ್ಲಡ್‌ಲೈಟ್ ಅಳವಡಿಸಲಾಗಿದೆ. 468 ಗಡಿ ಕಣ್ಗಾವಲು ಠಾಣೆ ಸ್ಥಾಪಿಸಲಾಗಿದೆ. ಮೂಲಸೌಕರ್ಯ ಅಭಿವೃದ್ಧಿಗೆ ಗಡಿಯ 55 ಕಿ.ಮೀ. ವ್ಯಾಪ್ತಿಯ 180 ಗ್ರಾಮಗಳಲ್ಲಿ 'ವೈಬ್ರಂಟ್ ವಿಲೇಜ್' ಯೋಜನೆ ಕಾರ್ಯಗತವಾಗುತ್ತಿದೆ ಎಂದು ವಿವರಿಸಿದರು.

'ಗಡಿಯ, 13,000 ಅಡಿ ಎತ್ತರದ ಕ್ಲಿಷ್ಟಕರ ಸ್ಥಳಗಳಲ್ಲಿ ಕರ್ತವ್ಯದಲ್ಲಿರುವ ಸೇನೆ ಮತ್ತು ಐಟಿಬಿಪಿ ಸಿಬ್ಬಂದಿ ಸೇವೆಗೆ ಮೆಚ್ಚುಗೆ ಸೂಚಿಸಿದ ಅವರು, ದೇಶದ ಜನರು ಶಾಂತಿಯಿಂದ ನಿದ್ರೆ ಮಾಡುವುದು ಇವರ ತ್ಯಾಗ, ಧೈರ್ಯದಿಂದ ಸಾಧ್ಯವಾಗಿದೆ. ಇಲ್ಲಿ ಅತಿಕ್ರಮಣಕ್ಕೆ ಯತ್ನಿಸುವವರು ವಾಪಸು ತೆರಳಬೇಕಾಗಿದೆ. ಈಗ ಆ ದಿನಗಳು ಮುಗಿದವು' ಎಂದು ಹೇಳಿದರು.

ಈಶಾನ್ಯದ 2,966 ಗ್ರಾಮಗಳಲ್ಲಿ 'ವೈಬ್ರಂಟ್ ವಿಲೇಜ್' ಜಾರಿಗೊಳಿಸುವ ಕಾರ್ಯಕ್ರಮಕ್ಕೆ ವರ್ಚ್ಯುಯಲ್ ಆಗಿ ಚಾಲನೆ ನೀಡಿದರು. ಅರುಣಾಚಲ ಪ್ರದೇಶ, ಸಿಕ್ಕಿಂ, ಹಿಮಾಚಲ ಪ್ರದೇಶ, ಉತ್ತರಾಖಂಡ, ಲಡಾಖ್‌ನಲ್ಲಿ ಈ ಗ್ರಾಮಗಳಿವೆ. ನಾಲ್ಕು ವರ್ಷಗಳಲ್ಲಿ ಯೋಜನೆ ಜಾರಿಗೆ ಕೇಂದ್ರ ₹ 4,800 ಕೋಟಿ ಮಂಜೂರು ಮಾಡಿದೆ. ಮೊದಲ ಹಂತದಲ್ಲಿ 662 ಗ್ರಾಮಗಳಲ್ಲಿ ಜಾರಿಗೆ ಬರಲಿದೆ. ರಸ್ತೆ, ವಿದ್ಯುತ್, ಶಾಲೆ ಸೌಲಭ್ಯಗಳ ಜೊತೆಗೆ ಜನರ ವಲಸೆ ತಪ್ಪಿಸಲು, ಗ್ರಾಮದಲ್ಲಿಯೇ ಗಳಿಕೆಯ ಅವಕಾಶಗಳನ್ನು ಸೃಷ್ಟಿಸಲಾಗುವುದು ಎಂದು ಶಾ ಹೇಳಿದರು.



ಕೇಂದ್ರ ಗೃಹ ಸಚಿವ ಅಮಿತ್ ಶಾ ಸೋಮವಾರ ಅರುಣಾಚಲ ಪ್ರದೇಶದ ಗಡಿ ಗ್ರಾಮ ಕಿಬಿತೂಗೆ ಭೇಟಿ ನೀಡಿದ್ದರು —ಪಿಟಿಐ ಚಿತ್ರ

ಅಮಿತ್ ಶಾ ಭೇಟಿಗೆ ಚೀನಾ ಆಕ್ಷೇಪ: ಸಾರ್ವಭೌಮತ್ವಕ್ಕೆ ಧಕ್ಕೆ ಎಂದು ಹೇಳಿಕೆ

ಬೀಜಿಂಗ್ (ಪಿಟಿಐ): ಗೃಹ ಸಚಿವ ಅಮಿತ್ ಶಾ ಅವರು ಅರುಣಾಚಲ ಪ್ರದೇಶದ ಗಡಿ ಗ್ರಾಮಕ್ಕೆ ಭೇಟಿ ನೀಡಿದ್ದಕ್ಕೆ ಚೀನಾ ಆಕ್ಷೇಪಿಸಿದೆ. 'ಈ ಭೇಟಿಯು ಚೀನಾದ ಸಾರ್ವಭೌಮತ್ವದ ಉಲ್ಲಂಘನೆಯಾಗಿದೆ' ಎಂದು ಪ್ರತಿಪಾದಿಸಿದೆ.

ಶಾ ಭೇಟಿ ಕುರಿತ ಪ್ರಶ್ನೆಗೆ, ಚೀನಾ ವಿದೇಶಾಂಗ ಸಚಿವಾಲಯದ ವಕ್ತಾರ ವಾಂಗ್ ವೆನ್‌ಬಿನ್, 'ಜಂಗ್ನನ್ (ಅರುಣಾಚಲ ಪ್ರದೇಶದ ಚೀನಿ ಹೆಸರು) ಚೀನಾ ದೇಶದ ಭಾಗ' ಎಂದರು. ಚೀನಾದ ಆಕ್ಷೇಪ ಕುರಿತಂತೆ ಭಾರತ ತಕ್ಷಣಕ್ಕೆ ಪ್ರತಿಕ್ರಿಯಿಸಿಲ್ಲ.

ಧಾರ್ಮಿಕ ಧ್ವಜ ವಿಷಯಕ್ಕೆ ಘರ್ಷಣೆ: 60 ಮಂದಿ ಬಂಧನ

ಜಮ್‌ಷೆಡ್‌ಪುರ (ಜಾರ್ಖಂಡ್) (ಪಿಟಿಐ): 'ಇಲ್ಲಿನ ಶಾಸ್ತ್ರಿನಗರದಲ್ಲಿ ಧಾರ್ಮಿಕ ಧ್ವಜವನ್ನು ಅಪವಿತ್ರಗೊಳಿಸಿದ ಆರೋಪಕ್ಕೆ ಸಂಬಂಧಿಸಿದಂತೆ ನಡೆದ ಘರ್ಷಣೆಯಲ್ಲಿ ಬಿಜೆಪಿ ರಾಜ್ಯ ಘಟಕದ ಮುಖಂಡ ಅಭಯ್ ಸಿಂಗ್ ಸೇರಿದಂತೆ 50ಕ್ಕೂ ಹೆಚ್ಚಿನ ಜನರನ್ನು ಬಂಧಿಸಲಾಗಿದೆ' ಎಂದು ಪೊಲೀಸರು ಸೋಮವಾರ ತಿಳಿಸಿದ್ದಾರೆ.

'ಭಾನುವಾರ ಸಂಜೆ ಸ್ಥಳೀಯ ಎರಡು ಗುಂಪುಗಳ ನಡುವೆ ಘರ್ಷಣೆ ಉಂಟಾಗಿ, ಇಟ್ಟಿಗೆ ತೂರಾಟ ಹಾಗೂ ಬೆಂಕಿ ಹಚ್ಚಿದ ಪ್ರಕರಣ ನಡೆದಿದೆ. ಘಟನಾ ಸ್ಥಳದಲ್ಲಿ ಸಿಆರ್‌ಪಿಸಿ ಸೆಕ್ಷನ್ 144ರ ಅಡಿಯಲ್ಲಿ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ' ಎಂದೂ ಮಾಹಿತಿ ನೀಡಿದ್ದಾರೆ.

'ಶಾಸ್ತ್ರಿನಗರದಲ್ಲಿ ಶನಿವಾರ ರಾತ್ರಿ ರಾಮನವಮಿಯ ಧ್ವಜಕ್ಕೆ ಮಾಂಸದ ತುಂಡು ಜೋಡಿಸಿದ್ದನ್ನು ಸ್ಥಳೀಯ ಸಂಘಟನೆಯೊಂದರ ಸದಸ್ಯರು ಕಂಡಿದ್ದರು. ಈ ಘಟನೆಯ ಬಳಿಕ ಸ್ಥಳದಲ್ಲಿ ಉದ್ವಿಗ್ನ ಪರಿಸ್ಥಿತಿ ಉಂಟಾಯಿತು. ಭಾನುವಾರ ಸಂಜೆಯ ವೇಳೆಗೆ ಘರ್ಷಣೆಯಲ್ಲಿ ತೊಡಗಿದ್ದ ಎರಡು ಗುಂಪುಗಳು ಎರಡು ಅಂಗಡಿಗಳು ಹಾಗೂ ಆಟೊ ರಿಕ್ಷಾಗಳನ್ನು ಸುಟ್ಟು ಹಾಕಿದಾಗ ಹಿಂಸಾಚಾರ ಭುಗಿಲೆದ್ದಿತು. ಪರಿಸ್ಥಿತಿ ನಿಯಂತ್ರಣಕ್ಕೆ ಪೊಲೀಸರು ಅಶ್ರುವಾಯು ಪ್ರಯೋಗಿಸಿದರು' ಎಂದು ಪೂರ್ವ ಸಿಂಗ್‌ಭೂಮ್‌ನ ಜಿಲ್ಲಾಧಿಕಾರಿ ವಿಜಯ್ ಜಾಧವ್ ವಿವರಿಸಿದ್ದಾರೆ.

'ಅಭಯ್ ಸಿಂಗ್ ಸೇರಿದಂತೆ 50ಕ್ಕೂ ಹೆಚ್ಚಿನ ಜನರನ್ನು ಬಂಧಿಸಿದ್ದು, ಹೆಚ್ಚಿನ ತನಿಖೆ ಕೈಗೊಳ್ಳಲಾಗಿದೆ. ಪೊಲೀಸರು ಸೋಮವಾರ ಬೆಳಿಗ್ಗೆ ಪಥಸಂಚಲನ ನಡೆಸಿದ್ದಾರೆ. ಶಾಸ್ತ್ರಿ ನಗರದಲ್ಲಿ ಕಾನೂನು ಸುವ್ಯವಸ್ಥೆ ಪಾಲನೆಗೆ ಪೊಲೀಸ್ ಭದ್ರತಾ ವ್ಯವಸ್ಥೆಯನ್ನೂ ಕಲ್ಪಿಸಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ಇಂಟರ್‌ನೆಟ್ ಸೇವೆಗೆ ಅಡ್ಡಿಪಡಿಸಲಾಗಿದೆ ಎಂದು ಸ್ಥಳೀಯರು ದೂರಿದ್ದಾರೆ. ಆದರೆ, ಈ ಬಗ್ಗೆ ಯಾವುದೇ ಅಧಿಕೃತ ಮಾಹಿತಿ ತಿಳಿದುಬಂದಿಲ್ಲ.



ಜಾರ್ಖಂಡ್‌ನ ಜಮ್‌ಷೆಡ್‌ಪುರದ ಶಾಸ್ತ್ರಿನಗರದಲ್ಲಿ ಭಾನುವಾರ ರಾತ್ರಿ ಎರಡು ಗುಂಪುಗಳ ನಡುವೆ ನಡೆದ ಘರ್ಷಣೆಯಲ್ಲಿ ಅಂಗಡಿ ಮತ್ತು ವಾಹನಗಳು ಅಗ್ನಿಗೆ ಆಹುತಿಯಾಗಿವೆ —ಪಿಟಿಐ ಚಿತ್ರ

ಕೊವೊವ್ಯಾಕ್ಸ್ ಬೂಸ್ಟರ್ ಡೋಸ್‌ಗೆ ₹225 ದರ ನಿಗದಿ

ನವದೆಹಲಿ (ಪಿಟಿಐ): 'ದೇಶದ ವಿವಿಧೆಡೆ ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವ ಬೆನ್ನಲ್ಲೇ ಕೇಂದ್ರ ಆರೋಗ್ಯ ಸಚಿವಾಲಯಕ್ಕೆ ಪತ್ರ ಬರೆದಿದ್ದ ಸೀರಂ ಇನ್‌ಸ್ಟಿಟ್ಯೂಟ್, ತಾನು ಅಭಿವೃದ್ಧಿಪಡಿಸಿರುವ ಕೊವೊವ್ಯಾಕ್ಸ್ ಲಸಿಕೆಯನ್ನು ವಯಸ್ಕರಿಗೆ ಬೂಸ್ಟರ್ ಡೋಸ್‌ನಂತೆ ನೀಡುವ ವಿಚಾರವನ್ನು ಕೋವಿನ್ ಪೋರ್ಟಲ್‌ನಲ್ಲಿ ಸೇರ್ಪಡೆ ಮಾಡುವಂತೆ ಮನವಿ ಮಾಡಿತ್ತು. ಇದಕ್ಕೆ ಕೇಂದ್ರ ಆರೋಗ್ಯ ಸಚಿವ ಮನ್ಸುಖ್ ಮಾಂಡವೀಯಾ ಅವರು ಒಪ್ಪಿಗೆ ನೀಡಿದ್ದಾರೆ' ಎಂದು ಮೂಲಗಳು ಸೋಮವಾರ ತಿಳಿಸಿವೆ.

'ಕೊವೊವ್ಯಾಕ್ಸ್ ಬೂಸ್ಟರ್ ಡೋಸ್, ಕೆಲ ದಿನಗಳಲ್ಲೇ ಕೋವಿನ್ ಪೋರ್ಟಲ್‌ನಲ್ಲಿ ಲಭ್ಯವಾಗಲಿದೆ. ಡೋಸ್‌ವೊಂದಕ್ಕೆ ₹225 ದರ ನಿಗದಿಪಡಿಸಲಾಗಿದೆ. ಇದಕ್ಕೆ ಜಿಎಸ್‌ಟಿಯೂ ಅನ್ವಯವಾಗಲಿದೆ' ಎಂದು ಮಾಹಿತಿ ನೀಡಿವೆ.

ಈಗಾಗಲೇ ಕೋವಿಶೀಲ್ಡ್ ಹಾಗೂ ಕೋವ್ಯಾಕ್ಸಿನ್ ಲಸಿಕೆ ಪಡೆದಿರುವ ವರಿಗೂ ಕೊವೊವ್ಯಾಕ್ಸ್ ಬೂಸ್ಟರ್ ಡೋಸ್ ನೀಡಬಹುದಾಗಿದೆ.

ದೇಶದಲ್ಲಿ ಒಂದೇ ದಿನ 5,888 ಹೊಸ ಪ್ರಕರಣ ದೇಶದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಮತ್ತೆ ಹೆಚ್ಚಾಗುತ್ತಿದ್ದು, ಒಂದೇ ದಿನ ಹೊಸದಾಗಿ 5,888 ಪ್ರಕರಣಗಳು ದಾಖಲಾಗಿವೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ಸೋಮವಾರ ತಿಳಿಸಿದೆ. ಸಕ್ರಿಯ ಪ್ರಕರಣಗಳ ಒಟ್ಟು ಸಂಖ್ಯೆ 35,199ಕ್ಕೆ ಏರಿಕೆಯಾಗಿದೆ.

ಎಎಪಿಗೆ ರಾಷ್ಟ್ರೀಯ ಪಕ್ಷ ಸ್ಥಾನ: ಚುನಾವಣಾ ಆಯೋಗ

ನವದೆಹಲಿ (ಪಿಟಿಐ): ಆಮ್ ಆದ್ಮಿ ಪಕ್ಷಕ್ಕೆ (ಎಎಪಿ) ರಾಷ್ಟ್ರೀಯ ಪಕ್ಷ ಎಂದು ಕೇಂದ್ರ ಚುನಾವಣಾ ಆಯೋಗ ಮಾನ್ಯತೆ ನೀಡಿದೆ. ಆದರೆ, ಅಖಿಲ ಭಾರತ ತೃಣಮೂಲ ಕಾಂಗ್ರೆಸ್, ರಾಷ್ಟ್ರೀಯವಾದಿ ಕಾಂಗ್ರೆಸ್ ಪಕ್ಷ (ಎನ್‌ಸಿಪಿ) ಮತ್ತು ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾಗೆ (ಸಿಪಿಐ) ಇದ್ದ ರಾಷ್ಟ್ರೀಯ ಪಕ್ಷದ ಸ್ಥಾನವನ್ನು ಹಿಂತೆಗೆದುಕೊಂಡಿದೆ.

ಉತ್ತರ ಪ್ರದೇಶದಲ್ಲಿ ಆರ್‌ಎಲ್‌ಡಿ, ಆಂಧ್ರಪ್ರದೇಶದಲ್ಲಿ ಬಿಆರ್‌ಎಸ್, ಮಣಿಪುರದಲ್ಲಿ ಪಿಡಿಎ, ಪುದುಚೇರಿಯಲ್ಲಿ ಪಿಎಂಕೆ, ಪಶ್ಚಿಮ ಬಂಗಾಳದಲ್ಲಿ ಆರ್‌ಎಸ್‌ಪಿ ಮತ್ತು ಮಿಜೋರಾಂನಲ್ಲಿ ಎಂಪಿಸಿಗೆ ನೀಡಿದ್ದ ರಾಜ್ಯ ಪಕ್ಷದ ಸ್ಥಾನವನ್ನು ರದ್ದುಗೊಳಿಸಲಾಗಿದೆ.

ದೆಹಲಿ, ಗೋವಾ, ಪಂಜಾಬ್ ಮತ್ತು ಗುಜರಾತ್ ರಾಜ್ಯಗಳಲ್ಲಿನ ಚುನಾವಣಾ ಸಾಧನೆಯ ಆಧಾರದ ಮೇಲೆ ಎಎಪಿಯನ್ನು ರಾಷ್ಟ್ರೀಯ ಪಕ್ಷವೆಂದು ಗುರುತಿಸಲಾಗಿದೆ ಎಂದು ಆಯೋಗವು ಸೋಮವಾರ ತಿಳಿಸಿದೆ. ಎಎಪಿ ಪಕ್ಷವು ದೆಹಲಿ ಮತ್ತು ಪಂಜಾಬ್‌ನಲ್ಲಿ ಅಧಿಕಾರದಲ್ಲಿದೆ.

ಬಿಜೆಪಿ, ಕಾಂಗ್ರೆಸ್, ಸಿಪಿಎಂ, ಬಹುಜನ ಸಮಾಜ ಪಕ್ಷ, ನ್ಯಾಷನಲ್ ಪೀಪಲ್ಸ್ ಪಾರ್ಟಿ (ಎನ್‌ಪಿಪಿ) ಮತ್ತು ಎಎಪಿ ಈಗ ರಾಷ್ಟ್ರೀಯ ಪಕ್ಷಗಳಾಗಿವೆ.

'ಯುಪಿಎಸ್‌ಸಿ ಮೂಲಕ ನೇಮಕವಾಗುವ ಅಧಿಕಾರಿಗಳು ದರೋಡೆಕೋರರು!'

ಒಂದನೇ ಪುಟದಿಂದ...

'ಯುಪಿಎಸ್‌ಸಿಯಲ್ಲಿ ಆಗುತ್ತಿರುವ ಪ್ರಮಾದಗಳನ್ನು ಸರಿಪಡಿಸಲು ಸ್ವತಃ ಸಚಿವರಾಗಿರುವ ಟುಡು ಅವರು ಸಂಬಂಧಿಸಿದ ಸಚಿವಾಲಯವನ್ನು ಕೋರಬಹುದು' ಎಂದೂ ಸಾಹು ತಿಳಿಸಿದ್ದಾರೆ.

'ಯುಪಿಎಸ್‌ಸಿ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆ ಮೂಲಕ ಆಯ್ಕೆಯಾದವರು ತುಂಬಾ ಪರಿಣತರಾಗಿದ್ದು, ಉತ್ತಮ ಸ್ಥಾನದಲ್ಲಿರುತ್ತಾರೆ ಎಂದು ಭಾವಿಸಿದ್ದೆ. ಆದರೆ ಈಗಿನ ಪರಿಸ್ಥಿತಿಯಲ್ಲಿ ಆ ಮಾತು ಸುಳ್ಳಾಗಿದೆ. ಈಗ ನೇಮಕವಾಗುವ ಹೆಚ್ಚಿನ ಅಧಿಕಾರಿಗಳು ದರೋಡೆಕೋರರ ಮನಃಸ್ಥಿತಿಯನ್ನು ಹೊಂದಿರುತ್ತಾರೆ. ಎಲ್ಲ ಅಧಿಕಾರಿಗಳು ಇದೇ ರೀತಿ ಇರುತ್ತಾರೆ ಎಂದು ನಾನು ಹೇಳುವುದಿಲ್ಲ. ಆದರೆ, ಹೆಚ್ಚಿನವರು ಆ ರೀತಿ ಇರುತ್ತಾರೆ' ಎಂದು ಸಚಿವರು ಹೇಳಿದ್ದರು. 'ಯುಪಿಎಸ್‌ಸಿ ಕಚೇರಿಯು ದೆಹಲಿಯಲ್ಲಿರುವ ನಮ್ಮ ನಿವಾಸದ ಹಿಂಭಾಗದಲ್ಲಿದೆ. ಆರಂಭದಲ್ಲಿ ಅದರ ಬಗ್ಗೆ ಹೆಚ್ಚಿನ ಗೌರವವನ್ನು ಹೊಂದಿದ್ದೆ. ಆದರೆ, ಈಗ ಮನೋಭಾವ ಬದಲಾಗಿದೆ. ಶಾಲೆಗಳಲ್ಲಿ ನೈತಿಕ ಮತ್ತು ಆಧ್ಯಾತ್ಮಕ ಶಿಕ್ಷಣದ ಕೊರತೆಯೇ ಇಂದಿನ ಈ ಸ್ಥಿತಿಗೆ ಕಾರಣ' ಎಂದು ಅವರು ಹೇಳಿದ್ದರು.

ಒಬ್ಬ ಕಳ್ಳನಿಗೆ ಕಠಿಣ ಶಿಕ್ಷೆಯಾಗುತ್ತದೆ. ಆದರೆ, ದೊಡ್ಡ ದೊಡ್ಡ ಮಾಫಿಯಾಗಳಲ್ಲಿ ಶಾಮೀಲಾಗಿರುವ ಇಂತಹ ಅಧಿಕಾರಿಗಳನ್ನು ಸಮಾಜ ಏಕೆ ರಕ್ಷಿಸುತ್ತದೆ ಎಂದು ಅಸಮಾಧಾನ ಹೊರಹಾಕಿದ್ದರು.

ನಮ್ಮ ವ್ಯಾಪ್ತಿ ಮೀರಿದ್ದು– ಆಯೋಗ • 4 ವಾರದಲ್ಲಿ ಉತ್ತರಿಸಲು ಕೇಂದ್ರಕ್ಕೆ 'ಸುಪ್ರೀಂ' ಸೂಚನೆ

'ಚುನಾವಣೆಗೆ 'ಕ್ರಿಮಿನಲ್'ಗಳ ಸ್ಪರ್ಧೆಗೆ ನಿಷೇಧ'

ಪ್ರಜಾವಾಣಿ ವಾರ್ತೆ

ನವದೆಹಲಿ: 'ರಾಜಕಾರಣವನ್ನು ಅಪರಾಧೀಕರಣ ಮುಕ್ತಗೊಳಿಸುವ ಕಾರ್ಯವು ನಮ್ಮ ವ್ಯಾಪ್ತಿಯನ್ನು ಮೀರಿದ್ದಾಗಿದೆ. ಇದಕ್ಕಾಗಿ ಕಾಯ್ದೆಗೆ ತಿದ್ದುಪಡಿ ತರುವುದು ಅಗತ್ಯವಾಗಿದೆ' ಎಂದು ಕೇಂದ್ರ ಚುನಾವಣಾ ಆಯೋಗವು ಸೋಮವಾರ ಸುಪ್ರೀಂ ಕೋರ್ಟ್‌ಗೆ ತಿಳಿಸಿತು.

'ರಾಜಕಾರಣವನ್ನು ಅಪರಾಧೀಕರಣ ಮುಕ್ತಗೊಳಿಸಲು ಆಯೋಗವು ಈಗಾಗಲೇ ಹಲವು ಕ್ರಮಗಳನ್ನು ಕೈಗೊಂಡಿದೆ. ಈ ನಿಟ್ಟಿನಲ್ಲಿ ಕೆಲ ಶಿಫಾರಸುಗಳನ್ನೂ ಮಾಡಿದೆ. ಆದರೆ, ಇದನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಕಾಯ್ದೆಗೆ ತಿದ್ದುಪಡಿ ಅಗತ್ಯ' ಎಂದು ಹೇಳಿತು.

ಈ ಸಂಬಂಧ ಲಿಖಿತ ಪ್ರತಿಕ್ರಿಯೆಯನ್ನು ದಾಖಲಿಸಿದ ಆಯೋಗವು, '2016ರ ಚುನಾವಣಾ ಸುಧಾರಣೆಗಳು' ಕುರಿತ ಅಂಶಗಳನ್ನು 2004ರಲ್ಲಿ ಮಾಡಿದ್ದ ಶಿಫಾರಸುಗಳಲ್ಲಿಯೂ ಉಲ್ಲೇಖಿಸಿದೆ. ನಿರ್ದಿಷ್ಟ ಸ್ವರೂಪದ ಅಪರಾಧಗಳಿರುವ, ಕನಿಷ್ಠ 5 ವರ್ಷ ಸಜೆಗೆ ಒಳಗಾಗಿರುವ, ಆರೋಪಪಟ್ಟಿ ದಾಖಲಿಸಿರುವ, ಚುನಾವಣೆಗೆ ಕನಿಷ್ಠ ಆರು ತಿಂಗಳು ಮೊದಲು ಪ್ರಕರಣ ದಾಖಲಾಗಿರುವ ವ್ಯಕ್ತಿಗೆ ಚುನಾವಣೆಗಳಲ್ಲಿ ಸ್ಪರ್ಧಿಸಲು ಅವಕಾಶ ಇರದಂತೆ ನಿಷೇಧ ಹೇರಬೇಕು ಎಂದು ಶಿಫಾರಸು ಮಾಡಲಾಗಿದೆ ಎಂದು ಆಯೋಗವು ತಿಳಿಸಿದೆ.

ವಕೀಲ ಅಶ್ವಿನ್ ಕುಮಾರ್ ಉಪಾಧ್ಯಾಯ ಅವರು ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಗೆ ಸಂಬಂಧಿಸಿ ಸುಪ್ರೀಂ ಕೋರ್ಟ್‌ನ ಸೂಚನೆಯಂತೆ ಪ್ರತಿಕ್ರಿಯೆಯಾಗಿ ಆಯೋಗವು ಈ ಪ್ರಮಾಣಪತ್ರ ಸಲ್ಲಿಸಿತು. ಗಂಭೀರ ಪ್ರಕರಣಗಳಿರುವರಿಗೆ ಚುನಾವಣೆಗೆ ಸ್ಪರ್ಧಿಸದಂತೆ ನಿಷೇಧ ಹೇರಬೇಕು ಎಂದು ಅರ್ಜಿದಾರರು ಕೋರಿದ್ದರು.

ಅತ್ಯಾಚಾರ, ಕೊಲೆ, ಅಪಹರಣ, ಸುಲಿಗೆ, ಲಂಚ, ಹಣ ಅಕ್ರಮ ವರ್ಗಾವಣೆ, ಆದಾಯ ಮೀರಿದ ಆಸ್ತಿಗಳಿಕೆ ಇತ್ಯಾದಿ ಗಂಭೀರ ಸ್ವರೂಪದ ಅಪರಾಧ ಪ್ರಕರಣಗಳಿರುವ ವ್ಯಕ್ತಿಗೆ ಚುನಾವಣೆಗೆ ಸ್ಪರ್ಧಿಸುವುದರಿಂದ ನಿಷೇಧ ಹೇರಬೇಕು ಎಂದು ಕೋರಿದ ಅರ್ಜಿಗೆ ಸಂಬಂಧಿಸಿದಂತೆ ನಾಲ್ಕು ವಾರದಲ್ಲಿ ಪ್ರತಿಕ್ರಿಯೆಯನ್ನು ದಾಖಲಿಸುವಂತೆ ಸೂಚಿಸಿ ಕೇಂದ್ರಕ್ಕೆ ನೋಟಿಸ್ ಅನ್ನು ಕೋರ್ಟ್ ಜಾರಿ ಮಾಡಿತು.

ನ್ಯಾಯಮೂರ್ತಿಗಳಾದ ಕೆ.ಎಂ.ಜೋಸೆಫ್ ಮತ್ತು ಬಿ.ವಿ. ನಾಗರತ್ನ ಅವರಿದ್ದ ಪೀಠ ಪ್ರಕರಣದ ವಿಚಾರಣೆ ನಡೆಸಿತು. 'ಭ್ರಷ್ಟಾಚಾರವು ಜನಸಾಮಾನ್ಯರ ಮೇಲೆ ಪರಿಣಾಮ ಬೀರುವ ಕಾರಣ, ಇದು ಬಹುಮುಖ್ಯವಾದ ವಿಷಯ' ಎಂದು ಅಭಿಪ್ರಾಯಪಟ್ಟಿದ್ದ ಪೀಠ, ಈ ಬಗ್ಗೆ ಪ್ರತಿಕ್ರಿಯೆ ದಾಖಲಿಸಲು ಫೆ. 26ರಂದು ಕೇಂದ್ರಕ್ಕೆ ಕೊನೆಯ ಅವಕಾಶ ನೀಡಿತ್ತು.

ಮುಟ್ಟಿನ ನೈರ್ಮಲ್ಯ: ರಾಷ್ಟ್ರೀಯ ನೀತಿ ರೂಪಿಸಲು ಸೂಚನೆ

ನವದೆಹಲಿ (ಪಿಟಿಐ): ಶಾಲೆಗಳಲ್ಲಿ ವಿದ್ಯಾರ್ಥಿನಿಯರ ಮುಟ್ಟಿನ ನೈರ್ಮಲ್ಯ ನಿರ್ವಹಣೆಗಾಗಿ ಎಲ್ಲಾ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳು ಅನುಷ್ಠಾನಗೊಳಿಸಬಹುದಾದ ಪ್ರಮಾಣಿತ ಕಾರ್ಯಾಚರಣೆ ವಿಧಾನ (ಎಸ್‌ಒಪಿ) ಮತ್ತು ರಾಷ್ಟ್ರೀಯ ಮಾದರಿಯೊಂದನ್ನು ಸಿದ್ಧಪಡಿಸುವಂತೆ ಸುಪ್ರೀಂ ಕೋರ್ಟ್ ಸೋಮವಾರ ಕೇಂದ್ರ ಸರ್ಕಾರಕ್ಕೆ ಸೂಚಿಸಿದೆ.

ಇದನ್ನು 'ಅತ್ಯಂತ ಮಹತ್ವದ' ವಿಷಯ ಎಂದು ಪರಿಗಣಿಸಿರುವ ಸುಪ್ರೀಂ ಕೋರ್ಟ್, ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ ಏಕರೂಪದ ರಾಷ್ಟ್ರೀಯ ನೀತಿ ಜಾರಿಗೆ ಕೇಂದ್ರ ಸರ್ಕಾರವು ಎಲ್ಲಾ ಇಲಾಖೆ ಮತ್ತು ಸಂಘಸಂಸ್ಥೆಗಳೊಂದಿಗೆ ತೊಡಗಿಸಿಕೊಳ್ಳಬೇಕು ಎಂದು ತಿಳಿಸಿದೆ.

ಮುಖ್ಯನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಮತ್ತು ನ್ಯಾಯಮೂರ್ತಿಗಳಾದ ಪಿ.ಎಸ್.ನರಸಿಂಹ ಮತ್ತು ಜೆ.ಬಿ.ಪಾರ್ದಿವಾಲ ಅವರನ್ನು ಒಳಗೊಂಡ ನ್ಯಾಯಪೀಠವು, ರಾಷ್ಟ್ರೀಯ ನೀತಿ ನಿರೂಪಣೆಗೆ ಸಂಬಂಧಿತ ದತ್ತಾಂಶ ಸಂಗ್ರಹಣೆ ಮತ್ತು ರಾಜ್ಯಗಳೊಂದಿಗೆ ಸಮನ್ವಯ ಸಾಧಿಸಲು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯದ ಕಾರ್ಯದರ್ಶಿಯನ್ನು ನೋಡಲ್ ಅಧಿಕಾರಿಯಾಗಿ ನೇಮಿಸಿದೆ.

ಇದೇ ವೇಳೆ ಈಗಾಗಲೇ ಮುಟ್ಟಿನ ನೈರ್ಮಲ್ಯಕ್ಕಾಗಿ ಜಾರಿಗೊಳಿಸಿರುವ ಯೋಜನೆಗಳ ಕುರಿತು ವರದಿ ನೀಡುವಂತೆ ರಾಜ್ಯ ಸರ್ಕಾರಗಳಿಗೆ ನಿರ್ದೇಶನ ನೀಡಿದೆ.



ವುಝುಗೆ ಪರ್ಯಾಯ ಕೋರಿ ಅರ್ಜಿ

ನವದೆಹಲಿ: ರಂಜಾನ್ ಹಿನ್ನೆಲೆಯಲ್ಲಿ ಜ್ಞಾನವಾಪಿ–ಕಾಶಿ ವಿಶ್ವನಾಥ ಮಸೀದಿಯಲ್ಲಿ ನಮಾಜ್‌ಗೂ ಮೊದಲು ಮಾಡಬೇಕಾದ ವುಝುಗೆ (ಅಂಗ ಶುದ್ಧಿ) ಪರ್ಯಾಯ ವ್ಯವಸ್ಥೆಗೆ ಅವಕಾಶ ನೀಡಲು ಕೋರಿ ಮುಸ್ಲಿಮರು ಸುಪ್ರೀಂ ಕೋರ್ಟ್‌ನಲ್ಲಿ ಸಲ್ಲಿಸಿದ್ದ ಅರ್ಜಿ ವಿಚಾರಣೆಯನ್ನು ಏ.14ರಂದು ನಡೆಸುವುದಾಗಿ ನ್ಯಾಯಾಲಯ ಸೋಮವಾರ ಹೇಳಿದೆ.

ಮುಸ್ಲಿಮರ ಪರ ಹಿರಿಯ ವಕೀಲ ಹುಜೀಫಾ ಅಹಮದಿ ಹಾಜರಿದ್ದರು. 'ಅರ್ಜಿ ಪರಿಶೀಲಿಸಲಾಗುವುದು' ಎಂದು ಮುಖ್ಯ ನ್ಯಾಯಮೂರ್ತಿಗಳಾದ ಡಿ.ವೈ.ಚಂದ್ರಚೂಡ್ ಅವರ ನೇತೃತ್ವದ ತ್ರಿಸದಸ್ಯರ ಪೀಠವು ಹೇಳಿತು.

'ಅಂಗ ಶುದ್ಧೀಕರಣಕ್ಕಾಗಿ ಇದ್ದ ಜಾಗದಲ್ಲಿ 'ಶಿವಲಿಂಗ' ಇದೆ ಎಂದು ಜಿಲ್ಲಾ ಅಧಿಕಾರಿಗಳು ಮುಚ್ಚಿದ್ದಾರೆ. ಶೌಚಾಲಯವನ್ನೂ ಮುಚ್ಚಲಾಗಿದೆ' ಎಂದು ಅಜುಂಮ್ ಇಂತಿಝಾಮಿಯಾ ಮಸೀದಿ ತನ್ನ ಅರ್ಜಿಯಲ್ಲಿ ಹೇಳಿದೆ. ಈ ಕಾರಣದಿಂದಾಗಿ ವುಝುಗೆ ಸ್ಥಳಾವಕಾಶ ಇಲ್ಲದಂತಾಗಿದೆ. ನಮಾಜ್‌ಗಾಗಿ ಮಸೀದಿಗೆ ಬರುವ ಮೊದಲು ಭಕ್ತರು ಮನೆಯಲ್ಲಿಯೇ ಅಂಗಶುದ್ಧಿ ಮಾಡಿಕೊಂಡು ಬರಬೇಕು. ಇಲ್ಲವೇ ಮ್ಯಾನೇಜಿಂಗ್ ಸಮಿತಿಯು ಸದ್ಯಕ್ಕೆ ವ್ಯವಸ್ಥೆ ಮಾಡಿರುವ ಡ್ರಮ್‌ನಿಂದಲೇ ಅಂಗಶುದ್ಧಿ ಮಾಡಿಕೊಳ್ಳಬೇಕು' ಎಂದು ಅರ್ಜಿಯಲ್ಲಿ ಹೇಳಲಾಗಿದೆ.

'ನಕಲಿ' ಎನ್‌ಕೌಂಟರ್: ವಿವರ ನೀಡಲು ಗುಜರಾತ್ ಸರ್ಕಾರ ಆಕ್ಷೇಪ

ನವದೆಹಲಿ (ಪಿಟಿಐ): ಗುಜರಾತ್‌ನಲ್ಲಿ 2002ರಿಂದ 2006ರ ನಡುವೆ ನಡೆದ 'ನಕಲಿ' ಎಂದು ಆರೋಪಿಸಲಾದ ಎನ್‌ಕೌಂಟರ್‌ಗಳ ಮಾಹಿತಿಯನ್ನು ಅರ್ಜಿದಾರರ ಜೊತೆಗೆ ಹಂಚಿಕೊಳ್ಳುವುದಕ್ಕೆ ಗುಜರಾತ್ ಸರ್ಕಾರ ಸುಪ್ರೀಂ ಕೋರ್ಟ್‌ನಲ್ಲಿ ಆಕ್ಷೇಪವನ್ನು ದಾಖಲಿಸಿದೆ.

ಹಿರಿಯ ಪತ್ರಕರ್ತ ಬಿ.ಜಿ.ವರ್ಗೀಸ್ ಮತ್ತು ಬಾಲಿವುಡ್‌ನ ಚಿತ್ರಸಾಹಿತಿ ಜಾವೇದ್ ಅಖ್ತರ್, ಶಬ್ನಮ್ ಹಾಶ್ಮಿ ಅವರು ಈ ಸಂಬಂಧ ಪ್ರತ್ಯೇಕ ಅರ್ಜಿ ಸಲ್ಲಿಸಿದ್ದು, ತನಿಖೆಗೆ ಒತ್ತಾಯಿಸಿದ್ದರು. ಈ ಪೈಕಿ ಅರ್ಜಿದಾರರಲ್ಲಿ ಒಬ್ಬರಾದ ವರ್ಗೀಸ್ ಅವರು 2014ರಲ್ಲಿ ಮೃತಪಟ್ಟಿದ್ದಾರೆ.

ಅರ್ಜಿಗಳ ಕುರಿತ ಮೇಲ್ವಿಚಾರಣೆಗೆ ವಿಶ್ರಾಂತ ನ್ಯಾಯಮೂರ್ತಿ ಎಚ್.ಎಸ್.ಬೇಡಿ ನೇತೃತ್ವದಲ್ಲಿ ಸುಪ್ರೀಂ ಕೋರ್ಟ್ ಸಮಿತಿ ರಚಿಸಿತ್ತು. ಸಮಿತಿಯು ಗುಜರಾತ್ ರಾಜ್ಯದಲ್ಲಿ 2002 ರಿಂದ 2006ರ ಅವಧಿಯಲ್ಲಿ ನಡೆಸಿರುವ 17 ಎನ್‌ಕೌಂಟರ್‌ಗಳ ತನಿಖೆ ನಡೆಸಿ, ವರದಿ ಸಲ್ಲಿಸಿತ್ತು. 17 ಎನ್‌ಕೌಂಟರ್‌ಗಳಲ್ಲಿ ಮೂರು ಪ್ರಕರಣಗಳಲ್ಲಿ ಪೊಲೀಸ್ ಅಧಿಕಾರಿಗಳನ್ನು ಶಿಕ್ಷೆಗೆ ಗುರಿಪಡಿಸಬೇಕು ಎಂದು ವರದಿಯಲ್ಲಿ ಶಿಫಾರಸು ಮಾಡಿತ್ತು.


ಶ್ರದ್ಧಾ ಕೊಲೆ ಪ್ರಕರಣ: ಸುದ್ದಿ ಪ್ರಸಾರಕ್ಕೆ ನಿರ್ಬಂಧ

ನವದೆಹಲಿ: ಶ್ರದ್ಧಾ ವಾಲ್ಕರ್ ಕೊಲೆ ಪ್ರಕರಣದ ಆರೋಪಿ, ಮೃತಳ ಸಹ ಜೀವನ ಗೆಳೆಯನಾಗಿದ್ದ ಅಫ್ತಾಬ್ ಅಮಿನ್ ಪೂನಾವಾಲಾಗೆ ನಡೆಸಿರುವ ಮಂಪರು ಪರೀಕ್ಷೆಯ ವರದಿ ಪ್ರಸಾರ ಮಾಡದಂತೆ ಸ್ಥಳೀಯ ಕೋರ್ಟ್, ಆಜ್ ತಕ್ ಸುದ್ದಿವಾಹಿನಿಗೆ ನಿರ್ಬಂಧ ಹೇರಿದೆ.

ತನಿಖೆಗೆ ಸಂಬಂಧಿಸಿದ ಸೂಕ್ಷ್ಮವಾದ ಮಾಹಿತಿಗಳನ್ನು ಬಹಿರಂಗಪಡಿಸುವುದು ಆರೋಪಿಯ ಮಾನಸಿಕ ಸ್ಥಿತಿಯ ಮೇಲೆ ಪರಿಣಾಮ ಬೀರಬಹುದು ಎಂದು ಕೋರ್ಟ್ ಹೇಳಿದೆ.

ವ್ಯಕ್ತಿಯ ಜೀವನ ಮತ್ತು ಸ್ವಾತಂತ್ರ್ಯಕ್ಕೆ ಸಂವಿಧಾನದ 21ನೇ ವಿಧಿಯು ರಕ್ಷಣೆ ನೀಡಲಿದೆ. ಸಂಬಂಧಿತ ವ್ಯಕ್ತಿಯ ಮಾನಸಿಕ ಸ್ಥಿತಿ ರಕ್ಷಣೆಗೂ ಒತ್ತು ನೀಡಲಿದೆ ಎಂಬ ಅಂಶವನ್ನು ಕೋರ್ಟ್ ಉಲ್ಲೇಖಿಸಿದೆ.

ಸಿ.ಆರ್. ರಾವ್‌ಗೆ ಅಂತರರಾಷ್ಟ್ರೀಯ ಪ್ರಶಸ್ತಿ



ವಾಷಿಂಗ್ಟನ್ (ಪಿಟಿಐ): ಪ್ರಖ್ಯಾತ ಭಾರತೀಯ- ಅಮೆರಿಕನ್ ಗಣಿತ-ಶಾಸ್ತ್ರಜ್ಞ ಮತ್ತು ಸಂಖ್ಯಾಶಾಸ್ತ್ರಜ್ಞ ಕ್ಯಾಲ್ಯಂಪುಡಿ ರಾಧಾಕೃಷ್ಣ ರಾವ್ (ಸಿ.ಆರ್. ರಾವ್) ಅವರು 75 ವರ್ಷಗಳ ಹಿಂದೆ ಸಂಖ್ಯಾಶಾಸ್ತ್ರೀಯ ಚಿಂತನೆಯಲ್ಲಿ ಕ್ರಾಂತಿಯನ್ನುಂಟು ಮಾಡಿದ ಕಾರ್ಯಕ್ಕಾಗಿ 2023ರ ಅಂತರರಾಷ್ಟ್ರೀಯ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಇದು ಈ ಕ್ಷೇತ್ರದಲ್ಲಿ ನೊಬೆಲ್ ಪ್ರಶಸ್ತಿಗೆ ಸಮಾನವಾದದ್ದಾಗಿದೆ.

'75 ವರ್ಷಗಳ ಹಿಂದೆ ರಾವ್ ಅವರು ಮಾಡಿದ ಕೆಲಸವು ವಿಜ್ಞಾನ ಮೇಲೆ ಆಳವಾದ ಪ್ರಭಾವವನ್ನು ಬೀರುತ್ತಿದೆ' ಎಂದು ಇಂಟರ್‌ನ್ಯಾಷನಲ್ ಪ್ರೈಜ್ ಇನ್ ಸ್ಟಾಟಿಸ್ಟಿಕ್ಸ್ ಫೌಂಡೇಷನ್ ತನ್ನ ಹೇಳಿಕೆಯಲ್ಲಿ ತಿಳಿಸಿದೆ.

ಜುಲೈ ತಿಂಗಳಲ್ಲಿ ಕೆನಡಾದ ಒಟ್ಟಾವದಲ್ಲಿ ನಡೆಯಲಿರುವ ಇಂಟರ್‌ನ್ಯಾಷನಲ್ ಸ್ಟ್ಯಾಟಿಸ್ಟಿಕಲ್ ಇನ್‌ಸ್ಟಿಟ್ಯೂಟ್ ವರ್ಲ್ಡ್ ಸ್ಟ್ಯಾಟಿಸ್ಟಿಕ್ಸ್ ಕಾಂಗ್ರೆಸ್‌ನಲ್ಲಿ 102 ವರ್ಷ ವಯಸ್ಸಿನ ಸಿ.ಅರ್. ರಾವ್ ಅವರು ಪ್ರಶಸ್ತಿಯನ್ನು ಸ್ವೀಕರಿಸಲಿದ್ದಾರೆ. ಪ್ರಶಸ್ತಿಯು ₹ 65 ದಶಲಕ್ಷ ನಗದನ್ನು ಒಳಗೊಂಡಿದೆ.

ಕರ್ನಾಟಕದ ನಂಟು: ಕರ್ನಾಟಕದ ಹೂವಿನಹಡಗಲಿಯ ತೆಲುಗು ಕುಟುಂಬದಲ್ಲಿ ಜನಿಸಿದ ರಾವ್ ಅವರ ಶಾಲಾಶಿಕ್ಷಣವು ಆಂಧ್ರ ಪ್ರದೇಶದಲ್ಲಿ ಆಯಿತು. ಎಂ.ಎಸ್ಸಿ ಗಣಿತಶಾಸ್ತ್ರದಲ್ಲಿ ಆಂಧ್ರ ವಿಶ್ವವಿದ್ಯಾಲಯದಿಂದ ಸ್ನಾತಕೋತ್ತರ ಪದವಿ ಪಡೆದ ಅವರು, 1943ರಲ್ಲಿ ಕಲ್ಕತ್ತಾ ವಿಶ್ವವಿದ್ಯಾಲಯದಲ್ಲಿ ಸಂಖ್ಯಾಶಾಸ್ತ್ರದಲ್ಲೂ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ಬಳಿಕ ಕೇಂಬ್ರಿಜ್ ವಿಶ್ವವಿದ್ಯಾಲಯದ ಕಿಂಗ್ಸ್ ಕಾಲೇಜಿನಲ್ಲಿ ಪಿಎಚ್.ಡಿ ಮುಗಿಸಿದ ಅವರು 1965ರಲ್ಲಿ ಡಿಎಸ್ಸಿ ಪದವಿಯನ್ನೂ ಪಡೆದರು.

ಆರಂಭದಲ್ಲಿ ಕೇಂಬ್ರಿಜ್‌ನ ಇಂಡಿಯನ್ ಸ್ಟ್ಯಾಟಿಸ್ಟಿಕಲ್ ಇನ್‌ಸ್ಟಿಟ್ಯೂಟ್ ಮತ್ತು ಆಂಥ್ರೊಪಾಲಾಜಿಕಲ್ ಮ್ಯೂಸಿಯಂನಲ್ಲಿ ಕೆಲಸ ಮಾಡಿದರು. ಬಳಿಕ ಭಾರತೀಯ ಅಂಕಿ– ಅಂಶ ಸಂಸ್ಥೆಯ ನಿರ್ದೇಶಕರಾಗಿ, ಜವಾಹರಲಾಲ್ ನೆಹರು ವಿಶ್ವವಿದ್ಯಾಲಯದಲ್ಲಿ (ಜೆಎನ್‌ಯು) ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸಿದರು.

ಸಿ.ಆರ್. ರಾವ್ ಅವರು ಪ್ರಸ್ತುತ ಪೆನ್ಸಿಲ್ವೇನಿಯಾ ಸ್ಟೇಟ್ ಯೂನಿವರ್ಸಿಟಿ ಮತ್ತು ಬಫಲೋ ವಿಶ್ವವಿದ್ಯಾಲಯದಲ್ಲಿ ಸಂಶೋಧನಾ ಪ್ರಾಧ್ಯಾಪಕರಾಗಿದ್ದಾರೆ.

ಮಸೂದೆಗಳಿಗೆ ಅನುಮೋದನೆ ರಾಜ್ಯಪಾಲರಿಗೆ ಕಾಲಮಿತಿ ನೀಡಿ

ಒಂದನೇ ಪುಟದಿಂದ

'ರಾಜ್ಯದ ಜನರ ಹಾಗೂ ಸರ್ಕಾರದ 'ಸ್ನೇಹಿತ'ನಾಗಲು ರಾಜ್ಯಪಾಲರು ಸಿದ್ಧರಿಲ್ಲ. ತಮ್ಮ ಹೇಳಿಕೆಗಳ ಮೂಲಕ ವಿಧಾನ ಮಂಡಲದ ಘನತೆಗೆ ಕುಂದು ತರುತ್ತಿದ್ದಾರೆ' ಎಂದು ಆಕ್ರೋಶ ಹೊರಹಾಕಿದರು.

ರಾಜ್ಯಪಾಲರ ವಿರುದ್ಧ ನಿರ್ಣಯ ಮಂಡಿಸುತ್ತಿದ್ದಂತೆಯೇ ಬಿಜೆಪಿ ಸದಸ್ಯರು ಸದನದಿಂದ ಹೊರನಡೆದರು. ನಿರ್ಣಯ ಅಂಗೀಕರಿಸುವ ವೇಳೆಯಲ್ಲಿ ಪ್ರಮುಖ ವಿರೋಧ ಪಕ್ಷವಾದ ಎಐಎಡಿಎಂಕೆ ಸದಸ್ಯರು ಸದನದಿಂದ ಹೊರನಡೆದರು. ಹೀಗಾಗಿ ವಿರೋಧ ಪಕ್ಷಗಳು ಇಲ್ಲದೆಯೇ ಡಿಎಂಕೆಯ ಮಿತ್ರ ಪಕ್ಷ ಪಿಎಂಕೆ ಸದಸ್ಯರ ಬೆಂಬಲದೊಂದಿಗೆ ರಾಜ್ಯಪಾಲರ ವಿರುದ್ಧದ ನಿರ್ಣಯವನ್ನು ವಿಧಾನಸಭೆಯಲ್ಲಿ ಅಂಗೀಕರಿಸಲಾಯಿತು.

ತಡೆಹಿಡಿಯಲಾದ ಮಸೂದೆಗಳು: ನೀಟ್ ಪರೀಕ್ಷೆಯಿಂದ ತಮಿಳುನಾಡಿಗೆ ವಿನಾಯಿತಿ ನೀಡುವ ಮಸೂದೆ ಸೇರಿದಂತೆ ಒಟ್ಟು 13 ಮಸೂದೆಗಳು ಅನುಮೋದನೆಗಾಗಿ ರಾಜ್ಯಪಾಲರ ಮುಂದಿವೆ.

ನಿರ್ಣಯದಲ್ಲೇನಿದೆ?

- ವಿಧಾನ ಮಂಡಲದಲ್ಲಿ ಅಂಗೀಕರಿಸಿರುವ ಮಸೂದೆಗಳಿಗೆ ಅನುಮೋದನೆ ನೀಡದೆ, ಅನಿರ್ದಿಷ್ಟಾವಧಿಗೆ ತಡೆಹಿಡಿದಿರುವ ರಾಜ್ಯಪಾಲರ ಕ್ರಮಕ್ಕೆ ವಿಧಾನಸಭೆಯು ತೀವ್ರವಾದ ವಿಷಾದ ವ್ಯಕ್ತಪಡಿಸುತ್ತದೆ. ಹೀಗೆ ಮಸೂದೆಗಳನ್ನು ತಡೆಹಿಡಿದಿರುವ ರಾಜ್ಯಪಾಲರ ಕ್ರಮವು ರಾಜ್ಯದ ಜನರ ಅಭಿವೃದ್ಧಿಗೆ ವಿರುದ್ಧವಾದ ನಡೆಯಾಗಿದೆ
- ಅನುಮೋದನೆಗಾಗಿ ಸರ್ಕಾರ ಕಳುಹಿಸಿರುವ ಮಸೂದೆಗಳ ಕುರಿತು ರಾಜ್ಯಪಾಲರು ಸಾರ್ವಜನಿಕವಾಗಿ ವಿವಾದಾತ್ಮಕವಾದ ಹೇಳಿಕೆಗಳನ್ನು ನೀಡುತ್ತಿದ್ದಾರೆ. ಇದು ಅವರ ಸ್ಥಾನಕ್ಕೆ ತಕ್ಕುದಾದ ನಡೆಯಲ್ಲ. ಸಂಸದೀಯ ಪ್ರಜಾಪ್ರಭುತ್ವದಲ್ಲಿ ಸಂಸತ್ತು ಅಂತಿಮ ಎನ್ನುವ ಅಂಶವನ್ನು ರಾಜ್ಯಪಾಲರು ಕಡೆಗಣಿಸುತ್ತಿದ್ದಾರೆ
- ಕೇಂದ್ರ ಸರ್ಕಾರ ಹಾಗೂ ರಾಷ್ಟ್ರಪತಿ ಅವರು ತಕ್ಷಣದಲ್ಲಿಯೇ ಮಧ್ಯಪ್ರವೇಶಿಸಿ, ರಾಜ್ಯಪಾಲರಿಗೆ ಸೂಕ್ತ ಸೂಚನೆಗಳನ್ನು ನೀಡಬೇಕು

ಕೆಲವೇ ಗಂಟೆಗಳಲ್ಲಿ ಮಸೂದೆ ಅಂಗೀಕರಿಸಿದ ರಾಜ್ಯಪಾಲ: ಮುಖ್ಯಮಂತ್ರಿ ಸ್ಟಾಲಿನ್ ಅವರು ವಿಧಾನಸಭೆಯಲ್ಲಿ ರಾಜ್ಯಪಾಲರ ವಿರುದ್ಧ ನಿರ್ಣಯ ಅಂಗೀಕರಿಸಿದ ಕೆಲವು ಗಂಟೆಗಳಲ್ಲೇ 'ಆನ್‌ಲೈನ್ ಜೂಜು ತಡೆ ಹಾಗೂ ಆನ್‌ಲೈನ್ ಗೇಮಿಂಗ್ ನಿಯಂತ್ರಣ ಮಸೂದೆ– 2022'ಕ್ಕೆ ರಾಜ್ಯಪಾಲ ರವಿ ಅವರು ಅನುಮೋದನೆ ನೀಡಿದ್ದಾರೆ.

'ಮಸೂದೆಗೆ ರಾಜ್ಯಪಾಲರು ಸಹಿ ಹಾಕಿದ್ದಾರೆ' ಎಂದು ತಮಿಳುನಾಡು ಸರ್ಕಾರದ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ. ವಿಧಾನಸಭೆಯಲ್ಲಿ ಈ ಮಸೂದೆಯನ್ನು ಮಾರ್ಚ್‌ನಲ್ಲಿ ಮತ್ತೊಮ್ಮೆ ಮಂಡಿಸಲಾಗಿತ್ತು. ನಂತರ ಸಹಿಗಾಗಿ ರಾಜ್ಯಪಾಲರಿಗೆ ಕಳುಹಿಸಲಾಗಿತ್ತು.

ಸಂಕ್ಷಿಪ್ತ ಸುದ್ದಿ

ಬಾಲಕನ ತುಟಿಗೆ ಚುಂಬನ: ದಲೈಲಾಮಾ ಕ್ಷಮೆ

ಶಿಮ್ಲಾ (ಪಿಟಿಐ): ಬಾಲಕನ ತುಟಿ ಚುಂಬಿಸಿ, ತಮ್ಮ ನಾಲಿಗೆ ಚೀಪುವಂತೆ ಹೇಳುವ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿ ವ್ಯಾಪಕ ಟೀಕೆ ವ್ಯಕ್ತವಾದ ಬೆನ್ನಲ್ಲೇ ಟಿಬೆಟಿಯನ್ ಧರ್ಮಗುರು ದಲೈಲಾಮಾ ಅವರು ಬಾಲಕ ಹಾಗೂ ಅವರ ಕುಟುಂಬದವರ ಕ್ಷಮೆಯಾಚಿಸಿದ್ದಾರೆ.

ಬಾಲಕನನ್ನು ಚುಂಬಿಸಿದ ಈ ಎರಡು ನಿಮಿಷ ಐದು ಸೆಕೆಂಡುಗಳ ವಿಡಿಯೊದಲ್ಲಿ ದಲೈಲಾಮಾ, 'ಶಾಂತಿ ಮತ್ತು ಸಂತೋಷ ಸೃಷ್ಟಿಸುವ ಒಳ್ಳೆಯ ಮನುಷ್ಯರತ್ತ ಗಮನಿಸಬೇಕೇ ಹೊರತು ಜನರನ್ನು ಕೊಲ್ಲುವ ವ್ಯಕ್ತಿಗಳನ್ನು ಅನುಸರಿಸಬೇಡ' ಎಂದು ಆತನಿಗೆ ಹೇಳಿದ್ದಾರೆ. ಇತ್ತೀಚೆಗೆ ನಡೆದ ಕಾರ್ಯಕ್ರಮದಲ್ಲಿ ಬಾಲಕನೊಬ್ಬ ದಲೈಲಾಮಾ ಅವರನ್ನು ಅಪ್ಪಿಕೊಳ್ಳಬಹುದೇ ಎಂದು ಕೇಳಿರುವ ಸನ್ನಿವೇಶದ ವಿಡಿಯೊ ಅದಾಗಿದೆ. ಈ ಸಂಬಂಧ ಅವರು ಬಾಲಕ ಹಾಗೂ ಕುಟುಂಬದವರ ಕ್ಷಮೆ ಕೋರಿದ್ದಾರೆ ಎಂದು ದಲೈಲಾಮಾ ಅವರ ತಂಡ ಹೇಳಿಕೊಂಡಿದೆ. ಸಾರ್ವಜನಿಕವಾಗಿ ಮತ್ತು ಕ್ಯಾಮೆರಾಗಳ ಮುಂದೆ ದಲೈಲಾಮಾ ಅವರು ತಮ್ಮನ್ನು ಭೇಟಿಯಾಗುವ ಜನರನ್ನು ಮುಗ್ಧ ಮತ್ತು ತಮಾಷೆಯ ರೀತಿಯಲ್ಲಿ ಕೀಟಲೆ ಮಾಡುತ್ತಾರೆ. ಈ ಘಟನೆಯ ಬಗ್ಗೆ ಅವರು ವಿಷಾದಿಸಿದ್ದಾರೆ ಎಂದರು.

2024ರಲ್ಲಿ ಮತ್ತೆ ಸ್ಪರ್ಧೆ: ಬೈಡನ್

ವಾಷಿಂಗ್ಟನ್ (ರಾಯಟರ್ಸ್): 2024ರಲ್ಲಿ ಮತ್ತೆ ಸ್ಪರ್ಧಿಸಲು ಯೋಜಿಸಿದ್ದೇನೆ ಎಂದು ಅಧ್ಯಕ್ಷ ಜೋ ಬೈಡನ್ ಸೋಮವಾರ ಹೇಳಿದ್ದಾರೆ.

'ಮತ್ತೆ ಸ್ಪರ್ಧಿಸಲು ಯೋಜಿಸಿದ್ದೇನೆ. ಆದರೆ, ಅದನ್ನು ಘೋಷಿಸಲು ಇನ್ನೂ ಸಿದ್ಧವಾಗಿಲ್ಲ' ಎಂದು ಎನ್‌ಬಿಸಿಯ ಟುಡೇ ಕಾರ್ಯಕ್ರಮಕ್ಕೆ ನೀಡಿದ ಸಂದರ್ಶನದಲ್ಲಿ ಹೇಳಿದ್ದಾರೆ.

ತಿಮ್ಮಪ್ಪನ ದೇಗುಲಕ್ಕೆ ಚಿನ್ನದ ಜರಿ ಸೀರೆ ನೀಡಿದ ಭಕ್ತ

ತಿರುಪತಿ (ಪಿಟಿಐ): ತೆಲಂಗಾಣದ ಭಕ್ತರೊಬ್ಬರು ಚಿನ್ನದ ಜರಿ ಇರುವುದು ಸೇರಿ ಎರಡು ವಿಶಿಷ್ಟ ಸೀರೆಗಳನ್ನು ತಿರುಪತಿ ತಿರುಮಲ ವೆಂಕಟೇಶ್ವರ ಸ್ವಾಮಿ ಮತ್ತು ತಿರುಚನೂರು ಪದ್ಮಾವತಿ ದೇಗುಲಕ್ಕೆ ಕಾಣಿಕೆಯಾಗಿ ನೀಡಿದ್ದಾರೆ.

ಬೆಂಕಿಪೊಟ್ಟಣದಲ್ಲಿ ಮಡಚಿಡಬಹುದಾದ ಈ ಸೀರೆಗಳನ್ನು ನಲ್ಲ ವಿಜಯ್ ಅವರು ಆಂಧ್ರಪ್ರದೇಶದ ಮುಖ್ಯಕಾರ್ಯದರ್ಶಿ ಕೆ.ಎಸ್.ಜವಾಹರ್ ರೆಡ್ಡಿ ಮೂಲಕ ದೇಗುಲದ ಆಡಳಿತ ಮಂಡಳಿಗೆ (ಟಿಟಿಡಿ) ಹಸ್ತಾಂತರಿಸಿದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಒಂದು ಸೀರೆಯ ಬೆಲೆ ₹45,000 ಆಗಿದ್ದರೆ, ಅಮ್ಮನವರಿಗೆ ನೀಡಿರುವ ಸೀರೆಯ ಜರಿಯಲ್ಲಿ 5 ಗ್ರಾಂ ಚಿನ್ನ ಇದೆ ಎಂದು ಅವರು ತಿಳಿಸಿದ್ದಾರೆ.

ತೈವಾನ್ ವಿರುದ್ಧ ಯುದ್ಧಕ್ಕೆ ಸಿದ್ಧ: ಚೀನಾ

ತೈಪೆ, ತೈವಾನ್ (ಎಪಿ): ತೈವಾನ್ ಅಧ್ಯಕ್ಷೆ ಅಮೆರಿಕ ಪ್ರವಾಸ ಕೈಗೊಂಡಿದ್ದಕ್ಕೆ ಪ್ರತೀಕಾರವಾಗಿ ತೈವಾನ್ ಸುತ್ತಮುತ್ತ ಮೂರು ದಿನಗಳ ಸೇನಾ ತಾಲೀಮು ಪೂರ್ಣಗೊಳಿಸಿರುವ ಚೀನಾ, ಯುದ್ಧಕ್ಕೆ ಸಿದ್ಧ ಎಂದು ಸೋಮವಾರ ಘೋಷಿಸಿದೆ.

ತೈವಾನ್‌ಗೆ ಎಚ್ಚರಿಕೆ ನೀಡುವ ಸಲುವಾಗಿ ಮೂರು ದಿನಗಳ ಸೇನಾ ತಾಲೀಮು ಆರಂಭಿಸಿರುವುದಾಗಿ ಈ ಹಿಂದೆ ಚೀನಾ ಸೇನೆ ಘೋಷಿಸಿತ್ತು ಹಾಗೂ ಹೆಚ್ಚಿನ ಪ್ರಮಾಣದಲ್ಲಿ ಯುದ್ಧನೌಕೆಗಳು ಮತ್ತು ಯುದ್ಧವಿಮಾನಗಳನ್ನು ತೈವಾನ್‌ನತ್ತ ಕಳುಹಿಸಿತ್ತು.

ಟ್ವಿಟರ್ ಲೇಬಲ್: ಬಿಬಿಸಿ ಆಕ್ಷೇಪ

ಲಂಡನ್ (ಪಿಟಿಐ): ಬ್ರಿಟಿಷ್ ಬ್ರಾಡ್‌ಕಾಸ್ಟಿಂಗ್ ಕಾರ್ಪೊರೇಷನ್ (ಬಿಬಿಸಿ) 'ಸರ್ಕಾರದ ಆರ್ಥಿಕ ಬೆಂಬಲವುಳ್ಳ ಮಾಧ್ಯಮ' ಎಂದು ಎಲಾನ್ ಮಸ್ಕ್ ಮಾಲೀಕತ್ವದ ಟ್ವಿಟರ್ ಲೇಬಲ್ ಮಾಡಿರುವುದಕ್ಕೆ ಬಿಬಿಸಿ ಸೋಮವಾರ ಆಕ್ಷೇಪ ವ್ಯಕ್ತಪಡಿಸಿದೆ.

'ಶೀಘ್ರ ಈ ಲೇಬಲ್ ತೆಗೆದುಹಾಕಲು ಟ್ವಿಟರ್ ಸಂಸ್ಥೆಯ ಆಡಳಿತ ವರ್ಗವನ್ನು ಸಂಪರ್ಕಿಸಲಾಗಿದೆ' ಎಂದು ಬ್ರಿಟನ್ ಮಾಧ್ಯಮ ಕಾರ್ಪೊರೇಷನ್ ತಿಳಿಸಿದೆ.

'ಬಿಬಿಸಿ ಪ್ರಸ್ತುತ ಮತ್ತು ಎಂದೆಂದಿಗೂ ಸ್ವತಂತ್ರ ಸಂಸ್ಥೆ. ಪರವಾನಗಿ ಶುಲ್ಕದ ರೂಪದಲ್ಲಿ ಬ್ರಿಟಿಷ್ ಪ್ರಜೆಗಳೇ ಸಂಸ್ಥೆಗೆ ಆರ್ಥಿಕ ನೆರವು ಒದಗಿಸುತ್ತಿದ್ದಾರೆ' ಎಂದು ಹೇಳಿಕೆಯಲ್ಲಿ ಬಿಬಿಸಿ ತಿಳಿಸಿದೆ.

'ಗರಿಷ್ಠ ಪಾರದರ್ಶಕತೆ ಮತ್ತು ನಿಖರತೆ ಕಾಯ್ದುಕೊಳ್ಳಲು ಮಾಧ್ಯಮ ಸಂಸ್ಥೆಗಳ 'ಅನುದಾನ ಮೂಲ' ಬಹಿರಂಗಪಡಿಸುವುದು ಸೂಕ್ತ ಎಂದು ಭಾವಿಸುತ್ತೇವೆ' ಎಂದು ಬಿಬಿಸಿಗೆ ಕಳುಹಿಸಿರುವ ಮೇಲ್‌ನಲ್ಲಿ ಎಲಾನ್ ಮಸ್ಕ್ ತಿಳಿಸಿದ್ದಾರೆ.

ಮಹಿಳೆಯರಿಗೆ ರೆಸ್ಟೋರೆಂಟ್ ಪ್ರವೇಶ ನಿಷೇಧ

ಕಾಬೂಲ್ (ಎಪಿ): ವಾಯವ್ಯ ಅಫ್ಗಾನಿಸ್ತಾನದ ಹೆರಾತ್ ಪ್ರಾಂತ್ಯದಲ್ಲಿ ಉದ್ಯಾನವಿರುವ ರೆಸ್ಟೋರೆಂಟ್ ಅಥವಾ ಹಸಿರಿರುವ ಜಾಗಗಳಲ್ಲಿ ಕುಟುಂಬ ಸದಸ್ಯರು ಮತ್ತು ಮಹಿಳೆಯರು ಪ್ರವೇಶಿಸುವುದನ್ನು ತಾಲಿಬಾನ್ ಸರ್ಕಾರ ನಿಷೇಧಿಸಿದೆ.

ಇಂತಹ ಸ್ಥಳಗಳಲ್ಲಿ ಪುರುಷ ಮತ್ತು ಮಹಿಳೆಯರು ಒಟ್ಟಾಗಿ ಸೇರುವುದನ್ನು ತಪ್ಪಿಸಬೇಕು ಎಂದು ಧಾರ್ಮಿಕ ಚಿಂತಕರು ಮತ್ತು ಸಾರ್ವಜನಿಕರು ದೂರು ನೀಡಿದ ಹಿನ್ನೆಲೆಯಲ್ಲಿ ಸರ್ಕಾರವು ಈ ಕ್ರಮ ಕೈಗೊಂಡಿದೆ.

ವರದಿ ಅಲ್ಲಗಳೆದ ಭಾರತ

ಲಂಡನ್/ನವದೆಹಲಿ (ಪಿಟಿಐ): ಖಾಲಿಸ್ತಾನ ಪರ ಗುಂಪುಗಳು ಲಂಡನ್‌ನಲ್ಲಿ ದಾಳಿ ನಡೆಸಿದ ಹಿನ್ನೆಲೆಯಲ್ಲಿ ಭಾರತ–ಬ್ರಿಟನ್ ವ್ಯಾಪಾರ ಒಪ್ಪಂದದ ಮಾತುಕತೆಯು ಮುರಿದುಬಿದ್ದಿದೆ ಎಂಬ ವರದಿಗಳನ್ನು ಭಾರತದ ಅಧಿಕಾರಿಗಳು ಅಲ್ಲಗಳೆದಿದ್ದಾರೆ.

ಭಾರತ ಹೈಕಮಿಷನ್ ಮೇಲೆ ದಾಳಿ ನಡೆಸಿದವರ ವಿರುದ್ಧ ಕ್ರಮ ಕೈಗೊಳ್ಳ ಬೇಕೆಂದು ಆಗ್ರಹಿಸಿ ಬ್ರಿಟನ್‌ನೊಂದಿಗಿನ ವ್ಯಾಪಾರ ಒಪ್ಪಂದದಿಂದ ಭಾರತ ಹಿಂದೆ ಸರಿದಿದೆ ಎಂದು ಬ್ರಿಟನ್ ಮಾಧ್ಯಮಗಳು ವರದಿ ಮಾಡಿದ್ದವು.

ಪ್ರಯಾಣಿಕನ ಅನುಚಿತ ವರ್ತನೆ: ವಿಮಾನ ವಾಪಸ್

ಪ್ರಜಾವಾಣಿ ವಾರ್ತೆ

ನವದೆಹಲಿ: ಲಂಡನ್‌ನ ಹೀಥ್ರೂ ವಿಮಾನ ನಿಲ್ದಾಣಕ್ಕೆ ತೆರಳುತ್ತಿದ್ದ ಏರ್ ಇಂಡಿಯಾ ವಿಮಾನದಲ್ಲಿ ಪ್ರಯಾಣಿಕರೊಬ್ಬರು ಅಶಿಸ್ತಿನ ವರ್ತನೆ ತೋರಿ, ಇಬ್ಬರು ಸಿಬ್ಬಂದಿ ಮೇಲೆ ದೈಹಿಕ ಹಲ್ಲೆ ನಡೆಸಿದ್ದರಿಂದ ವಿಮಾನವು ದೆಹಲಿಗೆ ಮರಳಿದೆ.

ದೆಹಲಿಯ ಇಂದಿರಾ ಗಾಂಧಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಸೋಮವಾರ ಬೆಳಿಗ್ಗೆ 6.35ಕ್ಕೆ ಹಾರಾಟ ಆರಂಭಿಸಿದ್ದ ವಿಮಾನವು 9.40ಕ್ಕೆ ಮರಳಿ ಬಂದಿದ್ದು, ಅಶಿಸ್ತು ತೋರಿದ ಪ್ರಯಾಣಿಕ ಜಸ್ಕಿರತ್ ಸಿಂಗ್ ಎಂಬುವವರನ್ನು ದೆಹಲಿ ಪೊಲೀಸರ ವಶಕ್ಕೆ ನೀಡಲಾಗಿದೆ.

'ಮೌಖಿಕವಾಗಿ ಮತ್ತು ಲಿಖಿತವಾಗಿ ಎಚ್ಚರಿಕೆ ನೀಡಿದ ಮೇಲೂ ಜಸ್ಕಿರತ್ ಸಿಂಗ್ ಅಶಿಸ್ತಿನ ವರ್ತನೆ ಮುಂದುವರಿಸಿ, ಸಿಬ್ಬಂದಿ ಮೇಲೆ ಹಲ್ಲೆ ನಡೆಸಿದ್ದಾರೆ' ಎಂದು ಏರ್ ಇಂಡಿಯಾ ಹೇಳಿಕೆಯಲ್ಲಿ ತಿಳಿಸಿದೆ.

225 ಮಂದಿ ಪ್ರಯಾಣಿಕರಿದ್ದ ವಿಮಾನವು ಬಳಿಕ ಮಧ್ಯಾಹ್ನ ಲಂಡನ್‌ಗೆ ತೆರಳಿದೆ. ಘಟನೆಯ ಸಂಬಂಧ ನಾಗರಿಕ ವಿಮಾನಯಾನ ಮಹಾನಿರ್ದೇಶನಾಲಯಕ್ಕೂ (ಡಿಜಿಸಿಎ) ದೂರು ನೀಡಲಾಗಿದೆ.

'ವಿಮಾನದಲ್ಲಿ ಪ್ರಯಾಣಿಸುವ ಎಲ್ಲಾ ಪ್ರಯಾಣಿಕರ ಸುರಕ್ಷತೆ ಮತ್ತು ಘನತೆ ನಮಗೆ ಮುಖ್ಯ. ಅದೇ ರೀತಿ ಹಲ್ಲೆಗೊಳಗಾಗಿರುವ ಸಿಬ್ಬಂದಿಗೂ ನಾವು ಸಹಕಾರ ನೀಡುತ್ತೇವೆ. ಪ್ರಯಾಣಿಕರಿಗೆ ತೊಂದರೆಯಾಗಿದ್ದಕ್ಕೆ ವಿಷಾದಿಸುತ್ತೇವೆ' ಎಂದೂ ಏರ್ ಇಂಡಿಯಾ ಹೇಳಿದೆ.

ಸ್ಟೊಯಿನಿಸ್, ಪೂರನ್ ಅಬ್ಬರದ ಬ್ಯಾಟಿಂಗ್; ರಾಯಲ್ ಚಾಲೆಂಜರ್ಸ್ ಬೆಂಗಳೂರಿಗೆ ನಿರಾಶೆ

ರೋಚಕ ಚಾಲೆಂಜ್ ಗೆದ್ದ ಲಖನೌ

• ಗಿರೀಶ ದೊಡ್ಡಮನಿ

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಸೋಮವಾರ ರಾತ್ರಿ ಕ್ರಿಕೆಟ್‌ಪ್ರಿಯರನ್ನು ತುದಿಗಾಲಿನಲ್ಲಿ ನಿಲ್ಲುವಂತೆ ಮಾಡಿದ್ದ ಐಪಿಎಲ್ ಪಂದ್ಯದಲ್ಲಿ ಲಖನೌ ಸೂಪರ್ ಜೈಂಟ್ಸ್ 1 ವಿಕೆಟ್‌ನಿಂದ ರೋಚಕ ಜಯ ಸಾಧಿಸಿತು.

ಕೊನೆಯ ಎಸೆತದಲ್ಲಿ ಲಭಿಸಿದ 'ಬೈ' ರನ್ ನಲ್ಲಿ ಫಲಿತಾಂಶ ನಿರ್ಧಾರವಾದ ಪಂದ್ಯದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಸೋತಿತು.

ಕೆಲವು ನಾಟಕೀಯ ತಿರುವುಗಳನ್ನು ಕಂಡ ಪಂದ್ಯದಲ್ಲಿ ಲಖನೌ ತಂಡಕ್ಕೆ ಜಯ ಸುಲಭವಾಗಿ ಒಲಿಯಲಿಲ್ಲ.

213 ರನ್‌ಗಳ ಗೆಲುವಿನ ಗುರಿ ಬೆನ್ನಟ್ಟಿದ್ದ ಲಖನೌ ತಂಡವು ನಿಕೊಲಸ್ ಪೂರನ್ (62; 19ಎ) ಮತ್ತು ಮಾರ್ಕಸ್ ಸ್ಟೊಯಿನಿಸ್ (65; 30ಎ) ಅವರು ತಮ್ಮ ಅಬ್ಬರದ ಅರ್ಧಶತಕಗಳಿಂದ ಬಲ ತುಂಬಿದ್ದರು.

ಇದರಿಂದಾಗಿ ಲಖನೌ ತಂಡವು 18.3 ಓವರ್‌ಗಳಲ್ಲಿ 206 ರನ್ ಗಳಿಸಿತ್ತು. ಈ ಓವರ್‌ನಲ್ಲಿಯೇ ಜಯಿಸುವ ಅವಕಾಶ ತಂಡಕ್ಕೆ ಇತ್ತು. ಈ ಸಂದರ್ಭದಲ್ಲಿ ಲಖನೌ ತಂಡದ ಇಂಪ್ಯಾಕ್ಟ್ ಪ್ಲೇಯರ್ ಆಯುಷ್ ಬಡೋನಿ ಸ್ವೀಪ್ ಮೂಲಕ ಚೆಂಡು ಸಿಕ್ಸರ್‌ಗೆತ್ತಿದ್ದರು. ಆದರೆ ಹಿಟ್‌ವಿಕೆಟ್ ಆದರು. ಇದರಿಂದ ಸಿಕ್ಸರ್ ಮಾನ್ಯವಾಗಲಿಲ್ಲ. ಇದು ಆರ್‌ಸಿಬಿ ಬಳಗದಲ್ಲಿ ಮತ್ತೆ ಗೆಲುವಿನ ಆಸೆ ಚಿಗುರಿಸಿತು.

ಕೊನೆಯ ಓವರ್‌ನಲ್ಲಿ ಹರ್ಷಲ್ ಪಟೇಲ್ ಅವರು ಮಾರ್ಕ್ ವುಡ್ ಮತ್ತು ಜೈದೇವ್ ಉನದ್ಕತ್ ವಿಕೆಟ್‌ಗಳನ್ನು ಕಬಳಿಸಿದರು. ಆದರೆ ತಂಡ ಅಷ್ಟರಲ್ಲಿ ಸಮಬಲ ಸಾಧಿಸಿತ್ತು. ಲಖನೌ ಗೆಲುವಿಗೆ ಕೊನೆಯ ಎಸೆತದಲ್ಲಿ ಒಂದು ರನ್ ಬೇಕಿತ್ತು.

ಆದರೆ ಪಟೇಲ್ ಹಾಕಿದ ಎಸೆತವನ್ನು ಹೊಡೆಯುವ ಯತ್ನದಲ್ಲಿ ಬ್ಯಾಟರ್ ಆವೇಶ್ ಖಾನ್ ಬೀಟ್ ಆದರು. ಅವರು ಒಂದು ರನ್‌ಗಾಗಿ ಓಡಿದರು. ಇತ್ತ ನಾನ್‌ಸ್ಟ್ರೈಕರ್ ನಲ್ಲಿದ್ದ ರವಿ ಬಿಷ್ಣೋಯಿ ಕೂಡ ವೇಗವಾಗಿ ಓಡಿದರು. ಈ ವೇಳೆ ಚೆಂಡನ್ನು ಹಿಡಿತಕ್ಕೆ ಪಡೆದು ಸ್ಟಂಪ್‌ಗೆ ಥ್ರೋ ಮಾಡುವಲ್ಲಿ ವಿಕೆಟ್‌ಕೀಪರ್ ದಿನೇಶ್ ಕಾರ್ತಿಕ್ ತಡಬಡಾಯಿಸಿದರು. ಬೆಂಗಳೂರು ಗೆಲುವು ಕೈತಪ್ಪಿತು.

ಹೋರಾಟ ವ್ಯರ್ಥ: ವಿರಾಟ್ ಕೊಹ್ಲಿ (61 ರನ್), ಫಫ್ ಡುಪ್ಲೆಸಿ(79 ರನ್) ಮತ್ತು ಗ್ಲೆನ್ ಮ್ಯಾಕ್ಸ್‌ವೆಲ್ (59 ರನ್) ಅವರ ಅಮೋಘ ಅರ್ಧಶತಕಗಳ ಬಲದಿಂದ ಆರ್‌ಸಿಬಿಯು 20 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 212 ರನ್ ಗಳಿಸಿತ್ತು. ಆದರೆ ಈ ತ್ರಿಮೂರ್ತಿಗಳ ಆಟ ವ್ಯರ್ಥವಾಯಿತು. ವಿರಾಟ್, ಫಫ್ ಹಾಗೂ ಗ್ಲೆನ್ ಅವರು ಸೇರಿ 15 ಸಿಕ್ಸರ್ ಮತ್ತು 12 ಬೌಂಡರಿಗಳನ್ನು ಸಿಡಿಸಿದರು. ಅಭಿಮಾನಿಗಳಿಗೆ ಭರಪೂರ ಮನರಂಜನೆ ನೀಡಿದರು.

ಮೊದಲ ವಿಕೆಟ್‌ಗೆ ಕೊಹ್ಲಿ ಮತ್ತು ಡುಪ್ಲೆಸಿ 96 ರನ್ ಸೇರಿಸಿದರು. ಗ್ಲೆನ್ ಮತ್ತು ಡುಪ್ಲೆಸಿ ಎರಡನೇ ವಿಕೆಟ್ ಜೊತೆಯಾಟದಲ್ಲಿ ಕೇವಲ 50 ಎಸೆತಗಳಲ್ಲಿ 115 ರನ್ ಸೇರಿಸಿದರು.


ಗುರಿ ಬೆನ್ನಟ್ಟಿದ ಲಖನೌ ತಂಡಕ್ಕೆ ಗೆಲುವಿನ ಬಲ ತುಂಬಿದ್ದು ಮಾರ್ಕಸ್ ಸ್ಟೊಯಿನಿಸ್ ಮತ್ತು ನಿಕೊಲಸ್ ಪೂರನ್ ಅವರ ಶರವೇಗದ ಅರ್ಧಶತಕಗಳು.

ಲಖನೌ ತಂಡವು 24 ರನ್‌ಗಳಿಗೆ ಮೂರು ವಿಕೆಟ್ ಕಳೆದುಕೊಂಡ ಸಂದರ್ಭದಲ್ಲಿ ಮಾರ್ಕಸ್ ಅವರ ಕ್ಯಾಚ್ ಕೈಚೆಲ್ಲಿದ್ದು ಆರ್‌ಸಿಬಿಗೆ ದುಬಾರಿಯಾಯಿತು. ಅವರು 30 ಎಸೆತಗಳಲ್ಲಿ 65 ರನ್‌ಗಳನ್ನು ಗಳಿಸಿದರು. ಆರ್‌ಸಿಬಿ ಇಂಪ್ಯಾಕ್ಟ್ ಪ್ಲೆಯರ್ ಕರ್ಣ್ ಶರ್ಮಾ ಅವರ ಬೌಲಿಂಗ್‌ನಲ್ಲಿ ಸ್ಟೊಯಿನಿಸ್ ಔಟಾದರು. ಆದರೆ ಕ್ರೀಸ್‌ಗೆ ಬಂದ ಪೂರನ್ ಕೇವಲ 15 ಎಸೆತಗಳಲ್ಲಿ ಅರ್ಧಶತಕ ಬಾರಿಸಿದರು.

ಅವರು 17ನೇ ಓವರ್‌ನಲ್ಲಿ ಸಿರಾಜ್ ಎಸೆತದಲ್ಲಿ ಔಟಾಗದೇ ಹೋಗಿದ್ದರೆ ತಂಡವನ್ನು ಜಯದ ದಡ ಮುಟ್ಟಿಸುವ ಸಾಧ್ಯತೆ ಇತ್ತು.

ಬ್ಯಾಟರ್‌ಗಳ ಭರಾಟೆಯ ನಡುವೆಯೂ ಲಖನೌ ತಂಡದ ವೇಗಿ ಮಾರ್ಕ್ ವುಡ್ ಒಂದು ಮೇಡನ್ ಓವರ್ ಮಾಡುವಲ್ಲಿ ಯಶಸ್ವಿಯಾದರು.

ಈ ಪಂದ್ಯದಲ್ಲಿ ಒಟ್ಟು 425 ರನ್‌ಗಳು ದಾಖಲಾದವು.


ನಿಕೊಲಸ್ ಪೂರನ್ ಆಟದ ಪರಿ – ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್. ಜಿ.

ವೇಗದ ಅರ್ಧಶತಕ ಗಳಿಸಿದವರು (ಐಪಿಎಲ್)

ಎಸೆತ	ಆಟಗಾರ	ಎದುರಾಳಿ	ಸ್ಥಳ	ವರ್ಷ
14	ಕೆ.ಎಲ್. ರಾಹುಲ್	ಡೆಲ್ಲಿ	ಮೊಹಾಲಿ	2018
14	ಪ್ಯಾಟ್‌ಕಮಿನ್ಸ್	ಮುಂಬೈ	ಪುಣೆ	2022
15	ಯುಸೂಫ್‌ ಪಠಾಣ್	ಸನ್‌ರೈಸರ್ಸ್	ಕೋಲ್ಕತ್ತ	2014
15	ಸುನಿಲ್	ಆರ್‌ಸಿಬಿ	ಬೆಂಗಳೂರು	2017
15	ನಿಕೊಲಸ್‌ ಪೂರನ್	ಆರ್‌ಸಿಬಿ	ಬೆಂಗಳೂರು	2023

ಸ್ಕೋರ್ ಕಾರ್ಡ್

ರಾಯಲ್ ಚಾಲೆಂಜರ್ಸ್ ಬೆಂಗಳೂರು 2ಕ್ಕೆ212 (20 ಓವರ್‌ಗಳಲ್ಲಿ)

ವಿರಾಟ್ ಸಿ ಸ್ಟೊಯಿನಿಸ್ ಬಿ ಮಿಶ್ರಾ 61 (44ಎ, 4X4, 6X4)
ಡುಪ್ಲೆಸಿ ಔಟಾಗದೆ 79 (46ಎ, 4X5, 6X5)
ಮ್ಯಾಕ್ಸ್‌ವೆಲ್ ಬಿ ವುಡ್ 59 (29ಎ, 4X3, 6X6)
ದಿನೇಶ್ ಔಟಾಗದೆ 1 (1ಎ)
ಇತರೆ: (12 (ಲೆಗ್‌ಬೈ 8, ವೈಡ್ 4)
ವಿಕೆಟ್ ಪತನ: 1–96 (ವಿರಾಟ್ ಕೊಹ್ಲಿ;11.3), 2–211 (ಗ್ಲೆನ್ ಮ್ಯಾಕ್ಸ್‌ವೆಲ್; 19.5)
ಬೌಲಿಂಗ್: ಜೈದೇವ್ ಉನದ್ಕತ್ 2–0–27–0, ಆವೇಶ್ ಖಾನ್ 4–0–53–0, ಕೃಣಾಲ್ ಪಾಂಡ್ಯ 4–0–35–0, ಮಾರ್ಕ್ ವುಡ್ 4–1–32–1, ರವಿ ಬಿಷ್ಣೋಯಿ 4–0–39–0, ಅಮಿತ್ ಮಿಶ್ರಾ 2–0–18–1

ಲಖನೌ ಸೂಪರ್ ಜೈಂಟ್ಸ್ 9ಕ್ಕೆ 213 (20 ಓವರ್))

ಮೇಯರ್ಸ್ ಬಿ ಸಿರಾಜ್ 0 (3 ಎ.)
ರಾಹುಲ್ ಸಿ ಕೊಹ್ಲಿ ಬಿ ಸಿರಾಜ್ 18 (20 ಎ., 4X1)
ಹೂಡಾ ಸಿ ಕಾರ್ತಿಕ್ ಬಿ ಪಾರ್ನೆಲ್ 9 (10 ಎ., 4X1)
ಕೃಣಾಲ್ ಸಿ ಕಾರ್ತಿಕ್ ಬಿ ಪಾರ್ನೆಲ್ 0 (2 ಎ)
ಸ್ಟೊಯಿನಿಸ್ ಸಿ ಶಹಬಾಜ್ ಬಿ ಕರ್ಣ 65 (30 ಎ., 4X6, 6X5)
ಪೂರನ್ ಸಿ ಶಹಬಾಜ್ ಬಿ ಸಿರಾಜ್ 62 (19 ಎ., 4X4, 6X7)
ಆಯುಷ್ ಹಿಟ್ ವಿಕೆಟ್ ಬಿ ಪಾರ್ನೆಲ್ 30 (24 ಎ., 4X4)
ಉನದ್ಕತ್ ಸಿ ಡುಪ್ಲೆಸಿ ಬಿ ಹರ್ಷಲ್ 9 (7 ಎ., 4X1)
ವುಡ್ ಬಿ ಹರ್ಷಲ್ 1 (2 ಎ)
ರವಿ ಔಟಾಗದೆ 3 (2 ಎ)
ಆವೇಶ್ ಔಟಾಗದೆ 0 (1 ಎ))
ಇತರೆ: 16 (ಬೈ 1, ಲೆಗ್ ಬೈ 6, ವೈಡ್ 9)
ವಿಕೆಟ್ ಪತನ: 1–1 (ಕೈಲ್ ಮೇಯರ್ಸ್; 0.3), 2–23 (ದೀಪಕ್ ಹೂಡಾ; 3.4), 3–23 (ಕೃಣಾಲ್ ಪಾಂಡ್ಯ 3.6), 4–99 (ಮಾರ್ಕಸ್ ಸ್ಟೊಯಿನಿಸ್; 10.4), 5–105 (ಕೆ. ಎಲ್.ರಾಹುಲ್; 11.1), 6–189 (ನಿಕೊಲಸ್ ಪೂರನ್; 16.6), 7–206 (ಆಯುಷ್ ಬಡೋನಿ; 18.4), 8–209 (ಮಾರ್ಕ್ ವುಡ್; 19.2), 9–212 (ಜೈದೇವ್ ಉನದ್ಕತ್; 19.5)
ಬೌಲಿಂಗ್: ಮೊಹಮ್ಮದ್ ಸಿರಾಜ್ 4–0–22–3, ಡೇವಿಡ್ ವಿಲಿ 4–0–32–0, ವೇಯ್ನ್ ಪಾರ್ನೆಲ್ 4–0–41–3, ಹರ್ಷಲ್ ಪಟೇಲ್ 4–0–48–2, ಕರ್ಣ ಶರ್ಮಾ 3–0–48–1, ಶಹಬಾಜ್ ಅಹಮದ್ 1–0–15–0

ಫಲಿತಾಂಶ: ಲಖನೌ ಸೂಪರ್ ಜೈಂಟ್ಸ್‌ಗೆ 1 ವಿಕೆಟ್ ಗೆಲುವು

ಮೊದಲ ಗೆಲುವಿನ ನಿರೀಕ್ಷೆ

ಡೆಲ್ಲಿ– ಮುಂಬೈ ಇಂಡಿಯನ್ಸ್ ಹಣಾಹಣಿ ಇಂದು

ನವದೆಹಲಿ (ಪಿಟಿಐ): ಮುಂಬೈ ಇಂಡಿಯನ್ಸ್ ಮತ್ತು ಡೆಲ್ಲಿ ಕ್ಯಾಪಿಟಲ್ಸ್ ತಂಡಗಳು ಐಪಿಎಲ್ ಟೂರ್ನಿಯಲ್ಲಿ ಮೊದಲ ಗೆಲುವಿನ ನಿರೀಕ್ಷೆಯೊಂದಿಗೆ ಮಂಗಳವಾರ ಇಲ್ಲಿ ಎದುರಾಗಲಿವೆ.

ಡೆಲ್ಲಿ ತಂಡಕ್ಕೆ ಆಡಿರುವ ಮೂರೂ ಪಂದ್ಯಗಳಲ್ಲಿ ಸೋಲು ಎದುರಾಗಿದ್ದರೆ, ಮುಂಬೈ ಇಂಡಿಯನ್ಸ್ ಎರಡು ಪಂದ್ಯಗಳಲ್ಲಿ ಮುಗ್ಗರಿಸಿದೆ. ಭಾರತೀಯ ಆಟಗಾರರು ಫಾರ್ಮ್ ಕಂಡುಕೊಳ್ಳಲು ವಿಫಲವಾಗಿರುವುದು ಎರಡೂ ತಂಡಗಳ ಹಿನ್ನಡೆಗೆ ಪ್ರಮುಖ ಕಾರಣ. ಗೆಲುವಿನ ಹಾದಿಗೆ ಮರಳಬೇಕಾದರೆ ಕಾರ್ಯತಂತ್ರವನ್ನು ಮರುರೂಪಿಸುವ ಸವಾಲು ಉಭಯ ತಂಡಗಳ ಮುಂದಿದೆ.

ರಾಜಸ್ಥಾನ ರಾಯಲ್ಸ್ ವಿರುದ್ಧದ ಪಂದ್ಯದಲ್ಲಿ ಡೆಲ್ಲಿ ತಂಡದ ಅಗ್ರ ಕ್ರಮಾಂಕವು ಟ್ರೆಂಟ್ ಬೌಲ್ಟ್ ಅವರ ಮೊನಚಾದ ಬೌಲಿಂಗ್ ಮುಂದೆ ನಲುಗಿತ್ತು. ವೇಗದ ಬೌಲಿಂಗ್ ದಾಳಿ ಎದುರಿಸುವಲ್ಲಿ ಪೃಥ್ವಿ ಶಾ ಅವರ ದೌರ್ಬಲ್ಯ ಮತ್ತೆ ಬಯಲಾಗಿದೆ. ಕಳೆದ ಮೂರು ಇನಿಂಗ್ಸ್‌ಗಳಲ್ಲಿ ಅವರು ವೇಗ, ಬೌನ್ಸ್ ಮತ್ತು ಸ್ವಿಂಗ್ ದಾಳಿಯನ್ನು ಎದುರಿಸುವಲ್ಲಿ ಎಡವಿದ್ದರು.

ನಾಯಕ ಡೇವಿಡ್ ವಾರ್ನರ್ ಮೂರು ಪಂದ್ಯಗಳಿಂದ 158 ರನ್ ಕಲೆಹಾಕಿದ್ದರೂ, ಅಬ್ಬರದ ಬ್ಯಾಟಿಂಗ್ ಮಾಡಿಲ್ಲ. ಅವರು 117 ಸ್ಟ್ರೈಕ್‌ರೇಟ್ ಹೊಂದಿದ್ದಾರೆ. ಮಿಚೆಲ್ ಮಾರ್ಷ್ ಬದಲು ಕಳೆದ ಪಂದ್ಯದಲ್ಲಿ ಅವಕಾಶ ಪಡೆದಿದ್ದ ಮನೀಷ್ ಪಾಂಡೆ ಮೊದಲ ಎಸೆತದಲ್ಲೇ ಔಟಾಗಿದ್ದರು.

ಮತ್ತೊಂದೆಡೆ ರೋಹಿತ್ ಶರ್ಮಾ ಬಳಗ ಗೆಲುವು ಪಡೆಯಲೇಬೇಕಾದ ಒತ್ತಡದಲ್ಲಿದೆ. ಅಗ್ರಕ್ರಮಾಂಕದ ಬ್ಯಾಟರ್‌ಗಳ ವೈಫಲ್ಯ ಈ ತಂಡವನ್ನೂ ಕಾಡುತ್ತಿದೆ. ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧದ ಪಂದ್ಯದಲ್ಲಿ ರೋಹಿತ್ ಉತ್ತಮ ಆರಂಭ ಪಡೆದಿದ್ದರೂ, ತುಷಾರ್ ದೇಶಪಾಂಡೆ ಅವರ ಸೊಗಸಾದ ಎಸೆತದಲ್ಲಿ ಔಟ್ ಆಗಿದ್ದರು.

ಯುವ ಆಟಗಾರ ಇಶಾನ್ ಕಿಶನ್ ಅವರಿಂದ ತಂಡ ಬಿರುಸಿನ ಆಟ ನಿರೀಕ್ಷಿಸುತ್ತಿದೆ. ಹರಾಜಿನಲ್ಲಿ ₹ 17.50 ಕೋಟಿ ಪಡೆದಿದ್ದ ಕ್ಯಾಮರಾನ್ ಗ್ರೀನ್ ಇನ್ನೂ ಲಯ ಕಂಡುಕೊಂಡಿಲ್ಲ. ಸೂರ್ಯಕುಮಾರ್ ಯಾದವ್ ಈ ಪಂದ್ಯದಲ್ಲಾದರೂ ರನ್ ಬರ ನೀಗಿಸುವರೇ ಎಂಬ ಪ್ರಶ್ನೆ ಅಭಿಮಾನಿಗಳನ್ನು ಕಾಡುತ್ತಿದೆ. ತಿಲಕ್ ವರ್ಮಾ ಹೊರತುಪಡಿಸಿದರೆ ತಂಡದ ಇತರ ಬ್ಯಾಟರ್‌ಗಳು ಗಮನ ಸೆಳೆದಿಲ್ಲ.

ಪಂದ್ಯ ಆರಂಭ: ರಾತ್ರಿ 7.30
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ವಾಹಿನಿ, ಜಿಯೊ ಸಿನಿಮಾ ಆ್ಯಪ್

ಪಾಯಿಂಟ್ಸ್‌ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಲಖನೌ	4	3	1	0	6	1.048
ರಾಜಸ್ಥಾನ	3	2	1	0	4	2.067
ಕೋಲ್ಕತ್ತ	3	2	1	0	4	1.375
ಗುಜರಾತ್	3	2	1	0	4	0.431
ಚೆನ್ನೈ	3	2	1	0	4	0.356
ಪಂಜಾಬ್	3	2	1	0	4	-0.281
ಬೆಂಗಳೂರು	3	1	2	0	2	-0.800
ಹೈದರಾಬಾದ್	3	1	2	0	2	-1.502
ಮುಂಬೈ	2	0	2	0	0	-1.394
ಡೆಲ್ಲಿ	3	0	3	0	0	-2.092

*ಸೋಮವಾರದ ಪಂದ್ಯದ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ
https://www.prajavani.net/cricket

ಆರೆಂಜ್ ಕ್ಯಾಪ್ (ಹೆಚ್ಚು ರನ್)

ಆಟಗಾರ	ತಂಡ	ರನ್
ಶಿಖರ್	ಪಂಜಾಬ್	225

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್)

ಆಟಗಾರ	ತಂಡ	ವಿಕೆಟ್
ಮಾರ್ಕ್ ವುಡ್	ಲಖನೌ	9

ವಿಶ್ವ ಚೆಸ್: ಇಯಾನ್ ನೆಪೊಮ್‌ನಿಷಿಗೆ ಮುನ್ನಡೆ

ಅಸ್ತಾನ, ಕಜಕಸ್ತಾನ: ತಟಸ್ಥ ಧ್ವಜದಡಿ ಆಡುತ್ತಿರುವ ಇಯಾನ್ ನೆಪೊಮ್‌ನಿಷಿ, ವಿಶ್ವ ಚೆಸ್ ಚಾಂಪಿಯನ್‌ಷಿಪ್‌ನ ಎರಡನೇ ಪಂದ್ಯದಲ್ಲಿ ಸೋಮವಾರ ಚೀನಾದ ಗ್ರ್ಯಾಂಡ್‌ಮಾಸ್ಟರ್ ಡಿಂಗ್ ಲಿರೆನ್ ಅವರನ್ನು ಸೋಲಿಸಿದರು.

ರಷ್ಯಾದ ಗ್ರ್ಯಾಂಡ್‌ಮಾಸ್ಟರ್ ಈಗ 1.5–0.5 ಮುನ್ನಡೆ ಸಾಧಿಸಿದ್ದಾರೆ. ಬಿಳಿಕಾಯಿಗಳಲ್ಲಿ ಆಡಿದ ಲಿರೆನ್ ಭಿನ್ನ ತಂತ್ರಗಾರಿಕೆಯೊಡನೆ ಆರಂಭಿಸಿ ಎದುರಾಳಿಯ ಸಿದ್ಧತೆಗೆ ಸವಾಲೊಡಿದ್ದರು. ಆದರೆ ಮಧ್ಯಮ ಹಂತದ ಆಟದಲ್ಲಿ ನೆಪೊಮ್‌ನಿಶಿ ಒಂದಿಷ್ಟು ಹಿಡಿತ ಸಾಧಿಸಿದರು. ನಂತರ ಅದನ್ನು ಬಿಗಿಗೊಳಿಸಿ 29 ನಡೆಗಳಲ್ಲಿ ಪಂದ್ಯ ಗೆದ್ದರು.

ಕ್ರಿಕೆಟ್: ಫೈನಲ್‌ಗೆ ರೊಹ್ಟಕ್, ಲವ್ಲಿ ವಿ.ವಿ

ಮೈಸೂರು: ರೋಹ್ಟಕ್‌ನ ಮಹರ್ಷಿ ದಯಾನಂದ ವಿಶ್ವವಿದ್ಯಾಲಯ ತಂಡ, ಅಂತರ ವಿಶ್ವವಿದ್ಯಾಲಯ ಮಹಿಳಾ ಕ್ರಿಕೆಟ್ ಟೂರ್ನಿಯಲ್ಲಿ ಪಂಜಾಬ್‌ನ ಗುರುನಾನಕ್ ವಿಶ್ವವಿದ್ಯಾಲಯ ತಂಡದ ವಿರುದ್ಧ 44 ರನ್‌ಗಳ ಗೆಲುವು ಸಾಧಿಸಿ ಫೈನಲ್ ತಲುಪಿತು.

ಮಾನಸಗಂಗೋತ್ರಿಯ ಶ್ರೀಕಂಠ ದತ್ತ ನರಸಿಂಹರಾಜ ಒಡೆ ಯರ್ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಸೆಮಿಫೈನಲ್‌ನಲ್ಲಿ ರೋಹ್ಟಕ್ 25 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೆ 170 ರನ್‌ಗಳ ಭರ್ಜರಿ ಮೊತ್ತ ಕಲೆ ಹಾಕಿತು. ಈ ಸವಾಲನ್ನು ಬೆನ್ನತ್ತಿದ ಗುರುನಾನಕ್ ವಿ.ವಿ 23 ಓವರ್‌ಗಳಲ್ಲಿ 126 ರನ್‌ಗೆ ಆಲೌಟ್ ಆಯಿತು. ಮತ್ತೊಂದು ಸೆಮಿಯಲ್ಲಿ ಪಂಜಾಬ್‌ನ ಲವ್ಲಿ ಪ್ರೊಫೆಷನಲ್ ವಿವಿ 5 ವಿಕೆಟ್‌ನಿಂದ ಪುಣೆಯ ಸಾವಿತ್ರಿಬಾಯಿ ಫುಲೆ ವಿವಿ ವಿರುದ್ಧ ಗೆದ್ದಿತು.

ಎಸ್‌ಯುಎಫ್‌ಸಿ ಚಾಂಪಿಯನ್

ಬೆಂಗಳೂರು: ಕೊನೆಯ ಲೀಗ್ ಪಂದ್ಯದಲ್ಲಿ ಇನ್‌ಕಮ್ ಟ್ಯಾಕ್ಸ್ ಎಫ್‌ಸಿ ತಂಡವನ್ನು 9–1 ಗೋಲುಗಳಿಂದ ಮಣಿಸಿದ ಸೌತ್ ಯುನೈಟೆಡ್ ಎಫ್‌ಸಿ (ಎಸ್‌ಯುಎಫ್‌ಸಿ) ತಂಡದವರು ಬಿಡಿಎಫ್‌ಎ 'ಎ' ಡಿವಿಷನ್ ಫುಟ್ ಬಾಲ್ ಲೀಗ್‌ನಲ್ಲಿ ಚಾಂಪಿಯನ್ ಆದರು.

ಎಸ್‌ಯುಎಫ್‌ಸಿ ಮತ್ತು ಎಚ್‌ಎಎಲ್ ಎಫ್‌ಸಿ ತಂಡಗಳು ಆಡಿದ 11 ಪಂದ್ಯಗಳಲ್ಲಿ ತಲಾ 31 ಪಾಯಿಂಟ್ಸ್ ಗಳಿಸಿದವು. ಉತ್ತಮ ಗೋಲು ವ್ಯತ್ಯಾಸದಲ್ಲಿ ಎಸ್‌ಯುಎಫ್‌ಸಿ ಚಾಂಪಿಯನ್ ಆದರೆ, ಎಚ್‌ಎಎಲ್ ರನ್ನರ್ ಅಪ್ ಆಯಿತು. ಎರಡೂ ತಂಡಗಳು ಸೂಪರ್ ಡಿವಿಷನ್ ಲೀಗ್‌ಗೆ ಅರ್ಹತೆ ಪಡೆದುಕೊಂಡವು. ಪಾಯಿಂಟ್ಸ್ ಪಟ್ಟಿಯಲ್ಲಿ ಕೊನೆಯ ಎರಡು ಸ್ಥಾನಗಳನ್ನು ಪಡೆದ ತಿಲಕ್ ಮೆಮೋರಿಯಲ್ ಮತ್ತು ಸೌತ್ ಇಂಡಿಯನ್ ತಂಡಗಳು 'ಬಿ' ಡಿವಿಷನ್‌ಗೆ ಹಿಂಬಡ್ತಿ ಪಡೆದುಕೊಂಡವು.

ಬಿಸಿಸಿಐ ಪದಾಧಿಕಾರಿಗಳ ಭತ್ಯೆ: ವಿದೇಶ ಪ್ರವಾಸಕ್ಕೆ ₹ 81 ಸಾವಿರ

ನವದೆಹಲಿ (ಪಿಟಿಐ): ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಪದಾಧಿಕಾರಿಗಳ ಭತ್ಯೆಯನ್ನು ಹೆಚ್ಚಿಸಲಾಗಿದ್ದು, ವಿದೇಶ ಪ್ರವಾಸದ ವೇಳೆ ₹ 81 ಸಾವಿರ ದಿನ ಭತ್ಯೆ ಪಡೆಯಲಿದ್ದಾರೆ.

ದಿನ ಭತ್ಯೆ ಮತ್ತು ಪ್ರಯಾಣ ಭತ್ಯೆ ಹೆಚ್ಚಿಸುವ ನಿರ್ಧಾರವನ್ನು ಭಾನುವಾರ ನಡೆದ ಮಂಡಳಿಯ ಅಪೆಕ್ಸ್ ಕೌನ್ಸಿಲ್ ಸಭೆಯ ಮುಂದಿಡಲಾಯಿತು. 2022ರ ಅಕ್ಟೋಬರ್‌ನಿಂದಲೇ ಹೊಸ ಭತ್ಯೆ ಜಾರಿಯಾಗಿದೆ.

ದಿನ ಭತ್ಯೆಯನ್ನು ಏಳು ವರ್ಷಗಳ ಬಿಡುವಿನ ಬಳಿಕ ಪರಿಷ್ಕರಿಸಲಾಗಿದ್ದು, ವಿಮಾನದಲ್ಲಿ ವಿದೇಶಗಳಿಗೆ ಫಸ್ಟ್ ಕ್ಲಾಸ್‌ನಲ್ಲಿ ಪ್ರಯಾಣಿಸಲು ಅವಕಾಶ ನೀಡಲಾಗಿದೆ. ಈ ಹಿಂದೆ ಮಂಡಳಿಯ ಪದಾಧಿಕಾರಿಗಳಿಗೆ ವಿದೇಶ ಪ್ರವಾಸಕ್ಕೆ ₹ 61 ಸಾವಿರ ದಿನ ಭತ್ಯೆ ನೀಡಲಾಗುತ್ತಿತ್ತು.

ಅಧ್ಯಕ್ಷ, ಉಪಾಧ್ಯಕ್ಷ, ಕಾರ್ಯದರ್ಶಿ, ಜಂಟಿ ಕಾರ್ಯದರ್ಶಿ ಮತ್ತು ಖಜಾಂಚಿ ಸೇರಿದಂತೆ ಮಂಡಳಿಯ ಪದಾಧಿಕಾರಿಗಳು ದೇಶದೊಳಗೆ ನಡೆಯುವ ಸಭೆಯಲ್ಲಿ ಪಾಲ್ಗೊಂಡಾಗ ₹ 40 ಸಾವಿರ ದಿನ ಭತ್ಯೆ ಪಡೆಯಲಿದ್ದಾರೆ. ವಿಮಾನದಲ್ಲಿ ಬ್ಯುಸಿನೆಸ್ ಕ್ಲಾಸ್‌ನಲ್ಲಿ ಪ್ರಯಾಣಿಸುವ ಸೌಲಭ್ಯ ದೊರೆಯಲಿದೆ.

ಮಂಡಳಿಯ ಕೆಲಸದ ನಿಮಿತ್ತ ಪ್ರಯಾಣಿಸುವಾಗ ₹ 30 ಸಾವಿರ ಪ್ರಯಾಣ ಭತ್ಯೆ ಪಡೆಯಲಿದ್ದಾರೆ. ಸ್ವದೇಶ ಮತ್ತು ವಿದೇಶ ಪ್ರಯಾಣದ ವೇಳೆ ಐಷಾರಾಮಿ ಕೊಠಡಿಗಳಲ್ಲಿ ತಂಗಲು ಅವಕಾಶ ಕಲ್ಪಿಸಲಾಗಿದೆ. ಐಪಿಎಲ್ ಅಧ್ಯಕ್ಷರಿಗೂ ಇದೇ ಭತ್ಯೆ ಅನ್ವಯವಾಗಲಿದೆ.

ಭಾರತ ಕ್ರಿಕೆಟಿಗರ ಸಮಿತಿಯ ಇಬ್ಬರು ಪ್ರತಿನಿಧಿಗಳು ಒಳಗೊಂಡಂತೆ ಬಿಸಿಸಿಐ ಅಪೆಕ್ಸ್ ಕೌನ್ಸಿಲ್ ಸದಸ್ಯರು ತ್ರೈಮಾಸಿಕ ಸಭೆಗಳಿಗೆ ₹ 40 ಸಾವಿರ ದಿನ ಭತ್ಯೆ ಪಡೆಯಲಿದ್ದು, ವಿದೇಶ ಪ್ರವಾಸದ ವೇಳೆ ₹ 40 ಸಾವಿರ ದಿನ ಭತ್ಯೆ ದೊರೆಯಲಿದೆ. ರಾಜ್ಯ ಕ್ರಿಕೆಟ್ ಸಂಸ್ಥೆಗಳ ಪದಾಧಿಕಾರಿಗಳ ಭತ್ಯೆಯನ್ನೂ ಪರಿಷ್ಕರಿಸಲಾಗಿದ್ದು, ದೇಶೀಯ ಪ್ರಯಾಣದ ವೇಳೆ ದಿನಕ್ಕೆ ₹ 30 ಸಾವಿರ ಹಾಗೂ ವಿದೇಶ ಪ್ರವಾಸದ ಸಮಯದಲ್ಲಿ ₹ 32 ಸಾವಿರ ಭತ್ಯೆ ಲಭಿಸಲಿದೆ.

ಭಾರತ ಪುರುಷ ಮತ್ತು ಮಹಿಳಾ ಕ್ರಿಕೆಟ್ ತಂಡಗಳ ಮುಖ್ಯ ಕೋಚ್‌ಅನ್ನು ನೇಮಕ ಮಾಡುವ ಕ್ರಿಕೆಟ್ ಸಲಹಾ ಸಮಿತಿಯ ಮೂವರು ಸದಸ್ಯರು ಪ್ರತಿ ಸಭೆಯಲ್ಲಿ ಪಾಲ್ಗೊಂಡಾಗ ₹ 3.5 ಲಕ್ಷ ಪಡೆಯಲಿದ್ದಾರೆ.

ಬಿಸಿಸಿಐನ ಪದಾಧಿಕಾರಿ ಹುದ್ದೆಯು ಗೌರವಾನ್ವಿತ ಹುದ್ದೆಯಾಗಿದೆ ಎಂಬುದು ಗಮನಿಸಬೇಕಾದ ಅಂಶ. ಸಿಇಒ ಅವರಂತಹ ಹೆಚ್ಚಿನ ವೇತನ ಪಡೆಯುವ ಹುದ್ದೆಯಲ್ಲಿರುವವರು ವಿದೇಶ ಪ್ರವಾಸಗಳಲ್ಲಿ ₹ 53 ಸಾವಿರ ಹಾಗೂ ದೇಶೀಯ ಪ್ರವಾಸದಲ್ಲಿ ₹ 15 ಸಾವಿರ ದಿನ ಭತ್ಯೆ ಪಡೆಯಲಿದ್ದಾರೆ.

ಜೂನ್ 28ರಿಂದ ದೇಶಿ ಕ್ರಿಕೆಟ್‌ಗೆ ಚಾಲನೆ

ಜನವರಿ 5ರಿಂದ ರಣಜಿ ಟೂರ್ನಿ

ನವದೆಹಲಿ (ಪಿಟಿಐ): ದೇಶಿ ಕ್ರಿಕೆಟ್ 'ರಾಜ' ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯು ಮುಂದಿನ ವರ್ಷದ ಜನವರಿ 5ರಿಂದ ಆರಂಭವಾಗಲಿದೆ.

2023–24ನೇ ಸಾಲಿನ ದೇಶಿ ಕ್ರಿಕೆಟ್ ಋತು ಇದೇ ವರ್ಷದ ಜೂನ್ 28ರಂದು ಆರಂಭವಾಗಲಿದೆ. ಮೊದಲಿಗೆ ದುಲೀಪ್ ಟ್ರೋಫಿ ಟೂರ್ನಿ ನಡೆಯಲಿದೆ. ನಂತರ ದೇವಧರ್ ಟ್ರೋಫಿ ಲಿಸ್ಟ್ ಎ (ಜುಲೈ 24ರಿಂದ ಆಗಸ್ಟ್ 3), ಇರಾನಿ ಕಪ್ (ಅಕ್ಟೋಬರ್ 1 ರಿಂದ 5), ಸೈಯದ್ ಮುಷ್ತಾಕ್ ಅಲಿ ಟ್ರೋಫಿ ಪುರುಷರ ಟಿ20 ಕ್ರಿಕೆಟ್ (ಅ. 16 ರಿಂದ ನ.6) ಮತ್ತು ವಿಜಯ್ ಹಜಾರೆ ಟ್ರೋಫಿ (ನ. 23 ರಿಂದ ಡಿ. 15) ನಡೆಯಲಿವೆ.

ಇದರ ನಂತರ 2024ರ ಜನವರಿ 5 ರಿಂದ ಮಾರ್ಚ್ 14ರವರೆಗೆ ಒಟ್ಟು 70 ದಿನಗಳವರೆಗೆ ರಣಜಿ ಟ್ರೋಫಿ ಟೂರ್ನಿ ನಡೆಯಲಿದೆ. ಪ್ಲೇಟ್ ಗುಂಪಿನ ಲೀಗ್ ಪಂದ್ಯಗಳು ಜ. 5 ರಿಂದ ಫೆ. 5ರವರೆಗೆ ಆಯೋಜನೆಗೊಳ್ಳಲಿವೆ. ನಾಕೌಟ್ ಸುತ್ತಿನ ಪಂದ್ಯಗಳು ಫೆ. 9ರಿಂದ 22ರವರೆಗೆ ನಡೆಯುತ್ತವೆ.

ಪ್ಲೇಟ್ ಗುಂಪಿನಲ್ಲಿ ಆರು ತಂಡಗಳು ಸ್ಪರ್ಧಿಸಲಿವೆ. ಈ ಪೈಕಿ ಪಾಯಿಂಟ್ ಪಟ್ಟಿಯಲ್ಲಿ ಮೊದಲ ನಾಲ್ಕು ಸ್ಥಾನ ಪಡೆಯುವ ತಂಡಗಳು ಈ ಗುಂಪಿನ ಸೆಮಿಫೈನಲ್‌ನಲ್ಲಿ ಆಡಲಿವೆ. ಫೈನಲ್ ಪ್ರವೇಶಿಸುವ ಎರಡು ತಂಡಗಳೂ ಎಲೀಟ್ ಗುಂಪಿಗೆ ಬಡ್ತಿ ಹೊಂದಲಿವೆ.

ಎಲೀಟ್ ಗುಂಪಿನಲ್ಲಿ ತಲಾ ಎಂಟು ತಂಡಗಳು ಆಡಲಿವೆ. ಪ್ರತಿ ಗುಂಪಿನಲ್ಲಿ ಮೊದಲೆರಡು ಸ್ಥಾನ ಗಳಿಸಿದ ತಂಡಗಳು ಕ್ವಾರ್ಟರ್‌ಫೈನಲ್ ಪ್ರವೇಶಿಸುತ್ತವೆ. ಕೊನೆಯ ಎರಡು ಸ್ಥಾನ ಪಡೆದ ತಂಡಗಳು ಪಾಯಿಂಟ್ಸ್, ಬೋನಸ್ ಪಾಯಿಂಟ್ಸ್, ಜಯ ಮತ್ತು ರನ್ ಸರಾಸರಿಯ ಆಧಾರದಲ್ಲಿ 2024–25ರ ಋತುವಿನ ಪ್ಲೇಟ್ ಗುಂಪಿಗೆ ಸೇರ್ಪಡೆಯಾಗುತ್ತವೆ.

ಮಹಿಳೆಯರ ರಾಷ್ಟ್ರೀಯ ಸೀನಿಯರ್ ಟಿ20 ಕ್ರಿಕೆಟ್ ಟೂರ್ನಿಯು ಅಕ್ಟೋಬರ್ 19ರಿಂದ ನವೆಂಬರ್ 9ರವರೆಗೆ ನಡೆಯಲಿದೆ. ಅಂತರ ವಲಯ ಟಿ20 ಟ್ರೋಫಿ ಟೂರ್ನಿಯು ನವೆಂಬರ್ 24ರಿಂದ ಡಿಸೆಂಬರ್ 4ರವರೆಗೆ ಆಯೋಜನೆಗೊಂಡಿದೆ.

ಮಹಿಳೆಯರ ಏಕದಿನ ಟ್ರೋಫಿ ಕ್ರಿಕೆಟ್ ಟೂರ್ನಿಯು ಜನವರಿ 4ರಿಂದ 26ರವರೆಗೆ ನಡೆಯಲಿದೆ.

ಮುಖ್ಯಾಂಶಗಳು

- ದುಲೀಪ್ ಟ್ರೋಫಿ ಟೂರ್ನಿಯೊಂದಿಗೆ ಶುರುವಾಗಲಿರುವ ಋತು
- 2024ರ ಜನವರಿಯಲ್ಲಿ ರಣಜಿ ಟ್ರೋಫಿ ಟೂರ್ನಿ ಆರಂಭ
- ಒಟ್ಟು 70 ದಿನ ನಡೆಯಲಿರುವ ರಣಜಿ ಟ್ರೋಫಿ ಕ್ರಿಕೆಟ್
- ಪ್ಲೇಟ್ ಹಾಗೂ ಎಲೀಟ್ ವಿಭಾಗಗಳಲ್ಲಿ ಪಂದ್ಯಗಳು ನಡೆಯಲಿವೆ.
- ರಣಜಿ ಟೂರ್ನಿಯಲ್ಲಿ ಒಟ್ಟು 38 ತಂಡಗಳು ಸ್ಪರ್ಧಿಸಲಿವೆ.

ಸಂಕ್ಷಿಪ್ತ ಸುದ್ದಿ

ಪಿ.ಟಿ. ಉಷಾಗೆ ಗೌರವ ಡಾಕ್ಟರೇಟ್

ಕಾಸರಗೋಡು, ಕೇರಳ (ಪಿಟಿಐ): ಒಲಿಂಪಿಯನ್ ಅಥ್ಲೀಟ್ ಪಿ.ಟಿ.ಉಷಾ ಅವರಿಗೆ ಕೇರಳದ ಸೆಂಟ್ರಲ್ ವಿಶ್ವವಿದ್ಯಾಲವು ಸೋಮವಾರ ಗೌರವ ಡಾಕ್ಟರೇಟ್ ನೀಡಿದೆ.



ಈ ವಿಶ್ವವಿದ್ಯಾಲಯದ ಪ್ರತಿಷ್ಠಿತ ಗೌರವ ಸ್ವೀಕರಿಸಿದ ಮೊದಲ ವ್ಯಕ್ತಿ ಉಷಾ ಅವರಾಗಿದ್ದಾರೆ. ಉಷಾ ಅವರು ಸದ್ಯ ಭಾರತ ಒಲಿಂಪಿಕ್ ಸಂಸ್ಥೆಯ ಅಧ್ಯಕ್ಷೆಯಾಗಿದ್ದಾರೆ.

ವಿಕಾಸ್‌ಗೆ ಕಂಚು

ಅಸ್ತಾನ, ಕಜಕಸ್ತಾನ (ಪಿಟಿಐ): ಭಾರತದ ವಿಕಾಸ್ ಇಲ್ಲಿ ನಡೆಯುತ್ತಿರುವ ಏಷ್ಯನ್ ಕುಸ್ತಿ ಚಾಂಪಿಯನ್‌ಷಿಪ್‌ನಲ್ಲಿ ಕಂಚು ಗೆದ್ದರು. ಸೋಮವಾರ 72 ಕೆ.ಜಿ. ಗ್ರೀಕೊ–ರೋಮನ್ ವಿಭಾಗದಲ್ಲಿ ವಿಕಾಸ್ 8–0ಯಿಂದ ಚೀನಾದ ಜಯಿನ್ ಅವರನ್ನು ಮಣಿಸಿದರು.

ಗುಕೇಶ್‌ಗೆ ಪ್ರಶಸ್ತಿ

ಬರ್ಲಿನ್ (ಪಿಟಿಐ): ಮಾಜಿ ವಿಶ್ವ ರ‍್ಯಾಪಿಡ್ ಚೆಸ್ ಚಾಂಪಿಯನ್ ನಾದಿರ್ಬೆಕ್ ಅಬ್ದುಸತ್ತಾರೊವ್ ಅವರಿಗೆ ಅಚ್ಚರಿಯ ಸೋಲುಣಿಸಿದ ಭಾರತದ ಗ್ರ್ಯಾಂಡ್‌ಮಾಸ್ಟರ್ ಡಿ.ಗುಕೇಶ್, ವಿಶ್ವ ಆರ್ಮಗೆಡನ್ ಏಷ್ಯ–ಒಷಾನಿಯಾ ಗುಂಪಿನ ಸ್ಪರ್ಧೆಯನ್ನು ಗೆದ್ದುಕೊಂಡರು.

16 ವರ್ಷದ ಗುಕೇಶ್ ಜೊತೆಗೆ ಉಜ್ಬೇಕಿಸ್ತಾನದ ಸತ್ತಾರೊವ್, ಸೆಪ್ಟೆಂಬರ್‌ನಲ್ಲಿ ನಡೆಯಲಿರುವ ಆರ್ಮಗೆಡನ್ ಗ್ರ್ಯಾಂಡ್ ಫಿನಾಲೆಯಲ್ಲಿ ಆಡುವ ಅರ್ಹತೆ ಸಂಪಾದಿಸಿಕೊಂಡರು. ಫೈನಲ್ ಭಾನುವಾರ ತಡರಾತ್ರಿ ನಡೆಯಿತು. ಕಣ ಪ್ರಬಲವಾಗಿದ್ದು ಗುಕೇಶ್, ಸತ್ತಾರೊವ್ ಜೊತೆಗೆ ಮಾಜಿ ವಿಶ್ವ ಚಾಂಪಿಯನ್ ವ್ಲಾದಿಮಿರ್ ಕ್ರಾಮ್ನಿಕ್, ಡೇನಿಯಲ್ ಡುಬೋವ್, ಯಾಂಗ್‌ಯಿ ಯು (ಚೀನಾ), ವಿದಿತ್ ಗುಜರಾತಿ ಮತ್ತು ಕಾರ್ತಿಕೇಯನ್ ಮುರಳಿ (ಇಬ್ಬರೂ ಭಾರತ) ಸಹ ಇದ್ದರು.

ಏನಿದು ಆರ್ಮಗೆಡನ್: ಈ ಟೂರ್ನಿಯಲ್ಲಿ ಪ್ರತಿ ದಿನ ಆಟಗಾರನೊಬ್ಬ ಎರಡು ಬ್ಲಿಟ್ಜ್ ಗೇಮ್ ಆಡಬೇಕಾಗುತಿತ್ತು. ಅಗತ್ಯ ಬಿದ್ದಲ್ಲಿ 'ಆರ್ಮಗೆಡನ್' (ಬ್ಲಿಟ್ಜ್ ಮಾದರಿಯ ವೇರಿಯಂಟ್) ಆಟ ಆಡಬೇಕಾಗಿತ್ತು. ಇದರಲ್ಲಿ ಬಿಳಿ ಕಾಯಿಗಳಲ್ಲಿ ಆಡುವ ಆಟಗಾರನಿಗೆ 5, ಕಪ್ಪು ಕಾಯಿಗಳಲ್ಲಿ ಆಡುವವನಿಗೆ 4 ನಿಮಿಷ ಅವಧಿ ನೀಡಲಾಗುತ್ತದೆ. ಆರ್ಮಗೆಡನ್‌ನಲ್ಲಿ ಆಟ 'ಡ್ರಾ' ಆದಲ್ಲಿ ಕಪ್ಪುಕಾಯಿಗಳಲ್ಲಿ ಆಡುವ ಆಟಗಾರನಿಗೆ ಜಯ ಎಂದು ಪರಿಗಣಿಸಲಾಗುತ್ತದೆ.

ಇಂಡಿಯನ್ ಗ್ರ್ಯಾನ್‌ಪ್ರಿ ಅಥ್ಲೆಟಿಕ್ಸ್: ಅಮ್ಲಾನ್‌ಗೆ 'ಸ್ಪ್ರಿಂಟ್ ಡಬಲ್'

800 ಮೀ.: ವಿಜಯಕುಮಾರಿಗೆ ಅಗ್ರಸ್ಥಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ವಿಜಯಕುಮಾರಿ ಜಿ.ಕೆ. ಅವರು ಇಲ್ಲಿ ಸೋಮವಾರ ನಡೆದ ಮೂರನೇ ಇಂಡಿಯನ್ ಗ್ರ್ಯಾನ್‌ಪ್ರಿ ಅಥ್ಲೆಟಿಕ್ಸ್ ಕೂಟದ ಮಹಿಳೆಯರ 800 ಮೀಟರ್ಸ್ ಓಟದಲ್ಲಿ ಅಗ್ರಸ್ಥಾನ ಗಳಿಸಿದರು.

ಕಂಠೀರವ ಕ್ರೀಡಾಂಗಣದಲ್ಲಿ ನಡೆದ ಸ್ಪರ್ಧೆಯಲ್ಲಿ ಅವರು 2 ನಿಮಿಷ 9.70 ಸೆಕೆಂಡುಗಳಲ್ಲಿ ಗುರಿ ಮುಟ್ಟಿದರು.

100 ಮೀ. ಓಟದಲ್ಲಿ ದಾನೇಶ್ವರಿ ಎ.ಟಿ. (11.79 ಸೆ.) ಎರಡನೇ ಸ್ಥಾನ ಪಡೆದರು. 200 ಮೀ.ನಲ್ಲಿ ಜ್ಯೋತಿಕಾ (24.88 ಸೆ.) ಮತ್ತು ಹೈಜಂಪ್‌ನಲ್ಲಿ ಪಾವನಾ ನಾಗರಾಜ್ (ಎತ್ತರ: 1.64 ಮೀ.) ಎರಡನೇ ಸ್ಥಾನ ಗಳಿಸಿದರು. ಹೈಜಂಪ್ ಸ್ಪರ್ಧೆಯಲ್ಲೇ ಸುಪ್ರಿಯಾ ಎಸ್.ಬಿ. (ಎತ್ತರ: 1.55 ಮೀ.) ಮೂರನೇ ಸ್ಥಾನ ತಮ್ಮದಾಗಿಸಿಕೊಂಡರು.

ಪುರುಷರ 400 ಮೀ. ಓಟದಲ್ಲಿ ನಿಹಾಲ್ ಜೋಯಲ್ ಡಬ್ಲ್ಯು. ಎರಡನೇ ಸ್ಥಾನ ಗಳಿಸಿದರು. ಅವರು 47.12 ಸೆಕೆಂಡುಗಳಲ್ಲಿ ಗುರಿ ತಲುಪಿದರು. 100 ಮೀಟರ್ಸ್‌ನಲ್ಲಿ ಮತ್ತು 200 ಮೀ. ಓಟಗಳಲ್ಲಿ ಅಸ್ಸಾಂನ ಅಮ್ಲಾನ್ ಬೊರ್ಗೊಹೈನ್ ಅಗ್ರಸ್ಥಾನ ಗಳಿಸಿದರು.

ಫಲಿತಾಂಶಗಳು: ಪುರುಷರು: 100 ಮೀ. ಓಟ: ಅಮ್ಲಾನ್ ಬೊರ್ಗೊಹೈನ್ (ಅಸ್ಸಾಂ, ಕಾಲ: 10.54 ಸೆ.)–1, ಅಮಿಯಾ ಮಲಿಕ್ (ಒಡಿಶಾ)–2, ಹಸನ್ ಸಯೀದ್ (ಮಾಲ್ಡೀವ್ಸ್)–3.

200 ಮೀ.: ಅಮ್ಲಾನ್ ಬೊರ್ಗೊಹೈನ್ (ಕಾಲ: 21.20 ಸೆ.)–1, ಅನಿಮೇಶ್ ಕುಜುರ್ (ಛತ್ತೀಸಗಡ)–2, ಹಸನ್ ಸಯೀದ್ (ಮಾಲ್ಡೀವ್ಸ್)–3

400 ಮೀ.: ಮುಹಮ್ಮದ್ ಅಜ್ಮಲ್ (ಕೇರಳ, ಕಾಲ: 46.63ಸೆ.)–1, ನಿಹಾಲ್ ಜೋಯಲ್ (ಕರ್ನಾಟಕ)–2, ರಾಹುಲ್ ಕದಂ (ಮಹಾರಾಷ್ಟ್ರ)–3

800 ಮೀ.: ಅಂಕೇಶ್ ಚೌಧರಿ (ಹಿಮಾಚಲ ಪ್ರದೇಶ, ಕಾಲ: 1 ನಿ. 50.53 ಸೆ.)–1, ಅಭಿಷೇಕ್ ಠಾಕೂರ್ (ಮಧ್ಯಪ್ರದೇಶ)–2, ಥಾಮ್ಸನ್ ಪೌಲೊಸ್ (ಕೇರಳ)–3.

110 ಮೀ. ಹರ್ಡಲ್ಸ್: ತೇಜಸ್ ಶಿರ್ಸೆ (ಮಹಾರಾಷ್ಟ್ರ, ಕಾಲ: 13.81 ಸೆ.)–1, ಮಾಧವೇಂದ್ರ ಶೆಖಾವತ್ (ರಾಜಸ್ಥಾನ)–2, ಮಾನವ್ ಆರ್. (ತಮಿಳುನಾಡು)–3.

400 ಮೀ. ಹರ್ಡಲ್ಸ್: ಜಬೀರ್ ಪಳ್ಳಿಯಾಳಿಲ್ (ಕೇರಳ, ಕಾಲ: 51.61 ಸೆ.)–1, ಸಂತೋಷ್‌ಕುಮಾರ್ (ತಮಿಳುನಾಡು)–2, ನಿರ್ಮಲ್ ಯಾದವ್ (ಮಹಾರಾಷ್ಟ್ರ)–3.

ಲಾಂಗ್‌ಜಂಪ್: ಮುರಳಿ ಶ್ರೀಶಂಕರ್ (ಕೇರಳ, ದೂರ: 7.94 ಮೀ.)–1, ಡೇವಿಡ್ ಪಿ. (ತಮಿಳುನಾಡು)–2, ವಿಷ್ಣು ಶಿವಶಂಕರ್ (ದೆಹಲಿ)–3.

ಪೋಲ್‌ವಾಲ್ಟ್: ಶಕ್ತಿ ಮಹೇಂದ್ರನ್ (ತಮಿಳುನಾಡು)–1, ಕುಲದೀಪ್ ಕುಮಾರ್ (ಉತ್ತರ ಪ್ರದೇಶ)–2.

ಡಿಸ್ಕಸ್ ಥ್ರೊ: ಹರ್‌ಪ್ರೀತ್ ಸಿಂಗ್ (ಪಂಜಾಬ್, ದೂರ: 54.76 ಮೀ.)–1, ವಿಜಯ್ ರಾಮಾಜೇಯಮ್ (ತಮಿಳುನಾಡು)–2, ಅಶ್ವಿನಿ ಲಾಂಬಾ (ಹರಿಯಾಣ)–3.

ಮಹಿಳೆಯರು: 100 ಮೀ. ಓಟ: ಅರ್ಚನಾ ಸುಧೀಂದ್ರನ್ (ತಮಿಳುನಾಡು, ಕಾಲ: 11.71 ಸೆ.)–1, ದಾನೇಶ್ವರಿ ಎ.ಟಿ. (ಕರ್ನಾಟಕ)–2, ನಿತ್ಯಾ ಗಾಂಧೆ (ತೆಲಂಗಾಣ)–3.

200 ಮೀ.: ಹಿಮಾ ದಾಸ್ (ಅಸ್ಸಾಂ, ಕಾಲ: 23.77 ಸೆ.)–1, ಜ್ಯೋತಿಕಾ (ಕರ್ನಾಟಕ)–2, ಝೀವಾ ಸಫೆಯು (ಮಾಲ್ಡೀವ್ಸ್)–3.

400 ಮೀ.: ಐಶ್ವರ್ಯ ಮಿಶ್ರಾ (ಮಹಾರಾಷ್ಟ್ರ, ಕಾಲ: 53.63 ಸೆ.)–1, ಕಿರಣ್ ಪಹಾಲ್ (ಹರಿಯಾಣ)–2, ವಿಸ್ಮಯಾ ವಿ.ಕೆ. (ಕೇರಳ)–3.

800 ಮೀ.: ವಿಜಯಕುಮಾರಿ ಜಿ.ಕೆ. (ಕರ್ನಾಟಕ, ಕಾಲ: 2 ನಿ. 9.70 ಸೆ.)–1, ಕೆ.ಎಂ. ದೀಕ್ಷಾ (ಮಧ್ಯಪ್ರದೇಶ)–2, ಭಾಗ್ಯಲಕ್ಷ್ಮಿ (ತೆಲಂಗಾಣ)–3

110 ಮೀ. ಹರ್ಡಲ್ಸ್: ಜ್ಯೋತಿ ಯರಾಜಿ (ಆಂಧ್ರಪ್ರದೇಶ, ಕಾಲ: 13.44 ಸೆ.)–1, ಸಪ್ನಾ ಕುಮಾರಿ (ಜಾರ್ಖಂಡ್)–2, ನಂದಿನಿ ಅಗಸರ (ತೆಲಂಗಾಣ)–3.

ಹೈಜಂಪ್: ರುಬಿನಾ ಯಾದವ್ (ಹರಿಯಾಣ, ಎತ್ತರ: 1.81 ಮೀ.)–1, ಪಾವನಾ ನಾಗರಾಜ್–2, ಸುಪ್ರಿಯಾ ಎಸ್.ಬಿ.–3 (ಇಬ್ಬರೂ ಕರ್ನಾಟಕ).


200 ಮೀ. ಓಟದಲ್ಲಿ ಗುರಿಯತ್ತ ಮುನ್ನುಗ್ಗಿದ ಅಸ್ಸಾಂನ ಅಮ್ಲಾನ್ ಬೊರ್ಗೊಹೈನ್– ಪ್ರಜಾವಾಣಿ ಚಿತ್ರ